# ಬಡವನ ಮನೆ ಮಾಣಿಕ್ಯ

## ಸುದರ್ಶನ್ ದೇಸಾಯಿ



894.814 3
DES N98
ಗ್ರಂಥ ಸ್ವಾಮ್ಯ ವಿಭಾಗ

# ಬಡವನ ಮನೆಯ ಮಾಣಿಕ್ಯ

( ಕಾದಂಬರಿ )

ಸುದರ್ಶನ ದೇಸಾಯಿ

**

ವಿಷ್ಣು ಪ್ರಕಾಶನ
3ನೇ ಕ್ರಾಸ್, ಜಿಂಕ್ ಲೈನ್
ಭದ್ರಾವತಿ

META ENTERED

ಕಾದಂಬರಿಯ ಹೆಸರು : ಬಡವನ ಮನೆಯ ಮಾಣಿಕ್ಯ

ಲೇಖಕರು : ಸುದರ್ಶನ ದೇಸಾಯಿ

ಪ್ರಕಾಶಕರು : ವಿಷ್ಣು ಪ್ರಕಾಶನ, ಭದ್ರಾವತಿ

ಹಕ್ಕುಗಳು : ಲೇಖಕರದು

ಪ್ರಥಮ ಮುದ್ರಣ : 1998 72582 CR

ಬೆಲೆ : ರೂ. 50–00

ಮುಖಚಿತ್ರ : ತ್ರಿಮೂರ್ತಿ

ಮುದ್ರಣ :

ಎಸ್. ಎಸ್. ಪ್ರಿಂಟರ್ಸ್
9/1, ಗವಿಪುರಂ
ಹನುಮಂತನಗರ, ಬೆಂಗಳೂರು–560 019

# ನಾಲ್ಕು ಮಾತು

ಪ್ರಿಯ ಓದುಗರೆ,

ಕನ್ನಡದ ಹೆಮ್ಮೆಯ ವಾರಪತ್ರಿಕೆ "ಚಂದನ"ದಲ್ಲಿ ಪ್ರಕಟವಾದ ನನ್ನ ಅತ್ಯಂತ ಜನಪ್ರಿಯ ಕಾದಂಬರಿ "ಕಪ್ಪುಗಂಟಿ" ಈಗ ತಮ್ಮ ಕೈಯಲ್ಲಿದೆ. ಆದರೆ ಬೇರೆ ಹೆಸರಿನಿಂದ ಕಪ್ಪು ಎಂಬುದು ಏಕೋ ಮನಸ್ಸಿಗೆ ಸರಿ ಹೊಂದದೇ ಇದ್ದುದರಿಂದ ಹೆಸರು ಬದಲಿಸಿ ತಮಗೆ ತಲುಪಿಸುತ್ತಿರುವೆ.

ಇದನ್ನು ಚಂದನದಲ್ಲಿ ಮುದ್ರಿಸಿದ ಆತ್ಮೀಯ ಶ್ರೀ ಅಮುದನ್ ಅವರಿಗೆ ನಾನು ಅಬಾರಿ. ಪ್ರತಿವಾರ ಚಂದನ ಮೂಲಕ ತಮ್ಮ ಅಭಿಪ್ರಾಯ ತಂದು ನನ್ನನ್ನು ಪ್ರೋತ್ಸಾಹಿಸಿದ ಓದುಗರಿಗೆ ನನ್ನ ವಂದನೆಗಳು.

ಕಾದಂಬರಿ ರೂಪದಲ್ಲಿ ತರುತ್ತಿರುವ ನನ್ನ ಕಿರಿಯ ಮಿತ್ರ ಮಹಾತಾಯಿ ಪ್ರಕಾಶನದ ಶ್ರೀ ಕುಮಾರ ಭದ್ರಾವತಿಯವರಿಗೆ, ಸುಂದರವಾಗಿ ಮುದ್ರಿಸಿದ ಅಚ್ಚುಕೂಟದವರಿಗೆ, ಮುಖಪುಟದ ಕಲಾವಿದರಿಗೆ ನಾನು ಋಣಿಯಾಗಿರುವೆ.

ಆತ್ಮೀಯರಾದ ನಿಮಗೆ ಮತ್ತೊಮ್ಮೆ ವಂದನೆಗಳು.

**"ಹಳದಿ ಚೇಳು"**
ಸುದರ್ಶನ ದೇಸಾಯಿ ಕಾಲೋನಿ,
ಸಾರಸ್ವತಪುರ, ಧಾರವಾಡ–580 002

ತಮ್ಮ
**ಸುದರ್ಶನ ದೇಸಾಯಿ**
1–2–98

# ಸುದರ್ಶನ ದೇಸಾಯಿ ಕೃತಿಗಳು

**ಮನೋವೈಜ್ಞಾನಿಕ**

ತಿರುವು
ವಿಚಿತ್ರ ಅಪರಾಧಿ
ಅಪಹರಣ

**ವೈಜ್ಞಾನಿಕ**

ಕೆಂಪು ಜೇಡ
ಯಮದೂತರು

**ಸಾಮಾಜಿಕ**

ಹಾಲಿನ ಕಡಲು ಜೇನಿನ ಒಡಲು
ಅಮರದೀಪ
ಸಂಜೆ ಮಲ್ಲಿಗೆ
ಅಗ್ನಿ ಪರ್ವತ
ನೀರ ಮೇಲಿನ ಹೆಜ್ಜೆಗಳು
ಸೇವಕ
ಸೂರ್ಯ ಚಂದ್ರ ಸಾಕ್ಷಿ
ಅಪೂರ್ವ ಕನಸುಗಾರ
ಕಾಡು ಮಲ್ಲಿಗೆ
ಎಂಟೆದೆ ಭಂಟ
ವಿಷ ಮಂಥನ
ದೇವ ಮಾನವ
ಪ್ರೇಮಲೋಕದ ಮಕರಾಕ್ಷ
ದುರಂತ ನಾಯಕ
ಕಮಲ ಅರಳಿತು ನಯನದಲಿ

**ಪತ್ತೇದಾರಿ**

ಕೆರಳಿದ ಸರ್ಪ
ಚೋರಾಗ್ರ ಸೇನ
ಹಾವಿನ ಕಣ್ಣು
ವೈಪರ
ಐರಾವತ
ಹೊಲಿದ ತುಟಿಗಳು
ಕೆಲ್ಲಿ
ರಿಂಗೋ
ಬ್ರೌನ್ ಶುಗರ್
ಬಣ್ಣದ ಬೆಕ್ಕು
ನೀಲಿ ಕಣ್ಣುಗಳು
ಆರನೇ ವ್ಯಕ್ತಿ
ಬೆಂಕಿ ಮಡಿಲಲ್ಲಿ ಮೇಜರ ಹೇಮಂತ
ದೇಶದ್ರೋಹಿ
ಪೋಲಿಸ ಡಾಗ
ಸೀಳು ನಾಲಿಗೆ
ಚಿನ್ನದ ಬೆರಳು
ಶೀತಲ ಕೋಳಿ
ಸಿಡಿಮದ್ದು
ಮುಚ್ಚಿದ ಫೈಲು
ಸುಪಾರಿ
ಎಕೆ–56
ಸರ್ಪಗಂಧ
ಮೂರನೇ ಉಯಿಲು

**ಗೂಢಚಾರಿ**

ಹಳದಿ ಚೇಳು

ಕೆಂಪು ಜೇಡ

**ನಾಟಕ**

ಕರಿನಾಯಿ

**ರೇಡಿಯೋ ನಾಟಕ**

ತಪ್ಪಿದ ಲೆಕ್ಕ

ಅಪಹರಣ

ನೇಣು

**ಸಂಶೋಧನೆ**

ಕನ್ನಡದಲ್ಲಿ ಪತ್ತೇದಾರಿ ಸಾಹಿತ್ಯ

**ಪ್ರಬಂಧ**

ಕನ್ನಡ ಪತ್ತೇದಾರಿ ಸಾಹಿತ್ಯ ಅಂದು–ಇಂದು

**ಮಕ್ಕಳ ಕಥೆ**

ಬಂಡೆಗಲ್ಲಿನ ರಾಜಕುಮಾರಿ

**ರೋಮಾಂಚಕಾರಿ**

ಮೃತ್ಯುವಿಗೆ ಮುತ್ತಿಟ್ಟವರು

**ಅಚ್ಚಿನಲ್ಲಿ**

ಕೆಂಚವ್ವನ ಮಗಳ ಕೆಂಪು ಲೋಲಕ್ಕು [ಕಥಾ ಸಂಕಲನ]

ಮತ್ತೊಬ್ಬ ಅಂಗೂಲಿ ಮಾಲ [ಕಥಾ ಸಂಕಲನ]

ಹಸಿರು ನೊಣಗಳು [ಪತ್ತೇದಾರಿ]

ಪ್ರೇಮ ಸುರಭಿ [ಸಾಮಾಜಿಕ]

ವಿಳಾಸ :

**ಸುದರ್ಶನ ದೇಸಾಯಿ**

'ಹಳದಿ ಚೇಳು' ಸುದರ್ಶನ ದೇಸಾಯಿ ಕಾಲೋನಿ,

ಸಾರಸ್ವತಪುರ, ಧಾರವಾಡ–580 002.

ದೂರವಾಣಿ : (0836) 746008

# ಬಡವನ ಮನೆಯ ಮಾಣಿಕ್ಯ

ಟೆಲಿಫೋನ್ ಗಂಟೆ ಬಾರಿಸುತ್ತಲು ಅದರ ನಿರೀಕ್ಷೆಯಲ್ಲೇ ಇದ್ದ ಜಯಂತ್ ಸಟಕ್‌ನೆ ರಿಸೀವರ ಎತ್ತಿ ಕಿವಿಗೆ ಆನಿಸಿದ. ಆ ಕಡೆಯಿಂದ ಆತ ಊಹಿಸಿದ ಧ್ವನಿಯೇ ಕೇಳಿಬಂದಿತು.

'ಜಯಂತ್‌ಭಾಯಿ ನಾನು ಉಲ್ಲೂಕಾಪಟ್ಟಾ ಮಾತಾಡ್ತಿರೋದು'

'ಹೇಳು ಗಿರಿಭಾಯಿ ಈ ಕಡೆಯಿಂದ ಸಿಕಂದರ್ ಶಾ ಬಾವಶಾ ಕೇಳ್ತಿರೋದು' ಎರಡು ಕಡೆಯಿಂದ ಸರಿಯಾದ ಕೋಡ್‌ವರ್ಡ್ ಬರುತ್ತಿತ್ತು. ಮುಂದಿನ ಸಂಭಾಷಣೆ ಪಟಪಟನೆ ಆರಂಭವಾಯಿತು.

'ಜಯಂತ್....ಇನ್ನೊಂದು ಗಂಟೆಗೆ ನಾನು ಬರತಾ ಇದ್ದೇನೆ—ನಿನಗೆ ಬೇಕಾದ ಸಮಾಚಾರದೊಂದಿಗೆ.. ನನ್ನ ಬಹುಮಾನ ಐದು ಸಾವಿರ ರೆಡಿ ಇಡು'

'ಅದು ಯಾವಾಗಲೋ ರೆಡಿ ಇದೆ. ಸಮಾಚಾರ ಹೇಳು'

ನನ್ನ ಕೋಡ್ ವರ್ಡ್ ಉಲ್ಲೂಕಾಪಟ್ಟಾ ಇದೆ ಎಂದು ನನ್ನನ್ನ ನಿಜವಾಗಿದ್ದ ಉಲ್ಲೂ ಎಂದು ತಿಳಿಯಬೇಡ. ಸಮಾಚಾರ ಪಡೆದು ಅಲ್ಲಿಂದ ಪರಾರಿ ಆಗಲು ಯೋಚಿಸ್ತಿದೀಯಾ....

'ಸರಿ ಖಂಡಿತವಾಗಿಯೂ ಇಲ್ಲ'

'ಸರಿ ಹಾಗಾದರೆ, ನನ್ನ ದಾರಿ ಕಾಯದೇ ಬೇರೆ ದಾರಿಯಿಲ್ಲ. ಐದು ಸಾವಿರ ದೊರೆಯದ ಹೊರತು ನಾನು ತುಟಿ ಬಿಚ್ಚುವುದಿಲ್ಲ.

'ಬಂದಂತೂ ಬಾ. ಆಮೇಲೆ ನೋಡು ಐದು ಸಾವಿರದೊಂದಿಗೆ ನಾನು ಬೇರೆ ಏನೇನು ಗಿಫ್ಟ್ ಕೊಡುತ್ತೇನೆಂದು, ಖಂಡಿತವಾಗಿಯೂ ನೀನು ಅವನ್ನೆಲ್ಲ ಪಡೆದು ಸ್ವರ್ಗ ಸುಖ ಅನುಭವಿಸುವೆ.'

ಸಮ್ಮಂಧ ಕಡಿಯಿತು.

ರಿಸೀವರ್ ಯಥಾ ಸ್ಥಾನದಲ್ಲಿರಿಸಿ ಜಯಂತ್ ಮೇಲೆದ್ದ. ಮುಂದಿನ ಸಿದ್ಧತೆ ಮಾಡಿಕೊಳ್ಳಲು ಬಹುದಿನಗಳಿಂದ ಕಾಯ್ದಿದ್ದ ಸುಸಮಯ ಒದಗಿ

ಬಂದಿತ್ತು. ಅದರ ಸದುಪಯೋಗ ಮಾಡಿಕೊಳ್ಳಲು ಆತ ಸಿದ್ಧನಾಗ ಬೇಕಿತ್ತು.

ಒಂದು ಚಿಕ್ಕ ಬ್ರೀಫ್ ಕೇಸಿನಲ್ಲಿ ಎರಡು ರಿವಾಲ್ವರ್, ಒಂದು ಚೂರಿ, ನೈಲಾನ್ ಹಗ್ಗ, ಮೂರು ನಾಲ್ಕು ಹುಕ್ಕುಗಳು, ಪೆನ್‌ಟಾರ್ಚ್, ನಾಲ್ಕಾರು ಚಿಕ್ಕ ಗ್ರೆನಾಯಿಡ್ ಬಾಂಬುಗಳು.... ಬಿಡಿ ಬುಲೆಟ್.... ಎಲ್ಲಾ ಇರಿಸಿ ಜಿಪ್ ಎಳೆದು ಲಾಕ್ ಮಾಡಿದ. ಫ್ರಿಜ್‌ನಿಂದ ಅದೇ ತಂದಿರಿಸಿದ ಸೀಲ್ ಸಹ ಒಡೆಯದ ವಿಸ್ಕಿ ಬಾಟಲ್....ಪಾಪಡ್....ಮಿರ್ಚಿ, ನಿಂಬು, ನೀರುಳ್ಳಿ ಸ್ವಲ್ಪ ಉಪ್ಪಿನಕಾಯಿ ತೆಗೆದು ಡೈನಿಂಗ್ ಟೇಬಲ್ ಮೇಲೆ ಇರಿಸಿದ. ಜಗ್‌ನಲ್ಲಿ ನೀರು, ಏನೋ ಮರೆತೆ ಎನಿಸಿತು. ಹೌದು ಐಸ್ ಮರೆತೆ ಎಂದೆನ್ನುತ್ತ ಫ್ರಿಜ್‌ನಿಂದ ಹತ್ತಾರು ಪೀಸ್ ಐಸ್ ತೆಗೆದು ಪಿಂಗಾಣಿ ಬಟ್ಟಲಲ್ಲಿರಿಸಿ ಕೈ ತೊಳೆದುಕೊಂಡ, ಸಮಯ ರಾತ್ರಿ ಎಂಟೂವರೆ....

ಗಿರಿ ಬರಲು ಅರ್ಧಗಂಟೆ ಉಳಿದಿತ್ತು.

ತಾನೊಂದು ಗ್ಲಾಸು ವಿಸ್ಕಿ ಸೇವಿಸಲು ನಿಶ್ಚಯಿಸಿ ಒಳಗಡೆಯಿಂದ ವಿಸ್ಕಿ ತಂದು ಐಸ್ ವಾಟರ್ ಬೆರೆಸಿ ಕೈಲಿ ಹಿಡಿದು ನಿಧಾನವಾಗಿ ಹೀರತೊಡಗಿದ.... ಅರ್ಧಗಂಟೆ ಕಳೆದುದೇ ಗೊತ್ತಾಗಲಿಲ್ಲ. ಬಾಗಿಲ ಕರೆಗಂಟೆ ಬಾರಿಸಿತು. ಎದ್ದು ಬಾಗಿಲ ಹತ್ತಿರ ಹೋಗಿ ಕೇಳಿದ.

'ಯಾರದು? ನಿಜಹೇಳಿ....ಸಿಕಂದರ್‌ಬಾದಶಾಗೆ ಸುಳ್ಳು ಕೇಳಿ ಅಭ್ಯಾಸ ವಿಲ್ಲ.

'ಉಲ್ಲೂಕಾಪಟ್ಟಾಗೂ ಅಷ್ಟೇ. ಸತ್ಯಕ್ಕಾಗಿ ಪ್ರಾಣ ಕೊಡುವವ.' ಕಾಯುತ್ತಿದ್ದ ಗಿರಾಕಿ ಬಂದಿತ್ತು. ಬಾಗಿಲು ತೆರೆದ ಗಿರಿಭಾಯಿ ಒಳಗೆ ಬರುತ್ತಲೂ ಪುನಃ ಬಾಗಿಲು ಮುಚ್ಚಿ ಅವನ ಹೆಗಲಮೇಲೆ ಆತ್ಮೀಯತೆಯಿಂದ ಕೈ ಚೆಲ್ಲಿ ಕರೆದುಕೊಂಡು ನಡೆದ....ಡೈನಿಂಗ್ ಟೇಬಲ್ ಬಳಿ.. ಅವನನ್ನು ಒಂದು ಕುರ್ಚಿ ಮೇಲೆ ಕುಳ್ಳಿರಿಸಿ ಅವನೆದುರು ಎಲ್ಲಾ ಪ್ಲೇಟು ಸರಿಸಿದ... ಗಿರಿಭಾಯಿ ಮುಗುಳುನಗೆ ಬೀರಿ ಹೇಳಿದ

'ನನಗೆ ಐದುಸಾವಿರ ಬರದ ಹೊರತು ನಾನು ಯಾವುದರ ಕಡೆಗೂ ಕಣ್ಣೆತ್ತಿ ಸಹ ನೋಡಲಾರೆ.

ಪಟ್.... ಐವತ್ತರ ನೋಟಿನ ಕಟ್ಟೊಂದು ಬಿತ್ತು ಅವನ ಮುಂದೆ ಅತ್ತ ನೋಡುತ್ತಲು ಗಿರಿಭಾಯಿಯ ಕಣ್ಣುಗಳು ಅರಳಿದವು. ನೋಟಿನ ಕಟ್ಟು ಎತ್ತಿ ಜೇಬಿಗಿಳಿಸಿದ.... ವಿಸ್ಕಿ ಬಾಟಲ್ ಎತ್ತಿ ಅದರ ಸೀಲ್ ಚೆನ್ನಾಗಿ ಪರಾಪರನೆಂದು ಸಮಾಧಾನವಾದ ಮೇಲೆ ಹಲ್ಲಿನಿಂದ ಅದರ ಲಾಕ್ ಕಿತ್ತಿ ಥೂ ಎಂದುಗುಳಿ, ತನ್ನ ಗ್ಲಾಸಿಗೆ ಅರ್ಧದಷ್ಟು ಬಗ್ಗಿಸಿಕೊಂಡು ಗಟಗಟನೆ ಕುಡಿದ. ಕುಡಿದ ಮೇಲೆ ನಾಲಿಗೆಯಾಡಿಸಿ ಬಾಯಿ ಚಪ್ಪರಿಸಿದ.... ಎರಡು ಹಪ್ಪಳ.... ಸ್ವಲ್ಪ ಉಪ್ಪಿನಕಾಯಿ.... ಜೊತೆಗೆ ಒಂದು ಪ್ಲೇಟ್ ನೀರುಳ್ಳಿ ಹೊಟ್ಟೆ ಸೇರಿದವು. ತದನಂತರ ಮತ್ತೊಂದು ಗ್ಲಾಸ್ ವಿಸ್ಕಿ ಹೊಟ್ಟೆ ಸೇರಿತು. ಅಲ್ಲಿಯವರೆಗೂ ತಾಳ್ಮೆಯಿಂದ ಕಾಯುತ್ತಿದ್ದ ಜಯಂತ್ ಕೇಳಿದ.

'ಈಗ ತೃಪ್ತಿಯಾಯಿತಲ್ಲ ? ಈಗ ನನಗೆ ತೃಪ್ತಿ ನೀಡುವುದು ನಿನ್ನ ಕರ್ತವ್ಯ'

'ಓಕೆ.. ಓಕೆ ಫ್ರೆಂಡ್ ನಿಶೆಯಲ್ಲಿ ತೊದಲುತ್ತ ಹೇಳಿದ ಗಿರಿಭಾಯಿ. ಇಂದು ರಾತ್ರಿ ಹನ್ನೆರಡು ಗಂಟೆಗೆ ಸರಿಯಾಗಿ ಹೊಟೇಲ್ ಬ್ಯೂಗಲ್ ರಾಕ್‌ಗೆ ನಿನ್ನ ಬೇಟೆ ಬರುತ್ತಿದೆ.... ರೂಮ್ ನಂಬರ್ ಒಂದನೂರಾ ಹದಿನೇಳು. ಒನ್.... ಒನ್.... ಸೆವೆನ್.... ಲಕ್ಕೀ ನಂಬರ್....ಅವರ ಜೊತೆ ಸ್ನೇಹ ಡ್ಯಾನ್ಸರ್... ರತ್ನಮಾಲಾ ಇರುತ್ತಾರೆ. ಅವರಿಬ್ಬರೂ ಎರಡು ಗಂಟೆವರೆಗೂ ರೂಮಿನಲ್ಲಿ ಇರ್ತಾರೆ. ಅಷ್ಟರೊಳಗೆ ನೀನು ನಿನ್ನ ಕೆಲಸ ಮಾಡಿಕೊಳ್ಳಬೇಕು. ಎರಡು ಗಂಟೆಗೆ ಸರಿಯಾಗಿ ಬಾಸ್ ಕಡೆ ಜನ ಬಂದು ನಿನ್ನ ಗಿರಾಕಿಯಿಂದ ಬ್ಯಾಗ್ ಪಡೆಯುತ್ತಾರೆ. ಆ ಬ್ಯಾಗಿನಲ್ಲಿ ನಿನಗೆ ಬೇಕಾದ ಹನ್ನೆರಡು ಪೀಸ್‌ಗಳಿವೆ. ಹನ್ನೊಂದು ಪೀಸ್‌ಗಳ ಬೆಲೆ ಕನಿಷ್ಠ ಹತ್ತು ಲಕ್ಷವಾದರೆ.... ಒಂದೇ ಒಂದು ಹನ್ನೆರಡನೇ ಪೀಸಿನ ಬೆಲೆ ಒಂದು ಕೋಟಿ ರೂಪಾಯಿ. ಇದರ ಮೇಲೆ ತಿಳಿದುಕೊ ನನ್ನ ಸಮಾಚಾರ ಎಷ್ಟು ಮಹತ್ವದ್ದೆಂದು. ನೀ ಕೊಡುವುದು.... ಹಿಚ್.... ಕ್.... ಇದೇನಿದು.... ನನಗೇನಾಗ್ತಿದೆ ?.... ಆಂ.... ನನಗೇನಾಗ್ತಿದೆ ? ಹಿಚ್.... ಕ್.... "ನೀನು ಸ್ವರ್ಗಸುಖ ಅನುಭವಿಸಲು ಸ್ವರ್ಗಕ್ಕೆ ಹೋಗ್ತಿದೀಯಾ....ವಿಸ್ಕೀಲಿ ಬೆರೆತ ವಿಷ ನಿನ್ನನ್ನು ನೇರವಾಗಿ ಅಲ್ಲಿಗೇ ಕರೆದೊಯ್ಯುತ್ತಿದೆ....ವ್ಯಂಗವಾಗಿ ನುಡಿದ ಜಯಂತ್.

'ವಿಷ ವಿಸ್ಕೀಲಿ ಸಾಧ್ಯವಿಲ್ಲ.... ಹಿಚ್.... ಕ್.... ಕ್.... ನಾನು ಅದರ

ಸೀಲನ್ನು ನೋಡಿ ಓಪನ್ ಮಾಡಿರುವೆ'.

'ಅಲ್ಲೇ ನೀನು ತಪ್ಪಿದ್ದು ನಾನು ಸೀಲ್ ಒಡೆಯಲಿಲ್ಲ. ಸಿರಂಜ್‌ನಿಂದ ಕಾರ್ಲೆನೊಳಗೆ ಛಿದ್ರಮಾಡಿ ವಿಷ ಕೂಡಿಸಿದೆ.... ನನ್ನ ರಹಸ್ಯ ಬಲ್ಲವರಾರೂ ಬದುಕಿ ಉಳಿದಿಲ್ಲ. ಬದುಕಲು ನಾನು ಕೊಡೋಲ್ಲ. ಗುಡ್‌ಬಾಯ್ ಉಲ್ಲೂಕಾಪಟ್ಟಾ ಗಿರಿಭಾಯಿ ನಿನ್ನ ಸ್ವರ್ಗದ ಯಾತ್ರೆ. ಸಂತೋಷದಾಯಕ ವಾಗಲಿ!

ಜಯಂತ್‌ನ ಮಾತು ಮುಗಿಯುವುದರೊಳಗೆ ಗಿರಿಭಾಯಿಯ ಗೂಡು ಪಕ್ಕಕ್ಕೆ ವಾಲಿತ್ತು. ಬಾಯಿಯಿಂದ ಬುರುಬುರುನೆ ಬಿಳಿ ನೊರೆ ನುಗ್ಗಿತ್ತು. ಸತ್ತ ಹಂದಿಯನ್ನು ಎಳೆದೊಯ್ಯುವಂತೆ ಅವನ ಎರಡೂ ಕಾಲುಗಳನ್ನು ಹಿಡಿದು ದರದರ ಎಳೆದೊಯ್ದು ಜಯಂತ್ ಅವನನ್ನು ಬಾತ್‌ರೂಮಿಗೆ ತಳ್ಳಿ ಬಾಗಲಿಕ್ಕಿಕೊಂಡು ಅಗಳಿ ಏರಿಸಿದ.

ಕುರ್ಚಿ ಮೇಲೆ ಕುಳಿತುಕೊಂಡು ಪಟ್ಟಾಗಿ ಎರಡು ಗ್ಲಾಸ್ ವಿಸ್ಕಿ ಗಂಟಲೊಳಗೆ ಇಳಿಸಿ ತನ್ನ ಚಿಕ್ಕ ಬ್ರೀಫ್‌ಕೇಸ್ ಹಿಡಿದು ಉದ್ಭವ ಏನೋ ನೆನಪಾಗಿ ಮತ್ತೆ ಬಾತ್‌ರೂಮ್ ಬಾಗಿಲು ತೆಗೆದು ಒಳಗೆ ಹೋದ. ಗಿರಿಭಾಯಿ ಜೇಬಿನಲ್ಲಿದ್ದ ಐದುಸಾವಿರ ಕಟ್ಟನ್ನು ಹಿಡಿದು ತನ್ನ ಜೇಬಿಗಿಳಿಸಿ ಮತ್ತೆ ಬಾತ್‌ರೂಮ್ ಬಾಗಿಲು ಎಳೆದು ಲಾಕ್ ಮಾಡಿ ಬಾಗಿಲಿಗೆ ಬಂದ.... ಕಣ್ಣು ವಾಲ್‌ಕ್ಲಾಕ್ ನತ್ತ ಹರಿಯಿತು. ಸಮಯ.... ಹನ್ನೊಂದು ಕಾಲು. ರೂಮಿನ ದೀಪ ಆರಿಸಿ ಹೊರಬಂದ. ಬಾಗಿಲಿಗೆ ಬೀಗ ಜಡಿದು ಬೀಗದ ಕೈ ಜೇಬಿಗೆ ಸೇರಿಸಿ ಕೆಳಗಿಳಿಯತೊಡಗಿದ ಮೆಟ್ಟಿಲು ಮುಖಾಂತರ....

ಆತ ಕುಳಿತಿದ್ದ ಟ್ಯಾಕ್ಸಿ ಹೊಟೇಲ್ 'ಬ್ಯೂಗಲ್ ರಾಕ್' ತಲುಪಿದಾಗ ಹನ್ನೆರಡಕ್ಕೆ ಹತ್ತು ನಿಮಿಷಗಳಿದ್ದವು. ಜಯಂತನ ಬಳಿ ಇನ್ನು ಹತ್ತು ಹದಿನೈದು ನಿಮಿಷಗಳಿದ್ದವು....ಟ್ಯಾಕ್ಸಿ ಬಾಡಿಗೆ ಕೊಟ್ಟು ಕಳಿಸಿ ಹೊಟೇಲ್ ಪ್ರವೇಶಿಸಿದ. ನೂರರ ಒಂದು ನೋಟು ಹೊರಗೆ ಬರುತ್ತಿತ್ತು ರೂಮ್ ನಂಬರ್ ಒನ್ ಒನ್ ಸೆವೆನ್‌ರ ರೂಮ್‌ಬಾಯ್ ಯಾರೆಂದು ತಿಳಿಯಿತು. ಅಲ್ಲೊಂದು ಐದುನೂರು ರೂಪಾಯಿ ಕೈ ಬಿಟ್ಟಿತು. ಅದರ ಬಲದಿಂದ ಆತ ಹನ್ನೆರಡರ ಒಳಗೆ ಡುಪ್ಲಿಕೇಟ್ ಚಾವಿಯಿಂದ ನೂರಾಹದಿನೇಳರ ಬೀಗ ತೆಗೆದು ಒಳ ಸೇರಿದ.... ಆಟೋಮೆಟಿಕ್ ಡೋರ್ ತನ್ನಷ್ಟಕ್ಕೆ ತಾನೇ ಲಾಕ್ ಆಯಿತು....

ಸರಸರನೆ ಮಂಚದ ಕೆಳಗೆ ತೂರಿ.. ಹಾಯಾಗಿ ಒರಗಿಕೊಂಡ ನಿಶ್ಚಿಂತೆಯಿಂದ. ಹನ್ನೆರಡು ಹನ್ನೆರಡೂವರೆ ಸುಮಾರಿಗೆ ರೂಮಿನ ಬಾಗಿಲು ತೆರೆದ ಸದ್ದಾಯಿತು. ಎರಡು ಜೋಡಿ ಕಾಲುಗಳು ಒಳಗೆ ಬಂದು ಬಾಗಿಲು ಮುಚ್ಚಿದವು. ಒಂದು ಹೆಣ್ಣು ಒಂದು ಗಂಡೆಂದು ಕಾಲುಗಳ ಮೇಲಿಂದ ಊಹಿಸಿದ. ಗಿರಿ ಕೊಟ್ಟ ಸೂಚನೆ ನಿಜವಾಗಿತ್ತು. ಹತ್ತು ಹದಿನೈದು ನಿಮಿಷ ಆ ಮಾತು ಈ ಮಾತು ಆಡುತ್ತಾ ಅವರಿಬ್ಬರೂ ಡ್ರಿಂಕ್ಸ್ ಸೇವಿಸಿದರು. ನಂತರ ಅವರಿಬ್ಬರ ಮೈಮೇಲಿನ ಒಂದೊಂದೇ ಬಟ್ಟೆಗಳು ಮಂಚದಿಂದ ಕೆಳಗೆ ಬೀಳತೊಡಗಿದವು. ಅವರಿಬ್ಬರೂ ಪೂರ್ತಿ ನಗ್ನರಾಗಿದ್ದಾರೆಂದು ಖಚಿತವಾದ ಮೇಲೆ ಅದೇ ಸಮಯ ಕಾಯುತ್ತಿದ್ದ ಜಯಂತ್ ಮಂಚದಡಿಯಿಂದ ಹೊರಬಂದ. ಅವನ ಕೈಯಲ್ಲಿ ಕಪ್ಪನೆಯ ಮಿರುಗುವ ರಿವಾಲ್ವರ್. ರತಿಯಲ್ಲಿ ತನ್ಮಯರಾದ ಅವರಿಬ್ಬರಿಗೂ ಗಾಬರಿ.... ನಂತರ ಕೋಪ.... ಪುರುಷ ಕಿರುಚಿದ.

'ಮೂರ್ಖ ಯಾರು ನೀನು ನಿನ್ನ ಈ ಉದ್ಧಟತನಕ್ಕೆ ನಾನು ಮ್ಯಾನೇಜರಿಗೆ ತಿಳಿಸಿ ನಿನ್ನನ್ನ ಜೈಲಿಗೆ ಕಳಿಸುತ್ತೇನೆ. ಹುಷಾರ್....'

'ಮೊದಲು ನೀನು ಯಾವ ಸ್ಥಿತಿಯಲ್ಲಿದ್ದಿ ಎಂಬುದನ್ನು ಯೋಚಿಸು. ಅನಂತರ ನನ್ನನ್ನ ಜೈಲಿಗೆ ಕಳಿಸುವಿಯಂತೆ' ಅವರಿಬ್ಬರೂ ಜನ್ಮಜಾತ ಸ್ಥಿತಿಯಲ್ಲಿದ್ದವರು ನಾಚಿ ಮುದ್ದೆಯಾದರು. ಜಯಂತ್ ತಡಮಾಡದೆ ಕೋಟಿನ ಜೇಬಿನಲ್ಲಿದ್ದ ಮಿನಿ ಕ್ಯಾಮರಾ ಹೊರತೆಗೆದು ಪಟಪಟನೆ ಅವರಿಬ್ಬರ ಹತ್ತಾರು ಫೋಟೋ ತೆಗೆದುಕೊಂಡ. ಅವರು ಗುನುಗಿದ್ದು ಗುರುಗಿದ್ದು ಕೊನೆಗೆ ಗುಡುಗಿದ್ದು ಯಾವುದೂ ಉಪಯೋಗವಾಗಲಿಲ್ಲ. ಜಯಂತನ ಕೈಲಿದ್ದ ಕ್ಯಾಮರಾ ಹಾಗೂ ರಿವಾಲ್ವರ್ ಅವರಿಬ್ಬರ ಬಾಯಿ ಮುಚ್ಚಿಸಿದವು.

'ಹೂಂ ನೀನು ಏಳು ಮೇಲೆ ಎದ್ದು ಬಾತ್‌ರೂಮಿಗೆ ನಡೆ....'

ಜಯಂತ್ ಆಜ್ಞಾಪಿಸಿದ ಪುರುಷನಿಗೆ....

'ನಾನೇ ಈ ಅವಸ್ಥೆಯಲ್ಲಿ ನಿನ್ನ ತಲೆ ಕೆಟ್ಟಿದೆ ಏನು ?'

'ತಲೆಹರಟೆ ಬೇಡ ಹೇಳಿದಷ್ಟು ಕೇಳು. ಕೇಳದಿದ್ದರೆ ಮುಂದೆ ಈ ರಿವಾಲ್ವರ್ ಮಾತನಾಡುತ್ತದೆ.... ನಾನಲ್ಲ....' ಬೆಕ್ಕಿನಂತಾದ ಆತ ಹಾಗೇ ನಗ್ನನಾಗಿ ಮೇಲೆದ್ದವ ಎರಡೇ ಹಾರಿಕೆಗೆ ಬಾತ್‌ರೂಮ್ ಸೇರಿದ. ಅಷ್ಟೇ ಅವಧಿಯಲ್ಲಿ ಮತ್ತೆ ಮೂರು ಫೋಟೋ ಮೂಡಿದ್ದವು ಕೆಮರಾದಲ್ಲಿ.

ಬಾತ್‌ರೂಮಿನ ಹೊರ ಕೊಂಡಿ ಭದ್ರವಾಗಿ ಎಳೆದು ಕೆಮರಾ ಮತು ರಿವಾಲ್ವರ್ ಎರಡೂ ಜೇಬಿಗೆ ಸೇರಿಸಿ ಹಸಿದ ಕಣ್ಣುಗಳಿಂದ ರತ್ನಮಾಲಾ ಕಡೆ ನೋಡಿದ.

'ನೀನೊಂದು ಕಾಮಪಿಶಾಚಿ.... ಹಣಕ್ಕಾಗಿ ದೇಹ ಮಾರಿಕೊಳ್ಳುವ ಬೆಲೆ ಹೆಣ್ಣು. ನಿನ್ನ ಕೊಂದರೆ ಯಾವ ಲಾಭವೂ ಇಲ್ಲ.... ನಿನಗೆ ನಿನ್ನ ಜೀವದ ಮೇಲೆ ಆಶೆ ಇದ್ದರೆ ಯಾವ ವಿರೋಧ ಮಾಡದೇ ನನ್ನ ಆಶೆ ತೀರಿಸು...."

'ರತ್ನಮಾಲಾ ಕಿಲಕಿಲ ನಕ್ಕು ತನ್ನೆರಡೂ ಕೈ ಅವನತ್ತ ಚಾಚಿದಳು. ಹಸಿದ ಹೊಟ್ಟೆಗೆ ಸೊಗಸಾದ ಆಹಾರ ಬಿದ್ದಿತ್ತು. ಅರ್ಧಗಂಟೆ ನಂತರ ಪೂರ್ಣ ತೃಪ್ತನಾದ ಜಯಂತ್ ಅವಳಿಂದ ಬೇರೆಯಾದ.... ಆಕೆ ಇನ್ನೂ ಅವನತ್ತ ನೋಡಿ ನಗುತ್ತಲೇ ಇದ್ದಳು. ಆದರೆ ಅವಳ ನಗೆ ತುಂಬಾ ಹೊತ್ತು ಇರಲಿಲ್ಲ. ರಿವಾಲ್ವರ್ ಹಿಂದಿನ ಹಿಡಿಕೆ ಏಟು ಅವಳ ತಲೆ ಮೇಲೆ ಒಂದೇ ಒಂದು ಬಾರಿ ನಗು ಮಾಯವಾಗಿ ಹೆಣದಂತೆ ಉರುಳಿದಳು ಹಾಸಿಗೆ ಮೇಲೆ. ಜಯಂತ್‌ನ ಕಣ್ಣುಗಳು ಸುತ್ತಲೂ ಓಡಾಡಿದವು. ಕಣ್ಣಿಗೆ ಬಿತ್ತು ಬ್ರೀಫ್‌ಕೇಸ್. ಕೈಗೆತ್ತಿ ಕೊಂಡು ಬಾಯಿ ತೆರೆದ. ಸಂತಸದಿಂದ ಕಣ್ಣುಗಳು ಮಿನುಗಿದವು. ಅವನಿಗೆ ಬೇಕಾದ ವಸ್ತುಗಳೇ ಅದರಲ್ಲಿದ್ದವು.

ಸರಿಯಾಗಿ ಒಂದೂ ಇಪ್ಪತ್ತಕ್ಕೆ ಎಲ್ಲ ಸಾಮಾನುಗಳಿಂದ ಆತ ಸಿದ್ಧನಾದ. ಒಂದೂವರೆಗೆ ಸ್ಫೋಟಗೊಳ್ಳುವಂತೆ ಇರಿಸಿದ್ದ ಟೈಂಬಾಂಬ್ ಮಂಚದ ಬುಡದಲ್ಲಿದ್ದು ಟಿಕ್ ಟಿಕ್ ಸದ್ದು ಮಾಡುತ್ತಿತ್ತು. ಮೆಲ್ಲನೆ ಬಾಗಿಲಿಗೆ ಬಂದು ಒಂದು ನಿಮಿಷ ನಿಂತು ಹೊರಗಿನ ಸದ್ದು ಆಲಿಸಿದ.... ಪೂರ್ಣ ಮೌನ.... ಶಾಂತಿ ಬಾಗಿಲು ತೆರೆದು ಹೊರಗೆ ಕಾಲಿಟ್ಟ....

'ರಪ್' ಎಂದು ಮುಖದ ಮೇಲೆ ಬಿತ್ತೊಂದು ಬಲವಾದ ಪೆಟ್ಟು. ಆ ಪೆಟ್ಟಿಗೆ ತತ್ತರಿಸಿದ ಜಯಂತ್ ಒಂದು ಮಾರು ಹಿಂದಕ್ಕೆ ನೆಗೆದು ಬಿದ್ದ. ಬಲಶಾಲಿ ವ್ಯಕ್ತಿಯೊಂದು ಒಳಗೆ ಬಂದು ಬಾಗಿಲಿಕ್ಕಿಕೊಂಡಿತು.

'ಬಚ್ಚಾ ನಿನ್ನನ್ನು ನಾನು ಹನ್ನೆರಡು ಗಂಟೆಗೇ ಗುರುತಿಸಿದ್ದೇನೆ. ನನ್ನ ಮುಂದೆ ನಿನ್ನಾಟ ಎಳ್ಳಷ್ಟೂ ನಡೆಯಲಾರದು.' ಬಿದ್ದುಕೊಂಡಲ್ಲಿಂದಲೇ ಅವನತ್ತ ನೋಡಿದ ಜಯಂತ್.

ಕುಖ್ಯಾತ ಕಳ್ಳಸಾಗಣಿಕೆದಾರ ಉಸ್ಮಾನ ದಾದಾ ನಿಂತಿದ್ದ ಅವನೆದುರು. ಟಿಕ್ ಟಿಕ್ ಸದ್ದಿಗೆ ಮೈ ಎಲ್ಲಾ ಬೆವರಿತು.... ಅಲ್ಲೇ ಇದ್ದರೆ ಅವರ ಜೊತೆ ಖಂಡಿತವಾಗಿ ತಾನೂ ಹೆಣವಾಗಬೇಕಾಗುತ್ತದೆ ಎಂದು ಯೋಚಿಸಿದ ಆತ ಚೆಂಡಿನಂತೆ ಮೇಲೆ ಪುಟಿದೆದ್ದು ಬಲಗಾಲಿನಿಂದ ನೇರವಾಗಿ ಅವನ ಮರ್ಮಾಂಗದ ಮೇಲೆ ಒದೆ ಕೊಟ್ಟ...

ಇದೊಂದು ಅಪ್ರತ್ಯಪ. ನಂಬಲಾಗದಂಥ ಘಟನೆ.

ಉಸ್ಮಾನ ದಾದಾ ನಿರೀಕ್ಷಿಸಿರಲಿಲ್ಲ. ಬಲವಾದ ಪೆಟ್ಟಿಗೆ ಬೇಯೊರಿದ ಆತ ತನ್ನೆರಡೂ ಕೈಗಳಿಂದ ಕಿಬ್ಬೊಟ್ಟೆ ಹಿಡಿದುಕೊಂಡ. ಜಯಂತ್‌ಗೆ ಇಷ್ಟೇ ಸಾಕಾಯಿತು. ಜಿಗಿದು ಬೆನ್ನ ಮೇಲೆ ಮೊಣಕಾಲಿನಿಂದ ಗುದ್ದಿದ. ಉಸ್ಮಾನ ಅರಚಿಕೊಳ್ಳುತ್ತ ನೆಲಕಚ್ಚುತ್ತಿದ್ದ. ಬ್ಯಾಗಿನೊಂದಿಗೆ ಬಾಗಿಲ ಬೀಗ ತೆಗೆದು ಹೊರಬಂದ ಜಯಂತ್ ಜೋರಾಗಿ ಬಾಗಿಲು ಎಳೆದುಕೊಂಡ. ಬಾಗಿಲು ಲಾಕ್ ಆಯಿತು.

ಜಯಂತ್ ವಾಚ್‌ನೆಡೆ ನೋಡಿದ.

ಕೇವಲ ನಾಲ್ಕು ನಿಮಿಷಗಳು ಉಳಿದಿದ್ದವು.

ಢಡಪಡಿಸುವ ಹೃದಯದೊಂದಿಗೆ.... ಬಡಬಡನೆ ಮೆಟ್ಟಿಲಿಳಿದು ಹೊರಗೋಡಿ ಬಂದ... ರಿಸೆಪ್ಶನ್‌ನಲ್ಲಿದ್ದವ ಆತನೆಡೆ ವಿಚಿತ್ರವಾಗಿ ನೋಡಿದ. ಅತ್ತ ಲಕ್ಷ್ಯ ಕೊಡದೆ ಎದುರಿಗಿದ್ದ ಟ್ಯಾಕ್ಸಿಯಲ್ಲಿ ಕೂತು 'ಬೇಗ ಬೇಗ ರೈಲ್ವೆ ಸ್ಟೇಷನ್ ಎಂದ.... ಟ್ಯಾಕ್ಸಿ ಓಡುತ್ತಿತ್ತು ಹಿಂದಿನ ಸೀಟಿಗೆ ತಲೆಯಾನಿಸಿದ. ತನ್ನ ಟ್ಯಾಕ್ಸಿ ಹಿಂದೆ ಮತ್ತೊಂದು ಕಾರು ಬರುತ್ತಿರುವುದು ಆತನ ಗಮನಕ್ಕೆ ಬರಲಿಲ್ಲ. ಬಹಳವೆಂದರೆ ಅವನ ಟ್ಯಾಕ್ಸಿ ನೂರಿನ್ನೂರು ಅಡಿ ಮುಂದೆ ಬಂದಿರಬೇಕು ಅಷ್ಟೇ....

ಕಿವಿಗಡಚಿಕ್ಕುವಂಥಹ ಶಬ್ದ ಹೊರಹೊಮ್ಮಿತು ಹಿಂದಿನಿಂದ. ಕರ್ರ್ ಎಂದು ಬ್ರೇಕ್ ಹಾಕಿ ಟ್ಯಾಕ್ಸಿ ನಿಲ್ಲಿಸಿದ ಡ್ರೈವರ್ ಹಿಂದೆ ನೋಡಿದ. ಅಲ್ಲೆಲ್ಲ ಹಾಹಾಕಾರ ಚೀರಾಟ ಇಲ್ಲಿಗೂ ಕೇಳುತ್ತಿತ್ತು.

'ಡ್ರೈವರ್ ಬೇಗ... ಅವಸರಪಡಿಸಿದ ಜಯಂತ್.

ಅವನೆಡೆ ಒಂದು ಸಂಶಯಿತ ದೃಷ್ಟಿ ಬೀರಿ ಡ್ರೈವರ್ ಕಾರು ಮುಂದೆ ನಡೆಸಿದ. ಅವರ ಹಿಂದಿನ ಕಾರು ನಿಧಾನವಾಗಿ ಹಿಂಬಾಲಿಸುತ್ತಲೇ ಇತ್ತು.

ಅದರ ಕಲ್ಪನೆ ಜಯಂತನಿಗೆ ಇದ್ದಂತಿರಲಿಲ್ಲ. ಆತ ಅತೀ ಹೆಚ್ಚು ಅವಸರದಲ್ಲಿದ್ದದ್ದೋ ಅಥವಾ ಹಿಂದಿದ್ದ ಕಾರು ತನ್ನ ಮುಂದಿನ ಎಲ್ಲ ದೀಪಗಳನ್ನು ಆರಿಸಿ ಹಿಂಬಾಲಿಸುತ್ತಿರುವುದರಿಂದಲೋ ಒಟ್ಟಾರೆ ಜಯಂತ್ ಬೇಸ್ತು ಬಿದ್ದಿದ್ದ.

ಅರ್ಧರಾತ್ರಿಯ ಸಮಯವಾದ್ದರಿಂದ ರಸ್ತೆ ನಿರ್ಜನವಾಗಿತ್ತು. ಆಗೊಂದು ಈಗೊಂದು ವಾಹನಗಳು ಓಡಾಡುತ್ತಿದ್ದವು. ಒಂದೆಡೆ ರಸ್ತೆ ತಿರುಗುತ್ತಿದ್ದಲ್ಲಿ ಕಾರು ನಿಲ್ಲಿಸಲು ತಿಳಿಸಿದ ಜಯಂತ್. ಟ್ಯಾಕ್ಸಿ ನಿಲ್ಲುತ್ತಲು ಪಿಸ್ತೂಲು ಹಿಡಿದು ಹೊರಬಂದ ಜಯಂತ್ ಡ್ರೈವರನ್ನು ಬೆದರಿಸಿ ಕೆಳಗಿಳಿಸಿದ. ತುಸು ದೂರ ಅವನನ್ನು ಪಿಸ್ತೂಲು ನಳಿಕೆಯಿಂದ ತಳ್ಳುತ್ತ ಬಂದು ಅಲ್ಲಿಂದ ಒಂದೇ ಉಸುರಿಗೆ ಓಡುವಂತೆಯೂ, ಓಡದಿದ್ದರೆ ಪ್ರಾಣಕ್ಕೆರವಾಗಬೇಕಾಗುತ್ತದೆಂದೂ ಹೆದರಿಸಿದ. ಟ್ಯಾಕ್ಸಿ ಬಗ್ಗೆ ಚಿಂತೆ ಬೇಡ. ಬೆಳಗ್ಗೆ ರೈಲು ನಿಲ್ದಾಣದ ಬಳಿ ಅದು ಸುರಕ್ಷಿತವಾಗಿ ದೊರೆಯುತ್ತದೆ ಎಂದು ಭರವಸೆ ನೀಡಿದ. ಬೇರೆ ದಾರಿ ಇಲ್ಲದೆ ಡ್ರೈವರ್ ಅಲ್ಲಿಂದ ಓಟಕಿತ್ತ. ಇಲ್ಲದಿದ್ದರೆ ಪ್ರಾಣ ?

ಒಂದು ನಿಡಿದಾದ ಉಸಿರು ಬಿಟ್ಟ ಜಯಂತ್ ಟ್ಯಾಕ್ಸಿ ಬಳಿ ಬಂದು ತಾನೇ ಡ್ರೈವ್ ಮಾಡುತ್ತ ರೈಲು ನಿಲ್ದಾಣದ ವಿರುದ್ಧ ದಿಕ್ಕಿನತ್ತ ಟ್ಯಾಕ್ಸಿ ಓಡಿಸಿದ. ಟ್ಯಾಕ್ಸಿ ಬಹಳವೆಂದರೆ ಒಂದರ್ಧ ಮೈಲಿ ಓಡಿರಬೇಕು ಅಷ್ಟೇ.... ಅವನ ಮೈ ಮೇಲಿನ ರೋಮಗಳು ಸೆಟೆದು ನಿಂತವು. ಹೃದಯ ಒಂದೇ ಬಾರಿ ಥರ್ ಎಂದು ಜೋರಾಗಿ ಬಡಿದುಕೊಂಡಿತು. ಕುತ್ತಿಗೆಗೆ ತಣ್ಣನೆಯ ಲೋಹದ ನಳಿಕೆಯ ಸ್ಪರ್ಶವಾಗುತ್ತಿದ್ದಂತೆ ಆತ ಸಣ್ಣಗೆ ಬೆವೆತು ಹೋಗಿದ್ದ.

'ಟ್ಯಾಕ್ಸಿ ನಾನು ಹೇಳಿದತ್ತ ನಡೆಯಲಿ..' ಚಿಕ್ಕ ಹಾಗೂ ಚೊಕ್ಕ ಆದೇಶ.

ಚಿಕ್ಕದಾದರೇನು ? ಚೊಕ್ಕವಾಗಿದ್ದರೇನು ? ಬೆನ್ನ ಹಿಂದೆ ಪಿಸ್ತೂಲು ಇದೆ ಎಂದ ಮೇಲೆ ಕೇಳಲೇಬೇಕಲ್ಲ ?.. ಜಯಂತ್ ಅವನ ಕೈ ಬೊಂಬೆಯಾಗಿ ಟ್ಯಾಕ್ಸಿ ಓಡಿಸ ತೊಡಗಿದ. ಜನದಟ್ಟಣೆಯ ಪ್ರದೇಶ ಬಿಟ್ಟು ಅಲ್ಲೊಂದು ಇಲ್ಲೊಂದು ಮನೆಗಳಿದ್ದ ಭಾಗಕ್ಕೆ ಟ್ಯಾಕ್ಸಿ ಬರುತ್ತಿದ್ದಂತೆ ನಿಲ್ಲಿಸಿ ಕೆಳಗಿಳಿಯಲು ಆದೇಶ ಬಂದಿತು. ಅಂಥ ಒಂದು ಅವಕಾಶಕ್ಕಾಗಿಯೇ ಕಾದಿದ್ದ ಜಯಂತ್. ಬ್ರೀಫ್‌ಕೇಸ್ ಕೈಯಲ್ಲಿ ಹಿಡಿದು ತೆರೆದ ಬಾಗಿಲಿಂದ ಕೆಳಗಿಳಿಯುತ್ತ ಹಿಂದಿದ್ದ

ವ್ಯಕ್ತಿ ಕೆಳಗಿಳಿಸುವ ಮೊದಲೇ ಬಲಗಡೆ ಓಟಕಿತ್ತ. ಆತ ಸರಿಯಾಗಿ ಗುರಿಯಿಡುವ ಮುನ್ನವೇ ಸಾಕಷ್ಟು ದೂರ ಓಡುವ ಉದ್ದೇಶ ಅವನದು. ಅವನೆಂದುಕೊಂಡಂತೆಯೇ ಆಯಿತು. ಈ ರೀತಿ ಆಗಬಹುದೆಂದು ನಿರೀಕ್ಷೆ ಮಾಡಿರದ ಹಿಂದಿದ್ದ ವ್ಯಕ್ತಿ ಗಲಿಬಿಲಿಗೊಂಡು ಬಾಗಿಲು ತೆಗೆದು ಕೆಳಗಿಳಿಯುವುದರೊಳಗೆ ಜಯಂತ್ ಚಿಗರಿಯಂತೆ ಜಿಗಿಯುತ್ತ ಪಿಸ್ತೂಲು ಗುರಿಗೆ ಸಿಗದಂತೆ ಅಡ್ಡಾದಿಡ್ಡಿಯಾಗಿ ಓಡಿ ದೂರ ಸಾಗಿದ್ದ.... ಹಿಂದಿದ್ದವ ಬೆಂಬತ್ತಿದ.

ಇಲ್ಲಿ ಚಿಕ್ಕನ ಆಟ ಪ್ರಾರಂಭವಾಯಿತು. ಈ ಆಟಕ್ಕೆ ಬೇಕಾದುದಾದರು ಏನು ? ಅಲ್ಲಿದ್ದ ಹತ್ತಿಪ್ಪತ್ತು ಮನೆಗಳೇ ಇವರಿಗೆ ನೆರವಾದವು. ಒಂದು ಬಾರಿ ಈತ, ಇನ್ನೊಂದು ಬಾರಿ ಆತ ಒಂದೊಂದು ಮನೆ ಹಿಂದೆ ಮರೆಯಾಗುತ್ತಿದ್ದರು. ಏನೇ ಆದರೂ ಜಯಂತ್‌ಗೆ ಅದೃಷ್ಟ ಕೊನೆಗೂ ಕೈಕೊಟ್ಟಿತು. ಕತ್ತಲೆಯಲ್ಲಿ ತೆರೆದ ಗುಂಡಿಯೊಂದರಲ್ಲಿ ಕಾಲಿಟ್ಟು ಆತ ನೆಲಕಚ್ಚಿದ. ಕೈಲಿದ್ದ ಬ್ಯಾಗು ದೂರ ಸಿಡಿದು ಬಿತ್ತು. ಗುಂಡಿಯಿಂದ ಮೇಲೆದ್ದಾಗ ಎರಡೂ ಕಾಲುಗಳು ಗಾಯಗೊಂಡಿದ್ದು ಭಗಭಗನೇ ಉರಿಯುತ್ತಿದ್ದವು. ನೆಲಕ್ಕೆ ಊರುತ್ತಲು ಜೀವ ಹೋದಂತಾಗೋಯ್ತು. ಇದರ ಸದುಪಯೋಗ ಪಡೆದವ ಹಿಂದಿದ್ದ. ಆಕ್ರಮಣಕಾರಿ.. ಜಯಂತ್‌ನ ಮೇಲೆರಗಿ ಪಿಸ್ತೂಲಿನ ಹಿಡಿಕೆಯಿಂದ ಮುಖದ ಮೇಲೆಲ್ಲಾ ಪ್ರಹಾರ ಮಾಡಿದ. ಜಯಂತ್ ನೋವಿನಿಂದ ಅರಚಿಕೊಳ್ಳುತ್ತಿದ್ದಂತೆ ನೆತ್ತಿಯ ಮೇಲೆ ಒಂದರ ಮೇಲೆ ಒಂದರಂತೆ ಮೂರು ನಾಲ್ಕು ಏಟುಗಳು, ಕಣ್ಣಿಗೆ ಕತ್ತಲೆ ಬಂದಂತಾಗಿ ಜಯಂತ್ ಎರಡೂ ಕೈಗಳಿಂದ ತಲೆಹಿಡಿದುಕೊಂಡ. ಅವನ ನೆತ್ತಿಯಿಂದ ಹರಿದು ಬಂದ ರಕ್ತ ಕೈಬೆರಳ ಸಂದಿಯೊಳಗಿಂದ ಹಾಯ್ದು.. ಮುಖ ತೋಯಿಸಿ ಕೆಳಗೆ ಬೀಳುತ್ತಿದ್ದಂತೆ ಆತ ನೆಲಕ್ಕೆ ಕುಸಿದಿದ್ದ.

ದೂರದಲ್ಲಿ ಬಿದ್ದ ಬ್ರೀಫ್‌ಕೇಸನ್ನೆತ್ತಿಕೊಂಡು ಹಿಂದಿದ್ದ ವ್ಯಕ್ತಿ.. ತನ್ನ ಕಾರಿನತ್ತ ನಡೆದ. ಹಿಂದಿನ ಕಿಟಕಿ ಸರಿಯಿತು. ಕಿಟಕಿಯಲ್ಲಿ ಬ್ರೀಫ್‌ಕೇಸ್ ಹಿಂದಿದ್ದ ವ್ಯಕ್ತಿ ಕೈ ಸೇರುತ್ತಿದ್ದಂತೆ ನೋಟಿನ ಕಟ್ಟೊಂದು ಹೊರಬಂತು. ಅದರೊಂದಿಗೆ.

'ನಿನ್ನ ಕೆಲಸದಿಂದಾಗಿ ಬಹಳ ಸಂತೋಷವಾಗಿದೆ ಕಾಳು. ಅವಶ್ಯಕತೆ ಬಿದ್ದಾಗ ಮತ್ತೆ ಹೇಳಿ ಕಳಿಸುತ್ತೇನೆ. ನೀನು ಇಲ್ಲಿಂದ ನಡೆದುಕೊಂಡೇ

ಹೋಗು....

ಕಾರು ಹೊರಟು ಹೋಗುತ್ತಿದ್ದಂತೆ ಹತ್ತು ಸಾವಿರದ ಕಟ್ಟನ್ನು ಹಿಂದಿನ ಜೇಬಿಗೆ ಸೇರಿಸಿದ್ದ ಕಾಳು ಹೆಜ್ಜೆ ಹಾಕಿದ. ಜಯಂತ್ ಹಾರಿಸಿ ಕೊಂಡು ಬಂದ ಟ್ಯಾಕ್ಸಿಯತ್ತ ಅದನ್ನೇಕೆ ಖಾಲಿ ಬಿಡುವುದು?... ಮಧ್ಯ ದಲ್ಲೇ ಇದೆ. ರೈಲು ನಿಲ್ದಾಣ ಅಲ್ಲೇ ಬಿಟ್ಟರಾಯಿತೆಂದುಕೊಂಡು ಡ್ರೈವಿಂಗ್ ಸೀಟಿನಲ್ಲಿ ಕುಳಿತ.

ಟ್ಯಾಕ್ಸಿ ಕಣ್ಮರೆಯಾಗುತ್ತಿದ್ದಂತೆ ಸನಿಹದಲ್ಲಿದ್ದ ಮನೆಯೊಂದರ ಮರೆ ಯಿಂದ ಹುಡುಗನೊಬ್ಬ ಹೊರಬಂದ.... ಕಣ್ಣಾರೆ ಕಂಡ ದೃಶ್ಯದಿಂದಾಗಿ ಅವನ ನಿಶೆ ಎಲ್ಲಾ ಇಳಿದು ಹೋಗಿತ್ತು.... ಹಾಗೇ ನಡೆಯುತ್ತ ಮುಖ್ಯ ಬೀದಿಗೆ ಬಂದ ಕೆಲವೇ ಅಡಿ ದೂರದಲ್ಲಿ ಅವನ ಕಣ್ಣಿಗೆ ಬಿತ್ತು ಪೊಲೀಸ್ ಠಾಣೆ. ಅತ್ತಲೇ ಹೆಜ್ಜೆ ಹಾಕಿದ....

ಡಾಕ್ಟರ್ ಉಪಾಧ್ಯಾಯ ಒಬ್ಬ ಮಾನವತಾವಾದಿ ವ್ಯಕ್ತಿ. ತಮ್ಮ ಮೂವತ್ತು ವರ್ಷಗಳ ವೈದ್ಯಕೀಯ ಜೀವನದಲ್ಲಿ ಒಬ್ಬರನ್ನೂ ನಿರಾಶರನ್ನಾಗಿ ಮರಳಿ ಕಳಿಸಿರಲಿಲ್ಲ. ಆ ವ್ಯಕ್ತಿಗೆ ಕೋಪವೆಂಬುದೇ ಇರಲಿಲ್ಲವೆಂದು ಕಾಣುತ್ತದೆ. ಯಾವಾಗಲೂ ನಗುನಗುತ್ತ ಮಾತನಾಡುವ ಅವರನ್ನು ನೋಡುತ್ತಲು ರೋಗಿಯ ಅರ್ಧ ಬೇನೆ ಹೇಳಹೆಸರಿಲ್ಲದಂತೆ ಹೊರಟು ಹೋಗುತ್ತಿತ್ತು.... ಅವನ ಸೇವೆಯನ್ನು ಗಮನಿಸಿ ಸರಕಾರ ಅವರಿಗೆ ಅನೇಕ ಪ್ರಶಸ್ತಿಗಳನ್ನು ನೀಡಿ ಗೌರವಿಸಿತ್ತು.

ಇಂದು ಡಾಕ್ಟರ್ ಉಪಾಧ್ಯಾಯರ ಮಗಳು ರಜನಿಯ ಮದುವೆ. ಅವರ ಪತಿ ಸಹ ಒಬ್ಬ ಡಾಕ್ಟರ್.... ಉಪಾಧ್ಯಾಯರ ಶಿಷ್ಯ. ಅವರ ಮಾರ್ಗದರ್ಶನದಲ್ಲಿ ಮುನ್ನಡೆದವ ಗೋವಿಂದ.... ಗೋವಿಂದ, ರಜನಿ ಒಬ್ಬರನ್ನೊಬ್ಬರು ಪ್ರೀತಿಸಿದರು. ಉಪಾಧ್ಯಾಯರಿಗೆ ರಜನಿ ಒಬ್ಬಳೇ ಮಗಳು. ಯೋಚಿಸುವಂತೆಯೇ ಇರಲಿಲ್ಲ. ಅನುರೂಪನಾದ ವರ ದೊರೆ ತಿದ್ದ, ಡಾಕ್ಟರ್ ತಥಾಸ್ತು ಎಂದರು. ಮದುವೆ ನಿಶ್ಚಿತವಾಯಿತು.

ಕ್ಯಾಪ್ಟನ್ ಅಶೋಕನ ತಂದೆ ಚಿತ್ತರಂಜನ್ ಹಾಗೂ ಡಾಕ್ಟರ್ ಸಂಬಂಧಿಕರಾಗಬೇಕು. ಹೀಗಾಗಿ ಅಶೋಕ ಅವರಿಗೆ ಅಂಕಲ್ ಎನ್ನುತ್ತಿದ್ದ.... ಈ ಸಂಬಂಧದಿಂದಾಗಿ ಡಾಕ್ಟರ್ ಉಪಾಧ್ಯಾಯ ತಮ್ಮ ಮಗಳ ಮದುವೆ

ಆಮಂತ್ರಣ ಪತ್ರಿಕೆ ಮೇಜರ್ ಹೇಮಂತ್‌ಗೆ ಕಳಿಸಿದ್ದರು. ಎರಡು ಬಾರಿ ಫೋನು ಮಾಡಿ ಮದುವೆಗೆ ಬರಲೇಬೇಕೆಂದು ಒತ್ತಾಯ ಕೂಡ ಮಾಡಿದ್ದರು. ಅಶೋಕ ಸಹ ಮದುವೆಗೆ ಹೋಗಿಬರಲು ಒಲವು ತೋರಿಸಿದ್ದರಿಂದ ಹೇಮಂತ್ ಸುಷಮಾಳೊಂದಿಗೆ ಮದುವೆಗೆ ಬಂದಿದ್ದ. ನಗರದ ವಿಖ್ಯಾತ ಹೋಟೆಲ್ ಸಂಗೀತಾದಲ್ಲಿ ರೂಮು ಪಡೆದಿದ್ದ.... ಅವರು ಬಂದದ್ದು ಮದುವೆ ಹಿಂದಿನ ದಿವಸ.... ಅಂದಿನ ರಾತ್ರಿ ಒಂದೆರಡು ಗಂಟೆ ಊರು ಸುತ್ತಾಡಿದರು. ರಾತ್ರಿ ಊಟ ಹೋಟೆಲ್‌ನ ಹಾಲ್‌ನಲ್ಲಿಯೇ ತೆಗೆದುಕೊಂಡರು. ಈ ಮಧ್ಯೆ ಬೆಳಗಿನಿಂದ ರಾತ್ರಿ ಊಟದವರೆಗೂ ಭಾರಿ ಮೀಸೆ ಹೊತ್ತ ದಪ್ಪ ಮುಖದ ವ್ಯಕ್ತಿಯೊಬ್ಬರು ತಮ್ಮ ಮೇಲೆ ಕಣ್ಣಿಟ್ಟಿರುವುದನ್ನು ಹೇಮಂತ್ ಗಮನಿಸಿದ್ದ. ಮದುವೆಗೆ ಬಂದಾಗಲು ಈ ಕಿರಿಕಿರಿ ಕಂಡು ಮನಸ್ಸಿಗೆ ಬೇಜಾರಾಗಿತ್ತು. ಅಶೋಕನಿಗೆ ತಿಳಿದರೆ ಆತ ಬೇಜಾರು ಮಾಡಿಕೊಳ್ಳುತ್ತಾನೆಂದು ಅವನ ಮುಂದೆ ಈ ವಿಷಯ ಹೇಳಲಿಲ್ಲ.

ಮದುವೆ ಮುಂಜಾನೆ ಹತ್ತೂಕಾಲಿಗೆ... ಬೆಳಗ್ಗೆ ಏಳೂವರೆಗೇ ಅಶೋಕ ರೂಮ್‌ನಿಂದ ಹೊರಬಿದ್ದಿದ್ದ. ಹೊರಡುವ ಮುನ್ನ ಮೇಜರಿಗೆ ಒಂಭತ್ತು ಒಂಭತ್ತೂವರೆಗೆ ಬರಲು ತಿಳಿಸಿದ್ದ.... ದಿನನಿತ್ಯದಂತೆ ಎದ್ದ ಹೇಮಂತ್ ರೂಮಿನಲ್ಲೇ ಸ್ವಲ್ಪ ದೈಹಿಕ ಚಟುವಟಿಕೆ ಮಾಡಿ ಸ್ನಾನ ಮಾಡಿದ....ಸುಷಮಾ ಸಹ ಎದ್ದು ಬಾತ್‌ರೂಮು ಹೊಕ್ಕಳು. ಎಂಟೂವರೆಗೆ ಅವರು ಟಿಫಿನ್‌ಗೆಂದು ಹೊಟೇಲ್ ಹಾಲ್‌ಗೆ ಬಂದರು. ಹಾಲ್‌ಗೆ ಬರುತ್ತಲು ಹೇಮಂತನ ಕಣ್ಣಿಗೆ ಬಿದ್ದ ಮೊದಲ ವ್ಯಕ್ತಿ ಎಂದರೆ ಭಾರೀ ಮೀಸೆ ಹೊತ್ತ ದಪ್ಪ ಮುಖದ ಆ ವ್ಯಕ್ತಿ.... ಹೇಮಂತ್ ಅವನತ್ತ ನೋಡುತ್ತಲೂ ಈ ಬಾರಿ ಆ ವ್ಯಕ್ತಿಯ ಮುಖದ ಮೇಲೆ ಮುಗುಳುನಗೆ ತೇಲಿತು.

ಏನಿದು ಆಶ್ಚರ್ಯ.... ಹಿಂಬಾಲಿಸುವ.... ಕದ್ದು ಚಟುವಟಿಕೆ ನಿರೂಪಿಸುವ ಬೆನ್ನ ಹಿಂದಿದ್ದು ಗೂಢಚಾರಿಕೆ ಮಾಡುವವ ಯಾವಾಗಲೂ ಬಯಲಿಗೆ ಬರುವುದಿಲ್ಲ. ಆಕಸ್ಮಾತ್ತಾಗಿ ಬಂದರೂ ತಪ್ಪಿಸಿಕೊಳ್ಳಲು ಬಯಸುತ್ತಾರೆ. ಆದರೆ ಈತ ?.... ಹಾಗಾದರೆ ಈತ ತನ್ನ ಶತೃವಲ್ಲ. ಬೇರೆ ಯಾವ ದುಷ್ಟಕೂಟಕ್ಕೂ ಸೇರಿದವನಲ್ಲ ಎಂಬುದು ನಿರ್ಧಾರವಾದಂತಾಯಿತು....

ಹಾಗಾದರೆ ಈತ ಯಾರಿರಬಹುದು ?

ಯೋಚಿಸುತ್ತ ತಾನೂ ಔಪಚಾರಿಕವಾಗಿ ನಕ್ಕ. ಅಷ್ಟೇ ಆ ವ್ಯಕ್ತಿ ಎದ್ದು ಸರಸರನೆ ಹೊರಗೆ ಹೋಗಿಬಿಟ್ಟ.

'ಏಕೆ ? ಏನಾಯ್ತು ?' ಸುಷಮಾ ಬದಲಾದ ಹೇಮಂತನನ್ನು ಪ್ರಶ್ನಿಸಿದಳು.

'ಏನೂ ಇಲ್ಲ'. ಆತ ಹಾರಿಕೆ ಉತ್ತರ ನೀಡಿದ.

'ನನ್ನ ಮುಂದೂ ಹಾರಿಕೆ ಉತ್ತರವೇ ? ಖಂಡಿತವಾಗಿಯೂ ಏನೋ ಇದೆ ?' ಮುಗುಳನಗೆ ನಕ್ಕ ಹೇಮಂತ್ ಮೆಲ್ಲನೆ ನುಡಿದ.

'ನನಗೆನಿಸುವ ಮಟ್ಟಿಗೆ ನಮಗಾಗಿ ಇಲ್ಲೊಂದು ಕೇಸು ದಾರಿ ಕಾಯ್ತಿದೆ.

'ಏನು ? ಇಲ್ಲಿ.... ನಮಗಾಗಿ ಕೇಸು ಕಾಯುತ್ತಿದೆಯೆ ?'

ಹೇಮಂತನ ಮುಗುಳುನಗೆಯೇ ಅದಕ್ಕುತ್ತರವಾಯಿತು. ನಿರ್ದಿಷ್ಟ ಪಡಿಸಿದಂತೆ ಅವರು ಒಂಭತ್ತು ಗಂಟೆಗೆ ಹೊಟೇಲ್ ಬಿಟ್ಟವರು ಒಂಭತ್ತು ಕಾಲಿಗೆ ಉಪಾಧ್ಯಾಯರ ಮನೆಯ ಮುಂದಿದ್ದರು. ಅಶೋಕ ಅವರಿಗಾಗಿ ಕಾಯ್ದು ನಿಂತಿದ್ದ. ಅವರಿಬ್ಬರನ್ನೂ ಕರೆದೊಯ್ದು ಉಪಾಧ್ಯಾಯರ ಬಳಿ.... ಬಹುಶಃ ಆತ ಮೊದಲೇ ಹೇಳಿಟ್ಟಿದ್ದನೆಂದು ಕಾಣುತ್ತದೆ. 'ಓಹ್.... ಮೇಜರ್ ಹೇಮಂತ್.... ನಾನೆಂಥ ಸುದೈವಿ. ನನ್ನ ಮಗಳೆಷ್ಟು ಭಾಗ್ಯ ಶಾಲಿ! ನಿಮ್ಮಂತ ಮಹಾ ಮೇಧಾವಿ.... ದೇಶಪ್ರೇಮಿ ಮದುವೆಗೆ ಬಂದದ್ದು... ನಮ್ಮ ಅದೃಷ್ಟ.'

ಹೇಮಂತನನ್ನು ಬಲವಾಗಿ ತಬ್ಬಿಕೊಂಡು ಬೆನ್ನಮೇಲೆ ಪ್ರೀತಿಯಿಂದ ತಟ್ಟಿದರು ಉಪಾಧ್ಯಾಯರು. ಆಗಲೇ ಉಪಾಧ್ಯಾಯರ ಕಂಚಿನ ಕಂಠದಲ್ಲಿ ಮೇಜರನ ಹೆಸರು ಕೇಳಿ ಅಲ್ಲಿ ಸೇರಿದ್ದ ಸುಮಾರು ಜನ ಹೇಮಂತನತ್ತ ಆಕರ್ಷಿತರಾದರು. ಅವರೆಲ್ಲ ತಮ್ಮ ಅರಳುಗಣ್ಣುಗಳಿಂದ ಹೇಮಂತನತ್ತ ಮೆಚ್ಚುಗೆ ದೃಷ್ಟಿ ಬೀರುವಾಗ ಅದನ್ನು ಕಂಡ ಸುಷಮಾಳ ಪುಟ್ಟ ಹೃದಯ ಹೆಮ್ಮೆಯಿಂದ ಬೀಗಿತು.

ಉಪಾಧ್ಯಾಯರ ಆಪ್ಯಾಯಮಾನದ ಅಪ್ಪುಗೆಯಿಂದ ಬಿಡಿಸಿಕೊಂಡ ಹೇಮಂತ್.

ಡಾಕ್ಟರ್.... ನೀವೇನೂ ಕಡಿಮೆಯಿಲ್ಲ. ನಿಮ್ಮ ಸೇವೆಯಿಂದ ಮಾನವ ಕುಟುಂಬವನ್ನೇ ಗೆದ್ದಿದ್ದೀರಿ. ನಿಮ್ಮೆದುರು ನಾನು ಗೌರವದಿಂದ ತಲೆ ಬಾಗುತ್ತೇನೆ.

ಹೇಮಂತನ ವಿನಯ ಕಂಡು ಡಾಕ್ಟರ್‌ರ ಕಣ್ಣಾಲಿಗಳು ತುಂಬಿ ಬಂದವು. ಮತ್ತೊಂದು ಬಾರಿ ಅಪ್ಪಿಕೊಂಡ ಅವರು ಗದ್ಗದಿತರಾಗಿ ನುಡಿದರು.

'ನಿಮ್ಮ ಬಗ್ಗೆ ಕೇಳಿದ್ದೆಲ್ಲ ನೂರಕ್ಕೆ ನೂರು ಸತ್ಯ ಮೇಜರ್. ನಾನಿಂದು ಧನ್ಯನಾದೆ'.

ನಾಲ್ಕಾರು ಜನ ಮುಂದೆ ಬಂದು ತಮ್ಮ ತಮ್ಮ ಪರಿಚಯ ಹೇಳಿಕೊಂಡು ಕೈ ಕುಲುಕಿದರು. ಅಶೋಕ.... ಅವರಿಬ್ಬರನ್ನು ಮದುವೆ ಮಂಟಪದ ಬಳಿ ಕರೆದೊಯ್ದ. ವಧುವರರಿಗೆ ಹೇಮಂತ್ ಹಾಗೂ ಸುಷಮಾಳ ಪರಿಚಯ ಮಾಡಿಕೊಟ್ಟಾಗ ಅವರಿಬ್ಬರೂ ಆನಂದ.... ಸಂತಸಗಳಿಂದ ಪುಲುಕಿತರಾದರು.

ಅಕ್ಷತೆಯ ಮುಹೂರ್ತ ಸಮೀಪಿಸಿತು. ಎಲ್ಲೆಡೆ ಚಟುವಟಿಕೆ ಜೋರಾಗಿ ಪ್ರಾರಂಭವಾದವು. ಅಶೋಕ ಅವರಿಗಾಗಿ 'ಕೂಲ್‌ಡ್ರಿಂಕ್ಸ್' ತಂದುಕೊಟ್ಟ. ನಿಧಾನವಾಗಿ ಕುಡಿಯುತ್ತ ಒಂದು ಮೂಲೆಗೆ ಬಂದು ನಿಂತರು.

'ಮೇಜರ್' ಮೆದುವಾಗಿ ಯಾರೋ ಕರೆದಂತಾಯಿತು. ಮೇಜರ್ ಹೊರಳಿದ. ಚಕಿತನಾದ.... ಅದೇ ವ್ಯಕ್ತಿ.... ಭಾರೀ ಮೀಸೆ ಹೊತ್ತ ದಪ್ಪ ಮುಖದ ವ್ಯಕ್ತಿ

'ತಮ್ಮೊಡನೆ ಸ್ವಲ್ಪ ಮಾತನಾಡಬೇಕಿತ್ತು.'

'ಕ್ಷಮಿಸಿ, ನಾನಿಲ್ಲಿ ಮಂಗಳ ಕಾರ್ಯದಲ್ಲಿ ಭಾಗವಹಿಸಲು ಬಂದಿದ್ದೇನೆ, ಕೇಸಿಗಲ್ಲ.' ಮೃದುವಾಗಿ ಅಷ್ಟೆ ಮೊಟಕಾಗಿ ಉತ್ತರಿಸಿದ ಹೇಮಂತ್.

ಅಶೋಕ ಮತ್ತು ಸುಷಮಾ ಮೌನವಾಗಿ ಆಲಿಸುತ್ತಿದ್ದರು.

'ನನಗೆ ಗೊತ್ತು ಹೇಮಂತ್.... ತುಂಬಾ ಅವಶ್ಯಕವಾದ ಕೆಲಸವಿದ್ದುದರಿಂದ ತಮಗೆ ತೊಂದರೆ ಕೊಡಬೇಕಾಗಿದೆ.... ದಯವಿಟ್ಟು....

'ಸಾರಿ.... ನನ್ನನ್ನ ಕ್ಷಮಿಸಿ'.

ಹೇಮಂತ್ ಮಾತು ಅಲ್ಲಿಗೆ ಮುಗಿಸಿದ. ಅದೇ ವೇಳೆಗೆ ಮಂಗಳ ವಾದ್ಯಗಳು ಮೊಳಗಿದವು. ಮೂವರು ವಧುವರರಿಗೆ ಶುಭಾಶಯ ಹೇಳಲು ಅತ್ತ ಧಾವಿಸಿದರು. ಮುಂದೆ ಆ ವ್ಯಕ್ತಿಯನ್ನು ಹೇಮಂತ್ ಪೂರ್ತಿಯಾಗಿ ಮರೆತುಬಿಟ್ಟ.....

ಮದುವೆ ಊಟದಿಂದಾಗಿ ಹೊಟ್ಟೆ ಭಾರವಾಗಿತ್ತು. ರೂಮಿಗೆ ಬಂದು ಹಾಸಿಗೆ ಮೇಲೆ ಉರುಳಿದಾಗ ಸಮಯ ಒಂದೂವರೆಯಾಗಿತ್ತು. ಐದು ಗಂಟೆಯವರೆಗೂ ಚೆನ್ನಾಗಿ ನಿದ್ದೆ ತೆಗೆದದ್ದಾಯಿತು. ಮೊದಲು ಎಚ್ಚರ ವಾದದ್ದು ಅಶೋಕನಿಗೆ. ಎದ್ದು ಮುಖ ತೊಳೆದು ಪಕ್ಕದಲ್ಲಿದ್ದ ಹೇಮಂತನ ರೂಮಿಗೆ ಫೋನ್ ಮಾಡಿದ. ಇನ್ನೂ ಮಲಗಿಯೇ ಇದ್ದ ಮೇಜರ್ ಗಂಟೆ ಸಪ್ಪಳ ಕೇಳಿ ಎಚ್ಚೆತ್ತ ... ಕಾಫಿಗೆ ಹೇಳಲು ತಿಳಿಸಿ ರಿಸೀವರ್ ಕೆಳಗಿಟ್ಟ.

ಅಶೋಕನ ರೂಮಿನಲ್ಲೇ ಕುಳಿತು ಮಾತನಾಡುತ್ತ ಕಾಫಿ ಕುಡಿಯು ತ್ತಿದ್ದರು. ಇಂದು ರಾತ್ರಿ ಊರಿಗೆ ಹೊರಡಬೇಕೋ ಮುಂಜಾನೆ ಹೊರಡ ಬೇಕೋ ಎಂಬುದು ಮಾತಿನ ವಿಷಯ. ರಾತ್ರಿ ಇಲ್ಲೇ ಕಳೆದು ನಸುಕಿನಲ್ಲಿ ಎದ್ದು ಆರು ಗಂಟೆಗೆ ಹೊರಟರಾಯಿತು ಎಂಬುದು ಸುಷಮಾಳ ವಾದ. ಅದಕ್ಕೆ ಅಶೋಕನೂ ಸಮ್ಮತಿಸಿದ. ಹಾಗಾದರೆ ಇಂದು ರಾತ್ರಿ ಯಾವುದಾದರೂ ಒಂದು ಸಿನೆಮಾ ನೋಡಿದರಾಯ್ತು ಎಂದುಕೊಳ್ಳುತ್ತ ಮೂವರೂ ಮಾತು ಮುಗಿಸುತ್ತಿದ್ದಂತೆ ಕರೆಗಂಟೆ ಬಾರಿಸಿತು. ಅಶೋಕ ಮೇಲೆದ್ದು ಬಾಗಿಲು ತೆರೆದ.

ಒಳಗೆ ಕಾಲಿಟ್ಟ ಮುಖದ ತುಂಬ ಭಾರೀ ಮೀಸೆ ಬಿಟ್ಟ ಆ ದಪ್ಪ ಮೋರೆಯ ವ್ಯಕ್ತಿಯನ್ನು ನೋಡುತ್ತಲೂ ಹೇಮಂತನ ಮುಖ ಗಂಟಾ ಯಿತು. ಅವನ ಹಿಂದೆಯೇ ಬಂದ ಡಾಕ್ಟರ್ ಉಪಾಧ್ಯಾಯ.... ರಜನಿ ಹಾಗೂ ಗೋವಿಂದರನ್ನು ನೋಡುತ್ತಲು ಗಂಟಾದ ಮುಖ ಸಡಿಲಾಯಿತು. ಕುಳಿತಲ್ಲಿಂದ ಎದ್ದು ಆದರದಿಂದ ಸ್ವಾಗತಿಸಿ ಕುಳ್ಳಿರಿಸಿದ. ಹೇಮಂತನ ಸಂಜ್ಞೆ ತಿಳಿದುಕೊಂಡ ಅಶೋಕ ಅತಿಥಿಗಳಿಗಾಗಿ ಕಾಫಿ ತಿಂಡಿಗೆ ಆರ್ಡರ್ ಮಾಡಿದ.

'ಕ್ಷಮಿಸಿ ಮೇಜರ್, ನಿಮ್ಮ ವಿಶ್ರಾಂತಿಗೆ ಭಂಗ ತಂದೆ'.

ಉಪಾಧ್ಯಾಯರು ಶಿಷ್ಟಾಚಾರದ ಚೌಕಟ್ಟಿನಲ್ಲೇ ಮಾತನಾಡಿ ಕ್ಷಮೆ

ಕೋರಿದಾಗ ಹೇಮಂತ್ ಅಷ್ಟೇ ವಿನಯದಿಂದ ಅದನ್ನು ತಿರಸ್ಕರಿಸಿದ.

'ತಾವು ಹಿರಿಯರು. ಹಾಗೆಲ್ಲಾ ಅನ್ನಬಾರದು. ಇಂದೇ ನಿಮ್ಮ ಮಗಳ ಮದುವೆಯಾಗಿದೆ. ಮನೆ ತುಂಬಾ ಜನರಿದ್ದಾರೆ. ಅವರನ್ನು ಬಿಟ್ಟು ನನ್ನಲ್ಲಿಗೆ ಬರಬೇಕೆಂದರೆ ಮಹತ್ವದ ವಿಷಯವಿರಲೇಬೇಕು. ಯಾವ ಸಂಕೋಚವೂ ಇಲ್ಲದೆ ಹೇಳಿ.'

'ಒಂದು ದೃಷ್ಟಿಯಿಂದ ನಾನಿಲ್ಲಿಗೆ ಬರಲು ಇವರೇ ಕಾರಣ. ಇವರ ಕೇಸಿನ ಬಗ್ಗೆ ಬರಬೇಕಾಯ್ತು ?' ಭಾರೀ ಮೀಸೆಯ ದಪ್ಪ ಮುಖದವರ ಕಡೆ ಬೆರಳು ಮಾಡಿ ತೋರಿಸಿ ನುಡಿದರು ಡಾಕ್ಟರರು.

'ಇಂದು ಬೆಳಿಗ್ಗೆ ನಾನಿವರ ಜೊತೆ ಮಾತನಾಡಿರುವೆ. ಸದ್ಯದ ಪರಿಸ್ಥಿತಿಯಲ್ಲಿ ಕೇಸು ಹಿಡಿಯುವ ಸ್ಥಿತಿಯಲ್ಲಿಲ್ಲ ಎಂದು ಹೇಳಿರುವೆ.

'ಹೌದು ಅದು ನನಗೆ ಗೊತ್ತು. ನೀವು ಆ ರೀತಿ ಹೇಳಿದಾಗ ಇವರಾರು ಎಂಬುದು ನಿಮಗೆ ತಿಳಿದಿರಲಿಲ್ಲ. ಈಗ ಗೊತ್ತಾದ ಮೇಲೆ ಬಹುಶಃ ನೀವು ನಿರಾಕರಿಸಲಾರಿರಿ ಎನಿಸುತ್ತದೆ.' ಉಪಾಧ್ಯಾಯರು ನಗುತ್ತ ನುಡಿದಾಗ ಭಾರೀ ಮೀಸೆಯ ವ್ಯಕ್ತಿ ವಿಷಾದ ವ್ಯಕ್ತಪಡಿಸಿ ನುಡಿದರು.

'ದಯವಿಟ್ಟು ಕ್ಷಮಿಸಿ ಮೇಜರ್.... ಮೊದಲು ನಾನು ನಿಮಗೆ ನನ್ನ ಪರಿಚಯ ಮಾಡಿಕೊಡಬೇಕಾಗಿತ್ತು. ಅಲ್ಲೇ ನಾನು ತಪ್ಪಿದ್ದು. ನಿನ್ನೆಯೇ ನಾನು ನಿಮ್ಮನ್ನು ಗಮನಿಸಿದ್ದೆ. ನೀವು ಮೇಜರ್ ಹೇಮಂತ್ ಎಂಬ ಸಂಶಯ ಬಂದಿತ್ತು. ಆದರೂ ನೀವು ಇಲ್ಲೇಕೆ ಬರುತ್ತೀರಿ ಎಂದು ಸಂಶಯ ಪಟ್ಟೆ. ಹೊಟೇಲ್ ರಿಜಿಸ್ಟರಿನಲ್ಲಿಯೂ ನಿಮ್ಮ ಹೆಸರಿಲ್ಲ. ಡಾಕ್ಟರ್ ಉಪಾಧ್ಯಾಯರ ಹೆಸರಿದೆ. ಅದಕ್ಕಾಗಿ ನಾನು ಕೇವಲ ನಿಮ್ಮನ್ನು ಹಿಂಬಾಲಿಸಿದೆ ಅಷ್ಟೇ. ಇಂದು ಮುಂಜಾನೆ ಮದುವೆ ಮನೆಯಲ್ಲೇ ನನಗೆ ನೀವೇ ಮೇಜರ್ ಹೇಮಂತ್ ಎಂದು ಸ್ಪಷ್ಟವಾದದ್ದು. ಅದಕ್ಕಾಗಿ ಅಲ್ಲೇ ನಾನು ನಿಮ್ಮನ್ನು ಸಂಪರ್ಕಿಸಿದೆ. ಅದು ನನ್ನ ಎರಡನೇ ತಪ್ಪು. ನೋಡಲು ಹೆದರಿಕೆ ಹುಟ್ಟಿಸುವಂತ ವ್ಯಕ್ತಿಯಿಂದ ಈ ವಿನೀತ ಭಾವನೆ. ತಪ್ಪು ಒಪ್ಪಿಕೊಂಡು ಕ್ಷಮೆ ಕೇಳುವ ದೊಡ್ಡ ಗುಣ ಕಂಡಾಗ ಹೇಮಂತ್‌ನ ಮನಸ್ಸೂ ಬದಲಾಯಿತು. ಮತ್ತೆ ಉಪಾಧ್ಯಾಯರೇ ಮುಂದಾದರು.

'ಇವರ ಹೆಸರು ಶ್ಯಾಮಸುಂದರ್. ಕ್ರೈಂ ಡಿಪಾರ್ಟ್‌ಮೆಂಟಿನಲ್ಲಿ

ಡಿ.ಐ.ಜಿ ಆಗಿದ್ದಾರೆ.

ಶ್ಯಾಮಸುಂದರ ತಮ್ಮ ಇಲಾಖೆಯ ಗುರುತಿನ ಚೀಟಿ ಹೇಮಂತನೆಡೆ ಚಾಚಿ ಕೈ ಕುಲುಕಿದರು. ಒಂದೇ ಒಂದು ದೃಷ್ಟಿ ಕಾರ್ಡ್ ಮೇಲೆ ಹರಿಸಿದ ಮೇಜರ್ ಅದನ್ನು ಮರಳಿಸಿದ.

'ತಾವು ಬಂದ ಕೆಲಸ ಏನು ಅಂತ ಹೇಳಲೇ ಇಲ್ಲ'.... ಹೇಮಂತನ ಮಾತನಾಡುವ ದಾಟಿ ಬದಲಾಗಿತ್ತು.... ಈಗಾತ ಕೇಸು ಎದುರಿಸಲು ಸಿದ್ಧನಾಗಿದ್ದ.

'ಅದನ್ನು ನಾನ್ಹೇಗೆ ಹೇಳಲಿ, ಶ್ಯಾಮಸುಂದರ ಅವರೇ ಹೇಳುತ್ತಾರೆ.'

ಅಷ್ಟರಲ್ಲಿ ಟಿಫಿನ್ ಹಾಗೂ ಟೀ ಬಂದಿತು.

'ಮೊದಲು ಟೀ ತೆಗೆದುಕೊಳ್ಳಿ, ನಂತರ ನಿಧಾನವಾಗಿ ಮಾತನಾಡೋಣ.'

ಎಲ್ಲರಿಗೂ ಅಶೋಕನ ಮಾತು ಒಪ್ಪಿಗೆಯಾಯಿತು.

ಉಪಹಾರ ಮುಗಿದ ಮೇಲೆ ಉಪಾಧ್ಯಾಯರು ತಮ್ಮ ಮಗಳು ಹಾಗೂ ಅಳಿಯನ ಜೊತೆ ಮೇಲೆದ್ದರು. ಶ್ಯಾಮಸುಂದರ ಮಾತ್ರ ರೂಮಿನಲ್ಲಿ ಉಳಿದರು. ಮೇಜರ್ ಬಾಗಿಲವರೆಗೂ ಹೋಗಿ ಅವರನ್ನು ಕಳಿಸಿ ಬಂದ.... ಶ್ಯಾಮಸುಂದರ್‌ಗೊಂದು ಸಿಗರೇಟು ನೀಡಿ ತಾನೊಂದು ಬಾಯ್ಗಿಟ್ಟುಕೊಂಡು ಉರಿಸಿದ ಹೇಮಂತ್....

ಎರಡು ಮೂರು ಬಾರಿ ಸಿಗರೇಟು ಎಳೆಯುವವರೆಗೆ ಸಂಕ್ಷೇಪದಲ್ಲಿ ಶ್ಯಾಮಸುಂದರ ಎರಡು ದಿನಗಳ ಹಿಂದೆ ನಡೆದ ಘಟನೆ ವಿವರಿಸಿದ. ಕುಡುಕನ ದೂರು ಬಂದ ಮೇಲೆ ಪೊಲೀಸ್ ಇಲಾಖೆ ಕಾರ್ಯಾಚರಣೆ ಮಾಡಿದ್ದು ತಿಳಿಸಿ ಸಧ್ಯ ಗಾಯಗೊಂಡ ವ್ಯಕ್ತಿ ಚಿಂತಾಜನಕ ಸ್ಥಿತಿಯಲ್ಲಿದ್ದಾನೆ ಎಂದ.

'ಆ ವ್ಯಕ್ತಿ ಯಾರು ಅಂತ ಗೊತ್ತಾಯ್ತು?'

'ಇಲ್ಲ ಆತನಿಗೆ ಪ್ರಜ್ಞೆಯೇ ಇಲ್ಲ. ಆತ ಬದುಕುವ ಸ್ಥಿತಿಯಲ್ಲೂ ಇಲ್ಲ. ಅವನ ಚಿಕಿತ್ಸೆ ಮಾಡಿದ ವೈದ್ಯರು ಯಾವ ಬಗೆಯ ಆಶ್ವಾಸನೆಯನ್ನೂ ನೀಡಿಲ್ಲ. ಕೋಮಾದಲ್ಲಿರುವಾಗಲೇ ಸಾಯಬಹುದು ಅಥವಾ ಎಚ್ಚರ ಬಂದರೂ ಆತ ಬಹಳ ಸಮಯ ಬದುಕಿರಲಾರ.... ಅವನ ದೇಹದ ಸೂಕ್ಷ್ಮ ಅಂಗಗಳೆಲ್ಲ ಜಜ್ಜಿ ಹೋಗಿವೆ. ಆತ ಒಂದು ಜೀವಂತ ಶವ ಎಂದು

ಹೇಳಿದ್ದಾರೆ.

'ಅವನಿಗೆ ಈ ದುರ್ಗತಿ ನೀಡಿದವರಾರು ಎಂಬುದು ತಿಳಿಯಿತೆ ?'

'ಹಾಂ.... ಆ ಹುಡುಕನ ಮಾತನ್ನು ಮೊದಲು ಪೋಲೀಸರು ನಂಬಲಿಲ್ಲ. ನಿಶೆಯಲ್ಲಿ ಏನೇನೋ ಹೇಳುತ್ತಿದ್ದಾನೆ ಎಂದುಕೊಂಡು ಲಾಕಪ್‌ಗೆ ತಳ್ಳಿದ್ದರು. ಮರುದಿನ ಅಂದರೆ ನಿನ್ನೆ ದಿವಸ ಮುಂಜಾನೆ ಆ ವ್ಯಕ್ತಿಯು ಅಚೇಲ ಶರೀರ ರಕ್ತದಲ್ಲಿ ತೊಯ್ದು ಬಿದ್ದ ಬಗ್ಗೆ ಅಧಿಕೃತವಾಗಿ ಸೂಚನೆ ಬಂದ ಮೇಲೆ ಹುಡುಕನ ಮಾತಿನ ಮೇಲೆ ವಿಶ್ವಾಸ ಮಾಡಲಾಯಿತು. ಅವನನ್ನು ನಾನೇ ಪ್ರಶ್ನಿಸಿದೆ. ಆಸ್ಪತ್ರೆಯಲ್ಲಿ ಇರುವ ವ್ಯಕ್ತಿ ಒಂದು ಟ್ಯಾಕ್ಸಿಯಿಂದ ಓಡಿ ಬಂದ· ಅವನ ಕಾರನ್ನು ಹಿಂಬಾಲಿಸಿಕೊಂಡು ಬಂದ ಇನ್ನೊಂದು ಕಾರಿನಲ್ಲಿದ್ದ ವ್ಯಕ್ತಿ ಅವನ ಬೆನ್ನು ಹತ್ತಿ ಬಂದು ಈ ದುರ್ಗತಿ ಮಾಡಿದ. ಒಂದು ಬ್ರೀಫ್‌ಕೇಸಿನ ಸಲುವಾಗಿ. ನಂತರ ಆ ಬ್ರೀಫ್‌ಕೇಸು ಹಿಂದಿದ್ದ ಕಾರಿನಲ್ಲಿ ಕುಳಿತ ಯಾರಿಗೋ ಕೊಟ್ಟು ಅವರಿಂದ ಹಣ ಪಡೆದವ ಟ್ಯಾಕ್ಸಿಯಲ್ಲಿ ಹೊರಟು ಹೋದ ಎಂದು ಹುಡುಕ ತಾನು ಕಂಡದ್ದನ್ನು ಹೇಳಿದ. ಕಂಠಪೂರ್ತಿ ಕುಡಿದ ಆತ ರಸ್ತೆ ಬದಿ ಚರಂಡಿಯಲ್ಲಿ ಬಿದ್ದಿದ್ದನಂತೆ. ಕೂಗಾಟ, ಚೀರಾಟ, ನರಳಾಟಕ್ಕೆ ಎಚ್ಚೆತ್ತು ಮೇಲಿನ ದೃಶ್ಯ ನೋಡಿದಂತೆ ಅವನ ಹೇಳಿಕೆ ಮೇಲೆ ನಾವು ಸಫದರ ಬಜಾರ ದಲ್ಲಿರುವ ಕಾಳುನನ್ನು ಬಂಧಿಸಿದೆವು. ವಿಮಾನ ಏರಿಸಿದಾಗ ಆತ ಬಾಯಿ ಬಿಟ್ಟು; ಹಿಂದಿನ ರಾತ್ರಿ ಒಂದು ವ್ಯಕ್ತಿಯನ್ನು 'ಚೆನ್ನಾಗಿ ಹೊಡೆದು ಒಂದು ಬ್ರೀಫ್‌ಕೇಸು ಕಸಿದು ತಂದುದನ್ನು ಆತ ಒಪ್ಪಿಕೊಂಡ. ಅದಕ್ಕಾಗಿ ಆತನಿಗೆ ಹತ್ತುಸಾವಿರ ರೂಪಾಯಿ ದೊರೆಯಿತಂತೆ. ಅವನಿಂದ ಈ ಕೆಲಸ ಮಾಡಿಸಿ ದವರಾರು ಎಂಬುದು ಮಾತ್ರ ಅವನಿಗೆ ಗೊತ್ತಿಲ್ಲ. ಆತ ಹಿಂದಿನ ಸೀಟಿನಲ್ಲಿ ಕುಳಿತಿದ್ದ. ಕತ್ತಲೆಯಲ್ಲಿ ಮುಖ ಕಾಣಲಿಲ್ಲ ಎಂದಾತನ ಹೇಳಿಕೆ. ನನಗೆನಿ ಸುವ ಮಟ್ಟಿಗೆ ಆತ ನಿಜ ಹೇಳುತ್ತಿದ್ದಾನೆ.

ಸಿಗರೇಟು ಪೂರ್ತಿ ಉರಿದು ಹೋಗಿತ್ತು. ಅದನ್ನು ಆ್ಯಶ್ ಟ್ರೇನಲ್ಲಿ ಹೊಸಗಿದ.

'ಬ್ರೀಫ್‌ಕೇಸಿನಲ್ಲಿ ಏನಿತ್ತು ಎಂದು ತಿಳಿಯಿತೆ ?'—ಅಶೋಕ ಮೊದಲ ಬಾರಿ ಪ್ರಶ್ನಿಸಿದ.

'ಇಲ್ಲಿ ಅದೇ ಈ ಕೇಸಿನ ರಹಸ್ಯ.... ಹಾಂ.... ಇನ್ನು ಒಂದು ಮಹತ್ವದ

ವಿಷಯ ಬೆಳಕಿಗೆ ಬಂದಿದೆ. ಆಸ್ಪತ್ರೆಯಲ್ಲಿದ್ದ ವ್ಯಕ್ತಿ ಹೊಟೇಲ್ ಬ್ಯೂಗಲ್ ರಾಕ್‌ನಿಂದ ಟ್ಯಾಕ್ಸಿ ಬಾಡಿಗೆಗೆ ಪಡೆದಿದ್ದ. ಆತನ ಟ್ಯಾಕ್ಸಿ ರಾತ್ರಿ ಹೊಟೇಲ್‌ನಿಂದ ಹೊರಗೆ ಹೋಗುವುದಕ್ಕೂ ಹೋಟೆಲ್‌ನ ಎರಡನೇ ಮಹಡಿಯಲ್ಲಿರುವ ನೂರಾ ಹದಿನೇಳನೇ ರೂಮಿನಲ್ಲಿ ಸ್ಫೋಟವಾಯಿತು. ಎಲ್ಲೆಡೆ ಬೆಂಕಿ ತಗಲಿತು. ಅಗ್ನಿಶಾಮಕ ದಳದವರು ಎರಡು ಗಂಟೆ ಹೋರಾಡಿ ಅಗ್ನಿ ನಂದಿಸಿದರು. ನಮಗೆ ನೂರಾಹದಿನೇಳನೇ ರೂಮಿನಲ್ಲಿ ಮೂರು ಸುಟ್ಟು ಕರಕಾದ ಶವಗಳು ದೊರೆತಿವೆ. ಅವರನ್ನು ಕೊಲ್ಲಲೆಂದೇ ಆ ರೂಮಿನಲ್ಲಿ ಟೈಂಬಾಂಬ್ ಕೂಡಿಸಿಡಲಾಗಿತ್ತು ಎಂದು ನನ್ನ ಅಂದಾಜು.... ಆ ಮೂವರಲ್ಲಿ ಇದ್ದ ಏಕಮಾತ್ರ ಮಹಿಳೆ ಇಲ್ಲಿಯ ಸ್ನೇಹ ಡ್ಯಾನ್ಸರ್ ರತ್ನಮಾಲಾ ಎಂದು ಗುರುತಿಸಲಾಗಿದೆ ಹೊಟೇಲ್‌ನ ರೂಮ್‌ಬಾಯ್ ಹೇಳಿಕೆ ಪ್ರಕಾರ ಆಸ್ಪತ್ರೆಯಲ್ಲಿದ್ದ ವ್ಯಕ್ತಿ ಮೊನ್ನೆ ರಾತ್ರಿ ಹನ್ನೆರಡರ ಸುಮಾರಿಗೆ ಕಳ್ಳತನದಿಂದ ನೂರಾಹದಿನೇಳನೇ ರೂಮು ಪ್ರವೇಶಿಸಿದ್ದ. ಎರಡು ಗಂಟೆಗೆ ಕಡಿಮೆ ಇರುವಾಗ ಆತ ಕೈಯಲ್ಲಿ ಒಂದು ಬ್ರೀಫ್‌ಕೇಸ್ ಹಿಡಿದುಕೊಂಡು ಬ್ಯೂಗಲ್ ರಾಕ್‌ನಿಂದ ಓಡಿ ಹೋದ ಎಂದು ರಿಸೆಪ್ಶನ್ ಕ್ಲರ್ಕ್ ಹೇಳುತ್ತಿದ್ದಾನೆ....

'ಹಾಗಾದರೆ ಇದಕ್ಕೆಲ್ಲ ಮೂಲ ಆ ಹೊಟೇಲ್ ಬ್ಯೂಗಲ್‌ರಾಕ್‌ನ ನೂರಾ ಹದಿನೇಳನೇ ಕೊಠಡಿ ಅನ್ನಿಸುತ್ತಿದೆ. ಅಲ್ಲಿ ರತ್ನಮಾಲಾ ಜೊತೆ ಬಂದ ಇಬ್ಬರಿಂದ ಬ್ರೀಫ್‌ಕೇಸು ಕದ್ದು ಈ ವ್ಯಕ್ತಿ ಓಡಿಬಂದ. ಅವನು ಹೋಗುವ ಮುನ್ನ ಅಲ್ಲಿ ಟೈಂಬಾಂಬ್ ಕೂಡಿಸಿದ. ಆ ಸ್ಫೋಟದಲ್ಲಿ ರತ್ನಮಾಲಾ ಜೊತೆ ಇಬ್ಬರೂ ಸತ್ತರು. ಈ ವ್ಯಕ್ತಿಯನ್ನು ಹಿಂಬಾಲಿಸಿ ಬಂದ ಇನ್ನೊಂದು ರಹಸ್ಯಮಯ ವ್ಯಕ್ತಿ ಕಾಳೂವಿಗೆ ಹತ್ತುಸಾವಿರ ಕೊಟ್ಟು ಚನ್ನಾಗಿ ಒಡೆಸಿ ದುರ್ಗತಿಗೆ ತಂದ ಎಂಬುದು ಸ್ಪಷ್ಟ. ಇದಕ್ಕೆಲ್ಲ ಕಾರಣ ಬ್ರೀಫ್‌ಕೇಸ್.

ತಾನು ಕೇಳಿದ್ದನ್ನೆಲ್ಲ ಒಂದು ಸುಲಭ ಸೂತ್ರವನ್ನು ಹೆಣೆದು ಅವರ ಮುಂದಿಟ್ಟಳು ಸುಷಮಾ.... ಶ್ಯಾಮಸುಂದರ್ ಅವಳೆಡೆ ಪ್ರಶಂಸೆಯ ದೃಷ್ಟಿ ಬೀರಿದ.

'ಮೇಜರ್ ಒಂದು ಮಾತು ನಿಜ. ನಿಮ್ಮ ಇಬ್ಬರೂ ಸಹಾಯಕರು ತುಂಬಾ ಬುದ್ಧಿವಂತರು'.

'ಅದೇ ನನ್ನ ಯಶಸ್ಸಿನ ಗುಟ್ಟು. ಇನ್ನೂ ಒಂದು ಮಾತು ನಿಜ. ಏನೆಂದರೆ ಇವರಿಬ್ಬರೂ ಇಲ್ಲದಿದ್ದರೆ ನಾನು ಜೀರೋ. ನನ್ನಿಂದ ಏನು ಮಾಡಲಿಕ್ಕಾಗದು.

'ಮಿಸ್ಟರ್ ಶ್ಯಾಮಸುಂದರ್ ಇನ್ನೊಂದು ನಿಜದ ಮಾತು ನಿಮಗೆ ಗೊತ್ತಿಲ್ಲ'.

ಅಶೋಕ ಗಂಭೀರವಾಗಿ ನುಡಿದ. ಶ್ಯಾಮಸುಂದರ್ ಅವನತ್ತ ದಿಟ್ಟಿಸಿದ ಆಸಕ್ತಿಯಿಂದ.

'ಮೇಜರ್‌ಗೆ ತನ್ನ ಸಹಾಯಕರನ್ನು ಹೊಗಳಿ ಹೊಗಳಿ ಹೊನ್ನಶೂಲ ಕ್ಕೇರಿಸುವ ಅಭ್ಯಾಸವಿದೆ. ರಹಸ್ಯಮಯಗಳು ಅಶೋಕ್ ನುಡಿದಾಗ ಎಲ್ಲರೂ ಗೊಳ್ ಎಂದು ನಕ್ಕರು.

ವಾತಾವರಣ ಒಮ್ಮೆಂದೊಮ್ಮೆ ತಿಳಿಯಾಯಿತು.

ಟೀಪಾಯ್ ಮೇಲಿದ್ದ ಟೆಲಿಫೋನ್ ಗಂಟೆ ಬಾರಿಸುತ್ತಲೂ ಅದರ ಹತ್ತಿರವೇ ಕೂತಿದ್ದ ಮೇಜರ್ ರಿಸೀವರ್ ಎತ್ತಿ ಕಿವಿಗೆ ಆನಿಸಿದ. ನಂತರ ಅದನ್ನು ಶ್ಯಾಮಸುಂದರ್ ಕಡೆ ನೀಡಿ 'ನಿಮ್ಮ ಫೋನು.... ಆಸ್ಪತ್ರೆಯಿಂದ' ಎಂದ. 'ಹೌದು ನಾನು ಬರುವಾಗ ಇಲ್ಲಿಯ ನಂಬರ್ ಕೊಟ್ಟು ಬಂದಿದ್ದೆ' ಎಂಥು ಹೇಳುತ್ತ ರಿಸೀವರ್ ಇಸಿದುಕೊಂಡ. ಎರಡೇ ಮಾತು ಕೇಳಿ ಒಂದೇ ಮಾತು ನುಡಿದ. 'ಸದ್ಯ ಬಂದೆ'.... ರಿಸೀವರ್ ಯಥಾ ಸ್ಥಾನದಲ್ಲಿರಿಸಿ ಎದ್ದು ನಿಂತ ಆತ. 'ಆ ವ್ಯಕ್ತಿಗೆ ಎಚ್ಚರ ಬರುವ ಲಕ್ಷಣ ಕಾಣುತ್ತಿವೆಯಂತೆ. ನಾನು ಅವನ ಹೇಳಿಕೆ ಪಡೆಯಲು ಹೋಗಬೇಕು' ಎಂದ ಅವಸರವಾಗಿ.

'ನಿಲ್ಲಿ.... ನಾವು ಬರುತ್ತೇವೆ ನಿಮ್ಮ ಜೊತೆ'.

ಮೇಜರ್‌ನ ಮಾತು ಕೇಳಿ ಶ್ಯಾಮಸುಂದರ್‌ಗೆ ತುಂಬಾ ಸಂತೋಷ ವಾಯಿತು. ಐದೇ ನಿಮಿಷಗಳಲ್ಲಿ ನಾಲ್ವರೂ ಹೊಟೇಲಿನಿಂದ ಹೊರಬಂದಿ ದ್ದರು. ಶ್ಯಾಮಸುಂದರನ ಆಫೀಸ್ ಜೀಪ್ ಅವರಿಗಾಗಿ ಕಾಯುತ್ತಿತ್ತು.

ಆಸ್ಪತ್ರೆಯ ಸ್ಪೆಷಲ್ ರೂಮಿನಲ್ಲಿ ಮಂಚದ ಮೇಲೆ ಮಲಗಿದ್ದ ಜಯಂತ್ ಏದುಸಿರು ಬಿಡುತ್ತಿದ್ದ. ಮೈತುಂಬ ಬ್ಯಾಂಡೇಜ್ ಪಟ್ಟಿಗಳು. ಮುಖ ಸಹ ಪೂರ್ತಿ ಕಾಣುತ್ತಿರಲಿಲ್ಲ. ಕೇವಲ ಎರಡು ಛಿದ್ರಗಳು ಕಣ್ಣಿರುವ ಕಡೆ....ಶ್ಯಾಮಸುಂದರ್ ಅವರ ಹಿಂದೆಯೇ ಮೇಜರ್, ಅಶೋಕ್, ಸುಷಮಾ

ಒಳಗೆ ಬಂದು ಮಂಚದ ಬಳಿ ನಿಂತರು. ವೈದ್ಯರು ಶ್ಯಾಮಸುಂದರನ ಕಡೆ ನೋಡಿ ಹೇಳಿದರು.

'ಒಂದೆರಡು ನಿಮಿಷಗಳಲ್ಲಿ ಈತನಿಗೆ ಪ್ರಜ್ಞೆ ಬರುತ್ತದೆ. ಆದರೆ ನಾನು ಯಾವ ಭವಿಷ್ಯವನ್ನು ನುಡಿಯಲಾರೆ. ನನ್ನ ಜ್ಞಾನದ ಪ್ರಕಾರ ಆತ ಒಂದೆರಡು ನಿಮಿಷಕ್ಕಿಂತ ಹೆಚ್ಚು ಬದುಕಲಾರ. ಬದುಕಿದರೂ ಆತನಿಗೆ ಹುಚ್ಚು ಹಿಡಿಯಬಹುದು. ಅದಕ್ಕಿಂತ ಆತ ಸತ್ತುಹೋಗಲೆಂದೇ ನಾನು ಬಯಸುತ್ತೇನೆ'.

ಹೇಮಂತ್ ಆ ವೈದ್ಯರೆಡೆ ಮೆಚ್ಚುಗೆಯಿಂದ ನೋಡಿದ.

ವೈದ್ಯರು ಹೇಳಿದ್ದು ನಿಜವಾಯಿತು. ಒಂದೇ ನಿಮಿಷದ ಅಂತರದಲ್ಲಿ ಜಯಂತ್ ನರಳತೊಡಗಿದ. ಕೈಕಾಲು ಚಲಿಸತೊಡಗಿದವು. ಶ್ಯಾಮಸುಂದರ ಅವನ ಮುಖಕ್ಕೆ ಹತ್ತಿರವಾಗಿ ಮುಖ ತಂದು ಕೇಳಿದರು.

'ನಾನು ಡಿ.ಐ.ಜಿ. ಶ್ಯಾಮಸುಂದರ್ ಮಾತಾಡ್ತಿರೋದು. ನಿನ್ನ ಹೆಸರೇನು ? ನಿನ್ನ ಈ ಸ್ಥಿತಿಗೆ ಯಾರು ಕಾರಣ ? ಇದರ ಉದ್ದೇಶವೇನು ?'

ಯಾವ ಉತ್ತರವೂ ಬರಲಿಲ್ಲ. ಅವರು ಮತ್ತೊಮ್ಮೆ ಕೇಳಿದರು ನಿನ್ನ ಹೆಸರೇನು ?

ಆತ ಚಡಪಡಿಸಲಾರಂಭಿಸಿದ, ವೇದನೆಯಿಂದ ತಲೆ ಜಾಡಿಸತೊಡಗಿದ. ವೇಗವಾಗಿ ಉಸಿರಾಡಿಸುತ್ತ ಒಮ್ಮೆಲೆ ಉಸಿರು ನಿಲ್ಲಿಸಿದ. ಕ್ಷೀಣವಾದ ಧನಿ ಹೊರಬಂತು.

'ಜ..ಯಂ..ತ್....

ಆ ವ್ಯಕ್ತಿಯ ಹೆಸರು ಜಯಂತ್ ಎಂದು ತಿಳಿಯಿತು. ಅಷ್ಟೇ ಸಮಾಧಾನ. ಈ ಬಾರಿ ಹೇಮಂತ್ ಜಯಂತನ ಬಳಿ ಸರಿದ.

'ಜಯಂತ್, ನಾನು ಮೇಜರ್ ಹೇಮಂತ್. ನಿನಗೆ ಏನಾದರೂ ಹೇಳುವುದಿದೆಯೇ ?'

ಆಶ್ಚರ್ಯ.... ಎಲ್ಲಕ್ಕೂ ಕಣ್ಣುಬಿಟ್ಟು ನೋಡುತ್ತಿದ್ದಂತೆ ಆತ ಪಳಕ್ಕನೆ ಕಣ್ತೆರೆದು ತನ್ನ ಎಡಗೈಯಿಂದ ಮರೆಯಾಗಿದ್ದ ಬಟ್ಟೆ ಕಿತ್ತುಹಾಕಿದ. ಅಷ್ಟು ಶಕ್ತಿ ಎಲ್ಲಿಂದ ಬಂತೋ, ಮುಖದ ಮೇಲೆ ಸಮಾಧಾನ ತೃಪ್ತಿ ಮೂಡಿತು. ಕಷ್ಟಪಟ್ಟು ನುಡಿದ.

'ಮೇಜರ್... ನಾ..ನು... ಜಯಂತ್... ಸಿ..ಬಿ..ಐ. ಇನ್..ಸ್ಪೆ..ಕ್ಟರ್. ಅಪಾಯ... ಅ..ಪಾ..ಯ... ಕಪ್ಪ... ಗಂ...ಟಿ...

ಅಷ್ಟು ಮಾತನಾಡುತ್ತಲೇ ಅವನ ಬಾಯಿಯಿಂದ ನುಗ್ಗಿ ಬಂತು ರಕ್ತ. ಜಯಂತನ ಅವತಾರ ಮುಗಿದಿತ್ತು ಅಲ್ಲಿಗೇ....

ಮೇಜರ್‌ನ ಪ್ರಯಾಣ ಮುಂದೂಡಲ್ಪಟ್ಟಿತು, ಶ್ಯಾಮಸುಂದರನ ವಿನಂತಿ ಮೇರೆಗೆ. ಪ್ರಾಣಾಂತಿಕವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ತೀರಿ ಕೊಂಡವ ಸಾಮಾನ್ಯ ವ್ಯಕ್ತಿಯಲ್ಲ. ಆತ ಕೇಂದ್ರ ಗುಪ್ತಚಾರ ಪಡೆಯ ಇನ್ಸ್‌ಪೆಕ್ಟರ್ ಜಯಂತ್ ಎಂದು ತಿಳಿದು ಬಂದ ಮೇಲಂತೂ ಈ ಕೇಸಿಗೆ ಅತೀ ಹೆಚ್ಚಿನ ಮಹತ್ವ ಬಂದಿತು. ಆತ ಯಾವ ಬ್ರೀಫ್‌ಕೇಸನ್ನು ತರಲು ತನ್ನ ಪ್ರಾಣವನ್ನೇ ಅರ್ಪಿಸಿದನೋ ಆ ಬ್ರೀಫ್‌ಕೇಸು ದೊರೆಯದಿದ್ದರೂ ಅದರ ಪ್ರಾಮುಖ್ಯತೆ ಗಮನಿಸಿದ ಶ್ಯಾಮಸುಂದರ್ ತನ್ನ ಪರವಾಗಿ ಹೇಮಂತ ನಿಗೆ ವಿನಂತಿಸಿಕೊಂಡ. ಅದಕ್ಕೆ ಕಾರಣವೂ ಇಲ್ಲದಿರಲಿಲ್ಲ. ಸಾವಿನ ಅಂಚಿ ನಲ್ಲಿದ್ದರೂ ಜಯಂತ್ ಮೇಜರ್‌ನ ಹೆಸರು ಕಿವಿಗೆ ಬೀಳುತ್ತಲೇ ತೋರಿಸಿದ ಆತುರತೆ.... ಲವಾವಿಕೆ ಆತ ನೀಡಿದ ಸಂದೇಶ 'ಅಪಾಯ.... ಅಪಾಯ.... ಕಪ್ಪುಗಂಟೆ' ಎಂಬ ಎರಡು ಮೂರು ಶಬ್ದಗಳು ...ಇವೆಲ್ಲ.. ನೇರವಾಗಿ ಹೇಮಂತನಿಗೆಂದೇ ಹೇಳಿದಂತಿದ್ದವು. ಬಹುಶಃ ಹೇಮಂತನ ಹೆಸರು ಕಿವಿಗೆ ಬೀಳದಿದ್ದರೆ ಆ ಸಂದೇಶ ಜಯಂತನೊಂದಿಗೆ ಸಮಾಧಿಯಾಗುತ್ತಿತ್ತೇನೋ ತಾನು ಸಾಯುತ್ತೇನೆಂದು ಗೊತ್ತಿದ್ದರೂ ಒಂದೊಂದು ಅಕ್ಷರ ನುಡಿಯಲು ಹೋರಾಟ ಮಾಡುವಂಥ ಸ್ಥಿತಿಯಲ್ಲಿದ್ದರೂ ಒಂದೇ ಉಸಿರಿಗೆ ಹೇಳಿದ ಆ ಮಾತುಗಳು ಅವನ ಕರ್ತವ್ಯದಕ್ಷತೆಗೆ ನಿದರ್ಶನವಾಗಿದ್ದವು. ದೇಶಕ್ಕಾಗಿ ತಾನು ಪ್ರಾಣಕ್ಕೆರವಾದರೂ ಯಾವ ರಹಸ್ಯವನ್ನು ದಕ್ಷ ಅಷ್ಟೇ ಯೋಗ್ಯ ವ್ಯಕ್ತಿಗೆ ಮುಟ್ಟಿಸಬೇಕಾಗಿತ್ತೋ ಅದನ್ನು ತಲುಪಿಸಿ ತನ್ನ ಕರ್ತವ್ಯ ನೆರವೇರಿಸಿದ್ದ ಜಯಂತ್.

ಇದನ್ನೆಲ್ಲ ಹೇಮಂತನೂ ಯೋಚಿಸಿದ್ದ. ಆತ ಯೋಚಿಸಿದಷ್ಟು ಸಮಸ್ಯೆ ಗಾಢವಾಗುತ್ತಾ ಹೋಗಿತ್ತು. ಜಯಂತನ ಸಾವು ಆತ ನೀಡಿದ ಕೊನೆ ಸಂದೇಶ ಅಪಾಯದ ಬಗ್ಗೆ ಎಚ್ಚರಿಕೆಯಿಂದಿರಲು ಮುನ್ಸೂಚನೆ ಗಳಾಗಿದ್ದವು. ಹೀಗಾಗಿ ಶ್ಯಾಮಸುಂದರನ ವಿನಂತಿಯನ್ನು ಮನ್ನಿಸಿ

ಪ್ರಯಾಣ ಮುಂದೂಡಿದ. ಶ್ಯಾಮಸುಂದರ್ ಐ.ಜಿ.ಪಿ.ಯವರೊಂದಿಗೆ ಸಮಾಲೋಚಿಸಿ ಮೇಜರ್‌ನನ್ನು ಭೆಟ್ಟಿಯಾಗುವುದಾಗಿ ತಿಳಿಸಿದ್ದ. ಇದೊಂದು ಸಾಮಾನ್ಯ ಮಾತಿನಂತೆ ಕಂಡರೂ ಗೂಢಾರ್ಥದಿಂದ ತುಂಬಿತ್ತು. ಐ.ಜಿ.ಪಿ. ಯವರನ್ನು ಭೆಟ್ಟಿಯಾಗಿ ಅವರ ಒಪ್ಪಿಗೆ ಪಡೆದು ಹೇಮಂತನ ಕೊರಳಿಗೆ ಈ ಕೇಸು ಕಟ್ಟುವ ಸನ್ನಾಹದಲ್ಲಿದ್ದಂತೆ ತೋರಿತು. ಹೀಗಾಗಿ ಹೇಮಂತ ಒಪ್ಪಿಕೊಂಡಿದ್ದ....

ತನ್ನ ಸಂಗಡಿಗರೊಂದಿಗೆ ಚರ್ಚೆಗೆ ಕುಳಿತಿದ್ದ ಹೇಮಂತ್.

'ಇಲ್ಲಿಯವರೆಗೂ ನಡೆದ ಘಟನೆಗಳಿಂದ ನಿಮಗೇನೆನಿಸುತ್ತದೆ ?'

'ಇದು ನಿಮಗೆ ಅನುರೂಪವಾದ ಕೇಸು ಅನಿಸುತ್ತದೆ'. ತುಂಟತನದ ಉತ್ತರ ನೀಡಿದಳು ಸುಷಮಾ.... ಆ ರೀತಿ ಆಕೆ ನುಡಿಯುವಾಗ ತುಟಿ ಓರೆ ಮಾಡಿ, ಮೂಗನ್ನು ತುಸು ಕಿವುಚಿ ಒಂದು ಹುಬ್ಬು ಮೇಲೇರಿಸಿದ್ದರಿಂದಾಗಿ ಆಕೆ ಹೇಮಂತನ ಕಣ್ಣಿಗೆ ತುಂಬಾ ಚೆಲುವೆಯಾಗಿ ಕಂಡಳು. ಎದುರಿಗೆ ಅಶೋಕ ಇರದೇ ಇಬ್ಬರೇ ಇದ್ದರೆ ಏನು ಮಾಡುತ್ತಿದ್ದನೋ ಗೊತ್ತಿಲ್ಲ. ಅವನ ಮುಖದ ಮೇಲೆ ಮೂಡಿದ ಭಾವನೆಗಳನ್ನೂ ಊಹಿಸಿಕೊಂಡ ಅಶೋಕ.

"ನಾನೊಂದರ್ಧ ಗಂಟೆ ಹೊರಗೆ ಹೋಗಿ ಬರಲೆ ?"

"ಏಕೆ ?" ಅಚ್ಚರಿಯಿಂದ ಕೇಳಿದ ಹೇಮಂತ್.

'ಏನೂ ಇಲ್ಲ. ನೀವದನ್ನು ಬಯಸುತ್ತಿದ್ದೀರಿ ಎನಿಸಿತು ಅದಕ್ಕೆ'.

'ಒಂದು ಒದೆ ಕೊಡ್ತೀನಿ ನೋಡು. ತೆಪ್ಪಗೆ ಇಲ್ಲೇ ಕುಳಿತಿರು.' 'ಪ್ರೀತಿಯಿಂದ ನೋಟ ಬೀರಿದಾಗ ಎಲ್ಲವನ್ನು ಅರ್ಥ ಮಾಡಿಕೊಂಡ ಆಕೆ ನಾಚಿ ಕೆಂಪಗಾಗಿದ್ದಳು. 'ಹುಡುಗಾಟ ಸಾಕು.... ಸ್ವಲ್ಪ ಸೀರಿಯಸ್ಸಾಗಿ ಮಾತನಾಡಿ'. ಹೇಮಂತನ ಚಾಟಿ ಏಟಿನ ಮಾತಿಗೆ ಇಬ್ಬರೂ ಗಂಭೀರ ರಾದರು.

'ಜಯಂತನ ಸಾವು ಸಾಧುವಾದುದಲ್ಲ. ಅದೊಂದು ಉದ್ದೇಶಪೂರ್ವಕ ವಾಗಿ ಮಾಡಿದ ಕೊಲೆ ಎಂಬುದರಲ್ಲಿ ಎರಡನೇ ಮಾತಿಲ್ಲ. ಅವನ ಕೊಲೆಗೆ ಕಾರಣ ಆತ ಶತೃವಿನ ಮನೆಯಿಂದ ಹಾರಿಸಿಕೊಂಡು ಬಂದ ಬ್ರೀಫ್‌ಕೇಸ್.... ಅದರಿಂದಾಗೇ ಆತ ಜೀವ ಕಳೆದುಕೊಳ್ಳಬೇಕಾಯಿತು. ಹೀಗಾಗಿ ಸದ್ಯದ

ಪರಿಸ್ಥಿತಿಯನ್ನು ನಾವು ಆ ಬ್ರಿಫ್‌ಕೇಸಿನತ್ತ ಹೆಚ್ಚಿನ ಧ್ಯಾನ ಕೊಡಬೇಕಾಗುತ್ತದೆ. ಆ ಬ್ಯಾಗು ಯಾರದು? ಅದು ಯಾರ ಬಳಿ ಇತ್ತು? ಅದರಲ್ಲಿರುವ ಮಹತ್ವದ ವಸ್ತು ಯಾವುದು? ಅದರ ಹಿಂದೆ ಜಯಂತ್ ಏಕೆ ಬಿದ್ದ?' ಮುಂತಾದವು ನಮ್ಮೆದುರು ಇರುವ ಸಮಸ್ಯೆಗಳು. ಇವುಗಳಿಗೆ ಒಂದು ಸಮಾಧಾನ ದೊರಿತರೆ ಜಯಂತನ ಕೇಸು ಸ್ವಲ್ಪ ಮಟ್ಟಿಗೆ ಅರ್ಥವಾಗುತ್ತದೆ.'

'ಗುಡ್.... ಸುಷಮಾ ನೀನು ತುಂಬಾ ಚೆನ್ನಾಗಿ ಬಿಡಿಸಿ ಹೇಳಿದೆ. ಹಾಂ ಅಶೋಕ್ ಈಗ ನೀನು ಸುಷಮಾ ನಮ್ಮ ಮುಂದಿಟ್ಟ ಸಮಸ್ಯೆಗಳಿಗೆ ಉತ್ತರ ಹೇಳಲು ಪ್ರಯತ್ನಿಸು'.

'ಜಯಂತ್ ಒಬ್ಬ ಕರ್ತವ್ಯನಿಷ್ಠ ಪೊಲೀಸ್ ಅಧಿಕಾರಿ.... ಒಮ್ಮಿಂದೊಮ್ಮೆಲೇ ಬ್ಯಾಗಲ್‌ರಾಕ್ ಹೊಟೇಲಿನ ನೂರಾಹದಿನೇಳನೇ ರೂಮಿಗೆ ಹೋಗಿ ಅಲ್ಲಿಂದ ಬ್ರೀಫ್‌ಕೇಸು ಕದ್ದು ತರಬೇಕೆಂದರೆ ಅದರ ಬಗ್ಗೆ ಅವನಿಗೆ ಮೊದಲೇ ಯಾರೋ ಸೂಚನೆ ಕೊಟ್ಟಿರಲಿಕ್ಕೇ ಸಾಕು. ಇದನ್ನು ಯೋಚಿಸಿದರೆ ಜಯಂತ್ ಮೊದಲಿನಿಂದಲೇ ಆ ಬ್ರೀಫ್‌ಕೇಸ್ ಹಿಂದೆ ಬಿದ್ದಿದ್ದ.... ಆ ಬ್ರೀಫ್‌ಕೇಸಿನಲ್ಲಿ ಏನಿತ್ತು ಎಂಬುದೂ ಅವನಿಗೆ ಗೊತ್ತಿತ್ತು ಎಂದು ಅರ್ಥವಾಗುತ್ತದೆ. ಇದರ ಬಗ್ಗೆ ಯೋಚಿಸಿದರೆ, ಆ ಬ್ರೀಫ್‌ಕೇಸಿಗೆ ಸಂಬಂಧಿಸಿದಂತೆ ಕೇಸನ್ನು ಅವನಿಗೆ ಇಲಾಖೆ ವತಿಯಿಂದ ವಹಿಸಿಕೊಡಲಾಗಿತ್ತು ಎಂದು ಅರ್ಥವಾಗುತ್ತದೆ. ಆತ ತನ್ನ ಜೀವವನ್ನು ಗಂಡಾಂತರಕ್ಕೀಡು ಮಾಡಿ ತನಗಿಂತ ಮೊದಲು ಮೂವರನ್ನು ಟೈಂಬಾಂಬಿನಿಂದ ಸಾವಿನ ಬಾಯಿಗೆ ನೀಡಿದ್ದ ಎಂಬುದೂ ನಾವು ಗಮನಿಸಬೇಕು. ಇದರಿಂದಾಗಿ ಕೇಸು ಯಾವುದೇ ಇರಲಿ ಬ್ರೀಫ್‌ಕೇಸಿನಲ್ಲಿ ಏನೇ ಇರಲಿ ಅದು ಅತೀ ಮಹತ್ವದ್ದು. ನೇರವಾಗಿ ನಮ್ಮದೇಶದ ಭವಿಷ್ಯಕ್ಕೆ ಸಂಬಂಧಿಸಿದ್ದು .ಅದರೊಂದಿಗೆ ಅಂತರರಾಷ್ಟ್ರೀಯ ಸಮಸ್ಯೆಗೊಳಪಟ್ಟದ್ದು ಎಂದು ನಿರ್ಧಾರವಾಗುತ್ತದೆ.

'ಶಹಬಾಶ್ ಅಶೋಕ್.... ಸುಷಮಾ ಇಟ್ಟ ಸಮಸ್ಯೆಗಳಿಗೆ ನೀನು ತುಂಬಾ ಚೆನ್ನಾಗಿ ಅಷ್ಟೇ ಗಟ್ಟಿಯಾದ ಸತ್ಯಕ್ಕೆ ತೀರಾ ಹತ್ತಿರವಾದ ಸಮಾಧಾನ ತಿಳಿಸಿರುವೆ. ನೀವಿಬ್ಬರೂ ನನ್ನ ಸಹಚಾರಿಗಳಾದದ್ದು ನನ್ನ ಅದೃಷ್ಟ. ಡಾಕ್ಟರ್ ಹೇಳಿದ್ದರಲ್ಲಿ ಯಾವ ಸಂದೇಹವೂ ಇಲ್ಲ.... ನಾನದನ್ನು ಒಪ್ಪಿಕೊಳ್ಳುತ್ತೇನೆ'.

ಹೇಮಂತನ ಪ್ರಶಂಸೆಯ ಮಾತಿಗೆ ಅಶೋಕ ಪುಲಕಿತನಾದ. ಏನು ಮಾತನಾಡಬೇಕೆಂದು ತಿಳಿಯದೇ ಮೂಕನಾಗಿ ಕುಳಿತಿರುವಾಗ ಬಾಗಿಲ ಕರೆಗಂಟೆ ಬಾರಿಸಿತು. ಎದ್ದು ಬಾಗಿಲು ತೆರೆದ. ಎದುರಿಗೆ ನಿಂತಿದ್ದ ಶ್ಯಾಮಸುಂದರ್. ಆತ ಒಳಗೆ ಬರುತ್ತಲೂ ಅಶೋಕ ಬಾಗಿಲು ಬಂದು ಮಾಡಿದ.

'ಮೇಜರ್....ನಮ್ಮ ಐ.ಜಿ.ಪಿ. ಸಾಹೇಬರು ತಮ್ಮನ್ನು ಭೆಟ್ಟಿಯಾಗಲು ಬಯಸಿದ್ದಾರೆ. ತಮಗೆ ಸಮಯ ಸಿಕ್ಕರೆ ಆಫೀಸಿಗೆ ಬರಬೇಕಂತೆ ಅಥವಾ ಅವರಿಗೇ ಬರಲು ತಿಳಿಸಿದರೆ ಅವರೇ ಬರುತ್ತಾರಂತೆ'.

'ಯಾವುದರ ಸಲುವಾಗಿ, ಈ ಕೇಸಿಗಾಗಿಯೇ ?'

'ಹೌದು.... ಕೇಸು ತುಂಬಾ ಗಂಭೀರವಾಗಿದೆ ಅಂತ ಕಾಣುತ್ತೆ'.

'ನಾನೂ ಹಾಗೇ ಅಂದುಕೊಂಡಿದ್ದೆ. ಇದು ನಮ್ಮ ದೇಶದ ಆಂತರಿಕ ಸಮಸ್ಯೆ ಜೊತೆ ಭದ್ರತೆ ಹಾಗೂ ಅಂತರರಾಷ್ಟ್ರ ರಾಜಕಾರಣಕ್ಕೂ ಸಂಬಂಧಿಸಿದೆ ಅಂತ.... ಜಯಂತ್ ಒಬ್ಬ ಸಾಮಾನ್ಯ ಅಧಿಕಾರಿಯಾಗಿ ಸಾಮಾನ್ಯ ವಿಷಯದ ಹಿಂದೆ ಬಿದ್ದಿರಲಿಲ್ಲ. ಯಾವ ಬ್ರೀಫ್‌ಕೇಸಿಗಾಗಿ ಜಯಂತ್ ಹುತಾತ್ಮನಾದನೋ ಆ ಬ್ರೀಫ್‌ಕೇಸು ನಮ್ಮ ದೇಶದ ಘನತೆ ಗೌರವ ಅಂತಸ್ತುಗಳನ್ನು ಗಾಳಿಗೆ ತೂರಲಿದೆ ಅಲ್ಲವೆ ?'

ಶ್ಯಾಮಸುಂದರ ಅವಾಕ್ಕಾಗಿ ಕುಳಿತುಬಿಟ್ಟ. ಯಾವುದನ್ನು ಆತ ತನ್ನ ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿ ಬಂದಿದ್ದನೋ ಅದೇ ವಿಷಯವನ್ನು ಹೇಮಂತ್ ಹೊಟೇಲ್ ರೂಮಿನಲ್ಲಿ ಕುಳಿತು ಹೇಳಿದ್ದ.

'ಏಕೆ.... ಹಾಗೇ ಕುಳಿತುಬಿಟ್ಟಿರಿ ?'

'ಆಂ ? ಏನು ಇಲ್ಲ. ಅಂದಹಾಗೆ ನಾನು ಸಾಹೇಬರಿಗೆ ಏನೆಂದು ಹೇಳಲಿ ?'

'ಮಿಸ್ಟರ್ ಶ್ಯಾಮಸುಂದರ್.... ನಾನು ನಿಮ್ಮ ಸೇವಕ. ಭಾರತ ದೇಶದ ದಾಸ.... ನಿಮ್ಮ ಇಲಾಖೆ ಗೌರವ ಕಾಯಲಿಕ್ಕೆ, ದೇಶದ ಘನತೆ ಉಳಿಸಲಿಕ್ಕೆ ಸಾವು ಎದುರು ಬಂದು ನಿಂತರೂ ಅದನ್ನು ದೂರ ತಳ್ಳಿ ಹಾಜರಾಗುತ್ತೇನೆ. ನಡೆಯಿರಿ ನಿಮ್ಮ ಸಾಹೇಬರನ್ನು ಭೆಟ್ಟಿಯಾಗೋಣ'.

ಅಶೋಕ್ ಹಾಗೂ ಸುಷಮಾಳಿಗೆ ಅಲ್ಲೇ ಇರುವಂತೆ ಸೂಚಿಸಿ

ಶ್ಯಾಮಸುಂದರನೊಂದಿಗೆ ಐ.ಜಿ.ಪಿ.ಯವರನ್ನು ಕಾಣಲು ಹೊರಟ ಮೇಜರ್ ಹೇಮಂತ್.

ಐ.ಜಿ.ಪಿ. ರಸಾಳಕರ ಅವರು ಮನೆಯಲ್ಲೇ ಇದ್ದರು. ಹೇಮಂತನನ್ನು ತುಂಬಾ ವಿಶ್ವಾಸದಿಂದ ಬರಮಾಡಿಕೊಂಡು ಕೈ ಕುಲುಕಿದರು.

'ಬನ್ನಿ ಮೇಜರ್ ತುಂಬಾ ದಿನಗಳಿಂದ ನಿಮ್ಮನ್ನು ನೋಡಿರಲಿಲ್ಲ'.

ಹೇಮಂತ್ ಅವರಿಗೆ ವಂದಿಸಿ ಅವರು ತೋರಿಸಿದ ಕುರ್ಚಿ ಮೇಲೆ ಕುಳಿತುಕೊಂಡ ಶ್ಯಾಮಸುಂದರ ನಡೆದ ವಿಷಯವನ್ನು ಮತ್ತೊಮ್ಮೆ ತಿಳಿಸಿ ಹೇಮಂತನನ್ನು ಕರೆತಂದ ಬಗ್ಗೆ ವಿವರಣೆ ನೀಡಿದರು. ಒಂದೆರಡು ನಿಮಿಷ ಯೋಚನಾ ಮಗ್ನರಾದ ರಸಾಳಕರ ಹೇಮಂತನನ್ನು ಕುರಿತು ಹೇಳಿದರು.

'ಮೇಜರ್.... ಜಯಂತನ ಕೇಸು ಒಂದು ಜಟಿಲ ಕೇಸು. ಈಗೆರಡು ತಿಂಗಳ ಹಿಂದೆ ಕೇಂದ್ರ ಗೃಹ ಶಾಖೆಯ ಸಹಾಯಕ ಕಾರ್ಯದರ್ಶಿ ಫೋನು ಮಾಡಿ ಜಯಂತ್ ಎನ್ನುವವರು ನಿಮ್ಮ ಭೇಟಿಗೆ ಬರುತ್ತಾರೆ. ಅವರ ಜೊತೆ ವಿವರವಾಗಿ ಮಾತನಾಡಿ ಎಂದು ಹೇಳಿದರು. ಅವರು ತಿಳಿಸಿದಂತೆ ಜಯಂತ್ ಬಂದು ನನ್ನನ್ನು ಕಂಡು ತಮ್ಮ ಗುರುತಿನ ಚೀಟಿ ತೋರಿಸಿದರು. ಇತ್ತೀಚೆಗೆ ಭಾರತದ ಹೆಸರನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಕುಂಠಿತಗೊಳಿಸಲು ಒಂದು ಮೋಸ ಜಾಲ ನಡೆಯುತ್ತಿದೆ. ಅದರ ತಪಾಸಣೆಗಾಗಿ ತಾನು ಬಂದಿರುವುದಾಗಿ ತಿಳಿಸಿದರು. ನಾನು ನನ್ನ ಕಡೆಯಿಂದ ದೊರೆಯಬಹುದಾದ ಎಲ್ಲ ಸಹಾಯ ನೀಡುವುದಾಗಿ ಭರವಸೆ ನೀಡಿದೆ. ಅದಾದನಂತರ ಒಮ್ಮೆಲೆ ಜಯಂತ್ ಅವರ ಕೊಲೆ ಸುದ್ದಿ ನನ್ನೆದುರು ಬಂದಿದೆ. ಇದರಿಂದಾಗಿ ನಾನು ಬಹಳ ಚಿಂತಿತನಾಗಿದ್ದೇನೆ. ಕೇಂದ್ರ ಗೂಢಚಾರ ಸಂಸ್ಥೆಯ ಇನ್ಸ್‌ಪೆಕ್ಟರ್ ಕೇಂದ್ರ ಸರಕಾರದ ಗೃಹ ಕಾರ್ಯದರ್ಶಿ ಅವರ ಅನುಮತಿ ಮೇರೆಗೆ ನಮ್ಮಲ್ಲಿಗೆ ಬಂದಾಗ ಕೊಲೆಯಾಗುತ್ತಾನೆಂದರೆ ನಮ್ಮ ಇಲಾಖೆಗೆ ಎಂಥ ಕಳಂಕ?.... ಕೇಂದ್ರವಾದರೂ ನನ್ನ ಬಗ್ಗೆ ಏನು ಯೋಚಿಸೀತು?.... ನಾನು ತುಂಬಾ ಗೊಂದಲದಲ್ಲಿ ಬಿದ್ದಿರುವೆ. ಸಧ್ಯದ ಪರಿಸ್ಥಿತಿಯಲ್ಲಿ ನೀವೇ ನಿಂತು ಇದಕ್ಕೊಂದು ಪರಿಹಾರ ಕಂಡುಹಿಡಿಯಬೇಕು. ಇದು ನನ್ನ ಇಚ್ಛೆ.... ನಿಮಗೆ ಸರ್ವ ರೀತಿಯ ಸ್ವಾತಂತ್ರ್ಯ, ಎಲ್ಲ ಬಗೆಯ ಸಹಾಯ ಸಹಕಾರ ನೀಡಲಾಗುವುದು. ನಿಮ್ಮೆಲ್ಲರ ಖರ್ಚು ಸಹ ನಮ್ಮ ಇಲಾಖೆ ನೋಡಿಕೊಳ್ಳುತ್ತದೆ.

ನೀವು ಯಾವುದಕ್ಕೂ ಚಿಂತಿಸುವ ಅವಶ್ಯಕತೆ ಇಲ್ಲ.

ಮೇಜರ್ ಹೇಮಂತ್ ಉತ್ತರಿಸುವ ಮೊದಲೇ ಟೆಲಿಫೋನ್ ಗಂಟೆ ಬಾರಿಸಿತು. ತಟಕ್ಕನೆ ರಸಾಳಕರ ಅವರ ದೃಷ್ಟಿ ಮೇಜಿನ ಮೇಲಿದ್ದ ನಾಲ್ಕಾರು ಫೋನುಗಳತ್ತ ಹರಿದು ಹಸಿರು ಬಣ್ಣದ ಫೋನಿನಿಂದ ಗಂಟೆ ಸಪ್ಪಳ ಕೇಳಬರುವುದನ್ನು ಗಮನಿಸಿ ಅವರ ಮುಖ ವಿವರ್ಣವಾಯಿತು. 'ಏಕೆ ?.... ಏನಾಯ್ತು ?' ಮೇಜರ್ ಪ್ರಶ್ನಿಸಿದ.

'ಆಪತ್ತು ಬಂದಿತು. ಇದು ಕೇಂದ್ರದ ಫೋನು'.

ಶ್ಯಾಮಸುಂದರ್ ಮುಂದಾಗಿ ರಿಸೀವರ್ ಎತ್ತಿ ಮಾತನಾಡಲು ತೊಡಗಿದ. ಒಂದೇ ನಿಮಿಷದಲ್ಲಿ ರಸಾಳಕರ ಕಡೆ ನೋಡುತ್ತ ಸನ್ನೆ ಮಾಡಿ ಹೇಳಿದ. ಒಂದು ನಿಮಿಷ ಸರ್.... ಸಾಹೇಬರು ಮಾತನಾಡ್ತಾರೆ.... ರಸಾಳಕರ ಅವರು ಅವಸರದಿಂದ ಫೋನಿನತ್ತ ಸರಿದರು. ರಿಸೀವರ್ ಕೈಗೆ ಬಂತು.

'ಹಲೋ ರಸಾಳಕರ ಸ್ಪೀಕಿಂಗ್'.

'ಆ ಕಡೆಯಿಂದ ಸಹ ಕಾರ್ಯದರ್ಶಿ ಮಾತನಾಡುತ್ತಿದ್ದರು'.

'ಮಿಸ್ಟರ್ ರಸಾಳಕರ ಇದೇನು ?.... ಜಯಂತ್ ಕೊಲೆಯಾದರಂತೆ?... ನೀವೇಕೆ ಅವರ ರಕ್ಷಣೆಗೆ ವ್ಯವಸ್ಥೆ ಮಾಡಲಿಲ್ಲ ?'

'ಅವರು ನಮ್ಮಿಂದ ರಕ್ಷಣೆ ಕೇಳಿದರಲ್ಲವೇ ನಾವು ಕೊಡುವುದು. ಕೇವಲ ಒಂದೇ ಒಂದು ಬಾರಿ ಭೇಟಿಯಾದರು. ಪುನಃ ನಮ್ಮ ಕಡೆ ಬರಲೇ ಇಲ್ಲ

'ಹೂಂ.... ಮುಂದೇನು ಯೋಚಿಸಿದ್ದೀರಿ. ಜಯಂತ್ ಹಿಡಿದ ಕೇಸು ತುಂಬಾ ಮಹತ್ವದ್ದು.... ಅದು ಮುಂದುವರೆಯಲೇಬೇಕು'.

'ಅದರ ಬಗ್ಗೆಯೇ ನಾನು ಯೋಚಿಸುತ್ತಿದ್ದೆ. ಅದಕ್ಕಾಗಿಯೇ ಇಂದು ಹೇಮಂತ್ ಅವರನ್ನು ಕರೆಸಿರುವೆ'.

'ಹೇಮಂತ್ ? ಯಾವ ಹೇಮಂತ್ ? ಮೇಜರ್ ಹೇಮಂತ್ ಅಲ್ಲ ತಾನೆ ?'

'ಹಾಂ ಅವರೇ ಮೇಜರ್ ಹೇಮಂತ್, ಅವರಿಗೇ ಈ ಕೇಸು ವಹಿಸಿರುವೆ'.

'ಏನು ? ಹೇಮಂತ್ ಅಲ್ಲಿದ್ದಾರೆಯೇ ? ದಯವಿಟ್ಟು ಅವರನ್ನು ಕರೆಯಿರಿ'. ರಸಾಳಕರ ಹೇಮಂತನನ್ನು ಕಣ್ಸನ್ನೆಯಿಂದ ಕರೆದು ರಿಸೀವರ್ ಕೊಡುವುದಷ್ಟೇ ಅಲ್ಲ, ಸಕಲ ಭಾರವನ್ನೇ ಅವನಿಗೊಪ್ಪಿಸಿ ನಿರಾಳವಾಗಿ ಉಸಿರುಬಿಟ್ಟರು. ನೆತ್ತಿಮೇಲೆ ತೂಗುತ್ತಿದ್ದ ಖಡ್ಗದ ಭಯ ಈಗ ಅವರಿಗಿರಲಿಲ್ಲ.

ಎರಡು ಮೂರು ನಿಮಿಷ ಮಾತನಾಡಿಯಾದ ಮೇಲೆ ಹೇಮಂತ ರಿಸೀವರ್ ಕೆಳಗಿರಿಸಿ ರಸಾಳಕರ ಅವರ ಬಳಿ ಬಂದ.... ಗೆಲುವಾಗಿದ್ದು ಅವರು ಕೇಳಿದರು.

'ಏನೆಂದರು ?'

'ಅನ್ನುವುದೇನು.... ನೀವು ಕಟ್ಟಿದ ಗುಡಿಗೆ ಅವರು ಕಳಶವಿಟ್ಟರು. ಈ ಕೇಸನ್ನು ನನ್ನ ಕೊರಳಿಗೆ ಕಟ್ಟಿ ಕೈತೊಳೆದುಕೊಂಡರು'.

'ಅಬ್ಬಾ ನಾನು ಗೆದ್ದೆ....'.

'ಯಾರು ತಾತಾ ಗೆದ್ದವರು ?' ಮುದ್ದಾಗಿ ಕೇಳುತ್ತ ನಾಲ್ಕು ವರ್ಷದ ಗಂಡುಮಗುವೊಂದು ಓಡಿ ಬಂದು ರಸಾಳಕರ ತೊಡೆಯ ಮೇಲೆ ಕುಳಿತಿತು. ರಸಾಳಕರ ಮಗುವಿಗೆ ಹೇಮಂತನ ಪರಿಚಯ ಮಾಡಿಕೊಟ್ಟರು.

'ಇವರು ನಿನ್ನ ಮೇಜರ್ ಹೇಮಂತ್ ಅಂಕಲ್. ತುಂಬಾ ಒಳ್ಳೆ ವ್ಯಕ್ತಿ. ಮಹಾ ಧೀರರು ವೀರರು ಇವರು.' ಅವರ ಕೈ ಕುಲುಕಿ ಬಾ.'

'ಹೇಮಂತ ಅಂಕಲ್...., ನೀವು ಸೇನೆಯಲ್ಲಿ ಮೇಜರಾಗಿದ್ದಿರಾ ?'

'ಹೌದು ಮಗು.... ಆಗಿದ್ದೆ,.... ಈಗಿಲ್ಲ....'.

'ಹಾಗಾದರೆ ನೀವು ಇಂದಿನಿಂದ ನನ್ನ ಅಂಕಲ್ ಅಲ್ಲ ನನ್ನ ಬೆಸ್ಟ್ ಫ್ರೆಂಡ್. ನನ್ನ ಹೆಸರು ಆಕಾಶ್.... ಮಾಸ್ಟರ್ ಆಕಾಶ್.... ನನ್ನೊಡನೆ ದೋಸ್ತಿ ಮಾಡ್ತೀರಾ ?' ಓಹೋ ಅವಶ್ಯವಾಗಿ.... ನಿನ್ನಂಥ ಫ್ರೆಂಡ್ ಸಿಕ್ಕರೆ ದೋಸ್ತಿ ಮಾಡದಿದ್ರೆ ಹೇಗೆ ?....

ರಸಾಳಕರ ಮಧ್ಯೆ ಪ್ರವೇಶಿಸಿದರು.

'ಆಕಾಶ್.... ಅಂಕಲ್‌ಗೆ ಕಾಫಿ ತರಲು ತಿಳಿಸು....

ಆಕಾಶ್ ಒಳಗೋಡಿದ. ಆಮೇಲೆ ತಿಳಿಯಿತು, ಆಕಾಶ್ ಅವರ ಮೊಮ್ಮಗ ಎಂದು. ಮಗನ ಮಗ.... ರಸಾಳಕರ ಮಗ ಆನಂದ ಫ್ಯಾಕ್ಟರಿಯೊಂದರಲ್ಲಿ ಎಂ.ಡಿ. ಆಗಿದ್ದರು.

"ಮೊಮ್ಮಗ ತುಂಬಾ ಜೋರಾಗಿದ್ದಾನೆ" ಹೇಮಂತ ಮೆಚ್ಚುಗೆಸೂಸಿ ನುಡಿದ.

"ಹಾಂ.. ಅದಕ್ಕಾಗೇ ಆತ ನನ್ನಂತೆ ಪೋಲೀಸ ಅಧಿಕಾರಿ ಆಗದಿರಲಿ ಎಂದು ಪ್ರಾರ್ಥಿಸುತ್ತಿದ್ದೇನೆ... ಅವರಪ್ಪನ ಹಾಗೆ ಆದರೆ ಸಾಕು..."

"ಏಕೆ ?. . ನಿಮಗೆ ನಿಮ್ಮ ಇಲಾಖೆಯೆಂದರೆ ಅಷ್ಟು ಜಿಗುಪ್ಸೆಯೇ ?"

"ಜಿಗುಪ್ಸೆ ಅಂತೇನೂ ಇಲ್ಲ.. ಏನೋ ಉದಾಸೀನತೆ ಸಧ್ಯದ ಸ್ಥಿತಿಯಲ್ಲಿ ಜನತೆ ಅತ್ಯಂತ ಕೀಳಾಗಿ... ಅತೀ ಕೆಳಮಟ್ಟದಲ್ಲಿ ಕಾಣುವ ಇಲಾಖೆ ಎಂದರೆ ಪೋಲೀಸ ಇಲಾಖೆಯೊಂದೇ... ಇತರ ಇಲಾಖೆಯಲ್ಲಿ ಬೇಕಾದಷ್ಟು ಕುಂದುಗಳಿದ್ದರೂ ಅವ್ಯಾವೂ ಅವರ ಕಣ್ಣಿಗೆ ಬೀಳುವುದಿಲ್ಲ. ಪೋಲೀಸ ಇಲಾಖೆಯಲ್ಲಿಯ ದೋಷಗಳನ್ನು ಎತ್ತಿ ಹಿಡಿದು ಗೊಂದಲ ಹಾಕುತ್ತಾರೆ... ಸಾರ್ವಜನಿಕರಾಗಿ ಸರಕಾರದ ಆಸ್ತಿಗಾಗಿ . ಸಮಾಜ ಘಾತುಕರಿಂದ ಜನತೆಯನ್ನು ರಕ್ಷಿಸುವದಾಗಲೀ ಪೋಲೀಸರು ಹೋರಾಡಿ ಪ್ರಾಣ ಕಳೆದುಕೊಂಡದ್ದನ್ನು ಗಣನೆಗೆ ತೆಗೆದುಕೊಳ್ಳುವದೇ ಇಲ್ಲ. ಕೇವಲ ಟೀಕೆ ಅಪಪ್ರಚಾರ ಅವಮಾನ ಮಾಡುವುದರಲ್ಲಿ ಹೆಚ್ಚಿನ ಸಂತಸ ಪಡೆಯುತ್ತಾರೆ. ಇವರೂ ಮನುಷ್ಯರು ನಮ್ಮಂತೆ ಇವರಿಗೂ ಕಷ್ಟಸುಖ' ಹೆಂಡಿರು ಮಕ್ಕಳು, ಮನೆ ಮಠ ಇವೆ ಎಂಬುದನ್ನು ಯೋಚಿಸುವುದೇ ಇಲ್ಲ.. ಅವರು ಮಾಡಿದ ಒಳ್ಳೆಯ ಕೆಲಸಗಳನ್ನು ಗಣನೆಗೆ ತೆಗೆದುಕೊಳ್ಳದೇ... ಚಿಕ್ಕಪುಟ್ಟ ಲೋಪದೋಷಗಳನ್ನು ರಾಹುಗನ್ನಡಿ ಹಿಡಿದುನೋಡಿದರೆ ಏನು ಮಾಡಬೇಕು ನೀವೇ ಹೇಳಿ...."

"ನೀವು ತುಂಬಾ ಕಟುವಾಗಿ ನುಡಿಯುತ್ತಿದ್ದೀರಿ"

"ಇದು ಕಟುಮಾತಲ್ಲ ಮೇಜರ.. . ಇದು ವಾಸ್ತವಿಕತೆ ನಗ್ನಸತ್ಯ. ಸಮಾಜದ ಯಾವದೇ ಮೂಲೆಯಲ್ಲಿ ಯಾವದೇ ಕೆಟ್ಟ ಕೆಲಸವಾದರೂ ಜನ ಅದಕ್ಕೆ ನೇರವಾಗಿ ಪೋಲೀಸ ಇಲಾಖೆಯನ್ನೇ ಕಾರಣವಾಗಿ ಮಾಡಿ ದೂಷಿಸುತ್ತಾರೆ. ಅದೇ ಪೋಲೀಸ ಇಲಾಖೆಯಿಂದ ಹತ್ತು ಒಳ್ಳೆಯ ಕೆಲಸಗಳಾಗಿದ್ದರೂ ಅವರ ಬಗ್ಗೆ ಚಕಾರ ಶಬ್ದ ಎತ್ತುವಾಗಿಲ್ಲ... ಹೀಗಿರುವಾಗ ಪೋಲೀಸ ಇಲಾಖೆ ಬಗ್ಗೆ ಗೌರವ ಮೂಡಲು ಹೇಗೆ ಸಾಧ್ಯ ? ಇದು ಸಾಲದು ಎಂಬಂತೆ ಮೇಲಿಂದ ಬರುವ ರಾಜಕಾರಣಿಗಳ ಒದೆ ಬೇರೆ ಇದರ ಕರ್ಮಚಾರಿ ತನ್ನಷ್ಟಕ್ಕೆ ತಾನೇ ಹೆಮ್ಮೆ ಪಡಲು ಹೇಗೆ ಸಾಧ್ಯ ?...ಇದನ್ನೆಲ್ಲ ವಿಚಾರಿಸಿಯೇ ನನ್ನ ಮೊಮ್ಮಗ ಈ ಇಲಾಖೆಗೆ ಬರಬಾರದು ಎಂದು ನಾನು

ಬಯಸುತ್ತೇನೆ....

ರಸಾಳಕರ ವಾದದಲ್ಲಿ ಸತ್ಯಾಂಶವಿತ್ತು. ಅದರೊಂದಿಗೆ ಅವರ ಜೀವನದ ಮೂವತ್ತು ವರ್ಷಗಳ ಪೋಲೀಸ ಇಲಾಖೆ ಸೇವೆಯಲ್ಲಿ ಕಂಡ ಕಷ್ಟ ಸುಖ ಸಾವು ನೋವುಗಳ ಅಪಾರ ಅನುಭವವಿತ್ತು.... ಹೀಗಾಗಿ ಅವರು ನುಡಿದ ಕಟು ಸತ್ಯ ನಂಬದೇ ಗತ್ಯಂತರವಿರಲಿಲ್ಲ....

ಹೇಮಂತ ಮೌನವಾಗಿದ್ದನ್ನು ಕಂಡು ಐ.ಜಿ.ಪಿ. ಕೇಳಿದರು.

''ನನ್ನ ಮಾತಿನಿಂದ ನಿಮ್ಮ ಮನಸ್ಸಿಗೆ ನೋವಾಯಿತೇ ?''

''ಇಲ್ಲ ಹಾಗೇನೂ ಇಲ್ಲ''

''ನೀವೇ ನೋಡಿದ್ದೀರಿ. ಜಯಂತನ ವಿಷಯದಲ್ಲಿ ನಮ್ಮ ತಪ್ಪೇನಿದೆ. ಆತ ಕೇವಲ ಒಂದು ಬಾರಿ ನನ್ನ ಕಂಡು ಮಾತನಾಡಿದವ ಪುನಃ ಭೆಟ್ಟಿಯಾಗಲಿಲ್ಲ. ನನ್ನಿಂದ ಯಾವ ಸಹಾಯವನ್ನೂ ಯಾಚಿಸಿಲ್ಲ. ಆತನೆಲ್ಲಿ ಎಂಬುದೇ ನಮಗೆ ತಿಳಿದಿಲ್ಲ. ಹೀಗಿರುವಾಗ ಅವನ ರಕ್ಷಣೆ ಮಾಡಲು ನಮ್ಮಿಂದ ಹೇಗೆ ಸಾಧ್ಯ ? ಆತ ಕೊಲೆಯಾದ ಮೇಲೆ ನಮ್ಮ ಮೇಲೆ ದೋಷರೋಪ [illegible]ಲಾಗುತ್ತದೆ. ನೀವೆ ಹೇಳಿ. ಇದನ್ನೆಲ್ಲ ವಿಚಾರಿಸಿ ಮನನೊಂದು ನುಡಿದೆ. ನೀವು ನಮ್ಮವರು.. ನಮ್ಮ ಜೊತೆ ಕಷ್ಟಸುಖ ಹಂಚಿಕೊಳ್ಳುವವರು. ಅದಕ್ಕಾಗಿ ಮನಬಿಚ್ಚಿ ಮಾತನಾಡಿದೆ.. ನಿಮಗೇನಾದರೂ ಕೆಡುಕೆನಿಸಿದ್ದರೆ ಕ್ಷಮಿಸಿ ಬಿಡಿ.''

''ಖಂಡಿತವಾಗಿಯೂ ಅಂತಹದೇನೂ ಆಗಿಲ್ಲ... ನೀವು ಸುಮ್ಮಸುಮ್ಮನೆ ಮನಸ್ಸು ಕಹಿ ಮಾಡಿಕೊಳ್ಳಬೇಡಿ ನಾನಿನ್ನು ಬರಲೇ ?..''

''ಅಂಕಲ್.. ಕಾಫಿ ಕುಡಿಯದೇ ಹೋಗುತ್ತೀರಾ ?''

ಮುದ್ದು ಮುದ್ದಾಗಿ ಕೇಳುತ್ತ ಬಂದ ಆಕಾಶ್... ಅವನ ಹಿಂದೆ ಟ್ರೇ ಹಿಡಿದ ಸಿಪಾಯಿ.

''ಅರೆ... ಹೌದಲ್ಲ... ಮಾತಿನ ಬರಾಟೆಯಲ್ಲಿ ನಾನು ಮರೆತೇ ಬಿಟ್ಟಿದ್ದೆ... ಥ್ಯಾಂಕ್ಯೂ ಥ್ಯಾಂಕ್ಯೂ ವೆರಿಮಚ್ ಆಕಾಶ್...''

ಮೇಜರ ಆಕಾಶನ ಕೈಕುಲುಕುತ್ತ ನುಡಿದ.. ಆಕಾಶ್‌ಗೆ ಖುಶಿಯೇ ಖುಶಿ. ಆತ ಇನ್ನೂ ಜೋರಾಗಿ ಕೈ ಕುಲ ಕುಲುಕಿ ಒಮ್ಮೆಲೆ ಬಿಡುತ್ತಿದ್ದಂತೆ ಜೋಲಿಹೋಗಿ ಹಿಂದಕ್ಕೆ ಬಿದ್ದ... ನೆಲದ ಮೇಲೆ ಕಾರ್ಪೆಟರ ಹಾಸಿದ್ದರಿಂದ ಆತನಿಗೆ ಪೆಟ್ಟು

ಬೀಳಲಿಲ್ಲ...

''ನನಗೇನೂ ಆಗಿಲ್ಲ''. ಎನ್ನುತ್ತ ಎದ್ದ ಆಕಾಶ್, ಹೇಮಂತನ ಬಳಿ ಬಂದು ಗುಟ್ಟು ಹೇಳುವವರಂತೆ ಕೇಳಿದ.

''ಅಂಕಲ್... ಟಿಪಾಯ್ ಕೆಳಗೆ ಒಂದು ತಂತಿ.. ತಂತಿಗೆ ಒಂದು ಸಿಗಾರ ಬಂಡಲ್ ಜೋಡಿಸಿದ್ದಾರೆ ನಿಮಗೆ ಗೊತ್ತೇ ಅಂಕಲ್... ನಾನದನ್ನು ಕೆಳಗೆ ಬಿದ್ದಾಗ ನೋಡಿದೆ''

ತಂತಿ... ಸಿಗಾರ ಬಂಡಲ್ ಎಂಬ ಶಬ್ದ ಕಿವಿಗೆ ಬೀಳುತ್ತಲೂ ಬೆಚ್ಚಿಬಿದ್ದ ಹೇಮಂತ. ಟಿಪಾಯಿ ಕೆಳಗೆ ಕೈಹಾಕಿದ. ಡೈನಾಮಿಟ ರೆಡಿಯಾಗಿತ್ತು ಹೊರಗಿದ್ದವ ಗುಂಡಿ ಅದುಮಿದರೆ ಸಾಕು.. ಒಂದೇ ಒಂದು ಆಸ್ಫೋಟ ಅಷ್ಟೇ... ಐ.ಜಿ.ಪಿ. ಯವರ ಮನೆ ಬಸ್ಮ.. ಒಳಗಿದ್ದವರೆಲ್ಲ ಶವ...

ಪಟಕ್‌ನೆ ಒಂದು ಹಿಡಿ ಗ್ರೆನಾಯಿಟ್ ಕಿತ್ತು ಕಿಟಿಕಿಯಿಂದ ಹೊರಗೆ ಎಸೆದ. ಬೇರೆ ಬೇರೆಯಾಗಿ ಬಿದ್ದ ಅದು ಚಟ್.. ಪಟ್... ಢಂ.. ಡುಂ ಎಂದು ಮತಾಪು ಹಾರುವಂತೆ ಹಾರಿ ಮೌನತಾಳಿತು. ಒಂದು ವೇಳೆ ಎಲ್ಲಾ ಸೇರಿ ಒಂದೇ ಬಾರಿ ಸಿಡಿದಿದ್ದರೆ....

''ಓಹ್ ಗಾಡ್... ಎಂಥ ಭಯಾನಕ ಘಟನೆ... ನಾವು ಸಾವಿನಿಂದ ಕೂದಲೆಳೆಯಷ್ಟು ಅಂತರದಲ್ಲಿ ಪಾರಾದೆವು''...

ಮೇಜರ ನಿಮಗೆ ಅನಂತ ಧನ್ಯವಾದಗಳು.

''ಧನ್ಯವಾದ ನನಗಲ್ಲ... ನಿಮ್ಮ ಪುಟ್ಟ ಮೊಮ್ಮಗನಿಗೆ ಹೇಳಿ... ಈತ ಬಂದು ನೋಡದಿದ್ದರೆ ನಾವೆಲ್ಲಾ ಇಷ್ಟೊತ್ತಿಗೆ...''

ಕೈಯಲ್ಲಿ ಟ್ರೇ ಹಿಡಿದು ಥರಥರ ಕಂಪಿಸುತ್ತ ನಿಂತಿದ್ದ ಸಿಪಾಯಿ ಅವನ ಮುಖ ಕಪ್ಪಿಟ್ಟಿತ್ತು... ಹೇಮಂತ ಅದನ್ನು ಗಮನಿಸಿದ. ಅವನ ಕೈಯಿಂದ ಟ್ರೇ ಇಸಿದುಕೊಂಡು ಟಿಪಾಯಿ ಮೇಲಿರಿಸಿ... ಫಳೀರ್ ಎಂದು ಅವನ ಕೆನ್ನೆಗೊಂದು ಬಿಗಿದ. ಕಿಡಿಕಾರುವ ಕಣ್ಣುಗಳಿಂದ ಅವನೆಡೆ ನೋಡಿ ಅಬ್ಬರಿಸಿದ ಒಂದೇ ಪಟಿಗೆ ತತ್ತರಿಸುವ ಸಿಪಾಯಿ ಬಾಯಿಬಿಟ್ಟ..

''ಇದರಲ್ಲಿ ನನ್ನದೇನೂ ತಪ್ಪಿಲ್ಲ... ಸಾಹೇಬರು ಬರುವುದಕ್ಕೆ ಮೊದಲು ಒಬ್ಬ ಕಾನಸ್ಟೇಬಲ್ ಬಂದು ಒಂದು ಚಿಕ್ಕ ಪೆಟ್ಟಿಗೆ ತೋರಿಸಿ, ಇದರಲ್ಲಿ ಸಿಗಾರ ಇವೆ.

ಸಾಹೇಬರ ಕೋಣೆಯಲ್ಲಿ ಇಡಬೇಕು ಅಂದ. ನಾನು ನಂಬಿದೆ. ಆತ ಒಳಗೆ ಹೋಗಿ ಹೊರಬಂದ. ನನಗೆ ಐದು ರೂಪಾಯಿ ಕೊಟ್ಟು ಕಾಫಿ ಕುಡಿ ಅಂದ ಇಷ್ಟೇ ನನಗೆ ಗೊತ್ತು...''

ಐ.ಜಿ.ಪಿ. ಒಮ್ಮೆಲೆ ಗಂಭೀರರಾದರು.

''ಮೇಜರ... ಶತ್ರು ತುಂಬಾ ಅಪಾಯಕಾರಿಯಾಗಿದ್ದಾನೆ... ನೀವೇ ಅವನಿಗೆ ಸರಿಯಾದ ಪಾಠ ಕಲಿಸಬೇಕು.

''ರಸಾಳಕರ ಅವರೇ... ಶತ್ರು ನನಗೆ ಚಾಲೆಂಜ ನೀಡಿದ್ದಾನೆ. ಅದನ್ನು ನಾನು ಸ್ವೀಕರಿಸಿದ್ದೇನೆ. ಇನ್ನು ಮುಂದಿದೆ ಧರ್ಮಯುದ್ಧ'' ಎನ್ನುತ್ತ ಮೇಜರ ಮೇಲೆದ್ದ.

## (4)

ಸುಷಮಾ ಮತ್ತು ಅಶೋಕ ಕಾಯುತ್ತ ಕುಳಿತಿದ್ದರು. ''ಇಂದು ನೀವು ಬರುವದೇ ಇಲ್ಲ ಎಂದು ತಿಳಿದಿದ್ದೆವು. ಬಂದೇ ಬಿಟ್ಟಿರಲ್ಲ ?'' ಕಾಯ್ದು ಕಾಯ್ದು ಬೇಸತ್ತಿದ್ದ ಸುಷಮಾ ನಿಟ್ಟುಸಿರು ನುಡಿದಳು. ಹೇಮಂತ ನಕ್ಕ. ಒಂದು ಕಪ್ ಬಿಸಿ ಬಿಸಿ ಕಾಫಿ ಸಿಕ್ಕರೆ ಕಾರಣ ಹೇಳಬಹುದು ?

ಹಾಂ ನನಗೂ ಒಂದು ಕಪ್.. ಕಾರಣ ಕೇಳಲು. ಅಶೋಕ ಧ್ವನಿಗೂಡಿಸಿದ.

ಗಂಟಾದ ಮುಖ ಸಡಿಲಾಯಿತು. ಸುಷಮಾ ಟೆಲಿಫೋನಿನತ್ತ ಸರಿದಳು. ಐದೇ ನಿಮಿಷಗಳಲ್ಲಿ ಹೇಮಂತ ಮುಖ ತೊಳೆದು ಬಟ್ಟೆ ಬದಲಿಸಿದ. ಕಾಫಿ ಬಂದಿತ್ತು. ಗರಂ ನೀರುಳ್ಳಿ ಬಜ್ಜಿ... ಬಿಸಿ ಬಿಸಿ ಕಾಫಿ. ಹಿತಕರವಾದ ಟಿಫಿನ್... ತಿಂಡಿ ಮೆಲ್ಲುತ್ತ ಒಂದೊಂದೇ ಗುಟುಕು ಕಾಫಿ ಸೇವಿಸುತ್ತ ಹೇಮಂತ ನಡೆದ ಸಮಾಚಾರ ತಿಳಿಸಿದಾಗ ಅವರಿಬ್ಬರೂ ಕಾಫಿ ಕುಡಿಯುವದನ್ನೇ ಮರೆತಿದ್ದರು...

''ಏನಿದರ ಅರ್ಥ ?... ಅಶೋಕ ಕೆಳಧನಿಯಲ್ಲಿ ಕೇಳಿದ.

''ಇದರರ್ಥ ಒಂದೇ...ಸುಷಮಾ ಉತ್ತರಿಸಿದಳು. ನಾವು ಶತ್ರುವಿನ ಕಣ್ಣಿಗೆ ಬಿದ್ದಿದ್ದೇವೆ. ನಾವು ಈ ಕೇಸಿನಲ್ಲಿ ಕೈ ಹಾಕುವುದು ಅವನಿಗೆ ಬೇಡವಾಗಿದೆ. ಒಂದು ದೃಷ್ಟಿಯಿಂದ ಆತ ನಮ್ಮಿಂದಾಗಿ ಭೀತನಾಗಿದ್ದಾನೆ. ಅದಕ್ಕಾಗಿಯೇ ಪ್ರಾರಂಭದ ಹಂತದಲ್ಲೇ ಬೇರು ಸಹಿತ ಕಿತ್ತಿ ಹಾಕಲು ಯೋಚಿಸಿದ... ಐ.ಜಿ.ಪಿ. ಯವರ ಮನೆಯಲ್ಲಿ ಆತ ಬಾಂಬ ಕೂಡಿಸುತ್ತಾನೆಂದರೆ ಆತ ಪ್ರಬಲ ಇವೆಲ್ಲ ಅವನಿಗೆ ಮಕ್ಕಳಾಟ... ಎಂದು ತಿಳಿಯಿತು.

ಪಾಠ ಒಪ್ಪಿಸುವ ಜಾಣ ವಿದ್ಯಾರ್ಥಿಯಂತೆ ಸುಷಮಾ ಪಟಪಟನೆ ನುಡಿದಾಗ ಅಶೋಕ ಅವಾಕ್ಕಾದ. ಹೇಮಂತ ಮಂದಹಾಸ ಬೀರಿದ.

'ಸುಷಮಾ ಹೇಳಿದ್ದು ಅಕ್ಷರಶಃ ಸತ್ಯ. ನಮ್ಮ ಉಪಸ್ಥಿತಿಯಿಂದಾಗಿ ಆತ ಬೆದರಿ ತಪ್ಪು ಹೆಜ್ಜೆ ಇಟ್ಟಿದ್ದಾನೆ. ಆಕಾಶ್ ಇರದಿದ್ದರೆ ಇಂದೇ ಆತ ತನ್ನ ಕೆಲಸದಲ್ಲಿ ಜಯಶಾಲಿಯಾಗುತ್ತಿದ್ದ. ನಮ್ಮ ಅದೃಷ್ಟ ಚೆನ್ನಾಗಿದೆ...''

ಯಾರೂ ಹೇಮಂತನ ಮಾತಿಗೆ ಪ್ರತ್ಯುತ್ತರ ಕೊಟ್ಟಿರಲಿಲ್ಲ...

ಟೆಲಿಫೋನ ಗಂಟೆ ಮಾತ್ರ ಉತ್ತರಿಸಿ ನಾನಿದ್ದೇನೆ ಎಂದಿತು. ಸುಷಮಾ ರಿಸೀವರ ಎತ್ತಿ ಕಿವಿಗೆ ಅನಿಸಿದಳು.

''ಹಲೋ.. ಯಾರು ಬೇಕಾಗಿತ್ತು ?''

''ನಾನು ಹೆಣ್ಣು ಕುದುರೆಯೊಂದಿಗೆ ಮಾತನಾಡುವದಿಲ್ಲ. ನಿನ್ನ ಗಂಡುಗೂಳಿಗೆ ಕೊಡು'' ಆ ಕಡೆಯಿಂದ ಕರ್ಕಶ ಧ್ವನಿ ಕೇಳಿಸಿತು. ಕಕ್ಕಾವಿಕ್ಕಿಯಾದ ಆಕೆ ರಿಸೀವರ ಹೇಮಂತನತ್ತ ಚಾಚಿದಳು. ಆ ಕರ್ಕಶವಾದ ಧ್ವನಿ ಅವನಿಗೂ ಕೇಳಿಸಿತ್ತು.

''ನಾನು ಗಂಡುಗೂಳಿ ಮಾತನಾಡುತ್ತಿರುವದು... ನೀನ್ಯಾರು ? ಬೆದೆ ಬಂದ ಆಕಳೆ ?'' ಚಾಟಿ ಏಟಿನಂತೆ ಆತ ನುಡಿದಾಗ. ಸುಷಮಾ ಚುಳಿಯಿಂದ ನಕ್ಕಳು.

''ಹಲ್ಲು ಬಿಗಿ ಹಿಡಿದು ಮಾತನಾಡು ಮೇಜರ... ನಿನ್ನ ನಾಲಿಗೆ ಮುಂದೆ ಚಾಚುತ್ತಿದೆ ?''

''ಈ ನಾಲಿಗೆ ಇರುವದೇ ನಿನ್ನಂಥ ಬೆದೆ ಬಂದ ಆಕಳಗಳಿಗಾಗಿ... ನೀ ಕೇವಲ ನನ್ನ ನಾಲಿಗೆ ಬಗ್ಗೆ ಮಾತಾಡುತ್ತಿರುವೆ. ಕೈ ಬಗ್ಗೆ ಇನ್ನೂ ಗೊತ್ತಿಲ್ಲವೆಂದು ಕಾಣುತ್ತದೆ.''

''ನಿನ್ನ ಕೈ ನೋಡಲೆಂದೇ ಫೋನು ಮಾಡಿದ್ದು. ಒಳ್ಳೆ ಮಾತಿನಿಂದ ಈ ಊರು ಬಿಟ್ಟು ಸುರಕ್ಷಿತವಾದ ಜಾಗ ಸೇರು. ಇಲ್ಲದಿದ್ದರೆ''

''ನನಗೆ ಸ್ಪೇಶಲ್ ಡಿಲಕ್ಸ ಬಸ್ ಕಳಿಸುತ್ತೀಯಾ ?''

''ಇಲ್ಲ ಯಮದೂತರನ್ನು ಕಳಿಸುತ್ತೇನೆ''

''ಕಳಿಸು ಅವರನ್ನೂ ಒಂದು ಕೈ ನೋಡ್ತೇನೆ''

''ನೀನು ಸುಲಭವಾಗಿ ಒಪ್ಪುವುದಿಲ್ಲವೆಂದು ಕಾಣುತ್ತದೆ.''

''ನೀನೇ ಹೇಳಿದೆಯಲ್ಲ ಗಂಡುಗೂಳಿ ಅಂತ. ನಿನ್ನಂಥ ಬೆದೆ ಬಂದ ಆಕಳು ಹತ್ತಿರವಿರುವಾಗ ಸುಲಭವಾಗಿ ಒಪ್ಪುವುದು ಹೇಗೆ ?....

''ಮೇಜರ...'' ಕೋಪದಿಂದ ಕರ ಕರ ಹಲ್ಲು ಕಡಿಯುತ್ತ ಅಬ್ಬರಿಸಿದ.

''ಹಾಂ.. ಸ್ವಲ್ಪ ಮೆತ್ತಗೆ ಮಾತಾಡು. ಇಷ್ಟು ಜೋರಾಗಿ ಕೂಗಿ ಕೊಳ್ಳುವದು ನಿನ್ನ ಆರೋಗ್ಯಕ್ಕೆ ಸರಿಯಲ್ಲ... ಈಗಾಗಲೇ ಆರು ಬಾರಿ ಅಂಡರವೀಯರ ಚೇಂಜ್ ಮಾಡಿಯಾಯ್ತು. ಇನ್ನು ಏಳನೇ ಬಾರಿ ಮತ್ತೆ ಚೇಂಜಮಾಡಬೇಕಾಗುತ್ತದೆ...

''ಮೂರ್ಖನ ಹಾಗೇ ಮಾತನಾಡಬೇಡ.. ನೀವು ಮೂವರೂ ಇಲ್ಲಿಂದ ಮೂರು ಗಂಟೆಯೊಳಗಾಗಿ ಜಾಗ ಖಾಲಿ ಮಾಡಿ... ಮೂರು ಲಕ್ಷ ರೂಪಾಯಿ ಕೊಡುತ್ತೇವೆ''

''ಮೂರಲ್ಲ... ಮೂವತ್ತು ಕೊಟ್ಟರೂ ಹೊರಡೋದಿಲ್ಲ...''

''ಮೂವತ್ತು ನಾ ಕೊಡೋದಿಲ್ಲ''

''ನಿನ್ನ ಕೇಳಿದವರಾರು ? ನೀನು ಮೂವತು ಕೊಟ್ಟರೂ ತೆಗೆದುಕೊಳ್ಳುವವರಾರು ?''

''ಹತ್ತು ಲಕ್ಷಕ್ಕೆ ಏನೆನ್ನುತ್ತಿ ?''

''ಆ ಹತ್ತು ಲಕ್ಷ ನೀನೇ ತೆಗೆದುಕೊ - ಚಾಂದನೀ ಚೌಕದಲ್ಲಿ ಒಂದು ಫಸ್ಟಕ್ಲಾಸ್ ಹೊಟೆಲ್ ತೆಗೆಯಬಹುದು ?

''ಹದಿನೈದು ಲಕ್ಷ''

''ನಿನ್ನ ಮುಖದ ಮೇಲೆ ಬಿಸಾಕ್ತೇವೆ''

''ಐವತ್ತು ಲಕ್ಷ''

''ಆಂ ಏನಂದೆ ?''

''ಐವತ್ತು ಲಕ್ಷ ಎಂದೆ ಏಕೆ ? ಐವತ್ತು ಲಕ್ಷದ ಮುಂದೆ ನಿನ್ನ ಕರ್ತವ್ಯ ಪಲಾಯನ ಮಾಡಿತೆ ?''

''ಪಲಾಯನ ಮಾಡಬೇಕಾದವ ನೀನು... ನಾನೂ ಅಲ್ಲ... ಕರ್ತವ್ಯವೂ

ಅಲ್ಲ...''

''ಸರಿ ಹಾಗಾದರೆ ನನ್ನ ಎದುರು ಹಾಕಿಕೊಂಡು ಬದುಕು''

''ಸರಿಹಾಗಾದರೆ ನನ್ನ ಎದುರು ಹಾಕಿಕೊಂಡು ನೀನಾದರೂ ಬದುಕು ನೋಡೋಣ''

ಮಾತಿಗೆ ಮಾತು ಮುಟ್ಟಿಸಿದ... ಆ ಕಡೆಯಿಂದ ರಿಸೀವರ ಕುಕ್ಕಿದ ಸದ್ದಿನೊಂದಿಗೆ ಸಮ್ಭಾಂಥ ಕಡಿಯಿತು

'ಅಧಿಕೃತವಾಗಿ ಯುದ್ಧ ಘೋಷಿಸಲ್ಪಟ್ಟಿತ್ತಲ್ಲವೆ ?'

ಕುಂಕುಮದಂತೆ ಕೆಂಪಗಾಗಿ ತಮತಮ ಅಸ್ನುತ್ತಿದ್ದ ಹೇಮಂತನ ಮುಖ ನೋಡಿ ಕೇಳಿದ ಅಶೋಕ....ಮೇಜರನ ಮುಗುಳುನಗೆಯಲ್ಲಿ ಉತ್ತರವಾಯಿತು.

ಹೌದು ಪಾಂಚಜನ್ಯ ಊದಿ ಆಯ್ತು.

'ಇನ್ನು ವಿಶ್ರಾಂತಿ ಸಾಕು... ಕೆಲಸ ಎಲ್ಲಿಂದ ಆರಂಭಿಸೋಣ ಹೇಳಿ.'

'ಇದೀಗ ಟೆಲಿಫೋನು ಬಂತಲ್ಲ.. ಅದು ಎಲ್ಲಿಂದ ಬಂತು ಎಂಬಲ್ಲಿಂದ..'

''ಉಪಯೋಗವಾಗಲಾರದು ಸುಷಮಾ... ನಮಗೆ ಫೋನ ಮಾಡಿದವ ಮುಠ್ಠಾಳನಲ್ಲ. ಆತ ನಿಃಸಂಶಯವಾಗಿ ಯಾವದಾದರೂ ಪಬ್ಲಿಕ್ ಬೂಥನಿಂದಲೇ ಮಾಡಿರುತ್ತಾನೆ. ಅಶೋಕ ನೀನೆನ್ನುತ್ತಿ ?''

ನಗುತ್ತ ಕೇಳಿದ ಆತ

''ನಾನೇನೂ ಅಂದಿಲ್ಲವಲ್ಲ ?'' ನಗುತ್ತ ಕೇಳಿದ ಆತ.

''ಅಂದಿಲ್ಲವಾದರೆ ಈಗ ಅನ್ನು...''

''ಹೀಗೋ.. ನಾವು ಮೊಟ್ಟ ಮೊದಲು ಎಲ್ಲಿ ಜಯಂತನ ಅಚೇತ ದೇಹ ಬಿದ್ದಿತ್ತೋ ಅಲ್ಲಿಂದ ಕೆಲಸ ಪ್ರಾರಂಭಿಸಬಹುದು.''

''ಗುಡ್.. ನನಗೆ ಒಪ್ಪಿಗೆಯಾಯ್ತು...ಏಕೆ... ಕಾಲ.. ಇಬ್ಬರೂ ಅಲ್ಲಿಯ ಜಾಣೆ ವಾತಾವರಣ ಪ್ರೇರೇಪಿಸೋಣ. ಏನಾದರೂ ಸುಳಿವು ಸಿಕ್ಕಲ್ಲಿ ಸಿಗುತ್ತಲೇ ಹುಡುಕೋಣ. ಒಬ್ಬರು ಎಡಬಲಕ್ಕಿದ್ದ ಮನೆಹೊಕ್ಕು ರಾತ್ರಿ ನಡೆದ ಘಟನೆ ಬಗ್ಗೆ ವಿಚಾರಿಸಬೇಕು... ಯಾವದಾದರೂ ಹೊಸವಿಷಯ ಬೆಳಕಿಗೆ ಬರುತ್ತಿದೆಯೋ ಏನೋ ?

''ನಮ್ಮೊಡನೆ ಶ್ಯಾಮಸುಂದರ ಅವರನ್ನೂ ಕರೆದೊಯ್ದರೆ ಹೇಗೆ ?''

''ಓಹೋ ಅವಶ್ಯವಾಗಿ.. ಅವರಿಪರಿಂದ ಇನ್ನೂ ಹೆಚ್ಚಿನ ಸಹಾಯ ದೊರೆತರೂ ದೊರೆಯಬಹುದು. ಹೇಮಂತ ಶ್ಯಾಮಸುಂದರನಿಗೆ ಪೋನು ಮಾಡಲು ಮುಂದಾದ.

ಶ್ಯಾಮಸುಂದರ ಬರುವಾಗ ಪೋಲೀಸ ಜೀಪು ತಂದದ್ದು ಅದರೊಂದಿಗೆ ಇಬ್ಬರು ಕಾನಸ್ಟೇಬಲ್ ಬಂದದ್ದು ಒಳ್ಳೆಯದಾಯಿತು. ಜಯಂತನ ರಕ್ತರಂಜಿತ ದೇಹ ಬಿದ್ದ ದೂರದ ಬಡಾವಣೆಯಲ್ಲಿ ಒಮ್ಮಿಂದೊಮ್ಮೆಲೆ ಚಟುವಟಿಕೆಗಳು ಪ್ರಾರಂಭಿಸಿದವು. ಅಶೋಕನ ಜೊತೆ ಶ್ಯಾಮಸುಂದರ ಮತ್ತು ಒಬ್ಬ ಕಾನಸ್ಟೇಬಲ್ ದೂರದೂರದಲ್ಲಿದ್ದ ಮನೆಹತ್ತಿರ ಹೋಗಿ ವಿಷಯ ಸಂಗ್ರಹಿಸತೊಡಗಿದರು. ಹೇಮಂತ, ಸುಷಮಾ ಹಾಗೂ ಕಾನಸ್ಟೇಬಲ್ ಸ್ವರದ ನಿರೀಕ್ಷಣೆ ಮಾಡತೊಡಗಿದರು.

ಕುಡುಕ ಯಾವ ಚರಂಡಿ ಪಕ್ಕದಲ್ಲಿ ಬಿದ್ದುಕೊಂಡಿದ್ದೆ ಎಂಮ ಹೇಳಿದ್ದನೋ ಅಲ್ಲಿಂದ ಶೋಧನಕಾರ್ಯ ಪ್ರಾರಂಭವಾಯಿತು. ಚರಂಡಿಯೊಳಗೆ ಉರುಳಿಬಿಟ್ಟ ಒಂದು ದೊಡ್ಡ ಹೆಂಡದ ಸೀಸೆ ಕುಡುಕನ ಮಾತನ್ನು ಪುಷ್ಟೀಕರಿಸಿತು. ಅಲ್ಲಿಂದ ಪ್ರತಿಯೊಂದು ಹೆಜ್ಜೆ ಇಡುತ್ತ... ಅಂಗುಲ ಅಂಗುಲವನ್ನು ತನ್ನ ಎಕ್ಸರೇ ದೃಷ್ಟಿಯಲ್ಲಿ ನೋಡುತ್ತ ಸಾಗಿದ ಹೇಮಂತ.

ಒಂದು ಗಂಟೆ ಹೇಗೆ ಕಳೆಯಿತೋ ಗೊತ್ತಾಗಲೇ ಇಲ್ಲ. ಅಷ್ಟರಲ್ಲಿ ಸುತ್ತಲು ಹತ್ತಿಪ್ಪತ್ತು ಜನ ನೆರೆದಿದ್ದರು. ಅಶೋಕ ಸಹ ತನ್ನ ಕೆಲಸ ಮುಗಿಸಿ ಬಂದಿದ್ದ. ಅವನಿಗೆ ವಿಶೇಷ ಮಾಹಿತಿ ಏನೂ ದೊರೆತಿರಲಿಲ್ಲ. ಅಂದು ರಾತ್ರಿ ಒಂದು ವ್ಯಕ್ತಿ ಓಡಾಡಿದ್ದು ಅವನನ್ನು ಅಟ್ಟಿಸಿಕೊಂಡು ಬಂದ ವ್ಯಕ್ತಿ ಹುಡುಕಾಡಿ ಅವನನ್ನು ಹೊಡೆದದ್ದು. ಆತ ಚೀರಾಟ ನರಳಾಟ ಇವನ್ನೇ ಎಲ್ಲರೂ ಹೇಳಿದರು. ಒಬ್ಬ ಮುದುಕ ಮಾತ್ರ ಇದರ ಬಗ್ಗೆ ಹೆಚ್ಚಿಗೆ ಮಾಹಿತಿ ಬೇಕಾದರೆ ಸಲೂಲಿನ ಪಕ್ಕದ ರಂಗಾನನ್ನು ಕೇಳಿ ಅಂದ.

''ಯಾರು ಆ ರಂಗಾ'' ಪ್ರಶ್ನೆಗೆ ಉತ್ತರ ದೊರೆತಿತ್ತು. ರಂಗಾ ಅನಾಥ. ಹೊಟ್ಟೆ ಹೇಗೆ ತುಂಬಿಸಿಕೊಳ್ಳುತ್ತಾನೋ ಗೊತ್ತಿಲ್ಲ. ಅಲ್ಲಿದ್ದ ಹತ್ತಾರು ಅಂಗಡಿ ಕಸ ಹೊಡೆದು ಸ್ವಚ್ಛ ಮಾಡುವ ಕೆಲಸ ಅವನದು. ಅವರು ಕೊಟ್ಟ ಮಜೂರಿಯೇ ಅವನ ಜೀವನದ ಆಧಾರ. ರಾತ್ರಿ ಸಲೂಲಿನ ಪಕ್ಕದ ಶೆಡ್ಡಿನಲ್ಲಿ ಮಲಗೋದು.

ಇದನ್ನೆಲ್ಲ ಕೇಳುತ್ತಿದ್ದಂತೆ ಶ್ಯಾಮಸುಂದರ ಒಬ್ಬ ಪೋಲೀಸನನ್ನು ಕರೆದು ರಂಗಾನನ್ನು ಕರೆತರುವಂತೆ ಸೂಚಿಸುತ್ತಿರುವಾಗಲೇ ಹೇಮಂತ ತಡೆದು ಅಲ್ಲಿಗೆ

ನಾವೇ ಹೋಗೋಣ ಎಂದು ನುಡಿದ. ಅಲ್ಲಿಂದ ಕಾಲುಕಿತ್ತಬೇಕು ಅನ್ನುತ್ತಿರುವಾಗಲೇ ಅವರ ಮುಂದೊಂದು ಟ್ಯಾಕ್ಸಿ ಬಂದು ನಿಂತಿತು. ಡ್ರೈವರ ಕೆಳಗಿಳಿದು ಅವರ ಬಳಿ ಬಂದು. ಮೂವರು ಪುರುಷರು, ಓರ್ವ ಮಹಿಳೆ. ಇವರು ದುಸ್ತಿಯಲ್ಲಿರುವವರು. ಡ್ರೆಸ್‌ನಲ್ಲಿರುವ ಇಬ್ಬರು ಪೋಲೀಸರು. ಎಲ್ಲರನ್ನೂ ನೋಡಿ ಗೊಂದಲದಲ್ಲಿ ಬಿದ್ದ.. ಈ ಮೂವರು ಪುರುಷರಲ್ಲಿ ಸಾಹೇಬರು ಯಾವ ಅಂತ ?... ನಾಲ್ವರಿಗೂ ನಮಸ್ಕರಿಸಿ ಕೈಕಟ್ಟಿ ನಿಲ್ಲುತ್ತಿದ್ದಂತೆ ಹೇಮಂತನ ಮೆದುಳು ಮಿಂಚಿನಂತೆ ಕೆಲಸ ಮಾಡಿತು.

''ಬನ್ನಿ ಡ್ರೈವರ್ ಸಾಹೇಬರೆ. ನಾವು ನಿಮ್ಮನ್ನೇ ಹುಡುಕ್ತಿದ್ದೆವು'' ಎಂದ.

ಕತ್ತಲೆಯಲ್ಲೊಂದು ಬಾಣ ಬಿಟ್ಟಿದ್ದ. ದೂರದ ಗುರಿಗೆ ಬಾಣ ಸರಿಯಾಗಿ ನಾಟಿತು.

''ಮಾಯ್‌ಬಾಪ್. ಅದಕ್ಕೇ ನಾನು ಬಂದೆ'' ಎಂದ ಸೆಲ್ಯೂಟ್ ಹೊಡೆದು. ಮೇಜರನ ಊಹೆ ನಿಜವಾಗಿತ್ತು. ಅಶೋಕ, ಸುಷಮಾ ಏನಾಯಿತು ಏನು ನಡೆದಿದೆ ಎಂಬುದನ್ನು ಅರ್ಥಮಾಡಿಕೊಂಡಿದ್ದರು. ಶ್ಯಾಮಸುಂದರ್‌ಗೆ ಮಾತ್ರ ಇನ್ನೂ ಅರ್ಥವಾಗಿರಲಿಲ್ಲ... ಮೇಜರ ಅವನತ್ತ ನೋಡಿ ಕಣ್ಣುಮಿಟುಕಿಸದೆ ಕೇಳಿದ ''ಸಾಹೇಬರೆ ನಿನ್ನೆಯಿಂದ ನೀವು ಹುಡುಕುತ್ತಿದ್ದಿರಲ್ಲ ಬ್ಯೂಗಲ್‌ರಾಕ್ ಹೋಟೆಲ್ ಬಳಿ ಟ್ಯಾಕ್ಸಿ ಡ್ರೈವರನನ್ನು ಅವನೇ ಈತ. ಅಂದು ರಾತ್ರಿ ಜಯಂತ ಇವನ ಟ್ಯಾಕ್ಸಿಯಲ್ಲೇ ಬಂದದ್ದು...''

ಹೇಮಂತನ ಅರ್ಥಗರ್ಭಿತ ಮಾತು ಶ್ಯಾಮಸುಂದರನಿಗೆ ಈಗ ಅರ್ಥವಾಯ್ತು ಅಂತ ಕಾಣುತ್ತದೆ. ಡ್ರೈವರ ಕಡೆ ಕೆಕ್ಕರಿಸಿ ನೋಡಿ ಗಡುಸಾಗಿ ಕೇಳಿದ.

''ಎಲ್ಲಿ ಹಾಳಾಗಿ ಹೋಗಿದ್ದೆ.. ನಾಳೆ ನಿನ್ನ ಮೇಲೆ ವಾರಂಟ ಹೊರಡಿಸಬೇಕು ಅಂತ ಮಾಡಿದ್ದೆ..''

''ಅಯ್ಯೋ ಹಾಗೆ ಮಾಡಬೇಡಿ ಸಾಹೇಬ್.. ಬಡವ ಸತ್ತುಹೋಗ್ತೇನೆ. ಅಂದು ಏನು ನಡೆಯಿತು ಅಂತ, ಎಲ್ಲಾ ಹೇಳಿ ಬಿಡುತ್ತೇನೆ. ನನ್ನ ಕಾಪಾಡಿ ಟೈಪರಿಕಾರ್ಡರಂತೆ ಆತ ಬಾಯಿಬಿಟ್ಟ.

''ರಾತ್ರಿ ಬ್ಯೂಗಲ್‌ರಾಕ್ ಬಳಿ ಜಯಂತ ಟ್ಯಾಕ್ಸಿ ಹಿಡಿದ ಬಗೆ ಆತ ವಿವರಿಸಿದ. ಜಯಂತ ತುಂಬಾ ಗಾಬರಿಯಾಗಿದ್ದ. ಅವರ ಕೈಯಲ್ಲೊಂದು ಚಿಕ್ಕ ಬ್ರೀಫ್‌ಕೇಸಿತ್ತು. ಅವನ ಬಟ್ಟೆಗಳು ಕೊಳಕಾಗಿದ್ದವು. ಒಂದೆರಡು ಕಡೆ ಚಿಕ್ಕ ಸುಟ್ಟ ಗಾಯಗಳಾಗಿದ್ದವು.

ಟ್ಯಾಕ್ಸಿ ಸ್ವಲ್ಪ ಮುಂದೆ ಹೋಗುತ್ತಲು ಹಿಂದೆ ಭಾರಿ ಆಸ್ಫೋಟ ಕೇಳಿಸಿತು. ಹೊಟೆಲ್ ಒಂದು ರೂಮಿನಲ್ಲಿ ಬೆಂಕಿ ಕಾಣಿಸಿಕೊಂಡಿತು. ನಾನು ಟ್ಯಾಕ್ಸಿ ನಿಲ್ಲಿಸಲು ಪ್ರಯತ್ನಿಸುವಾಗ ಆತ ಬೇಡ ಎಂದು ಗದರಿದ. ಮುಂದೆ ಒಂದು ಕಡೆ ಪಿಸ್ತೂಲ ತೋರಿಸಿ ನನ್ನ ಟ್ಯಾಕ್ಸಿ ಓಡಿಸಿಕೊಂಡು ಹೋದ. ಅವನ ಹಿಂದೆಯೇ ಒಂದು ಕಾಲು ಬೆನ್ನಟ್ಟಿತು. ನಾನು ನನ್ನ ಅದೃಷ್ಟ ಹಳಿದುಕೊಳ್ಳುತ್ತ.. ನಡೆದ ಘಟನೆ ಬಗ್ಗೆ ಯೋಚಿಸಿ ಗಾಬರಿಯಾದೆ. ಇದರ ಬಗ್ಗೆ ಪೋಲೀಸರಿಗೆ ತಿಳಿಸಿದರೆ ಅವರು ನನ್ನನ್ನೇ ಎಲ್ಲಿ ಹಿಡಿದು ಹಾಕುತ್ತಾರೋ ಅಂತ ಹೆದರಿ ರೈಲು ನಿಲ್ದಾಣದೆದುರು ಇರುವ ಕ್ಯಾಂಟೀನ್‌ಗೆ ಬಂದೆ ಚಹ ಕುಡಿಯುತ್ತಾ ಯಾವ ದಾರಿ ಕಾಣದೇ ಚಿಂತಿಸುತ್ತಾ ಒಂದು ಗಂಟೆ ಕಳೆದೆ. ಅಷ್ಟರಲ್ಲಿ ನನ್ನ ಟ್ಯಾಕ್ಸಿ ಬಂದು ನಿಂತಿದ್ದು ಕಾಣಿಸಿತು. ಹೆದರಿ ಅವಿತುಕೊಂಡೆ. ಕಾರಿನಿಂದಿಳಿದ ವ್ಯಕ್ತಿ ಹನುಮಂತ ಆಗಿರಲಿಲ್ಲ. ಬೇರೆಯವ ಇಳಿದದ್ದು ಕಂಡು ಅಚ್ಚರಿ ಎನಿಸಿತು. ಆತ ಹೊರಟು ಹೋದ ಮೇಲೆ ಟ್ಯಾಕ್ಸಿ ತೆಗೆದುಕೊಂಡು ಮನೆಗೆ ಹೋದೆ. ಎರಡು ದಿನ ಹೊರಗೆ ಬರಲೇ ಇಲ್ಲ. ಇಂದು ಗಟ್ಟಿ ಮನಸ್ಸು ಮಾಡಿ ನಿಮಗೆ ತಿಳಿಸಲು ಬಂದೆ.. ದಯಪಿಟ್ಟು ವಿಳಂಬವಾದುದಕ್ಕೆ ಕ್ಷಮಿಸಿ''

ಹೇಮಂತನಿಗೆ ಅವನ ಮಾತು ಕೇಳಿ ಸಂತೋಷವಾಯಿತು.

''ನಿನ್ನ ಹೆಸರೇನು ?''

''ಸುಧೀರ...''

''ಸುಧೀರ ನೀನು ನಿಜ ಹೇಳ್ತಿರುವೆ ಅಂತ ನನಗೆ ಮನದಟ್ಟಾಗಿದೆ. ನಿನ್ನ ಜಾಗದಲ್ಲಿ ಯಾರೇ ಇದ್ದರೂ ಹೀಗೆ ಮಾಡುತ್ತಿದ್ದರು. ಹಾಂ ಸ್ವಲ್ಪ ಯೋಚಿಸಿ ಕಾರಿನಿಂದ ಇಳಿದ ಬೇರೊಂದು ವ್ಯಕ್ತಿ ಹೇಗಿದ್ದ ಎಂದು ಹೇಳು ನೋಡೋಣ ?...''

ಸುಧೀರ ತುಸು ಹೊತ್ತು ಯೋಚಿಸಿ ಉತ್ತರಿಸಿದ.

''ಆತ ಕಪ್ಪನಿದ್ದ. ಆಕಾರವಿಲ್ಲ. ಕಣ್ಣುಮಾತ್ರ ಬೆಳ್ಳಗೆ.. ಹುಬ್ಬಿನ ಕೂದಲೂ ಸಹ ಆತ ಬೋಳಿಸಿದ್ದ.. ತಲೆಕೂದಲು.. ಮೀಸೆ.. ಗಡ್ಡ.. ಯಾವದೂ ಇಲ್ಲ. ಎಲ್ಲಾ ಕಡೆ ಬೋಳು. ಫಿಟ್ ಜೀನ್ಸ ದೊಗಲೆ ಶರ್ಟ ತೊಟ್ಟಿದ್ದ..''

''ಆತ ತಾಳು.. ಹುಬ್ಬಿನ ತೀಡಿ'' ಮಧ್ಯೆ ನುಡಿದರು ಶ್ಯಾಮಸುಂದರ.

''ನಿಮಗಾತ ಗೊತ್ತೇ ?...'' ಮೇಜರ ಪ್ರಶ್ನಿಸಿದ.

''ಆತ ಎಲ್ಲ ಪೋಲೀಸಿನವರಿಗೂ ಗೊತ್ತು. ಆತನನ್ನು ಬಂಧಿಸಿರುವ ವಿಷಯ

ನಿನಗೆ ತಿಳಿಸಿರುವೆ. ಆತನ ಮೇಲೆ ಎಂಟು ರೇಪ್, ಎರಡು ದರೋಡೆ. ಮೂರು ಕೊಲೆ, ಆರೋಪಗಳಿದ್ದವು. ಒಂದರಲ್ಲೂ ಅವನಿಗೆ ಶಿಕ್ಷೆಯಾಗಲಿಲ್ಲ. ಬಿಡುಗಡೆ ಆದ.''

''ಹಾಗಾದರೆ ಆತ - ದೊಡ್ಡ ಕುಳವೇ ಆಗಿದ್ದಾನೆ.''

''ಆತ ದೊಡ್ಡ ಕುಳ. ಅಲ್ಲ, ಅವನ ಹಿಂದಿರುವ ಕೈ ದೊಡ್ಡ ಕುಳದ್ದು.''

''ಅರೆ ಕಂಡು ಹಿಡಿದು ಕತ್ತರಿಸಬೇಕು''. ಹೇಮಂತ ಹಲ್ಲು ಕಟಕರಿಸಿದ.

''ಅಷ್ಟು ಸುಲಭದ ಕೆಲಸವಲ್ಲ ಮೇಜರ್ ಅದು''.

''ಅದನ್ನು ಆಮೇಲೆ ವಿಚಾರಿಸೋಣ, ನಾವು ಆ 'ರಂಗನ' ಕಡೆ ಹೋಗೋಣ ನಡೆಯಿರಿ.

ಐದಾರು ಅಂಗಡಿಗಳ ಸಾಲಿನತ್ತ ಅವರು ನಡೆದರು... ರಂಗನಿಗಾಗಿ...

*

## (5)

ರಂಗ ತನ್ನ ಮುರುಕು ಶೆಡ್ಡಿನಲ್ಲಿ ನಿದ್ದೆಯಿಲ್ಲದೇ ಒದ್ದಾಡುತ್ತಿದ್ದ ಎಂದು ಮೂರು ದಿನಗಳ ಹಿಂದೆ ಆತ ನೋಡಿದ ದೃಷ್ಟಿ ಬೇಡಬೇಡವೆಂದರೂ ಅವನ ಕಣ್ಣು ಮುಂದೆ ಬಂದು ನಿಲ್ಲುತ್ತಿತ್ತು. ಅಂದು 'ಅಖರೀಕಾಟ' ಸಿನೆಮಾದ ಕೊನೆ ದಿನ. ಕೊನೆ ಆಟ ನೋಡಲು ಹೋದ ಆತ ಮರಳಿ ಬರುವಾಗ ಒಂದು ಗಂಟೆಯಾಗಿತ್ತು. ಅವನ ಕಣ್ಣೆದುರೇ ಜಯಂತನ ಕೊಲೆಯಾಗಿತ್ತು. ಕಾರಿನಲ್ಲಿ ಮೃತನನ್ನು.. ಆತ ಕಂಡದ್ದು. ಅದನ್ನು ಯೋಚಿಸಿ ಯೋಚಿಸಿ ಅವನ ತಲೆ 'ದಿಂ' ಅನ್ನುತ್ತಿತ್ತು. ತಾನು ನಿಜವಾಗಿಯೇ ಅದನ್ನೆಲ್ಲ ನೋಡಿದೆನೋ ಅಥವಾ ಅದು ಒಂದು ಕನಸೋ -ಎಂದಾತ ಯೋಚಿಸುತ್ತಿದ್ದ. ತಾಳಲಾರದೇ ತನ್ನ ಬಗ್ಗೆ ಮರುಕ ಹೊಂದಿದ್ದ ಒಬ್ಬ ಮುದುಕರ ಮುಂದೆ ತಾನೊಂದು ಕೊಲೆ ಕಂಡೆ ಎಂದು ಹೇಳಿ ಸಮಾಧಾನ ಪಡೆದಿದ್ದ.

''ರಂಗಾ...ರಂಗಾ... ಯಾರೋ ಕೂಗಿದಂತಾಯಿತು. ಎದ್ದು ಬಾಗಿಲೆಡೆ ನೋಡಿದ. ಪೋಲೀಸ್ ಕಾನ್‌ಸ್ಟೇಬಲ್ ನಿಂತಿದ್ದ ಬಾಗಿಲಲ್ಲಿ. ಎದೆ ಧಕ್ ಎಂದಿತು. ಇದೇನು ಬಂತು ಕೇಡು ಅನ್ನುತ್ತಾ ಎದ್ದು ಬನ್ನಿ ಬನ್ನಿ ಸಾಹೇಬರೆ ಅಂದ...ಬಾಗಿಲು ಮುಂದೆ ಮಾಡಿಕೊಂಡು ಬಂದ ಕಾನ್‌ಸ್ಟೇಬಲ್ ಚಾಪೆ ಮೇಲೆ ಅವನೊಂದಿಗೆ

ಕುಳಿತು ರಹಸ್ಯವಾಗಿ ಮಾತುಕತೆ ಪ್ರಾರಂಭಿಸಿದ...''

''ರಂಗಾ.. ಕೊಲೆಯಾದ ರಾತ್ರಿ ನೀನು ಎಲ್ಲಾ ನೋಡಿದ್ದಿ ಅಂತ ನಮಗೆ ತಿಳಿದಿದೆ.. ನಿಜವ್ರೋ ಸುಳ್ಳೋ..''

''ಸುಳ್ಳು ಹೇಗೆ ಹೇಳಲಿ ಸಾಹೇಬ..ನಿಜ..''

''ನೀನು ಅವರನ್ನು ಮತ್ತೊಮ್ಮೆ ನೋಡಿದರೆ ಗುರಿತಿಸ್ತಿಯಾ ?''

''ಗುರುತಿಸುವದೇನು ಬಂತು ಸಾಹೇಬ ? ನನಗೆ ಅವರ ಹೆಸರು. ವಿಳಾಸ, ಜಾತಿ..ಕುಲ..ಗೋತ್ರ ಎಲ್ಲಾ ಗೊತ್ತು. ನೀನು ಹೂಂ ಅಂದರೆ ಅಲ್ಲಿಗೇ ಕರೆದುಕೊಂಡು ಹೋಗುತ್ತೇನೆ...''

''ಸರಿ ಹಾಗಾದರೆ...ನಡೆ..''

ರಂಗಾ ಎದ್ದು ನಿಲ್ಲುತ್ತಿದ್ದಂತೆಯೇ ಪೋಲೀಸ್ ಜೇಬಿನಿಂದ ಚೂರಿ ತೆಗೆದು ಅವನ ಹೊಟ್ಟೆಗೆ ಇರಿದ...ಆತ ಕೂಗಿಕೊಳ್ಳಬಾರದೆಂದು ಎಡಗೈಯಿಂದ ಬಾಯಿ ಮುಚ್ಚಿ..ಮತ್ತೊಂದು ಬಾರಿ ಚೂರಿಯಿಂದ ಇರಿದ. ರಂಗಾ ಸಂಕಟ ತಾಳಲಾರದೇ ವಿಲಿವಿಲಿ ಒದ್ದಾಡಿದ. ಅವನೊಡನೆ ಗುರುಮುರಿನಿ ಬಿದ್ದು..ಕೊನೆಗೆ ತಣ್ಣಗಾಗಿ ನೆಲಕ್ಕೊರಗಿದ...

ಅವನನ್ನು ಹಾಗೇ ನೆಲಕ್ಕೆ ಚೆಲ್ಲಿದ ಪೋಲೀಸ್ ಜೋರಾಗಿ ಉಸಿರು ತೆಗೆದುಕೊಂಡ.. ಆ ಜೋಡಿ ಎಲುಬಿನ ಮುದುಕ ಅವನನ್ನು ಬಹಳ ಸತಾಯಿಸಿದ. ಅಷ್ಟು ಶಕ್ತಿ ಅವನಿಗೆ ಎಲ್ಲಿಂದ ಬಂದಿತ್ತೋ ?...

ಒಂದು ನಿಮಿಷ ಬಿಟ್ಟು ಹೊರಗೆ ಬಂದ ಪೋಲೀಸ್ ಬಾಗಿಲು ಮುಚ್ಚಿ ಚಿಲಕ ಹಾಕಿ ಕೀಲಿ ಜಡಿದ. ಬೀಗದ ಕೈ ದೂರ ಎಸೆದು ಕೈ ಜಾಡಿಸಿಕೊಂಡು ಹೊರಟುಹೋದ ಆತಹೋದ ಎರಡು ನಿಮಿಷಕ್ಕೆ ಇನ್ನೊಂದು ದಿಕ್ಕಿನಿಂದ...ಮೇಜರ್ ಹೇಮಂತನ ದಂಡು ರಂಗನ ಆ ಮುರುಕು ಶೆಡ್ ಎದುರು ಬಂದು ನಿಂತಿತು.

''ಏನೋ ವಾಸನೆ ಸ್ವಲ್ಪ ಉಗ್ರ..''

ಹೇಮಂತ ಹೊರಟು ...ಜೋರಾಗಿ ಉಸಿರು ಎಳೆದುಕೊಂಡ. ಸುಷಮಾ ಅವನನ್ನು ಗಮನಿಸಿದಳು.

''ಏನದು ?..'' ನರರಕ್ತದ ವಾಸನೆ ಹಿಡಿದ ಹುಲಿಯಂತೆ...ಮೂಗು ಹಿಗ್ಗಿಸುತ್ತಿದ್ದೀರಿ?.. ಹೇಮಂತ ನಕ್ಕು ಆದರೆ

''ನನಗೆ ನಿಜವಾಗಿಯೂ ಮನುಷ್ಯ ಬಿಸಿರಕ್ತದ ವಾಸನೆ ಬರ್‍ತಾ ಇದೆ.''

''ಏನಂದಿರಿ ? ರಕ್ತದ ವಾಸನೆಯೇ? ಅದೂ ಇಲ್ಲಿ ?

ಶ್ಯಾಮಸುಂದರ ಅಚ್ಚರಿ ವ್ಯಕ್ತಪಡಿಸಿದ. ಅಶೋಕ ಸುಷಮಾರಿಗೆ ಆಶ್ಚರ್ಯವಾಗಲಿಲ್ಲ. ಇಂಥ ವಿಷಯಗಳು ಹೇಮಂತನ ಇಂದ್ರಿಯಗಳು ಯಾವ ರೀತಿ ಕೆಲಸ ಮಾಡುತ್ತವೆ ಎಂಬುದು ಅವರಿಗೆ ಗೊತ್ತು. ಹೀಗಾಗಿ ಅವರು ಕೂಡಲೇ ಜಾಗೃತರಾಗಿ ಕಾರ್ಯಮಗ್ನರಾದರು.

ಅಶೋಕ ಮುರುಕುಕೋಣೆಗೆ ಹಾಕಿದ ಬೀಗ ಪರೀಕ್ಷಿಸತೊಡಗಿದ. ಸುಷಮಾ ಕೋಣೆಯ ಪ್ರದಕ್ಷಿಣೆಗೆ ಪ್ರಾರಂಭಿಸಿದರು. ಒಂದೇ ಬಾರಿ ಎರಡು ಅಚ್ಚರಿಸೂಚಕ ಧ್ವನಿಗಳು ಹೊರಬಿದ್ದವು.

''ಮೇಜರ ಇಲ್ಲಿ ನೋಡಿ...ರಕ್ತ...''

ಒಂದು ಧನಿ ಅಶೋಕನದಾದರೆ..ಇನ್ನೊಂದು ಸುಷಮಾಳದು. ಆಕೆ ಕೋಣೆಯ ಹಿಂಭಾಗದಲ್ಲಿದ್ದಳು. ಅಶೋಕ ಮುಂಭಾಗದಲ್ಲಿದ್ದು ಎಲ್ಲರಿಗೂ ಹತ್ತಿರ ಇದ್ದುದರಿಂದಾಗಿ..ಮೊದಲು ಅವನತ್ತ ಆಕರ್ಷಿತರಾದರು. ಅಶೋಕ ಬಾಗಿಲಿಗೆ ತಗಲಿಸಿದ ಬೀಗದತ್ತ ತೋರಿಸಿದ. ಓಬೇರಾಯನ ಕಾಲದಲ್ಲಿಯ ಬೀಗವದು...ತುಕ್ಕು ಹಿಡಿದು..ಹಳತಾಗಿ ತನ್ನ ಮೊದಲಿನ ರೂಪ ಬಣ್ಣ ಎಲ್ಲಾ ಕಳೆದುಕೊಂಡಿದ್ದ ಬೀಗ..ಅದರ ಮೇಲ್ಭಾಗದಲ್ಲಿ ಕೆಂಪುಕಲೆ...''ಇನ್ನೂ ಹಸಿಯಾಗಿದೆ''..ಅಶೋಕನ ಮಾತಿಗೆ ಪುಷ್ಟಿ ಸಿಕ್ಕಿತು. ಹೇಮಂತ ಶ್ಯಾಮಸುಂದರ ಇಬ್ಬರೂ ಮುಟ್ಟಿನೋಡಿದಾಗ.

''ಮೇಜರ್..ಬೇಗಬನ್ನಿ..'' ಸುಷಮಾ ಮತ್ತೊಮ್ಮೆ ಕೂಗಿದಾಗ ಎಲ್ಲರೂ ಅವಳತ್ತ ಹೆಜ್ಜೆ ಹಾಕಿದರು..ಎಲ್ಲರಿಗಿಂತ ಮುಂದೆ ಹೇಮಂತ.. ಅವನೆಡೆ ನೋಡುತ್ತ ಸುಷಮಾ ಆತುರತೆಯಿಂದ ನುಡಿದಳು.

''ರಕ್ತದ ಎರಡುಮೂರು ಹನಿಗಳು. ಇನ್ನೂ ಹಸಿಯಾಗಿವೆ'' ಆಗಲೇ ಅಲ್ಲಿ ಇರುವೆ ಆಕ್ರಮಣ ಮಾಡುತ್ತಿವೆ...''

ಹೇಮಂತ ರಕ್ತದ ಹನಿ ನಿರೀಕ್ಷಿಸುತ್ತಾ ಅದರ ಸುತ್ತಲೂ ದೃಷ್ಟಿಹರಿಸಿದ. ಅಸ್ಪಷ್ಟ ಬೂಟಿನ ಗುರುತುಗಳು.

''ದೂರ..ದೂರ...ಇಲ್ಲಿ ಹೆಜ್ಜೆ ಗುರುತಿವೆ..ಬೂಟಿನವು.''

ಈಗ ಎಲ್ಲರೂ ಬೂಟಿನ ಗುರುತುಗಳತ್ತ ಆಸಕ್ತರಾದರು.

''ದಪ್ಪ..ದಪ್ಪ..ಅಗಲ ಹಿಮ್ಮಡಿಯ ಬೂಟು...ಅಂದರೆ...ಗೂರ್ಖಾ ಅಥವಾ ಪೋಲೀಸರು ಧರಿಸುವಂಥ ಬೂಟಿನವು...''

ಹೇಮಂತನ ದುರ್ಬೀನು ಕಣ್ಣುಗಳು ಅಳತೆ ಮಾಡಿದಾಗ ಬಾಯಿ ನುಡಿಯಿತು. ಶ್ಯಾಮಸುಂದರ ಬಾಯಿಯಿಂದ ಮಾತೇ ಹೊರಡುವಂತಿರಲಿಲ್ಲ. ಹೇಮಂತ ಅಗಾಧ ಬುದ್ಧಿಕೌಶಲ್ಯದ ಮುಂದಾತ ಮೂಕನಾಗಿದ್ದ.

''ಮಿಸ್ಟರ್ ಶ್ಯಾಮಸುಂದರ...ನಾವು ಕೂಡಲೇ ಕೋಣೆಬಾಗಿಲು ಮುರಿದು ಒಳಗೆ ಪ್ರವೇಶಿಸಬೇಕು.''

ಶ್ಯಾಮಸುಂದರ ಉತ್ತರ ಕೊಡದೇ ಮುಂಬಾಗಿನ ಬಳಿ ಬಂದ..ತಿಂದ್ನು..ಕೇವಲ ಒಂದೇ ಒಂದು ಅವನ ಒದೆ...ಮುರುಕು ಬಾಗಿಲ ಮೇಲೆ ಕಿರುಗುಡುತ್ತಾ ಬಾಗಿಲು ಹಿಂದಕ್ಕೊರಗಿತು...ತಕ್ಷಣ ಎಲ್ಲರ ದೃಷ್ಟಿ ಒಳಗೆ ಬೀಳುತ್ತಿದ್ದಂತೆ...ಕಣ್ಣುಗಳು ಅಲ್ಲೇ ಸ್ಥಿರವಾದವು...ಅಬ್ಬಾ ಎಂಥ ಭಯಂಕರ ದೃಷ್ಟಿ. ಬಾಗಿಲೆಡೆ ಹರಿದುಬಂದು. ತುಸುದೂರದ ತೆಗ್ಗಿನಲ್ಲಿ ಕೂಡಿದ ರಕ್ತ..

ಹೇಮಂತ ಬಾಗಿಲಿಗೇ ನಿಂತು ಶವದಸುತ್ತಲೂ ದಿಟ್ಟಿಸಿದ. ಅವೇ ದಪ್ಪ ಬೂಟಿನ ಹೆಜ್ಜೆ ಗುರುತುಗಳು ಧೂಳಿಯಿಂದ ತುಂಬಿದ ನೆಲದ ಮೇಲೆ ಮೂಡಿದ್ದವು.. ಸ್ಪಷ್ಟವಾಗಿ.. ಅತೀ ಸ್ಪಷ್ಟವಾಗಿ...ಪೋಲೀಸ್ ಅಥವಾ ಗುರ್ಖಾ ತೊಡುವಂಥ ಬೂಟಿನ ಗುರುತುಗಳು.

ಶ್ಯಾಮಸುಂದರ ಸಹ ಅವೇ ಗುರುತುಗಳನ್ನು ಗಮನಿಸಿದ. ''ಹೊರಗೆ ಮೂಡಿದಂಥವೇ ಬೂಟಿನ ಗುರುತುಗಳು..''

''ಹೌದು..ಇವು ಕೊಲೆಗಾರನ ಬೂಟಿನ ಗುರುತುಗಳು..ಕೊಲೆ ಮಾಡಿ ಹೊರಗೆ ಕೊಂಡಿ ಹಾಕಿ ಕೀಲಿ ಬಡಿಯುವ ಮುನ್ನ ಅವನ ಕೈಗೆ ಅಂಟಿದ್ದ ರಕ್ತ ಬೀಗಕ್ಕೆ ತಗಲಿದೆ. ಆತ ಹಿಂದೆ ಹಾಯ್ದು ಪಾರಾಗಿದ್ದಾನೆ. ಬಹುಶಃ ಅವನ ಪ್ಯಾಂಟಿಗೆ ರಕ್ತ ತಗಲಿರಬೇಕು. ಅದರ ಕಲ್ಪನೆ ಅವನಿಗಿಲ್ಲವೆಂದು ಕಾಣುತ್ತದೆ. ಆದರದೇ ಹನಿಗಳು

ಆತ ಬದಿಗೆ ಹಾಯ್ದು ಹೋಗುವಾಗ ಪ್ರಧಾನಿಯಾಗಿ ಬಿದ್ದಿವೆ.''

''ನಿಮ್ಮ ಮಾತು ನಂಬಲರ್ಹವಾಗಿದೆ ಮೇಜರ್..ಇವು ಹತ್ತು ನಂಬರಿನ ಬೂಟುಗಳು..ಖಂಡಿತ ಅಪರಾಧಿ ಆರು ಫಾಟ್‌ಗೆ ಸ್ವಲ್ಪ ಕಡಿಮೆ ಎತ್ತರದವನಾಗಿದ್ದಾನೆ.''

''ಶ್ಯಾಮಸುಂದರ ನೀವು ತಪ್ಪಿದಿರಿ...ಕೊಲೆಗಾರ ಐದುಫೀಟು ಐದು ಇಂಚಿನಿಂದ ಹೆಚ್ಚು ಎತ್ತರವಾಗಿಲ್ಲ. ಆತ ತೊಟ್ಟ ಬೂಟುಗಳು ಖಂಡಿತ ಹತ್ತು ನಂಬರಿನವು..ಆದರೆ ಆತನ ಕಾಲಳತೆ ಒಂಭತ್ತು ನಂಬರಿನದು. ಆತ ನಮಗೆ ಮೋಸ ಮಾಡಲಿಕ್ಕೆ ಈ ರೀತಿ ಒಂದು ನಂಬರ ಹೆಚ್ಚಿನ ಬೂಟು ತೊಟ್ಟಿರಬಹುದು.. ಅಥವಾ ಆತ ಎಲ್ಲಿಂದ ಬೂಟು ತಂದನೋ ಅವು ಮೊದಲೇ ಹೆಚ್ಚಿರಬೇಕು..''

''ನೀವು ಇಷ್ಟು ನಿಖರವಾಗಿ ಹೇಗೆ ಹೇಳುತ್ತೀರಿ?''

''ಶ್ಯಾಮ್..ಸ್ವಲ್ಪ ಗುರುತುಗಳನ್ನು ದಿಟ್ಟಿಸಿನೋಡಿ. ಮಧ್ಯಭಾಗ ಸ್ಪಷ್ಟವಾಗಿ ಮೂಡಿದೆ. ಹಿಂದೆ ಮತ್ತು ಮುಂದೆ ಅಸ್ಪಷ್ಟ..ಅಂದರೆ ಮಧ್ಯಭಾಗದಲ್ಲಿ ಭಾರ ಹೆಚ್ಚು..ಹಿಂದೆ ಹಾಗೂ ಮುಂದೆ ಕಡಿಮೆ. ಹಿಂಬದಿ ಸಹ ನೋಡಿ ಒಂದು ಬೆರಳಿನಷ್ಟು ಮಸಕಾಗಿದೆ..ಅದೇ ರೀತಿ ಮುಂಭಾಗ ಕೂಡ. ಇದರ ಅರ್ಥ ನಿಮಗಾಗಿರಲು ಸಾಕು. ದೊಡ್ಡ ಬೂಟುಗಳಲ್ಲಿ ಚಿಕ್ಕ ಪಾದಗಳು..''

''ಹೇಮಂತ, ನಿಮ್ಮ ಬಗ್ಗೆ ನನಗೆ ಅಸೂಯೆಯಾಗುತ್ತಿದೆ..ನಿಮ್ಮ ಕಣ್ಣು ಕಿತ್ತಿ ನಾನು ಅಂಟಿಸಿಕೊಳ್ಳಬೇಕು ಅನಿಸುತ್ತದೆ.

''ಹಾಂ. ಆರೀತಿ ಮಾಡಬಹುದು.. ನಾ ಸತ್ತಮೇಲೆ..ಏಕೆಂದರೆ ನಾನು ನನ್ನ ಕಣ್ಣುಗಳನ್ನು ದಾನ ಮಾಡಿದ್ದೇನೆ.''

''ಮೇಜರ್..ಇದೇನಿದು?.. ನಾನು ಹಾಸ್ಯ ಮಾಡಿದರೆ ನೀವು...''

''ನಾನು ಹಾಸ್ಯಮಾಡ್ತಾ ಇಲ್ಲ. ನಿಜ ಹೇಳ್ತಾ ಇದೇನೆ. ಸತ್ತ ಮೇಲೆಯೇ ದೇಹದಿಂದ ಏನು ಪ್ರಯೋಜನ..ನಮಗಾಗದಿದ್ದರೂ ಬೇರೆ ಯಾರಿಗಾದರೂ ಈ ಇಂದ್ರಿಯಗಳು ಉಪಯೋಗವಾದರೆ ನಷ್ಟವೇನು? ದೃಷ್ಟಿ ಕಳೆದುಕೊಂಡವರಿಗೆ ದೃಷ್ಟಿದಾನ ನಮ್ಮಿಂದ ಲಭಿಸುತ್ತದೆ. ಒಂದು ದೃಷ್ಟಿಯಿಂದ ಇದೂ ಪುಣ್ಯದ ಕೆಲಸವೇ ಅಲ್ಲವೇ?''

ಉತ್ತರವೇನು ಕೊಡಬೇಕು ಎಂಬುದೇ ಶ್ಯಾಮಗೆ ತಿಳಿಯದಂತಾಯಿತು.

ಜೀವಿಸಿದ್ದಾಗಲೀ ದೇಶಕ್ಕಾಗಿ...ದೇಶದ ಜನತೆಗಳು. ಸಮಾಜಕ್ಕಾಗಿ ದುಡಿಯಲು ಕಂಕಣಕಟ್ಟಿದ ಮೇಜರ್..ಸತ್ತಮೇಲೂ ತನ್ನ ನಶ್ವರ ದೇಹದಿಂದ ಸತ್ಕಾರ್ಯವಾಗಲಿ ಎಂದು ಬಯಸುತ್ತಿದ್ದಾನೆ.

ಧನ್ಯ-ಧನ್ಯ-ಹೇಮಂತ..

ಇಂಥ ಸುಪುತ್ರನಿಗೆ ಜನ್ಮ ನೀಡಿದ ಭಾರತಮಾತೆಯೇ ಧನ್ಯಳು. ಏಕೆ ? ಒಮ್ಮೆಲೆ ಮೌನ ತಾಳಿದಿರಲ್ಲ - ಏನಾಯ್ತು ?

"ಏನಿಲ್ಲ..ಈ ಬಡಪಾಯಿನ್ನ ಏಕೆ ಕೊಲೆಮಾಡಿದರು ಅಂತಯೇ . ಇದ್ದೆ.. ಇವನ ಕೊಲೆಯಿಂದ ಅವರಿಗಾದ ಲಾಭವಾದರೂ ಏನೋ?"

"ತುಂಬಾ ಲಾಭವಿದೆ ಶ್ಯಾಂ ಜಯಂತ ಕೊನೆಸಮಯದಲ್ಲಿ ಈತ ಅಲ್ಲಿದ್ದ ಎಂದು ನಮಗೆ ತಿಳಿದಿದೆ...ಬಹುಶಃ ಈತ ಕೊಲೆಗಾರನನ್ನು ಅವನ ಸಂಗಡಿಗರನ್ನು ಕಂಡಿರಬಹುದು.. ನಾವು ಇವರನ್ನು ಕಂಡು ಮಾತನಾಡಿದರೆ ರಹಸ್ಯವೆಲ್ಲಿ ಬಯಲಾಗುತ್ತೋ ಅಂತ ಹೆದರಿದ. ಕೊಲೆಗಾರ ನಮಗಿಂತ ಮೊದಲೇ ಬಂದು ಇವನನ್ನು ಮುಗಿಸಿದ್ದಾನೆ. ಬೇಕಾದರೆ ನೀವು ದೇಹ ಮುಟ್ಟಿ ನೋಡಿ..ಮೈ ಇನ್ನೂ ಬಿಸಿ ಇರಲು ಸಾಧ್ಯವಿದೆ"...

ಅತ್ತಿತ್ತ ನೋಡುತ್ತ ಎಚ್ಚರಿಕೆಯಿಂದ ರಂಗನ ದೇಹದ ಬಳಿ ಸರಿದ ಶ್ಯಾಮಸುಂದರ ಕೆಳಗೆ ಬಾಗಿ ಮುಟ್ಟಿ ನೋಡಿದ. ಶಾಖ ಇನ್ನೂ ಇತ್ತು ಬಹಳವೆಂದರೆ ಕೊಲೆಯಾಗಿ ಹತ್ತು ಹದಿನೈದು ನಿಮಿಷಗಳಾಗಿರಬೇಕು ಅಷ್ಟೇ. "ಹೌದು ಮೇಜರ.. ಕೊಲೆಯಾಗಿ ಬಹಳ ಸಮಯ ಕಳೆದಿಲ್ಲ, ಅತೀ ಹೆಚ್ಚು ಅಂದರೆ ಹದಿನೈದು ಇಪ್ಪತ್ತು ನಿಮಿಷಗಳಾಗಿರಬಹುದು."

ಶವದ ಮೇಲೆ ಒಂದು ದೃಷ್ಟಿ ಬೀರಿ ನುಡಿದ ಹೇಮಂತ "ಈ ಬಾರಿ ನೀವು ನಿಜ ನುಡಿದಿರುವಿರಿ..ನಿಮ್ಮ ಊಹೆ ಸರಿಯಾಗಿದೆ." ಶ್ಯಾಮಸುಂದರಿನ ಎದೆ ಅವನ ಪ್ರಶಂಸೆಯಿಂದಾಗಿ ಬೀಗಿತು ಹೆಮ್ಮೆಯಿಂದ.

"ಅರೆ ಇದೇನು...ಕೈಯಲ್ಲಿ ಏನೋ ಇದೆಯಲ್ಲ?" ಅಶೋಕ ಕೆಳಗೆ ಬಾಗಿ ರಂಗನ ಬಲಗೈ ಮುಷ್ಠಿ ಬಿಡಿಸಿದ.

ಕಾಕೀ ಬಟ್ಟೆಯ ತುಂಡು

ಅದರೊಂದಿಗೆ ಪಳಪಳ ಹೊಳೆಯುವ ಬ್ರಾಸ್‌ನಲ್ಲಿ ಸಿದ್ಧವಾದ

ನಂಬರುಗಳು..

ಹೇಮಂತನ ಕಣ್ಣುಗಳು ಅರಳಿದವು.

"ನನ್ನ ಮಾತು ನಿಜವಾಯಿತು. ಕೊಲೆಗಾರ ಗೂರ್ಖಾ ಅಥವಾ ಪೋಲೀಸ್ ಬೂಟು ಧರಿಸಿದ್ದ ಎಂದು...ರಂಗಾ ಅವನಿಗೆ ಶರಣಾಗತನಾಗಿಲ್ಲ.. ಅವನ ಜೊತೆ ಸಂಘರ್ಷ ಮಾಡಿದ್ದಾನೆ. ಅದರ ಫಲವಾಗಿ ಅವನ ಭುಜದ ಮೇಲಿರುವ ನಂಬರಿನ ಜೊತೆ ಬಟ್ಟೆ ಸಹ ಕಿತ್ತು ಬಂದಿದೆ.. ಈ ನಂಬರು ಆ ವ್ಯಕ್ತಿಯ ಹೆಸರು ವಿಳಾಸ ನಮಗೆ ಸುಲಭವಾಗಿ ತಿಳಿಸಿಕೊಡುತ್ತದೆ..ಮಿಸ್ಟರ್ ಶ್ಯಾಮಸುಂದರ..ಇನ್ನು ಮುಂದಿನ ಕೆಲಸ ನಿಮಗೆ ಸೇರಿದ್ದು..ಹೇಮಂತ ಹೊರನಡೆದ - ಅವನ ಹಿಂದೆ ಅಶೋಕ ಮತ್ತು ಸುಷಮಾ ಸಹ...

*

(6)

ಮಧ್ಯರಾತ್ರಿ ಸಮೀಪಿಸಿತ್ತು. ಕಪ್ಪುಬಣ್ಣದ ಅಂಬಾಸಡರ್ ಕಾರು ಕಾಳರಾತ್ರಿಯ ಕಪ್ಪನ್ನು ತನ್ನ ದೀಪದ ಬೆಳಕಿನಿಂದ ಸೀಳುತ್ತ ಬಂದು ಹೊಸದಾಗಿ ನಿರ್ಮಾಣಗೊಂಡಿರುವ ಭವ್ಯಬಂಗಲೆಯೆದುರು ಬಂದು ನಿಂತಿತು..ಬಂಗಲೆ ಕೆಲಸ ಇನ್ನೂ ಅಲ್ಪಸ್ವಲ್ಪ ಇರುವುದರಿಂದ ಅಲ್ಲಲ್ಲಿ ಉಸುಕು..ಇಟ್ಟಿಗೆ..ಗಾರೆ..ಕಟ್ಟಿಗೆ ರಾಶಿ...ಬಿದ್ದಿದ್ದವು. ಅದೆಲ್ಲದರ ಉಸ್ತುವಾರಿ ನೋಡುಕೊಳ್ಳುತ್ತಿದ್ದ ಕಾವಲುಗಾರ ಓಡಿ ಬಂದು ವಂದಿಸಿದ. ಹಿಂದಿನ ಸೀಟಿನತ್ತ ಯಾರು ಕುಳಿತಿದ್ದರೋ ಗೊತ್ತಿಲ್ಲ..ಕೇವಲ ಧ್ವನಿ ಮಾತ್ರ ಕೇಳಿಸುತ್ತಿತ್ತು.

"ಗೋಡೌನಿನ ಬೀಗದಕೈ ಡ್ರೈವರ್‌ಕಡೆ ಕೊಟ್ಟು ನೀನು ಮನೆಗೆ ಹೋಗು. ಇಂದು ರಾತ್ರಿ ನಿನಗೆ ರೆಸ್ಟ್..ಬೆಳಗ್ಗೆ ಬಾ.."

ಮರುಮಾತನಾಡದೆ ಕಾವಲುಗಾರ ಗೊಂಚಲಲ್ಲಿದ್ದ ಎರಡುಮೂರು ಬೀಗದಕೈಗಳಿದ್ದ ಗೊಂಚಲನ್ನು ಡ್ರೈವರ್ ಕೈಗೆ ನೀಡಿ ಹೊರಟುಹೋದ.

ಎರಡುಮೂರು ನಿಮಿಷ ಮೌನ..ಅದರ ನಂತರ ಬಂತು ಆದೇಶ. "ಡ್ರೈವರ್..ನೀನೂ ಮನೆಗೆ ಹೋಗು..ನಾಳೆ ಬೆಳಿಗ್ಗೆ ಒಂಬತ್ತಕ್ಕೆ ಬಾ..ನಾನು ಇಲ್ಲೇ ನಿನಗಾಗಿ ಕಾಯ್ತಿರತೇನೆ..."

ಗೋಣು ಹಾಕಿದ ಡ್ರೈವರ್ ಕಾರಿನಿಂದಿಳಿದು ಕತ್ತಲೆಯಲ್ಲೇ ಒಂದೆಡೆ

ನಡೆದುಹೋದ. ನಾಲ್ಕಾರು ನಿಮಿಷ ಹಾಗೇ ಕುಳಿತಿದ್ದ ವ್ಯಕ್ತಿ ಹಿಂಬಾಗಿಲು ತೆರೆದು ಹೊರಗೆ ಬಂದಿತು. ಸಾಮಾನ್ಯ ಗಾತ್ರ..ಎತ್ತರ..ಮೈಮೇಲೆ ಬೆಲೆಬಾಳುವ ಸೂಟು.. ಎಡಗೈಲಿ ಮೂರು ಬಲಗೈಲಿ ಎರಡು ವಜ್ರದುಂಗುರಗಳು. ಎಡಗೈ ಮುಂಗೈಗೆ ಸೀಕೋ ಗೋಲ್ಡನ್‌ವಾಚ್..ಕಾರ್ ಡೋರ್‌ಲಾಕ್ ಮಾಡಿ ಮನೆ ಮುಂದಿದ್ದ ಗೇಟ್‌ನಲ್ಲಿ ಹಾಯ್ದು ಒಳಭಾಗದಲ್ಲಿ ಕಾಲಿಟ್ಟಿತು. ತುಸುದೂರ ಹೋಗುತ್ತಿರಲು ಎಡಭಾಗದಲ್ಲಿ ಕಟ್ಟಿದ ಇಪ್ಪತ್ತು ಅಡಿ ಉದ್ದ ಇಪ್ಪತ್ತು ಅಡಿ ಅಗಲದ ಗೋಡೌನ್ ಕಣ್ಣಿಗೆ ಬಿತ್ತು. ಅದರ ಬೀಗ ತೆರೆದು ಒಳಗೆ ಕಾಲಿಟ್ಟ ವ್ಯಕ್ತಿ ಬಾಗಿಲು ಮುಚ್ಚಿ ಚಿಲುಕ ಹಾಕಿ..ತಕ್ಷಣ ಮತ್ತೆ ಮೆಲುವಾಗಿ ಚಿಲುಕ ತೆಗೆಯಿತು..ಆಮೇಲೆ ದೀಪವಾರಿಸಿ ಬಾಗಿಲಿಗೆ ಬಂದು ನಿಂತಿತು ಮೈಯೆಲ್ಲ ಕಿವಿಯಾಗಿ..ಎಡಗೈ ದೀಪದಗುಂಡಿ ಅದುಮಿ ಆರಿಸಿತು...

ಇದೇ ರೀತಿ ಹತ್ತು ನಿಮಿಷ ನಿಂತಿರಲು ಸಾಕು..ನಿರೀಕ್ಷೆ ಫಲ ನೀಡಿತು. ಹೊರಗಡೆ ಯಾರೋ ಮೆಲ್ಲನೆ ನಡೆದು ಬರುತ್ತಿರುವ ಸದ್ದು. ಒಬ್ಬರಲ್ಲ ಇಬ್ಬರದು... ಹೆಜ್ಜೆಸಪ್ಪಳ ಬಾಗಿಲಹತ್ತಿರ ಬಂದು ನಿಂತಿತು. ಗುಸುಗುಸು ಮಾತು. ಮೆಲ್ಲನೆ ಬಾಗಿಲು ದೂಡಿದಂತಾಗಿ ಅದು ತೆರೆದುಕೊಂಡಿತು. ಆಶ್ಚರ್ಯದ ಉದ್ಗಾರಗಳು ಒಳಗಿದ್ದ ವ್ಯಕ್ತಿಬಾಗಿಲ ಹಿಂದೆ ಮರೆಯಾಯಿತು. ಹೊರಗಡೆ ಇದ್ದ ಒಬ್ಬ ಅನಂತರ ಅವನ ಹಿಂದೆ ಇನ್ನೊಬ್ಬ ಈ ರೀತಿ ಇಬ್ಬರು ತೆರೆದ ಬಾಗಿಲಿಂದ ಒಳಗೆ ಬಂದರು.

ಧಡಾರನೇ ಬಾಗಿಲು ಮುಚ್ಚಿಕೊಂಡಿತು.

ಅವರಿಬ್ಬರ ಕಂಠದಿಂದ ಒಂದೇ ಬಾರಿ ಭಯದ ಚೀತ್ಕಾರ ಹೊರಟಿತು. ''ಯಾರು? - ಯಾರದು ?'' .. ಕಂಪಿಸುವ ಕಂಠದಲ್ಲಿ ಒಬ್ಬ ಕೇಳಿದ.

''ನಿನ್ನ ಎರಡನೇ ಅಪ್ಪ. ಒಬ್ಬ ಪ್ರಾಣ ಕೊಟ್ಟರೆ ಇನ್ನೊಬ್ಬ ಪ್ರಾಣ ತೆಗೆಯುವ ಎರಡನೇ ಅಪ್ಪ ನಾನು. ಅಶೀಲಾ..

ಅದರ ಹಿಂದೆಯೇ ಚಿಕ್ಕ ಆದರೆ ಪ್ರಕಾಶಮಾನವಾದ ಬ್ಯಾಟರಿಬೆಳಕು ಆ ಇಬ್ಬರ ಮುಖದ ಮೇಲೇ ಬೀಳುತ್ತಿದ್ದಂತೆ..ಸಂತಸದ ಉದ್ಗಾರ.

''ನನಗೆ ಗೊತ್ತಿತ್ತು ನೀವಿಬ್ಬರೂ ಮನೆಗೆ ಬರುತ್ತೀರೆಂದು..ನಾನೆಲ್ಲಿಗೆ ಹೋಗುತ್ತೇನೆ ಅಂತ ತಿಳಿಯುವ ಆಸೆ ಅಲ್ವಾ?..ನೋಡಿ ನಿಮ್ಮ ಆಪ್ಪ ನಿಮ್ಮನ್ನ ಎಲ್ಲಿಗೆ ತಂದಿತು ಅಂತ ?..ಇಂದು ನಿಮ್ಮಾಶೆಗೂ ಅಂತ್ಯ ನಿಮಗೂ ಅಂತ್ಯ...''

ಅವರಿಬ್ಬರ ಮುಖಗಳೂ ಬಿಳಿಚಿಕೊಂಡವು. ಥರಥರ ಕಂಪಿಸುತ್ತಾ ನೆಲಕ್ಕೆ

894.8143
DES N98

ಕುಸಿದರು.

''ಬೇಡಿ..ಬೇಡಿ ಸರ್.. ನಿಮಗೆ ಕೈಮುಗಿಯುತ್ತೇನೆ...ನನ್ನ ಕೊಲ್ಬೇಡಿ.''

''ನಿನ್ನ ಕೊಲ್ಲದೇ ಹಾಗೇ ಬಿಡಲು ಹೇಗೇ ಸಾಧ್ಯ ? ನೀನೇ ಹೇಳು ಡ್ರೈವರ್..ನಿನಗೆ ನಾನು ತಿಂಗಳಿಗೆ ಮೂರುಸಾವಿರ ಸಂಬಳ.. ಒಂಭತ್ತನೂರು ಭತ್ಯೆ ಕೊಟ್ಟು ಹಬ್ಬಹರಿದಿನಗಳಿಗೆ ಒಂದು ಸಾವಿರ ಕೊಡುತ್ತೇನೆ. ಇಷ್ಟು ಸಂಬಳ ಸಾಮಾನ್ಯ ಡ್ರೈವರ್ ಆರು ತಿಂಗಳ ಸಂಬಳಕ್ಕೆ ಸಮಾನ. ಇದಲ್ಲದೆ ಇರಲು ಪುಕ್ಕಪ್ಪ ಮನೆ..ಫರ್ನೀಚರ್..ಇಷ್ಟಿದ್ದೂ ನೀನು ನನ್ನ ಹಿಂದೆ ಬಿದ್ದು ನಾನ್ಯಾರೆಂದು ಗುರುತಿಸಲು ಪ್ರಯತ್ನಿಸಿದೆ ಅಲ್ಲವೆ ?''

72582CR

''ನನ್ನಿಂದ ತಪ್ಪಾಯ್ತು..ನನ್ನ ಕ್ಷಮಿಸಿಬಿಡಿ.'' ಡ್ರೈವರ್ ಗೋಗರೆದ..

''ನೀನು..ವಾಚ್‌ಮನ್...ಒಂದೂವರೆ ವರ್ಷಗಳ ಹಿಂದೆ ಬಟ್ಟಿ ಸೆರೆ ಮಾರುತ್ತಿದ್ದೆ. ನಿನ್ನ ವಿಷಪೂರಿತ ಸೆರೆಕುಡಿದು ಹದಿನೆಂಟು ಜನ ಸತ್ತರು.. ನೀನು ತಲೆಮರೆಸಿಕೊಂಡು ಓಡಿದೆ..ಪೋಲೀಸರು ಬೇಟೆ ನಾಯಿಯಂತೆ ಬೆನ್ನಟ್ಟಿದರು. ಅಡಗಲು ಯಾವ ಜಾಗೆಯೂ ಇಲ್ಲವಾಗಿ ಕೊನೆಗೆ ನೀನೇ ವಿಷಮಿಶ್ರಿತ ಸೆರೆ ಕುಡಿದೆ. ಸಾಯಲೆಂದು.. ಆಗ ನಿನ್ನ ಉಳಿಸಿ..ಗುಪ್ತವಾಗಿ ತಂದು ಇಲ್ಲಿರಿಸಿದವ ನಾನು..ನಿನಗೆ ಪುನರ್ಜನ್ಮ ಕೊಟ್ಟವನಾನು...ತಿನ್ನಲು ಕುಡಿಯಲು ನಿನಗೆ ಏನೂ ಕಡಿಮೆಯಿಲ್ಲ. ನೀನೇ ಈ ಬಂಗಲೆಗೆ ಯಜಮಾನ. ಬೇಕೆಂದಾಗ ಸುಖಪಡಲು ಹೆಣ್ಣುಗಳೂ ಸಹ ನಿನಗೆ ದೊರೆಯುತ್ತಿರುವಾಗ..ಅನ್ನವಿಟ್ಟ ತಟ್ಟೆಗೇ ಛೇದ ಮಾಡಲು ''ನೀನು ನೋಡಿದೆಯಲ್ಲ?''.. ಅಂ..ಏಕೆ?..ಹೇಳು..ಹೂಂ..?

''ಸ್ವಾಮಿ..ನಾನು ಮುಠ್ಠಾಳ..ಹೊಲಸುತಿನ್ನೋ ಕೆಲಸಾ ಮಾಡಿದೆ ಕ್ಷಮಿಸಿ..''

''ನೀವಿಬ್ಬರೂ ಕ್ಷಮೆಗೆ ಅಯೋಗ್ಯರು. ಆದರೂ ನಿಮಗೆ ಕೊನೆ ವಾರ್ನಿಂಗ್ ಕೊಟ್ಟು ಕ್ಷಮಿಸಿದ್ದೇನೆ..''

ಇದ್ದಲ್ಲಿಂದಲೇ ಅಡ್ಡಬಿದ್ದ ಅವರು ಸಂತೋಷದಿಂದ ಉದ್ಗರಿಸಿದರು.

''ತುಂಬಾ ಉಪಕಾರವಾಯ್ತು..ತುಂಬಾ ಉಪಕಾರವಾಯ್ತು''

''ಅದಕ್ಕಾಗಿ ಮೊದಲು ನೀವಿಬ್ಬರೂ ನನಗಾಗಿ ಒಂದು ಕೆಲಸ ಮಾಡಬೇಕು.''

''ಹೇಳಿಸಾರ್...ಏನದು ?'' ಇಬ್ಬರೂ ಒಕ್ಕೊರಲಿನಿಂದ ಹೇಳಿದರು.

''ಈ ಬಂಗಲೆ ಹಿಂದೆ ಡ್ರೈನೇಜ್ ಪಾಯಿಪ್ ಹಾದುಹೋಗಿದೆ. ಅದರ ಆರನೆ ನಂಬರ್ ಹೋಲಿನಲ್ಲಿ ಕೆಳಗೆ ಇಳಿಯಬೇಕು. ಒಂದೂ ಮುಕ್ಕಾಲು ಗಂಟೆಗೆ ಸರಿಯಾಗಿ ಕಪ್ಪು ಬಣ್ಣದ ಪ್ಲಾಸ್ಟಿಕ್‌ನಲ್ಲಿ ಸುತ್ತಿದ ವಸ್ತುವೊಂದು ಹರಿಯುವ ನೀರಿನಲ್ಲಿ ತೇಲಿಬರುತ್ತದೆ. ಅದನ್ನೆತ್ತಿಕೊಂಡು ಮೇಲೆ ಬರಬೇಕು..ತಿಳೀತಾ..''

''ಸರಿಸರ್. ನಾವು ತಮಗಾಗಿ ಖಂಡಿತಾ ಈ ಕೆಲಸ ಮಾಡುತ್ತೇವೆ''

''ಮೂರ್ಖರೇ..ಈ ಕೆಲಸ ನೀವು ನನಗಾಗಿ ಮಾಡುತ್ತಿಲ್ಲ..ನಿಮ್ಮ ಜೀವ ಉಳಿಸಿಕೊಳ್ಳಲು ಮಾಡುತ್ತಿದ್ದೀರಿ..ನೆನಪಿನಲ್ಲಿಟ್ಟುಕೊಳ್ಳಿ..ಹೂಂ..ನಡೆಯಿರಿ.''

ಬ್ಯಾಟರಿಬೆಳಕು ನೆಲದ ಮೇಲೆ ಚೆಲ್ಲುತ್ತಾ ಆ ರಹಸ್ಯಮಯ ವ್ಯಕ್ತಿ ಮುಂದೆ ನಡೆಯಿತು. ಅವರಿಬ್ಬರೂ ಅವನನ್ನು ಹಿಂಬಾಲಿಸಿದರು. ಮುಂದಿದ್ದ ವ್ಯಕ್ತಿ ಎಷ್ಟು ಜಾಗ್ರತವಾಗಿತ್ತೆಂದರೆ ಅಪ್ಪಿತಪ್ಪಿ ಕೂಡ ಬ್ಯಾಟರಿಬೆಳಕು ಪಾದದಿಂದ ಮೇಲೆ ಬೀಳುತ್ತಿರಲಿಲ್ಲ. ಕೇವಲ ನೆಲ..ಬೂಟಿನ ಮುಂಭಾಗ ಅಷ್ಟೇ..

ಬಂಗಲೆಯಿಂದ ಹೊರಬಂದ ಅವರು..ಬಂಗಲೆಯನ್ನು ಎಡಕ್ಕೆ ಮಾಡಿಕೊಂಡು ಸುತ್ತುಹಾಕಿ ಹಿಂಭಾಗಕ್ಕೆ ಬಂದರು. ಟಾರ್‌ರೋಡಿಗೆ ಹೊಂದಿ ಪಕ್ಕದಲ್ಲಿ ಹಾಯ್ದುಹೋದ ಡ್ರೈನೇಜ್..ಹತ್ತು ಫೂಟು ವ್ಯಾಸದ ಬೃಹದಾಕಾರದ ಸಿಮೆಂಟು ಪಾಯಿಪ್‌ಗಳನ್ನು ಮಹಾನಗರದ ಸುತ್ತೂಕಡೆಯಿಂದ ಬಂದ ನೀರು..ಚರಂಡಿ ನೀರು ಎಲ್ಲಾ ಸೇರಿ ಭೋರ್ಗಯುತ್ತಾ ಮುಂದೆ ಸಮುದ್ರ ಹೇರುತ್ತಿತ್ತು. ಬ್ಯಾಟರಿ ಬೆಳಕು ಮುಚ್ಚಿದ ಮ್ಯಾನ್‌ಹೋಲ್ ಮೇಲೆ ಮುಂದೆ ಹೋದ ವ್ಯಕ್ತಿ ಆರನೇ ನಂಬರ್ ಮ್ಯಾನ್‌ಹೋಲೆತ್ತಿ ಬಂದು ನಿಂತಿತು. ಡ್ರೈವರ್ ಹಾಗೂ ವಾಚ್‌ಮನ್ ಇಬ್ಬರು ಮುಂದೆ ಬಂದು ಎರಡೂ ಕೈಗಳಿಂದ ಮ್ಯಾನ್‌ಹೋಲ್ ಮೇಲಿರುವ ಕಬ್ಬಿಣದ ಮುಚ್ಚಳ ಎತ್ತಿ ಪಕ್ಕಕ್ಕಿಟ್ಟರು. ಕೆಳಗಡೆ ಹರಿಯುವ ನೀರಿನ ಭೋರ್ಗರತೆ ಮತ್ತಷ್ಟು ಜೋರಾಗಿ ಕೇಳಿಸತೊಡಗಿತು. ಹೂಂ. ಒಬ್ಬೊಬ್ಬರಾಗಿ ಏಣಿಯಿಂದ ಕೆಳಗಿಳಿಯಿರಿ. ಬ್ಯಾಟರಿಬೆಳಕು ಚೆಲ್ಲಿದ ಕೂಡಲೇ ಒಳಗಡೆ ಇರುವ ಕಬ್ಬಿಣದ ಏಣಿ ಕಣ್ಣಿಗೆ ಬಿತ್ತು. ಇಬ್ಬರೂ ಮೆಲ್ಲಮೆಲ್ಲನೆ ಒಬ್ಬರ ನಂತರ ಒಬ್ಬರು ಏಣಿಯಿಂದ ಕೆಳಗಿಳಿದರು. ನೀರಲ್ಲಿ ನಿಲ್ಲಲು ಆಗುತ್ತಿರಲಿಲ್ಲ. ನೀರಿನ ಸೆಳೆತ ಅವರನ್ನು ದೂರ ದೂರ ಎಳೆದೊಯ್ಯಲು ಪ್ರಯತ್ನಿಸುತ್ತಿತ್ತು. ಪ್ರಯಾಸದಿಂದ ನೀರಲ್ಲಿ ನಿಂತುಕೊಂಡರು. ಮೇಲಿದ್ದ ವ್ಯಕ್ತಿ ಬ್ಯಾಟರಿ ಬೆಳಕನ್ನು ಆಗಾಗ ನೀರಿನ ಮೇಲೆ

ಚೆಲ್ಲುತ್ತಿದ್ದ..ಐದಾರು ನಿಮಿಷಗಳು ಕಳೆಯುವಷ್ಟರಲ್ಲಿ ಕಪ್ಪು ವಸ್ತುವೊಂದು ತೇಲಿ ಬಂದಿತು. ಅದನ್ನು ಹಿಡಿದು ಇಬ್ಬರು ಪುನಃ ಏಣಿಯಿಂದ ಮೇಲೇರತೊಡಗಿದರು. ಮುಂದಿದ್ದ ಡ್ರೈವರ್ ಮೇಲಿನವರೆಗೂ ಬಂದ. ಕೈಲಿದ್ದ ಕಪ್ಪುವಸ್ತು ಮೇಲಿದ್ದ ವ್ಯಕ್ತಿ ಕೈಗೆ ಕೊಟ್ಟ...ಅದೇ ಕ್ಷಣ..ಅವನ ಎದೆಮೇಲೆ ಮೇಲಿದ್ದ ವ್ಯಕ್ತಿ ಬಲವಾಗಿ ಪ್ರಯೋಗ ಮಾಡಿದ..''ಹಾ'' ಎಂದು ನರಳಿದ ಆತ..ಏಣಿ ಹಿಡಿದ ಕೈ ಜಾರಿತು. ಆತ ಕೆಳಗೆ ಬೀಳುತ್ತಿದ್ದಂತೆ ಅವನ ಹಿಂದಿದ್ದ ವಾಚ್‌ಮನ್ ಸಹ ಅವನೊಂದಿಗೆ ಡಮಾರ್ ಎಂದು ನೀರಿಗೆ ಬಿದ್ದ..ಅಟ್ಟಹಾಸ ಮಾಡಿ ನಕ್ಕ ಮೇಲಿದ್ದ ವ್ಯಕ್ತಿ ಅಬ್ಬರಿಸಿತು.

''ನೀವೆಲ್ಲರೂ ವಿಶ್ವಾಸದ್ರೋಹಿಗಳು..ನಿಮ್ಮನ್ನುನಂಬಲಿಕ್ಕೆ ಆಗದು..ನಿಮಗೆ ಶಿಕ್ಷೆ ಕೊಡಲೇಬೇಕು. ನೀವು ಜೀವಂತವಾಗಿದ್ದರೆ ಇಂದಿಲ್ಲ ನಾಳೆ ನನಗೆ ಅಪಾಯ ತಂದೇ ತರುತ್ತೀರಿ..ಅದಕ್ಕಾಗಿ..''

ಮುಂದೆ ಮಾತನಾಡಿದ್ದು ಮೇಲಿದ್ದ ವ್ಯಕ್ತಿ ಕೈಯಲ್ಲಿದ್ದ ರಿವಾಲ್ವರ್. ಕೇವಲ ಎರಡು ಗುಂಡುಗಳು ಮಾತ್ರ...ಅದಕ್ಕುತ್ತರವಾಗಿ ಬಂದದ್ದೂ ಸಹ ವಿಕಾರ ಕಂಠದಲ್ಲಿ ಹೊರಟ ಚೀತ್ಕಾರಗಳು.

ತೃಪ್ತಿಯ ಉಸಿರು ಬಿಟ್ಟು ಮ್ಯಾನ್‌ಹೋಲ್ ಮುಚ್ಚಿ ಕಪ್ಪು ವಸ್ತುವನ್ನು ಎತ್ತಿಕೊಂಡು ಮುನ್ನಡೆಯಿತು ಆ ರಹಸ್ಯಮಯಿ ವ್ಯಕ್ತಿ..ಪುನಃ..ತನ್ನ ಗಮ್ಯ ಸ್ಥಾನದತ್ತ...ಈ ಬಾರಿ ನಿಶ್ಚಿಂತೆಯಿಂದ..ಬಂಗಲೆಯ ಅದೇ ಗೋಡೌನ್..ಬಾಗಿಲು ಮುಚ್ಚಿ ದೀಪಬೆಳಗಿಸಿದ ವ್ಯಕ್ತಿ ಸುತ್ತಲೂ ಒಂದು ಬಾರಿ ದಿಟ್ಟಿಸಿತು. ಸಿಮೆಂಟ್ ಚೀಲಗಳು..ಮರದ ಹಲಗೆಗಳು..ಗುದ್ದಲಿ..ಸಲಿಕೆ..ಕಬ್ಬಿಣಬುಟ್ಟಿ ಮುಂತಾದ ಸಾಮಾನುಗಳು. ಚಿಕ್ಕಚಿಕ್ಕ ಪೆಟ್ಟಿಗೆಗಳು..ಪೆಟ್ಟಿಗೆಗಳಲ್ಲಿ ಮೊಳೆ ಸ್ಕ್ರೂ..ಸ್ಕ್ರೂಡ್ರೈವರ್ ಮುಂತಾದ ಸಲಕರಣೆಗಳು. ಆ ಪೆಟ್ಟಿಗೆಗಳ ಬಳಿ ಸರಿದ ವ್ಯಕ್ತಿ ಎಲ್ಲಾ ಪೆಟ್ಟಿಗೆ ಎತ್ತಿ ಬದಿಗಿಟ್ಟು. ಕೆಳಗಡೆಯಿದ್ದ ಕರಿಕಲ್ಲನ್ನು ಬೂಟುಗಾಲಿನ ತುದಿಯಿಂದ ಒತ್ತಿತು.. ಗರಗರ ಸದ್ದು..ಸಿಮೆಂಟು ಚೀಲಗಳಿದ್ದ ನೆಲದ ಭಾಗ ನಾಲ್ಕಡಿ ಪಕ್ಕಕ್ಕೆ ಸರಿಯಿತು...ಕೆಳಗಡೆ ಮೆಟ್ಟಿಲುಗಳು..ಗೋಡೆಬದಿ ದೀಪ ಆರಿಸಿ ಬ್ಯಾಟರಿ ಬೆಳಕನ್ನು ಮೆಟ್ಟಿಲು ಮೂಲಕ ಕೆಳಗಿಳಿಯಿತು ವ್ಯಕ್ತಿ..ಅಲ್ಲಿಂದ ಸುರಂಗಮಾರ್ಗ..ಒಮ್ಮೆ ಎಡಕ್ಕೆ ಒಮ್ಮೆ ಬಲಕ್ಕೆ ಸಾಗಿ ನಂತರ ಎದುರುಬಂದ ಗೋಡೆಗೆ ಅಂಟಿದ್ದ ಬಿಳಿಗುಂಡಿ ಅದುಮಿತು..ಒಂದರ್ಧ ನಿಮಿಷ ಪ್ರತೀಕ್ಷೆ..ಮುಂದಿನ ಕ್ಷಣ ತಲೆಮೇಲಿನ ಕಲ್ಲಿನ ಭಾಗ ಸದ್ದಿಲ್ಲದೇ ಸರಿಯಿತು. ಝಗಾ ಎಂದು ಪ್ರಕಾಶ. ಮೇಲೆ ಬಂದಾಗ ಎದುರುಗೊಂಡಳು ಹದಿನೆಂಟು ಇಪ್ಪತ್ತು ವಯಸ್ಸಿನ ಅಪ್ಸರೆ.

''ಹಲೋ ಡಾಲೀ..ಹೌಆರ್‌ಯು ?'' ಅವಳ ತುಂಬಿದ ಬಲಯುತ ಪಕ್ಷದ ಮೇಲೆ ಬಲಗೈಯಿಂದ ಚಪ್ಪರಿಸುತ್ತ ಕೇಳಿದ ಆತ. ಡಾಲಿಯ ಮುಖದ ಮೇಲೊಂದು ಸಮ್ಮೋಹಿನಿ ಬೀರುವ ನಗೆ ತೇಲಿತು.,ಮೈ ಬಳಕಿತು..ವ್ಯಕ್ತಿಯ ಕಣ್ಣುಗಳು ಮಿಂಚಿದವು. ಅಲಗುತ್ತಿದ್ದ ಡಾಲಿಯ ತುಂಬಿದೆದೆ ಒಂದು ಸೀಸೆ ಸ್ಕಾಚ್ ಹೊಟ್ಟೆ ಸೇರಿದಂತಾಯಿತು. ಕೈಲಿದ್ದ ವಸ್ತುವನ್ನು ಹಾಗೇ ಕೈಬಿಟ್ಟು ಡಾಲಿಯನ್ನು ಬಿಗಿದಪ್ಪಿದ. ಇಬ್ಬರೂ ಒಬ್ಬರನ್ನೊಬ್ಬರು ತಬ್ಬಿಕೊಂಡು ಮಂಚದತ್ತ ನಡೆದರು. ಅತೀ ವೈಭವಶಾಲೀ ರೀತಿಯಿಂದ ಶೃಂಗರಿಸಿದ ಹದಿನೈದು X ಮೂವತ್ತು ಅಡಿಯ ಹಾಲ್..ಅದು..ಒಂದು ಮೂಲೆಯಲ್ಲಿ ಡಬಲ್‌ಕಾಟ್. ಅದಕ್ಕೆದುರಾಗಿ ಮೂಲೆಯಲ್ಲಿ ಕಲರ್ ಟೀವಿ. ಮಧ್ಯದಲ್ಲಿ ಸೋಫಾ ಟಿಪಾಯ್. ಇನ್ನೊಂದು ಮೂಲೆಯಲ್ಲಿ ವಾರ್ಡ್‌ರೋಬ್.

ಡಾಲಿಯನ್ನು ಮಂಚಕ್ಕೆಸೆದ ವ್ಯಕ್ತಿ ರಿಮೋಟ್ ಕಂಟ್ರೋಲರ್‌ದಿಂದ ಟಿ.ವಿ.ಆನ್ ಮಾಡಿತು..ಬಣ್ಣದ ಟೀವಿಯಲ್ಲೊಂದು ಬ್ಲೂಫಿಲ್ಮ್..ಅದನ್ನು ನೋಡುತ್ತಾ ಡಾಲಿಯ ಮೈಮೇಲಿನ ಒಂದೊಂದೇ ಬಟ್ಟೆ ಕಳಚಿ ನಗ್ನಳಾದ ಅವಳ ದೇಹದ ತುಂಬ ಮುತ್ತಿನ ಮಳೆಗರೆದು ಉದ್ರೇಕಗೊಂಡ ಆ ವ್ಯಕ್ತಿ ಅವಳ ದೇಹವನ್ನು ಆಕ್ರಮಿಸಿತು...ಟಿ.ವಿ.ಯೊಂದಿಗೆ ಹಾಲ್‌ನ ದೀಪ ಸಹ ನಂದಿತು..ಮುಂದೆ ಹಾಲ್ ತುಂಬ..ಕಾಮಕೇಳಿಯ..ಕೇಕೆ ತುಂಬಿಕೊಂಡು ವಾತಾವರಣವೆಲ್ಲ ಕಾಮಮಯವಾಯಿತು..

ಅರ್ಧಗಂಟೆಯ ನಂತರ...

ದೀಪಬೆಳಗಿಸಿ ಎದ್ದ ವ್ಯಕ್ತಿ ನೇರವಾಗಿ ಬಾತ್‌ರೂಮ್ ಪ್ರವೇಶಿಸಿತು. ಸ್ನಾನಮಾಡಿ ಬೇರೆ ಬಟ್ಟೆ ಧರಿಸಿ ಬಂದು ಟೆಲಿಫೋನಿನತ್ತ ಹೆಜ್ಜೆ ಹಾಕಿ ರಿಸೀವ್ ಕೈಗೆತ್ತಿಕೊಂಡಿತು. ಡಾಲಿ ಬಂದು ಅವನ ಪಕ್ಕದಲ್ಲಿ ನಿಂತಳು.

''ಹಲೋ..ಹಲೋ..ಯಾರು? ರುಸ್ತುಂ ?..ಮ್ಯಾನೇಜರಿಗೆ ಕೊಡು.''

ಕೆಲಸೆಕೆಂಡು ಮೌನ. ನಂತರ ನುಡಿಯಿತು.

''ಅರ್ಧಗಂಟೆಯಲ್ಲಿ ಬರುತ್ತೇನೆ. ಎಲ್ಲಾ ವ್ಯವಸ್ಥೆ ಮಾಡು.'' ರಿಸೀವರ್ ಕೆಳಗಿರಿಸಿ ಕಪ್ಪುಬಣ್ಣದ ವಸ್ತುವನ್ನು ತಂದು ಮಂಚದ ಮೇಲೆ ಇರಿಸಿತು. ಬ್ಲೇಡಿನಿಂದ ಮೇಲಿದ್ದ ಪ್ಲಾಸ್ಟಿಕ್ ಕತ್ತರಿಸಿ ಕಿತ್ತೆಸೆದಾಗ ಕಣ್ಣಿಗೆ ಬಿದ್ದದ್ದು ಚಿಕ್ಕದಾದ ಒಂದು ಬ್ರೀಫ್‌ಕೇಸ್..ಅದನ್ನು ತೆರೆಯಲ್ಪಟ್ಟಿದ್ದಂತೆ ಸಂತಸದ ಕೇಕೆ ಆ ವ್ಯಕ್ತಿಯ ಮುಖದಿಂದ

ತಾನೇ ತಾನಾಗಿ ಹೊರಬಂತು.

[7]

''ಗೋಲ್ಡನ್ ಟಾವರ್ ಕ್ಲಬ್ ಮಧ್ಯರಾತ್ರಿ ಮೀರುತ್ತಿದ್ದಂತೇ ಹೆಚ್ಚೆಚ್ಚು ರಂಗೇರುತ್ತಿತ್ತು. ಐಯ್ಯಾಶೀ ಶ್ರೀಮಂತ ಲೋಲರು ತಮ್ಮ ತಮ್ಮ ಸಂಗಾತಿಗಳೊಂದಿಗೆ ಹಣದ ಹೊಳೆ ಹರಿಸಿ ಕಾಮದ ಹೊಳೆಯಲ್ಲಿ ಮೀಯಲು ಆಗಮಿಸತೊಡಗಿದ್ದರು. ಕ್ಲಬ್‌ನ ಪ್ರಸಿದ್ಧ ಕೆಬರೆ ಡ್ಯಾನ್ಸರ್ ಮಿಸ್ ಪೆಮೀಲಾಳ ನರ್ತನ ಪ್ರಾರಂಭವಾಗುತ್ತಿದ್ದಂತೆ ಕ್ಲಬ್‌ಹಾಲ್ ಚಕಾಚಕ್ ತುಂಬಿಹೋಗುತ್ತಿತ್ತು. ಒಂದೊಂದು ಟೇಬಲ್‌ಗೆ ಒಂದು ರಾತ್ರಿ ಬೆಲೆ ಐದು ಸಾವಿರ ರೂಪಾಯಿ ತಿಂಡಿ ಊಟ ಪಾನೀಯದ ಬಿಲ್ಲು ಬೇರೆ. ಒಟ್ಟು ಐದು ಐದೂವರೆ ಲಕ್ಷಕ್ಕೆ ಕಡಿಮೆ ಇಲ್ಲದಷ್ಟು ಆದಾಯ ಆ ಮೇಜುಗಳಿಂದ. ಹೀಗಾಗಿ ಗೋಲ್ಡನ್ ಟಾವರ್‌ನ ಮಾಲಿಕ ದಿನೇಶ್‌ಬಾಬು ಶಹರದ ಅತ್ಯಂತ ಧನಾಢ್ಯ ವ್ಯಕ್ತಿಯಾಗಿದ್ದ.

ಪೆಮೀಲಾಳ ನೃತ್ಯ ಪ್ರಾರಂಭವಾಗಲು ಹದಿನೈದು ನಿಮಿಷಗಳು ಮಾತ್ರ ಉಳಿದಿರುವಂತೆ ಕ್ಲಬ್ ಮ್ಯಾನೇಜರ್ ಸ್ಟೇಜ್‌ಗೆ ಬಂದ. ಎಲ್ಲೆಡೆ ಒಮ್ಮಿಂದೊಮ್ಮೆಲೆ ಮೌನ ವ್ಯಾಪಿಸಿತು...ಒಂದುಬಾರಿ ಕೆಮ್ಮಿ ಗಂಟಲು ಸರಿಪಡಿಸಿಕೊಂಡ ಆತ ಮಾತನಾಡಿದ.

ಮಹನೀಯರೇ ಮತ್ತು ಮಹಿಳೆಯರೇ...ಪೆಮೀಲಾಳ ನೃತ್ಯಕ್ಕೆ ಮೊದಲು ಒಂದು ಚಿಕ್ಕ ಕಾರ್ಯ್ಕಕ್ರಮ. ಕ್ಲಬ್ ಏರ್ಪಡಿಸಿದ ಪ್ರತಿಯೊಂದು ಕಾರ್ಯಕ್ರಮವೂ ತಮ್ಮ ಸುಖ-ಸಂತೋಶಕ್ಕೆ ಹೆಚ್ಚಿನ ಮೆರಗು ಕೊಡುತ್ತಾ ಬಂದಿದೆ. ಇಂದೂ ಸಹ ಅಷ್ಟೇ..

ಇದೀಗ ಅರ್ಧಗಂಟೆ ಮೊದಲು ನಮ್ಮ ಬಳಿ ಒಬ್ಬ ವರ್ತಕರು ಬಂದಿದ್ದಾರೆ. ಅವರ ಬಳಿ ಒಂದು ಡಝನ್ ಬ್ರಾಗಳಿವೆ. ಎಲ್ಲಾ ಕಪ್ಪುಬ್ರಾಗಳು..ಅದು ಇಂದಿನ ಅತೀ ಹೆಚ್ಚು ಖ್ಯಾತಿ ಪಡೆದ ಚಿತ್ರನಟಿ ಮಿಸ್ ಶಬನಮ್‌ಳದು..ಮಿಸ್ ಶಬನಮ್ ಎಂಥ ಸೆಕ್ಸೀನಟಿ ಎಂಬುದು ತಮಗೆ ಗೊತ್ತು. ಅವಳ ಹೆಸರು ಕಿವಿಗೆ ಬಿದ್ದರೆ ಇಂದಿನ ತರುಣರ ಉಸಿರಿನ ವೇಗ ಹೆಚ್ಚಾಗುತ್ತದೆ. ರಕ್ತಕ್ಕೆ ಕಾವೇರುತ್ತದೆ. ಅಂಥ ಸೆಕ್ಸೀ ನಟಿಯ ಬ್ರಾ ಇಂದು..ಇಲ್ಲಿ..ಹರಾಜಿಗೆ ಇಡಲ್ಪಡುತ್ತವೆ..ಇಚ್ಛೆ ಉಳ್ಳವರು ಬೆಲೆ ಏರಿಸಿಕೊಂಡು ಆ ಬ್ರಾವನ್ನು ತಮ್ಮ ತಮ್ಮ ಪ್ರಿಯತಮೆಯರಿಗೆ ತೊಡಿಸಿ ಆನಂದ ಪಡಬಹುದು. ಇಂಥ ಕಾರ್ಯಕ್ರಮ ಪ್ರಪ್ರಥಮಬಾರಿ ನಾವು ಏರ್ಪಡಿಸಿದ್ದೇವೆ.

ಅದೂ ತಮ್ಮೆಲ್ಲರ ಸಂತೋಷಕ್ಕಾಗಿ..ನೆನಪಿಡಿ. ತಾವು ನೂರಾರು ಸಂಖ್ಯೆಯಲ್ಲಿದ್ದೀರಿ. ದುಃಖದ ಸಂಗತಿ ಎಂದರೆ ನಮ್ಮ ಬಳಿ ಇರುವ ಬ್ರಾದಸಂಖ್ಯೆ ಕೇವಲ ಹನ್ನೆರಡು.. ಅವನ್ನು ಪಡೆಯುವ ಹನ್ನೆರಡು ಜನ ಸುದೈವಿಗಳು ತಮ್ಮಲ್ಲಿ ಯಾರು ಎಂಬುದನ್ನು ನಿರ್ಧರಿಸಲು ನಾನು ಅಸಮರ್ಥ..ಏನೇ ಆಗಲಿ..ಎಲ್ಲರಿಗೂ ಬೆಸ್ಟ್ ಆಫ್ ಲಕ್...

ಚಪ್ಪಾಳೆ ಸದ್ದಿನೊಂದಿಗೆ ವಿಚಿತ್ರ ಬಗೆಯ ವೇಷ ಧರಿಸಿದವನೊಬ್ಬ ತನ್ನ ಕೈಯಲ್ಲಿದ್ದ ಕೋಲಿಗೆ ಸಾಲಾಗಿ ತೂಗುಹಾಕಿದ ಹನ್ನೆರಡು ಕಪ್ಪು ಬ್ರಾಗಳನ್ನು ಹಿಡಿದುಕೊಂಡು ನರ್ತಿಸುತ್ತ ಬಂದ. ಒಂದೆರಡು ನಿಮಿಷ ನರ್ತಿಸಿ ಆತ ಒಂದೆಡೆ ನಿಲ್ಲುತ್ತಿದ್ದಂತೆ ಮತ್ತೊಬ್ಬ ಕೈಯಲ್ಲಿ ಮೈಕ್ ಹಿಡಿದು ಸ್ಟೇಜ್ ಪ್ರವೇಶಿಸಿ ಘೋಷಿಸಿದ...

''ಹಾಂ ಈಗ ಬ್ರಾದ ಮಾರಾಟ ಪ್ರಾರಂಭ... ಮೊದಲ ಬೆಲೆ ಒಂದು ಸಾವಿರ ರೂಪಾಯಿ...ಕೇವಲ ಒಂದು ಸಾವಿರ ರೂಪಾಯಿ..ಬ್ಯಾಲೆ ಚಿತ್ರನಟಿ ಶಬನಮ್‌ಳ ಬ್ರಾ...ಕೇವಲ ಒಂದು ಸಾವಿರಕ್ಕೆ..ಇಷ್ಟವಿದ್ದವರು ಬೆಲೆ ಏರಿಸಿ ಕೊಳ್ಳಬಹುದು...ನೆನಪಿಡಿ ಬ್ರಾ ಇದ್ದದ್ದು ಕೇವಲ ಹನ್ನೆರಡು.

ಸವಾಲು ಪ್ರಾರಂಭವಾಯಿತು. ಒಂದೊಂದು ಬ್ರಾ ಒಂದೊಂದು ಬೆಲೆಗೆ ಮಾರಾಟವಾಗತೊಡಗಿದವು. ಜನರಿಗೆ ಶನಬಮ್ ಅಂದರೆ ಅದೇನು ಹುಚ್ಚೋ ಅವಳ ಬ್ರಾ ಪಡೆಯಲು ಮುಂದೆ ಬಂದರು. ಒಂದು ಬ್ರಾ ಅರವತ್ತು ಸಾವಿರಕ್ಕೆ ಮಾರಾಟವಾದರೆ ಮತ್ತೊಂದು ಎಪ್ಪತ್ತೈಸಾವಿರಕ್ಕೆ. ಇದೇ ರೀತಿ ಬೆಲೆ ಏರುತ್ತ ಏರುತ್ತಾ ಹೋಗಿ ಕೊನೆಗೆ ಹನ್ನೆರಡನೆ ಬ್ರಾ ಇಪ್ಪತ್ತೈದು ಲಕ್ಷಕ್ಕೆ ಮಾರಾಟವಾಯಿತು.

ಮಾರಾಟ ಮುಗಿದ ಮೇಲೆ ಬೀರ್-ವಿಸ್ಕಿ-ಶಾಂಪೇನಿನ ಹೊಳೆ..ಮುಕ್ತಕಂಠದ ಕೇಕೆಗಳ ಮಧ್ಯೆ ಸ್ಟೇಜಿಗೆ ಬಂದಳು ಕ್ಯಾಬರೆಡ್ಯಾನ್ಸರ್ ಮಿಸ್ ಫೆಮಿಲಾ...ಚಪ್ಪಾಳೆ..ಸಿಳ್ಳು..ಅಶ್ಲೀಲ ಕೂಗು..ನಂತರ ಒಮ್ಮಿಂದೊಮ್ಮೆಲೆ ಎಲ್ಲೆಡೆ ಶಾಂತಿ..ಮೌನ. ಉಸಿರು ಬಿಗಿಹಿಡಿದು ಎಲ್ಲರೂ ನರ್ತಿನೆಯತ್ತ ತಮ್ಮೆಲ್ಲ ದೃಷ್ಟಿ ಕೇಂದ್ರೀಕರಿಸಿದರು. ಅರ್ಧಗಂಟೆಯ ನರ್ತನ...ನರ್ತನ ಮುಗಿಯುತ್ತಾ ಬಂದಾಗ ಪೆಮೀಲ್ಲಾಳ ದೇಹದ ಮೇಲೆ ಕೇವಲ ಎರಡೇ ಪೀಸ್ ಬಟ್ಟೆಗಳಿದ್ದವು. ಎದೆಯಮೇಲೆ ಮೂರಿಂಚಿನ ಪಟ್ಟಿ..ಹೊಕ್ಕಳ ಕೆಳಗೆ ಎರಡಿಂಚಿನ ಪಟ್ಟಿಮಾತ್ರ...ನೃತ್ಯ ಮುಗಿದಾಗ ಒಂದು ನಿಮಿಷ ಆ ಎರಡೂ ಪಟ್ಟಿಗಳಿರಲಿಲ್ಲ. ಜನ್ಮಜಾತ ಅವಸ್ಥೆಯಲ್ಲಿ ಎರಡು ಮೂರು ಸಾರಿ ಸುತ್ತುಹಾಕಿದ ಆಕೆ ದೇವರು ತನಗಿತ್ತ ಅಮೂಲ್ಯ ದೇಹ ಸಂಪತ್ತನ್ನೂ ಎಲ್ಲರಿಗೂ ತೋರಿಸಿ ಸ್ಟೇಜ್‌ನಿಂದ ಮಾಯವಾದಳು.

ಬಿಸಿಯುಸಿರು ಬಿಡುತ್ತಾ ತಮ್ಮ ತಮ್ಮ ಜೊತೆಗಾರರನ್ನು ತಬ್ಬಿಕೊಂಡೇ ಜನ ಹೊರಬೀಳತೊಡಗಿದಾಗ...ಸಮಯ ರಾತ್ರಿ ಮೂರೂವರೆ.

[8]

ಬೆಳಗಿನ ಎಂಟು ಗಂಟೆ ಸಮಯ. ಹೇಮಂತ ನಗರದ ಪ್ರಸಿದ್ಧ ಕ್ರಿಸ್ತಮಂದಿರದ ಬಳಿ ಸುತ್ತುಹೊಡೆಯುತ್ತಿದ್ದ. ಕಪ್ಪುಗಂಟೆ ಎಂಬ ಶಬ್ದ ರಾತ್ರಿಯಿಡೀ ಅವನನ್ನು ಯೋಚನೆಯ ಕಡಲಲ್ಲಿ ಮುಳುಗಿಸಿತ್ತು. ಕಪ್ಪುಗಂಟೆ ಅಂದರೆ ಏನದರ ಅರ್ಥ ? ಒಂದು ಗಂಟೆ ತನ್ನ ಸಂಗಡಿಗರಾದ ಅಶೋಕ ಹಾಗೂ ಸುಷಮಾರೊಂದಿಗೆ ಚರ್ಚಿಸಿದ್ದ. ಆ ಚರ್ಚೆಯ ಫಲವೇ ಬೆಳಗಿನ ಎಂಟುಗಂಟೆಗೆ ಮುಂಚೆ ಚರ್ಚ್ ಸುತ್ತಮುತ್ತ ತಿರುಗುತ್ತಿದ್ದುದು. ಸಾಮಾನ್ಯವಾಗಿ ದೇವಾಲಯಗಳಲ್ಲಿ ಗಂಟೆ ಬಾರಿಸುವುದು ಪೂಜಾ ಸಮಯದಲ್ಲಿ. ಅಂದರೆ ಶುಭಸಮಯದಲ್ಲಿ..ಅಶುಭ ಸಮಯದಲ್ಲಿ ಬಾರಿಸುವ ಗಂಟೆ ಎಂದರೆ ಚರ್ಚಿನಲ್ಲೊಂದೇ...ಕ್ರಿಸ್ತಧರ್ಮಕ್ಕೆ ಸೇರಿದವರು ತೀರಿಕೊಂಡರೆ ಅದರ ಸಮಾಚಾರ ಪಾದ್ರಿ ಕಿವಿಗೆ ಬಿದ್ದರೆ ಅದರ ಬಗ್ಗೆ ಸೂಚನೆ ನೀಡಲು ಚರ್ಚಿನಲ್ಲಿ ಗಂಟೆ ಬಾರಿಸಲಾಗುತ್ತಿತ್ತು...ಅದು ಪ್ರಾರ್ಥನಾ ಸಮಯದ ಗಂಟೆಯಲ್ಲ. ಅಸಮಯದ ಅಶುಭಗಂಟೆ..ಅದಕ್ಕೇನಾದರೂ ಜಯಂತ ಕಪ್ಪುಗಂಟೆ ಎಂದು ಕರೆದಿರಬಹುದೆ ?..ಎಂಬ ಯೋಚನೆ...ಅದಕ್ಕೆ ಪುಷ್ಟಿ ಕೊಡುವಂತೆ ಕೆಲವೊಂದು ವಿಷಯಗಳೂ ಸಹ ಶ್ಯಾಮಸುಂದರನಿಂದ ತಿಳಿದು ಬಂದಿದ್ದವು. ಬಾಂಬ್‌ಸ್ಫೋಟದಲ್ಲಿ ತೀರಿಕೊಂಡ ಖ್ಯಾತ ಸ್ಟೇಜ್ ಡ್ಯಾನ್ಸರ್ ರತ್ನಮಾಲಾ ಹಾಗೂ ಅವಳ ಜೊತೆಯಲ್ಲಿ ಕಳೆದ ಎಂಟುಹತ್ತು ದಿನಗಳಿಂದ ಇರುತ್ತಿದ್ದ ಸುಂದರತರುಣ ಆಗಾಗ ಚರ್ಚಿನ ಬಳಿ ಕಂಡುಬಂದಿದ್ದರು...ಜಯಂತಸಹ ನಾಲ್ಕಾರು ಬಾರಿ ಚರ್ಚ್ ಸುತ್ತುತ್ತಿದ್ದುದನ್ನು ಕಂಡವರು ಹಲವರಿದ್ದರು. ಹೀಗೇ ಚರ್ಚಿಗೂ ಚರ್ಚ್‌ನಲ್ಲಿ ಬಾರಿಸುವ ಅಶುಭಗಂಟೆಗೂ..ರತ್ನಮಾಲಾ..ಅವಳ ಸಂಗಡಿಗ..ಅಲ್ಲದೇ ಜಯಂತ..ಚರ್ಚ್ ಸುತ್ತಲೂ ಪ್ರದಕ್ಷಣೆ ಹಾಕುವುದಕ್ಕೂ ಏನೋ ಸಮ್ಮಂಧವಿದೆ ಎಂದು ಯೋಚಿಸಿದ ಹೇಮಂತ. ಅದರ ಪರಿಣಾಮವಾಗಿಯೇ ಆತ ಚರ್ಚ್ ಕಡೆಗೆ ಆಕರ್ಷಕವಾಗಿದ್ದ. ಬೆಳಿಗ್ಗೆ ಎದ್ದು ಮುಖ ತೊಳೆದು ಫ್ರೆಶ್ ಆದ ಹೇಮಂತ, ವ್ಯಾಯಾಮ ಮಾಡಿ ಮುಗಿಸಿ ವಾಕಿಂಗ್ ಹೊರಟವ ಅಲ್ಲಲ್ಲಿ ಸುತ್ತಿ ಸುಳಿದು ಹೆದ್ದಾರಿಗೆ ಹೊಂದಿ ಇರುವ ಢಾಭಾಕ್ಕೆ ಬಂದಾಗ ಏಳು ಸಮೀಪಿಸಿತ್ತು. ಅಲ್ಲಿಯ ಸರದಾರಜಿ ಜೊತೆ ಮಾತನಾಡುತ್ತಾ ಪುರಿ ತಿಂದು ಚಹ ಕುಡಿದಿದ್ದ. ನಂತರ ತನ್ನ ಬಳಿ ಇದ್ದ ರತ್ನಮಾಲಾ..ಅವಳ ಸಂಗಡಿಗ..ಅಲ್ಲದೇ

ಜಯಂತನ ಫೋಟೋ ಅವನಿಗೆ ತೋರಿಸಿ ಅವರ ಬಗ್ಗೆ ವಿಚಾರಿಸಿದ್ದ. ಅವನಿಂದಲೇ ತೆರೆದು ಬಂದ ವಿಷಯ ಒಂದೇ...ರತ್ನಮಾಲಾ ತನ್ನ ಸಂಗಾತಿ ಜೊತೆಗೆ ಆಗಾಗ ಇತ್ತ ಬರುತ್ತಿದ್ದಳು. ಒಂದೆರಡು ಬಾರಿ ಚರ್ಚ್ ಹತ್ತಿರ ಸಹ ಆಕೆಯನ್ನು ಕಂಡದ್ದುಂಟು. ಜಯಂತ ಯಾವಾಗಲೂ ಅವರ ಹಿಂದಿಂದೆಯೇ ತಿರುಗುತ್ತಿದ್ದ. ಆದರೆ ಒಂದು ದಿನ ಆತ ಅವರೊಂದಿಗೆ ಮಾತನಾಡಿರಲಿಲ್ಲ.

ಇದರಿಂದಾಗಿ ಒಂದು ವಿಷಯ ಸ್ಪಷ್ಟವಾಗಿತ್ತು. ಜಯಂತ ಅವರ ಬಗ್ಗೆ ಸಂಶಯ ತಾಳಿದ್ದ...ಅವರ ಚಟುವಟಿಕೆ ಕಂಡುಹಿಡಿಯಲು ಅವರಿಗೆ ತಿಳಿಯದಂತೆ ಅವರನ್ನು ಅನುಸರಿಸುತ್ತಿದ್ದ...

ಸರದಾರಜಿಗೆ ವಂದಿಸಿದ ಆತ ನೇರವಾಗಿ ಚರ್ಚ್‌ಕಡೆ ನಡೆದ. ಮುಂಜಾನೆಯ ಪ್ರಾರ್ಥನೆ ನಡೆಯುವ ಸಮಯ. ಪಾದ್ರಿ ತಯಾರಿ ನಡೆಸಿದ ಸಮಯಕ್ಕೆ ಸರಿಯಾಗಿ ಹೇಮಂತ ಅವರ ಮುಂದಿದ್ದ...ಅಪರಿಚಿತ ಹೇಮಂತ. ಪಾದ್ರಿ ಅವನ ಬಗ್ಗೆ ಯಾವದೇ ರೀತಿಯ ಅವ್ಯವಹಾರ ನಡೆಸಲಿಲ್ಲ. ವಿನೀತ ಭಾವದಿಂದ ಅವನನ್ನು ಸ್ವಾಗತಿಸಿ ಕುಳ್ಳಿರಿಸಿದ. ಅವನ ಪರಿಚಯ ಕೇಳಿದ. ಬಂದ ವಿಷಯ ವಿಚಾರಿಸಿದ.

ಮೇಜರ್ ಅವರಿಗೆ ತನ್ನ ನಿಜವಾದ ಪರಿಚಯ ತಿಳಿಸಲಿಲ್ಲ. ತಾವು ಒಬ್ಬ ಪೋಲೀಸ್ ಅಧಿಕಾರಿ ಎಂದು ಮಾತ್ರ ತಿಳಿಸಿ ತನ್ನ ಬಳಿಯಿದ್ದ ಮೂರೂ ಫೋಟೋ ಅವರ ಮುಂದಿರಿಸಿ ಕೇಳಿದರು.

''ಫಾದರ್ - ಇವರ ಪರಿಚಯ ತಮಗಿದೆಯೇ ?''

ಫಾದರ್ ಮೂರೂ ಫೋಟೋ ಸೂಕ್ಷ್ಮವಾಗಿ ಪರೀಕ್ಷಿಸಿ ನುಡಿದರು.

''ಸಾರಿ ಮಾಯ್ ಸನ್. ನನಗೆ ಯಾರ ಪರಿಚಯವೂ ಇಲ್ಲ. ನನ್ನ ಬಳಿ ಇವರು ಒಂದೂ ಬಾರಿ ಬಂದಿಲ್ಲ.''

ಮೇಜರ ಅವರೊಂದಿಗೆ ವಾದಕ್ಕಿಳಿಯದೇ ವಂದಿಸಿ ಹೊರನಡೆಯುತ್ತಿದ್ದಂತೆ ಎದುರುಬಂದ ವ್ಯಕ್ತಿ ಫಾದರ್‌ಗೆ ಯಾವದೋ ಸೂಚನೆ ನೀಡಿತು. ಅದನ್ನು ಕೇಳುತ್ತಿದ್ದಂತೆ ಫಾದರ್ ಮುಖ ವಿವರ್ಣವಾಯಿತು. ಅವರ ವರ್ತನೆ ಹೇಮಂತ್‌ಗೆ ಅರ್ಥವಾಗಲಿಲ್ಲ..ಆತ ಮರಳುತ್ತಿದ್ದಂತೆ ಅವನ ಹಿಂದೆಯೇ ಬಂದಿತು ಚರ್ಚಿನ ಗಂಟೆ.''

ಕಪ್ಪುಗಂಟೆ,

ಕಪ್ಪುಗಂಟೆಯ ನಿನಾದ ಕಿವಿಗೆ ಬೀಳುತ್ತಿದ್ದಂತೆ ಕ್ರಿಶ್ಚಿಯನ್ ಧರ್ಮದ ವ್ಯಕ್ತಿಗಳು ಒಬ್ಬೊಬ್ಬರಾಗಿ ಚರ್ಚಿನತ್ತ ನಡೆಯತೊಡಗಿದರು...ಸತ್ತವರು ಯಾರೋ ಚರ್ಚಿಗೂ ಅವರಿಗೂ ಸಮ್ಮಂಧವೇನೋ ಎನ್ನುತ್ತ ಮುಂದೆ ಸಾಗಿದ ಹೇಮಂತ..ಎಷ್ಟೋ ಪ್ರಯತ್ನಪಟ್ಟು ದೂರ ಓಡಿಸಲು ಪ್ರಯತ್ನಿಸಿದರೂ ಒಂದು ವಿಷಯ ಮಾತ್ರ ಅವನ ಮೆದುಳು ಕೊರೆಯುವದನ್ನು ಬಿಡಲಿಲ್ಲ. ಈ ಚರ್ಚಿಗೂ ಕಪ್ಪುಗಂಟೆಗೂ ಏನೋ ಸಮ್ಮಂಧ ಇದೆ ಎಂದು.

ಮೇಜರ ರೂಮಿಗೆ ಬರುತ್ತಿದ್ದಂತೆ ಅಶೋಕ ಹಾಗೂ ಸುಷಮಾ ನೆಮ್ಮದಿಯ ಉಸಿರು ಬಿಟ್ಟರು. ಬೆಳಿಗ್ಗೆ ಅವರಿಬ್ಬರೂ ಎದ್ದಾಗ ಹೇಮಂತ ಇರಲಿಲ್ಲ. ಇಲ್ಲೇ ಎಲ್ಲೋ ಹೋಗಿರಬೇಕು. ಅಥವಾ ಕೆಳಗೆ ಕಾಫಿ ಕುಡಿಯಲು ಹೋಗಿರಬೇಕು ಎಂದು ಯೋಚಿಸಿ ಸುಮ್ಮನಾಗಿದ್ದರು. ಒಂದು ಗಂಟೆ ಕಳೆಯುವಷ್ಟರಲ್ಲಿ ಅವರಿಬ್ಬರೂ ಸ್ನಾನಮಾಡಿ ಟಿಫನ್‌ಗೆ ರೆಡಿ ಆದರೂ ಮೇಜರಿನ ಸುಳಿವಿಲ್ಲ. ಅಶೋಕ ಕೆಳಗಡೆಗೂ ಹೋಗಿ ಒಂದು ರೌಂಡ್ ಹೊಡೆದು ಬಂದ..ಮೇಜರಿನ ಸುಳಿವಿಲ್ಲ..ತಮಗಿಬ್ಬರಿಗೂ ಸೂಚನೆ ಕೊಡದೇ ತಾವು ಏಳುವ ಮೊದಲೇ ಆತ ಎಲ್ಲಿಗೆ ಹೋಗಿರಬಹುದು ? ಎಂಬುದನ್ನು ಯೋಚಿಸಿ ಯೋಚಿಸಿ ಅವರಿಬ್ಬರ ತಲೆ ಸಿಡಿಯತೊಡಗಿತ್ತು. ಅಷ್ಟರಲ್ಲೇ ಹೇಮಂತ ಬರುತ್ತಲೇ ಅವರಿಬ್ಬರೂ ಸಮಾಧಾನ ಹೊಂದಿದರು. ರೂಮಿಗೆ ಬರುತ್ತಲೇ ಮೇಜರ್ ಬಾತ್‌ರೂಮ್ ಹೊಕ್ಕವ ಹದಿನೈದು ನಿಮಿಷಗಳಲ್ಲಿ ಸ್ನಾನಮಾಡಿ ಹೊರಬಂದ. ಹತ್ತು ನಿಮಿಷಗಳಲ್ಲಿ ಬಟ್ಟೆ ಧರಿಸಿ ಅವರಿಬ್ಬರ ಬಳಿ ಬಂದ.

''ನೀವಿಬ್ಬರೂ ನನ್ನ ಮೇಲೆ ಕೋಪಗೊಂಡಂತಿದೆ..ನೀವು ಸುಖವಾಗಿ ನಿದ್ದೆ ತೆಗೆಯುತ್ತಿದ್ದಿರಿ. ನಿಮ್ಮ ನಿದ್ದೆಗೇಕೆ ಭಂಗವೇಕೆ ತರಬೇಕೆಂದುಕೊಂಡು ನಾನೊಬ್ಬನೇ ಸುತ್ತಾಡಲು ಹೋಗಿದ್ದೆ..ಬೇಕೆಂದರೆ ನನ್ನ ಈ ಅಪಚಾರಕ್ಕೆ ನೀವು ನನ್ನನ್ನು ಶಿಕ್ಷಿಸಬಹುದು.''

ಸುಷಮಾಳ ಕೋಪ 'ಭರ್' ಎಂದು ಇಳಿದುಬಿಟ್ಟಿತು. ಅಶೋಕ ನಗುತ್ತ ನುಡಿದ ''ನಾನು ತಮಗೆ ದಂಡ ಹಾಕಬಹುದು..ಆದರೆ, ಶಿಕ್ಷಿಸುವ ಹಕ್ಕು ನನಗಿಲ್ಲ..ಅದು ಕೇವಲ ಮೇಡಂ ಸುಷಮಾಳಿಗಿದೆ.''

''ಗುಡ್..ಹಾಗಾದರೆ ನೀನೇ ನಿರ್ಣಯಕೊಡು..ನನಗೇನು ಶಿಕ್ಷೆ ?..ಯಾವ ದಂಡ ?''

''ದಂಡದ ಮಾತು ಮೊದಲಾಗಲಿ. ನಂತರ ಶಿಕ್ಷೆ.''

''ಸರಿ..ಹೇಳು ದಂಡವೇನು ?''

''ಇಬ್ಬರ ಹೊಟ್ಟೆಗಳೂ ತಾಳಹಾಕುತ್ತಿವೆ..ಹೊಟ್ಟೆ ತುಂಬ ತಿಂಡಿಕೊಡಿಸಿ. ಇದೇ ದಂಡ.'' ಹೇಮಂತ ನಕ್ಕು ಟೆಲಿಫೋನಿನತ್ತ ಸರಿದ. ಉತ್ಕೃಷ್ಟ ತಿಂಡಿಗೆ ಆರ್ಡರ್ ಮಾಡಿದ.

''ಹೂಂ..ಇನ್ನು ಶಿಕ್ಷೆ ಯಾವದು ?''

''ಶಿಕ್ಷೆ ವಿಷಯ ಈಗಲೇ ಬೇಡ. ತಿಂಡಿ ತಿಂದಾದ ಮೇಲೆ.''

ಅಶೋಕ ಪಟ್ಟುಬಿದ್ದು ಕೊಡಲೇ ನುಡಿದ..ಹತ್ತು ಹದಿನೈದು ನಿಮಿಷಗಳಲ್ಲಿ ತಿಂಡಿ ಬಂತು. ಎರಡೆರಡು ಪ್ಲೇಟ್ ಹಲ್ವಾ..ಇಡ್ಲಿವಡಾ..ರವೆದೋಸೆ..ಮೇಲೆ ಬಿಸಿಬಿಸಿ ಘಮಘಮಿಸುವ ಬಾದಾಮಿ ಹಾಲು..'ವಾವ್' ಎಂದು ಕೂಗಿದ ಅಶೋಕ. ಅದು ಇದು ಮಾತನಾಡುತ್ತ ಸಂತಸದಿಂದ ತೆರೆ ಹಾಕುತ್ತಾ ತಿಂಡಿತಿಂದು ಕೈತೊಳೆದರು.

''ಹಾಂ..ತಿಂಡಿ ಆಯಿತು..ಶಿಕ್ಷೆ ?''

''ಶಪಿಸುವ ಅಧಿಕಾರ ಸುಷಮಾಳದು ಎಂದಿರುವೆ.. ಅವರ ಹಲ್ಲುಗಳು ತುಂಬಾ ಚೂಪಾಗಿವೆ. ತುಟಿಗಳು ಅಷ್ಟೇ ಮೃದುವಾಗಿವೆ. ನಾನು ಅರ್ಧಗಂಟೆ ಹೊರಗೆ ಹೋಗಿಬರುತ್ತೇನೆ. ನೀವು ಮನತುಂಬುವಂತೆ ಅವಳ ತುಟಿ ಹಾಗೂ ಹಲ್ಲುಗಳಿಂದ ಶಿಕ್ಷೆ ಪಡೆಯಬಹುದು.''

ಅಷ್ಟು ಹೇಳಿದವನೇ ಅಶೋಕ ರೂಮಿನಿಂದ ಹೊರಗೆ ನೆಗೆದಿದ್ದ..ಅವನ ಹಿಂದೆಯೇ ಸುಷಮಾ ಬೀಸಿದ್ದ ದಿಂಬು ಬಂದು ಮುಚ್ಚಿದ ಬಾಗಿಲಿಗೆ ತಾಗಿ ಕೆಳಗುರುಳಿತು..ಹೇಮಂತ ನಗುತ್ತ ಸುಷಮಾಳತ್ತ ತನ್ನೆರಡೂ ಕೈ ಚಾಚಿದ.

ಅಶೋಕ ತನ್ನ ರೂಮಿಗೆ ಬಂದು ಕುರ್ಚಿಯಲ್ಲಿ ಕುಳಿತುಕೊಳ್ಳುತ್ತಿದ್ದಂತೆಯೇ ಟೆಲಿಫೋನು ಅವನನ್ನು ಕರೆಯಿತು. ರಿಸೀವರ ಎತ್ತಿ ಕಿವಿಗೆ ಅನಿಸಿಕೊಂಡು 'ಹಲೋ' ಎಂದ. ಆಕಡೆಯಿಂದ ಮೋಹಕವಾದ ಕಂಠ ಕೇಳಿಸಿತು.

''ಮೇಜರ್ ಹೇಮಂತ ಇದ್ದಾರೆಯೇ ?''

''ತಾವು ಯಾರು ಮಾತನಾಡುತ್ತಿರುವದು ?''

''ನಾನು ಚಿತ್ರನಟಿ ಶಬನಮ್ ಮಾತನಾಡ್ತಿರೋದು..ಹೇಮಂತರೊಂದಿಗೆ

ನಾನು ಅರ್ಜೆಂಟ ಮಾತನಾಡಬೇಕಿತ್ತು..ನನ್ನ ಬಳಿ ಇರುವದು ಕೇವಲ ಎರಡು ಗಂಟೆ ಸಮಯ ಅಷ್ಟೇ...''

''ಒಂದು ನಿಮಿಷ ಲೈನ್ ಮೇಲಿರಿ.''

ಅಶೋಕ ಬಟನ್ ಬಝ್‌ಮಾಡಿ ಹೇಮಂತನೊಂದಿಗೆ ಮಾತನಾಡಿದ.

''ಸಾರಿ ಸರ್..ಶಿವಪೂಜೆಯಲ್ಲಿ ಕರಡಿಯಂತೆ ಬಂದಿರುವೆ. ತಮ್ಮ ಜೊತೆ ಮತ್ತೊಬ್ಬ ಮೋಹನಾಂಗಿ ಮಾತನಾಡಬೇಕಂತೆ..ಅರ್ಜೆಂಟ್..ಅವಳ ಬಳಿ ಸಮಯ ಕೇವಲ ಎರಡೇ ಗಂಟೆ ಇದೆಯಂತೆ ಅವಳ ಹೆಸರು ಮಿಸ್ ಶಬನಮ್ ಅಂತೆ..''

ಒಂದೇ ಉಸಿರಿನಲ್ಲಿ ಬಿಟ್ಟುಬಿಟ್ಟು..ವ್ಯಂಗ್ಯ ಮತ್ತು ಹಾಸ್ಯ ಬೆರೆಸಿ ನುಡಿದ. ಅವನಿಗೆ ದೊರೆತಿದ್ದು ಒಂದು ಮೊಟಕು ಉತ್ತರ ಮೇಜರ್‌ನಿಂದ.

''ಬರಲು ತಿಳಿಸು..''

ಪುನಃ ಶಬನಮ್ ಜೊತೆ ಲಾಯಿನ್ ಮೇಲೆ ಬಂದ ಅಶೋಕ.

''ಮಿಸ್..ತಾವು ಕೂಡಲೇ ಹೊರಟುಬರಭಹುದು..'' ರಿಸೀವರ್ ಕೆಳಗಿರಿಸಿದ ಆತ ಮೇಜರ್ ರೂಮಿನೆಡೆ ನಡೆದ..ಬಾಗಿಲು ತೆರೆದಿತ್ತು..ಅಶೋಕನನ್ನು ಹೇಮಂತ ದಿಟ್ಟಿಸಿನೋಡಿ ಕೇಳಿದ.

''ಏನು ವಿಷಯ ?..ಮಿಸ್ ಶಬನಮ್ ನಿನ್ನ ಕನಸಿನಕನ್ಯೆ ಅಲ್ಲವಷ್ಟೇ ?''

''ನೋ..ಸರ್..ನಿಜವಾಗಿಯೂ ಅವಳು ಫೋನು ಮಾಡಿದ್ದಳು..''

''ಗೊತ್ತಾಗುತ್ತದಲ್ಲ..ಹತ್ತು ಹದಿನೈದು ನಿಮಿಷಗಳಲ್ಲಿ..''

ಹತ್ತೇ ನಿಮಿಷಗಳಲ್ಲಿ ಗೊತ್ತೇ ಆಯಿತು. ಹತ್ತಾರು ಜನರಿಂದ ಸುತ್ತುವರೆದು ಅವರ ಪ್ರಶಂಸೆಯ ಮಳೆಯಲ್ಲಿ ಮಿಂದು ಪುಲಕಿತಳಾಗುತ್ತಾ ಬಂದ ಮಿಸ್ ಶಬನಮ್ ಹೇಮಂತನೆದುರು ಕುಳಿತಿದ್ದಳು. ಶಿಷ್ಟಾಚಾರದ ಕಾಫಿ ಸೇವನೆ ನಂತರ..ಶಬನಮ್‌ಗಳ ಫ್ಯಾನ್‌ಗಳನ್ನು ಒತ್ತಾಯದಿಂದ ಹೊರದಬ್ಬಿ ಬಾಗಿಲು ಮುಚ್ಚಿದ ಅಶೋಕ. ಶಬನಮ್ ವಾಚಿನೆಡೆ ಒಂದು ಬಾರಿ ದೃಷ್ಟಿ ಹರಿಸಿ ಹೇಳತೊಡಗಿದಳು.

''ಮೇಜರ್ ಸಾಹೇಬ್..ನಾನು ನಿನ್ನೆಯಷ್ಟೇ ವಿದೇಶದಿಂದ ಬಂದೆ. ನಾಳೆ ಮುಂಜಾನೆ ಶೂಟಿಂಗ್ ಇದೆ. ಪ್ಲೇನಿನಲ್ಲಿ ಬರುತ್ತಿರುವಾಗ ನನ್ನ ಸೂಟಕೇಸು ನನ್ನೊಂದಿಗೆ ಬರಲೇ ಇಲ್ಲ. ಅವಸರದಲ್ಲಿ ಅದು ಆಫೀಸಿನಲ್ಲೇ ಉಳಿಯಿತಂತೆ.

ಹೀಗಾಗಿ ನನ್ನ ಬ್ಯಾಗು ಹಿಂದಿನ ಪ್ಲೇನಿನಲ್ಲಿ ಬರುತ್ತಿದೆ. ನಾನು ಮೂರು ಗಂಟೆ ಇಲ್ಲೇ ಉಳಿಯಬೇಕಾಯಿತು. ಕ್ಯಾಂಟೀನನಲ್ಲಿ ಕಾಫಿ ಕುಡಿಯುತ್ತಿರುವಾಗ ಪತ್ರಿಕೆ ಕಣ್ಣಿಗೆ ಬಿತ್ತು. ಅದರಲ್ಲಿ ಒಂದು ವಾರ್ತೆ ಓದಿ ನಾನು ತಮ್ಮ ಬಳಿ ಓಡಿ ಬಂದೆ. ಪತ್ರಿಕೆಯನ್ನು ಆಕೆ ಹೇಮಂತನ ಮುಂದೆ ಇಟ್ಟಳು. ಮೇಜರ್ ಅದರ ಮೇಲೆ ಕಣ್ಣೋಡಿಸಿದ.

''ಖ್ಯಾತನರ್ತಕಿ ಮಿಸ್ ಶಬನಮ್‌ಳ ಒಂದು ಬ್ರಾದ ಬೆಲೆ ಇಪ್ಪತ್ತೈದು ಲಕ್ಷ ರೂಪಾಯಿ''...ನಂತರ ಅವರ ಬ್ರಾಲಿಲಾವಿನಲ್ಲಿ ಮಾರಾಟವಾದ ವಿವರವಾದ ವರದಿ ಇತ್ತು.

ಮೇಜರನ ಕಣ್ಣುಗಳು ಅಚ್ಚರಿಯಿಂದ ಅರಳಿದವು.

''ಇದೇನು ? ಒಂದು ಬ್ರಾದ ಬೆಲೆ ಇಪ್ಪತ್ತೈದು ಲಕ್ಷ ?...ನಂಬಲಿಕ್ಕೆ ಆಗದು..''

''ಅದಕ್ಕೇ ನಿಮ್ಮ ಬಳಿಗೆ ಬಂದಿರುವೆ..ತಾವು ದಯವಿಟ್ಟು ಇದರ ಹಿಂದಿನ ರಹಸ್ಯ ಕಂಡುಹಿಡಿಯಬೇಕು. ಒಂದು ಮಾತು ಮೇಜರ್ ಕಳೆದ ಆರು ತಿಂಗಳಿಂದ ನನ್ನ ಬ್ರಾಗಳು ಕಳುವಾಗುತ್ತಿವೆ. ಅವನ್ನು ಯಾರು ಕದಿಯುತ್ತಾರೆ ? ಹೇಗೆ ? ಕದ್ದು ಎಲ್ಲಿಗೆ ಒಯ್ಯುತ್ತಾರೆ..ಒಂದೂ ತಿಳಿಯುತ್ತಿಲ್ಲ..ಇದೆಲ್ಲಾ ನೀವು ಕಂಡುಹಿಡಿಯೋರು ತಮಗೆ ನಾನು ಐದು ಲಕ್ಷ ರೂಪಾಯಿ ಸಂಭಾವನೆ ನೀಡುತ್ತೇನೆ. ಅಡ್ವಾನ್ಸ್ ಎರಡು ಲಕ್ಷ'' ಸದ್ಯ.

ವ್ಯಾನಿಟಿ ಬ್ಯಾಗಿನಿಂದ ಚೆಕ್‌ಬುಕ್ ತೆಗೆದು ಚೆಕ್‌ಬರೆದು ಸಹಿ ಮಾಡಿ ಹೇಮಂತನ ಕೈಗಿತ್ತಳು..

''ಮಿಸ್..ನನ್ನದೊಂದು ಪ್ರಶ್ನೆ..ನಾನಿಲ್ಲಿರುವ ವಿಷಯ ನಿಮಗೆ ಹೇಗೆ ತಿಳಿಯಿತು ?''

''ಅದೊಂದು ಸಂಯೋಗ...ಇದೇ ಪೇಪರಿನ ಇನ್ನೊಂದು ಭಾಗದಲ್ಲಿ ತಾವು ಇಲ್ಲಿ ಮದುವೆಗೆ ಬಂದ ವಿಷಯ ಈ ಹೋಟೆಲಿನಲ್ಲಿ ತಂಗಿದ ಎಲ್ಲಾ ವರದಿ ಇದೆ. ಅದನ್ನು ಓದಿಯೇ ನಾನು ಈ ಕೇಸು ತಮಗೆ ಕೊಡಲು ಇಚ್ಛಿಸಿದ್ದು...ನಾನಿನ್ನು ಬರಲೆ?''

ಶಬನಮ್ ಎಲ್ಲರಿಗೂ ವಂದಿಸಿ ಹೊರಟು ಹೋದಳು. ''ಇಂದಿನ ಅದೃಷ್ಟ ಚೆನ್ನಾಗಿದೆ. ಕುಳಿತಲ್ಲೇ ಐದು ಲಕ್ಷದ ವ್ಯಾಪಾರ ಕುದುರಿ ಎರಡು ಲಕ್ಷ ಬಂದೂ ಬಿಟ್ಟಿತು.. ಒಳ್ಳೇ ಕೇಸು.''

''ಬ್ರಾ ಹುಡುಕುವ ಕೇಸು ಅಂದ ಮೇಲೆ ಒಳ್ಳೆಯದಿರಲೇಬೇಕಲ್ಲವೆ ? ಚೇಳಿನ ಕೊಂಡಿಯಂತೆ ಮೊಟಕಿದಳು ಸುಷಮಾ.''

''ಬ್ರಾ ಹುಡುಕುವ ಕೆಲಸ..ಬ್ರಾದೊಳಗೆ ಕೈಹಾಕುವದಲ್ಲವಲ್ಲ.. ಬಾಯಿತಪ್ಪಿ ಬಂದ ಮಾತಿಗೆ ತಟಕ್‌ನೆ ತುಟಿಕಚ್ಚಿದ ಅಶೋಕ ಮರುಕ್ಷಣವೇ ಸಾರಿ ಎಂದ.''

ಸುಷಮಾ ಇನ್ನೂ ಅವಳೆಡೆ ದುರುಗುಟ್ಟಿ ನೋಡುತ್ತಲೇ ಇದ್ದಳು.

''ಸುಷಮಾ..ಈ ಐದು ಲಕ್ಷದ ಬ್ರಾ ಹುಡುಕುವ ಕೇಸು ನಿಂಗೆ ಒಪ್ಪಿಗೆಯಾಗಲಿಲ್ಲವೇ?'' ಹೇಮಂತ ಪ್ರಶ್ನಿಸಿದ.

''ನನ್ನ ಒಪ್ಪಿಗೆಯಿಂದ ನಿಮಗೇನಾಗಬೇಕಾಗಿದೆ ? ಕುಳಿತಲ್ಲೇ ಐದುಲಕ್ಷ ಕಮಾಯಿ ಆಯಿತಲ್ಲ ?'' ವ್ಯಂಗ್ಯ ಮಾತನಾಡಿದಳು ಸುಷಮಾ.

ಕಮಾಯಿ ಎಲ್ಲಾಗಿದೆ ?..ಅದಕ್ಕಾಗಿ ಬೆವರು ಸುರಿಸುವುದು ಬೇಡವೇ?

''ನನಗೆ ಬೇಕಾಗಿಲ್ಲ..'' ಅಶೋಕನ ಮಾತಿಗೆ ತೀವ್ರ ಪ್ರತಿಭಟಿಸಿದ ಆಕೆ.

''ಅಶೋಕ ನೀನು ಏನೇ ಹೇಳು. ಒಂದು ಮಾತಂತ್ತೂ ಸತ್ಯ.''

ಹೇಮಂತ ತುಂಟತನದಿಂದ ಸುಷಮಾಳತ್ತ ನೋಡಿ ಹೇಳಿದ.

''ಹತ್ತು ಮೀಸೆಗಳು ಒಂದೆಡೆ ಸೇರಬಲ್ಲವು..ಆದರೆ ಎರಡು ತುರುಬುಮಾತ್ರ ಒಂದೆಡೆ ಸೇರಲಾರವು..''

ಬೊಳ್ ಎಂದು ನಕ್ಕುಬಿಟ್ಟ ಅಶೋಕ...ಸುಷಮಾಳ ಮುಖ ಸಿಡಿಲಾಯಿತು.

''ಓಕೆ..ಹಾಸ್ಯ ಇಲ್ಲಿಗೆ ಸಾಕು ಮಾಡಿ..ಬ್ರಾದ ರಹಸ್ಯದ ಬಗ್ಗೆ ಮಾತನಾಡಿ.''

''ನನಗನಿಸುವ ಮಟ್ಟಿಗೆ ಇದೊಂದು ಬೋಗಸ್ ಕಥೆ..ಇಪ್ಪತ್ತೈದು ಲಕ್ಷಕ್ಕೆ ಒಂದು ಬ್ರಾ ಕೊಳ್ಳುವದೆಂದರೇನು ?..ಇದು ಇಂಪಾಸಿಬಲ್ ಆ ನಟಿ ಚೀಪ ಪಬ್ಲಿಸಿಟಿ ಸಲುವಾಗಿ ಈ ನಾಟಕ ಕಟ್ಟಿ ನಿಮ್ಮ ಮುಂದೆ ಹೇಳಿದ್ದಾಳೆ.''

''ಇದರಿಂದ ಅವಳಿಗಾಗುವ ಲಾಭ ?''..ಮೇಜರ್ ಪ್ರಶ್ನೆ ಬಂತು ತಟಕ್ಕನೆ.

''ಅದೇ ಹೇಳಿದೆನಲ್ಲ..ಚೀಪ ಪಬ್ಲಿಸಿಟಿ ಅಂತ. ನೀವು ಅವಳ ಕೇಸು ತೆಗೆದುಕೊಂಡಿರುವಿರಿ ಅಂದಮೇಲೆ ಮುಗಿದೇ ಹೋಯಿತು. ನಿಮ್ಮೊಂದಿಗೆ ಅವಳ ಹೆಸರು ಎಲ್ಲೆಡೆ ಹರಿದಾಡುತ್ತಿದೆ. ಆಕೆ ಪ್ರಸಿದ್ಧಿಗೆ ಬರುತ್ತಾಳೆ. ತನ್ನ ರೇಟು ಏರಿಸುತಾಳೆ.''

''ಸುಷಮಾ ನಿನ್ನ ವಾದದಲ್ಲಿ ಸತ್ಯವಿದೆ. ಆದರೂ ಸದ್ಯದ ವಾತಾವರಣಕ್ಕೆ ಅದು ಹೊಂದಿಕೊಳ್ಳುವದಿಲ್ಲ. ಅವಳಿಗೆ ನನ್ನ ಕಡೆ ಬರಬೇಕೆಂಬ ವಿಚಾರ ಇರಲೇ ಇಲ್ಲ. ಅವಳ ಸೂಟ್‌ಕೇಸು ಅವಳ ಜೊತೆ ಬಾರದಿದ್ದುದರಿಂದ ಆಕೆ ಇಲ್ಲಿ ತಂಗಬೇಕಾಯಿತು. ಆವಾಗಲೇ ಆಕೆ ಪತ್ರಿಕೆ ನೋಡಿದಳು. ಬ್ರ್ಯಾದ ವಿಷಯ ತಿಳಿಯಿತು. ಅದೇ ಪತ್ರಿಕೆಯಲ್ಲಿ ನನ್ನ ಸುದ್ದಿ ಓದಿ ನನ್ನೆಡೆ ಬಂದಿದಾಳೆ. ಇದಂತೂ ಪೂರ್ವ ನಿಯೋಜಿತಅಲ್ಲ ಹೀಗಾಗಿ ನಾಟಕ ಅಂತ ಅನಿಸುವಲ್ಲಿ ನಿನ್ನ ವಾದ ಸೋಲುತ್ತಿದೆ.''

''ನಾನು ನಾಟಕ ಅಂತ ಹೇಳಿದ್ದು ಇದಕ್ಕೆ..ಅವಳೆಲ್ಲಿಗೂ ಹೊರಟೇ ಇಲ್ಲ ಅವಳ ಲಗೇಜ್ ಹಿಂದುಳಿದಿಲ್ಲ..ನಿಮ್ಮ ಬಳಿ ಬರಲು ಒಂದು ನೆಪ ಬೇಕಿತ್ತು ಅಷ್ಟೇ...

''ಸರ್ ಒಂದು ನಿಮಿಷ''..ಅಶೋಕ ಅವರಿಬ್ಬರನ್ನು ಅಲ್ಲೇ ತಡೆದು ಟೆಲಿಫೋನ್ ಎತ್ತಿ ವಿಮಾನನಿಲ್ದಾಣಕ್ಕೆ ಫೋನು ಮಾಡಿದ..ನಾಲ್ಕಾರು ನಿಮಿಷಗಳ ನಂತರ ರಿಸೀವರ್ ಕೆಳಗಿಟ್ಟ .

''ಮೇಜರ್..ಆಕೆ ಹೇಳಿದ್ದು ನೂರಕ್ಕೆ ನೂರು ಸತ್ಯ. ಅವಳ ಲಗೇಜ್ ಕೆಲವೇ ನಿಮಿಷಗಳ ಹಿಂದೆ ಬಂದಿತಂತೆ. ಆಕೆ ಈಗ ಪ್ರಯಾಣದ ದಾರಿಯಲ್ಲಿದ್ದಾಳೆ.''

ಅಶೋಕನ ಮಾತು ಕೇಳಿ ಹೇಮಂತ ಸುಷಮಾಳ ಕಡೆ ಹೊರಳಿ ಕೇಳಿದ. ''ಈಗೇನು ಹೇಳ್ತೀಯಾ?''..

ಸುಷಮಾಳಿಗೆ ಮಾತೇ ಬಾರದಂತಾಯಿತು. ಮತ್ತೆ ಅವಳ ಸಹಾಯಕ್ಕೆ ಅಶೋಕಬಂದು ''ಇಷ್ಟುಮಾತ್ರಕ್ಕೆ ನಾವು ಸುಷಮಾಳ ಮಾತು ಅಥವಾ ತರ್ಕ ಸುಳ್ಳು ಎನ್ನಲಿಕ್ಕೆ ಸಾಧ್ಯವಿಲ್ಲ..ಇದರ ಬಗ್ಗೆ ಸ್ವಲ್ಪ ಪರಿಶೋಧನೆ ಮಾಡಬೇಕು.

''ನೀನೇನು ಯೋಚಿಸಿದ್ದೀಯಾ ಹೇಳು.''

''ನಾವು ಮೊದಲು ಈ ಪತ್ರಿಕೆಯ ವರಗಿಗಾರನನ್ನು ಹಿಡಿಯಬೇಕು. ಅವನ ಬಾಯಿಂದ ಎಲ್ಲವನ್ನೂ ಕೇಳಬೇಕು...ಒಮ್ಮೊಮ್ಮೆ ವರದಿಗಾರರ ಅತಿರಂಜಿತ ವರ್ಣನೆಗಳೂ ಅವಾಂತರಕ್ಕೆ ಎಡೆ ಮಾಡುತ್ತವೆ. ಒಂದೊಂದು ಬಾರಿಯಂತೂ ಸ್ವಯಂಕಲ್ಪಿತವಾಗಿರುತ್ತವೆ.

''ಗುಡ್..ಮೊದಲು ನಾವು ವರದಿಗಾರನನ್ನ ವಿಚಾರಿಸಬೇಕು. ಅವನ ಬಾಯಿ ಬಿಡಿಸಬೇಕು. ಈ ಕೆಲಸ ಸುಷಮಾ ಮಾಡಲಿ. ನಾನೂ ನೀನೂ ಸೇರಿ

ಲಾಕಪ್‌ಗೆ ಹೋಗಿ ಆಕಾಶನನ್ನು ಬಾಯಿ ಬಿಡಿಸೋಣ.''

ಹೇಮಂತನ ಮಾತು ಇಬ್ಬರಿಗೂ ಒಪ್ಪಿಗೆಯಾಯಿತು. ಸುಷಮಾ ಡ್ರೆಸ್ ಬದಲಿಸಲು ಒಳಗೆ ನೆಡೆಯುತ್ತಿದ್ದಂತೆ ಇಬ್ಬರೂ ಹೊರಬಂದರು.

[9]

ಅನಂತನ ಪಾದಗಳು ಭೂಮಿಯನ್ನು ಸ್ಪರ್ಷಿಸುತ್ತಲೇ ಇರಲಿಲ್ಲ. ಆತ ಗಾಳಿಯಲ್ಲಿ ತೇಲುತ್ತಿದ್ದ. ಇಂದವನನ್ನು ತಮ್ಮ ಚೇಂಬರಿಗೆ ಕರೆಸಿದ ಸಂಪಾದಕರು ಆತ ಬರೆದ ಚಿತ್ರನಟಿ ಶಬನಮ್‌ಳ ಬ್ರಾದ ಲಿಲಾವು ಮಾರಾಟದ ಬಗ್ಗೆ ತಮ್ಮ ಮೆಚ್ಚುಗೆ ಸೂಚಿಸಿದ್ದರು. ಪತ್ರಿಕೆಯ ಭಾಷೆಯಲ್ಲಿ ಹೇಳುವದಾದರೆ ಅದೊಂದು ಸೂಪ್. ಇತರ ಯಾವ ಪತ್ರಿಕೆಯಲ್ಲೂ ಬರದಿರುವ ವಿಷಯ. ಎಲ್ಲ ಪತ್ರಿಕೆಯವರೂ ತಮಗೇಕೆ ಈ ಸುದ್ದಿ ಸಿಗಲಿಲ್ಲ ಎಂದು ಮೈಮ್ಮೆ ಪರಚಿಕೊಂಡಿದ್ದರು. ಇವರ ಪತ್ರಿಕೆ ಕಡಲೆಕಾಯಿಯಂತೆ ಮಾರಾಟವಾಗಿ ಕೆಲವೊಂದೆಡೆ ಪತ್ರಿಕೆಗಾಗಿ ಚಿಕ್ಕಪುಟ್ಟ ಕದನಗಳೂ ಸಹ ನಡೆದ ಸಮಾಚಾರ ಬಂದಿದ್ದವು. ಹೀಗಾಗಿ ಪತ್ರಿಕೆ ಕೇವಲ ಒಂದೇ ಒಂದು ಸುದ್ದಿಯಿಂದಾಗಿ ನಗರದ ಜನತೆಯ ನಾಲಿಗೆ ಮೇಲೆ ನಂದಿತ್ತು.

ಸಂಪಾದಕರೊಂದಿಗೆ ಕುಳಿತು ಅನಂತ ಕಾಫಿ ಕುಡಿದ. ಆತ ಈ ಸುದ್ದಿ ತರುವದಕ್ಕೆ ಪಟ್ಟಿ ಕಟ್ಟಿ. ಅದಕ್ಕಾಗಿ ಮಾಡಿದ ಖರ್ಚು ಎಲ್ಲವನ್ನು ಹೇಳಿದಾಗ ಅವರು ನಗುತ್ತ ನುಡಿದಿದ್ದರು.

''ಅನಂತ..ನೀನಿನ್ನು ತರಬೇತಿಯಲ್ಲಿರುವ ಯುವಕ. ಈಗಾಗಲೇ ನಿನ್ನ ಕಾರ್ಯದ ಬಗ್ಗೆ ಇಷ್ಟೊಂದು ಆಸಕ್ತಿ...ದಕ್ಷತೆ ತೋರಿಸಿದ್ದು ನೋಡಿ ನನಗೆ ಸಂತಸವಾಗುತ್ತಿದೆ..ಇಂದಿನಿಂದ ನಿನ್ನನ್ನು ನಾನು 'ಕಾಯಂ' ಪರ್ತಕರ್ತ ಎಂದು ನಿಯುಕ್ತಿ ಮಾಡಿದ್ದೇನೆ..ಅಲ್ಲದೆ ಈ ಸುದ್ದಿಗಾಗಿ ಮಾಡಿದ ಖರ್ಚನ್ನು ನೀನು 'ಬಿಲ್ಲು' ಕೊಟ್ಟು ಆಫೀಸಿನಿಂದ ಪಡೆದುಕೋ..''

ಅನಂತ ಆನಂದದಿಂದ ಮೂಕನಾಗಿದ್ದ. ಅವನ ಕೆಲಸಕ್ಕೆ ಸಂಪಾದಕರು ಅಭಿನಂದನೆ ಸಲ್ಲಿಸಿದ್ದರು. ಕೆಲಸ ಕಾಯಂ ಆಯಿತು..ತುಂಬಾ ಖರ್ಚಾಗಿದ್ದ ಹಣ ಕೈಗೆ ಬಂದಿತ್ತು ? ಇನ್ನೇನು ಬೇಕು ? ಅವರಿಗೆ ಹೃದಯತುಂಬಿ ವಂದಿಸಿ ಹೊರಬಂದಾಗ ಅವನ ಕಾಲುಗಳು ಮೆಲುವಾಗಿ ಕಂಪಿಸುತ್ತಿದ್ದವು. ಅವು ಭೂಮಿಯನ್ನೇ ಸ್ಪರ್ಷಿಸುತ್ತಿರಲಿಲ್ಲ. ಗಾಳಿಯಲ್ಲಿ ತೇಲುತ್ತ ತನ್ನ ಡೆಸ್ಕಗೆ ಬಂದ. ಸಂಪಾದಕರು ಕರೆಸಿದ್ದ ವಿಷಯ ಇತರರಿಗೆಲ್ಲ ತಿಳಿದಿತ್ತು. ಅದಕ್ಕಾಗಿ ಎಲ್ಲರೂ ಅವನ

ದಾರಿ ಕಾಯುತ್ತಿದ್ದರು. ವಿಷಯವೇನೆಂದು ತಿಳಿಯಲು..ಅನಂತ ನಿಧಾನವಾಗಿ ಎಲ್ಲ ವಿಷಯ ಹೇಳಿದಾಗ 'ಹುರ್ರೆ' ಎಂದು ಕೇಕೆ ಹಾಕಿದ ಹತ್ತಾರು ಜನ ಓಡಿ ಬಂದು ಅವನ ಕೈಕುಲುಕಿ ಅಭಿನಂದನೆ ಸಲ್ಲಿಸಿದರು. ಅವನ ಸ್ನೇಹಿತ ರವಿ ಚೇಷ್ಟೆ ಮಾಡುತ್ತ ಹೇಳಿದ.

''ಇನ್ನೇನು ಮದುವೆಗೆ ಗ್ರೀನ್ ಸಿಗ್ನಲ್ ದೊರೆತಂತಾಯಿತು. ಪಾಪ ಆಶಾ ಎರಡು ವರ್ಷಗಳಿಂದ ನಿನಗಾಗಿ ಕಾಯ್ತಿದ್ದಾಳೆ. ನೌಕರಿ ಕಾಯಂ ಆದಮೇಲೆ ಮದುವೆ ಅಂತ ಮುಂದೆ ಹಾಕ್ತಾನೇ ಇದ್ದೆ.''

ಆಶಾಳ ನೆನಪಿನಿಂದಾಗಿ ಅನಂತನ ಹೃದಯ ಕಂಗೆಟ್ಟ ಹಾರಾಡಿತು. ಮೈ-ಮನ ಎರಡೂ ಪುಲಕಿತವಾದವು. ಬೆಣ್ಣೆ ಮುದ್ದೆಯಲ್ಲಿ ನಿರ್ಮಿಸಿದಂತಿದ್ದ ಮುಗ್ಧ ಕೋಮಲ ಸುಂದರ ತರುಣಿ ಆಕೆ. ಅವನ ಬಾಲ್ಯ ಸಂಗಾತಿ.. ಈಗ ಬಾಳಸಂಗಾತಿಯಾಗಲು ಹೊಸ್ತಿಲಮೇಲೆ ನಿಂತಿದ್ದಳು. ಅವಳೂ ಸಹ ಜಾಹೀರಾತು ಕಂಪನಿಯೊಂದರಲ್ಲಿ ಟೈಪಿಸ್ಟ್..

ಅವಳ ನೆನಪಲ್ಲೇ ಜಗವನ್ನು ಮರೆತು ಕುಳಿತಿದ್ದ ಅನಂತನ ಬೆನ್ನ ಮೇಲೆ ಕೈತಟ್ಟಿ ಎಚ್ಚರಿಸಿದ ರವಿ.

''ಅಯ್ಯಾ ಮರಿ..ಇಷ್ಟು ಹೇಳಿ ಮೊದ್ದನಂತೆ ಕುಳಿತು ಬಿಟ್ಟರೆ ಆಯ್ತಾ ? ನಮಗೆಲ್ಲ ಒಳ್ಳೆ ಪಾರ್ಟಿ ಆಗಬೇಕು ನೋಡು.''

''ಪಾರ್ಟಿಯಾಕಯ್ಯ ? ಭರ್ಜರಿ ಮದುವೆ ಊಟಾನೇ ಹಾಕ್ತಾನೆ ಬಿಡು.''

ಮಧ್ಯ ಇನ್ನೊಬ್ಬರು ನುಡಿದಾಗ ಯಾರೋ ಹಾರಿಸಿದರು ಹಾಸ್ಯ ಚಟಾಕಿ.

''ಭರ್ಜರಿ ಭೋಜನದವರೆಗೆ ಕಾಯಲು ಈಗ ಸ್ವಲ್ಪ ಉಪ್ಪಿನಕಾಯಿಯಾದರೂ ಕೊಡಿ. ಅಲ್ಲಿಯವರೆಗೂ ಚೀಪುತ್ತಾ ಕೂಡಲು ಆಗುತ್ತೆ.''

ಬೊಳ್ ಎಂದು ಎಲ್ಲರೂ ನಗುತಿದ್ದಂತೆ ಸಿಪಾಯಿಯನ್ನು ಕರೆದ ಅನಂತ ತಿಂಡಿ ಹಾಗೂ ಕಾಫಿ ತರಲು ತಿಳಿಸಿ ತಾನು ಆಫೀಸಿನತ್ತ ಹೆಜ್ಜೆ ಹಾಕಿದ. ಆಫೀಸರರಿಗೆ ಈಗಾಗಲೇ ಫೋನು ಬಂದಿದ್ದರಿಂದಾಗಿ ಆತ ಬಿಲ್ಲುಕೊಟ್ಟ ಎರಡೇ ನಿಮಿಷಕ್ಕೆ ಮೂರುನೂರು ಸಾವಿರದಾ ತೊಂಬತ್ತೆರಡು ರೂಪಾಯಿ ಅವನ ಮುಂದಿದ್ದವು. ಜೇಬು ಬೆಚ್ಚಗೆ ಆಯ್ತು...

ಎಲ್ಲರೂ ಅವನ ದಾರಿ ಕಾಯುತ್ತಿದ್ದರು ತಿಂಡಿ ತಿನ್ನಲು. ಒಂದು

ಪ್ಲೇಟ್‌ತಿಂಡಿ ಸಂಪಾದಕರ ಚೇಂಬರಿಗೂ ಕಳಿಸದ ಮೇಲೆ ಜೋಕ್ ಹಾರಿಸುತ್ತಾ ತಿಂಡಿ ತಿಂದು ಕಾಫಿ ಕುಡಿದರು.. ಆಮೇಲೆ ಆರಂಭವಾಯ್ತು ಕೆಲಸ...ಮೈ ಬೆವರು ಇಳಿಸುವ ಕೆಲಸ..ಮಧ್ಯಾಹ್ನ ಎರಡು ಗಂಟೆಯಾದಾಗಲೇ ಎಚ್ಚರ. ಊಟಕ್ಕೇಳುವ ಮುನ್ನ ಅನಂತ ಫೋನು ಮಾಡಿ ಆಶಾಳಿಗೆ ಸಮೀಪದ ಕವಿತಾ ರೆಸ್ಟೋರೆಂಟಿಗೆ ಬರಲು ತಿಳಿಸಿದ್ದ.

ಆಶಾ ಅವನಿಗಾಗಿ ಕಾಯುತ್ತಿದ್ದಳು. ಒಂದೇ ಉಸುರಿಗೆ ಅನಂತ ಎಲ್ಲಾ ವಿಷಯ ತಿಳಿಸಿದಾಗ ಒಂದು ಕ್ಷಣ ಒಂದೇ ಒಂದು ಕ್ಷಣ ಅರೆ ರೋಮಾಂಚಿತಳಾಗಿ ತಾನೇನು ಮಾಡುತ್ತಿದ್ದೇನೆಂಬ ಅರಿವಿಲ್ಲದೇ ಮುಂದೆ ಬಾಗಿ ಅನಂತನ ಕೆನ್ನೆಗೆ ಸಿಹಿ ಮುತ್ತ ನೀಡಿದ್ದಳು. ಮರುಕ್ಷಣ ಅದರ ಅನುಭವವಾಗಿ ನಾಚಿ ನೀರಾಗಿಬಿಟ್ಟಳು. ಅವರು ಕುಳಿತದ್ದು ಸ್ಪೆಶಲ್‌ರೂಮಾಗಿದ್ದರಿಂದ ಅವಳ ಈ 'ಕೃತಿ' ಯಾರಿಗೂ ಕಂಡಿರಲಿಲ್ಲ. ಅವರಿಬ್ಬರೂ ಮದುವೆಯ ಬಗ್ಗೆ ಮಧುರ ಕನಸುಗಳನ್ನು ಹೆಣೆಯುತ್ತಾ ಊಟ ಮಾಡಿದರು.

ಅನಂತ ಆಫೀಸಿಗೆ ಬಂದಾಗ ಅವನ ಮೇಜಿನ ಮೇಲೆ ಕಾದಿತ್ತು ಸಂದೇಶ. ''ಸುಷಮಾ..ಸಾರ್ಜಂಟ್ ಸುಷಮಾ..ಹತ್ತು ನಿಮಿಷಗಳ ಹಿಂದೆ ಫೋನು ಮಾಡಿದ್ದಳು. ಆಕೆ ಅರ್ಧಗಂಟೆ ಬಿಟ್ಟು ಬರುವುದಾಗಿ ತಿಳಿಸಿದ್ದಾಳೆ.'' ಕಾಗದದ ಮೇಲೆ ಕಣ್ಣಾಡಿಸುತ್ತಿರುವಾಗ ಅವನನ್ನು ಉಳಿದವರು ತುಂಟತನದಿಂದ ನೋಡುತ್ತಿದ್ದರು. ರವಿ ಕುಳಿತಲ್ಲಿಂದಲೇ ಎಲ್ಲರೂ ಕೇಳುವಂತೆ ಗೊಣಗಿದ.

''ಒಂದು ಸ್ಕೂಪ್ ಬರೆಯುವದರೊಳಗೆ ಹೀರೋ ಆಗಿಬಿಟ್ಟ.. ಹೆಂಗಳೆಯರೆಲ್ಲ ಇವನ ಹಿಂದೆ ಸುತ್ತಲಾರಂಭಿಸಿದ್ದಾರೆ..ಈಗ ಸುಷಮಾಳ ಕಾಲು..ಆ ಆಶಾಳನ್ನು ದೇವರೇ ಕಾಪಾಡಬೇಕು...ಗೋವಿಂದಾ...ಗೋವಿಂದ...''

ಮುಸಿಮುಸಿ ನಗುವಿನ ಮಧ್ಯೆ ಅನಂತ ಜೋರಾಗಿ ಕೂಗಿದ. ''ನೀ ತಿಳಿದಂತೆ ಯಾವನೂ ಇಲ್ಲವಪ್ಪಾ ಮಹಾಶಯಾ. ಈ ಸುಷಮಾ ಅಂದರೆ ಯಾರು ಗೊತ್ತೆ ? ನಮ್ಮ ದೇಶದ ಪ್ರಸಿದ್ಧ ಗೂಢಾಚಾರಿ ಪತ್ತೇದಾರ ಮೇಜರ ಹೇಮಂತನ ಸಹಾಯಕಿ ಸಾರ್ಜಂಟ ಸುಷಮಾ..ತಿಳೀತಾ..''

ಮೇಜರ್ ಹೇಮಂತ...ಸಾರ್ಜಂಟ್ ಸುಷಮಾ ಎರಡೂ ಹೆಸರು ಕಿವಿಗೆ ಬೀಳುತ್ತಿದ್ದಂತೆ ಎಲ್ಲರ ಮೈಜುಂ ಎಂದಿತು. ಅಂಥವರೂ ಅನಂತನ ಬಗ್ಗೆ ಆಸಕ್ತಿ ವಹಿಸಬೇಕೆಂದರೆ ಖಂಡಿತವಾಗಿ ಅನಂತನ ಸ್ಕೂಪ್ ಹಿಂದೆ ಯಾವನೋ

ರಹಸ್ಯವಾಗಿದೆ ಎಂದು ಯೋಚಿಸುತ್ತಿದ್ದಂತೆ ಡೆಸ್ಕ್ ಮೇಲಿದ್ದ ಫೋನು ತಾನೂ ಇದ್ದೇನೆ ಎಂದು ಅರಚಿತು. ರಿಸೀವ್ ಎತ್ತಿದ ರವಿ ಒಂದು ಕ್ಷಣ ಬಿಟ್ಟು ಅನಂತನೆಡೆ ನೋಡಿ ನುಡಿದ ನಾಟಕೀಯವಾಗಿ.

"ಲೋ ರೋಡ್‌ರೋಮಿಯೋ ಅನಂತ..ಬಾ...ಇನ್ನೊಂದಿದೆ ರಮಣಿ ಫೋನು" ಸಂಗಡಿಗರೆಲ್ಲ ಈರ್ಷೆಯಿಂದ ತನ್ನತ್ತ ನೋಡುತ್ತಿರುವಂತೆ ಹೆಮ್ಮೆಯಿಂದ ಬೀಗುತ್ತ ನಡೆದ ಅನಂತ ರಿಸೀವರ್ ಇಸಿದುಕೊಂಡು "ಹಲೋ...ಅನಂತ ಧಿಸ್ ಎಂದ." ಒಂದೆರಡು ನಿಮಿಷಗಳ ಕಾಲ ಆಕಡೆಯಿಂದ ಬರುತ್ತಿದ್ದ ಕಿವಿ ಮಾತು ಕೇಳುತ್ತಿದ್ದರೂ ಕೈ ಅಲ್ಲಿಯೇ ಇದ್ದ ಪೇಪರ್ ಮೇಲೆ ಪೆನ್ನಿನಿಂದ ಒಂದು ವಿಳಾಸವನ್ನು ಗುರುತುಹಾಕುತ್ತಿತ್ತು...ರಿಸೀವರ್ ಕೆಳಗಿಟ್ಟ ಆತ ರವಿಗೆ ಹೇಳುತ್ತಲೇ ತನ್ನ ಸೀಟಿನತ್ತ ನಡೆದ.

"ಇನ್‌ಫಾರ್ಮೇಶನ್ ಆಫೀಸಿನಿಂದ ಕರೆ ಬಂದಿದೆ. ನಾ ಬರೆದ ವರದಿ ಬಗ್ಗೆ ಐ.ಜಿ.ಪಿ. ಅವರು ಆಸಕ್ತಿ ಹೊಂದಿದ್ದಾರಂತೆ ಅದಕ್ಕೂ ಮೊದಲು ಅವರು ಒಂದು ಕಡೆ ಟೀಪಾರ್ಟಿಗೆ ಹೋಗುವವರಿದ್ದು ಅಲ್ಲಿಗೇ ಬರಲು ತಿಳಿಸಿದ್ದಾರೆ. ನಾನು ಅಲ್ಲಿಗೆ ಹೊರಟಿರುವೆ. ಸಾರ್ಜಂಟ್ ಸುಷಮಾ ಬಂದರೆ ಅವರಿಗೆ ಈ ವಿಳಾಸ ಕೊಡು. ನಾನು ಅಲ್ಲೇ ಇರುವದಾಗಿ ಹೇಳು ಅಥವಾ ಒಂದು ಗಂಟೆ ನಂತರ ನಾನು ಇಲ್ಲಿಗೇ ಬರುತ್ತೇನೆ..ಅಂತಾ ತಿಳಿಸು...ಬೈ..ಬೈ

ರವಿ ಮುಂದೆ ಬಂದು ವಿಳಾಸದ ಚೀಟಿ ಇಟ್ಟು ಸಿಳ್ಳುಹಾಕುತ್ತಾ ಹೊರಗೆ ಬಂದ ಅನಂತಗೆ ಒಂದು ವಿಚಾರ ಹೊಳೆಯಿತು. ಜೊತೆಯಲ್ಲಿ ಆಶಾಳನ್ನು ಏಕೆ ಕರೆದೊಯ್ಯಬಾರದು ಅಂತ.. ಐ.ಜಿ.ಪಿ. ಅವರೊಂದಿಗೆ ತಾನು ಮಾತನಾಡುವಾಗ ಆಕೆ ಜೊತೆಗಿದ್ದರೆ ಎಷ್ಟು ಚೆನ್ನ ಎಂದುಕೊಂಡ ಆತ ಪಕ್ಕದ ಹೊಟೆಲಿನತ್ತ ನಡೆದ ಅವಳಿಗೆ ಫೋನು ಮಾಡಲು.

ಆಶಾ ಅನಂತನ ಮಾತಿಗೆ ಒಪ್ಪಿಕೊಂಡು ಹತ್ತು ನಿಮಿಷಗಳಲ್ಲಿ ತಾನು ಹೊರಟು ಬರುವದ್ದಾಗಿಯೇ ವಿಜಯ ಟಾಕೀಜ ಎದುರು ಕಾಯಬೇಕೆಂದೂ ತಿಳಿಸಿದಳು. ಅದರಂತೆ ಅನಂತ ವಿಜಯ ಟಾಕೀಜ ಎದುರು ಕಾಯ್ತಾನಿಂತ. ಹದಿನೈದು ನಿಮಿಷಗಳಲ್ಲಿ ಆಕೆ ಆಟೋದಲ್ಲಿ ಬಂದಾಗ ಅದೇ ಆಟೋ ಏರಿ ಅನಂತ ತಾನು ಹೋಗಬೇಕಾದ ವಿಳಾಸ ತಿಳಿಸಿದ. ಭಾರತಿನಗರ ನಾಲ್ಕನೇ ಕ್ರಾಸ್...

ರಿಕ್ಷಾ ಓಡುತ್ತಿದ್ದಂತೆ ಆತ ಆಶಾಳತ್ತ ನೋಡಿದ. ಆಕೆ ಪ್ರೀತಿ ತುಂಬಿದ ದೃಷ್ಟಿ

ಅವನೆಡೆ ಬೀರಿ ಅವನ ಹೆಗಲಮೇಲೆ ತನ್ನ ತಲೆ ಆನಿಸಿದಳು ಮೆಲುವಾಗಿ. ಅನಂತನ ಬೆರಳುಗಳು ಅವಳ ಕೂದಲೊಂದಿಗೆ ಆಡತೊಡಗಿದವು.

ರಿಕ್ಷಾ ಭಾರತಿನಗರದ ನಾಲ್ಕನೇ ಕ್ರಾಸಿಗೆ ಬಂದಿತು. ಆಟೋ ಅಲ್ಲೇ ನಿಲ್ಲಿಸಿ ಬಾಡಿಗೆಕೊಟ್ಟು ಕಳಿಸಿದ ಅನಂತ ಸುತ್ತಲೂ ದೃಷ್ಟಿಸಿದ ನೂರು ಯಾರ್ಡ್ ದೂರದಲ್ಲೊಂದು ಬಂಗಲೆ ಕಾಣಿಸಿತು. ಅತ್ತಲೇ ಹೆಜ್ಜೆಹಾಕಿದ..ಮನೆ ಗೇಟಿಗೆ ಇದ್ದ "ಬ್ಲೌಂಡ ಹಾಗ್" ನಾಯಿ ಭೀಕರವಾಗಿ ಗರ್ಜಿಸಿತು. ಆಶಾ ಕಿಟಾರನೆ ಕಿರುಚಿ ಅನಂತನನ್ನು ತಬ್ಬಿಕೊಂಡಳು. ಅನಂತ ಸಮಾಧಾನಪಡಿಸಿದ. "ಹೆದರಬೇಡ ಆಶಾ...ನಾಯಿಯನ್ನು ಕಟ್ಟಿಹಾಕಿದೆ"

ಮನೆ ಬಾಗಿಲು ತೆರೆಯಿತು. ಆ್ಯಂಗ್ಲೋ ಇಂಡಿಯನ್ ತರುಣಿ ಬಹಳವೆಂದರೆ ಇಪ್ಪತ್ತೈದು ಇಪ್ಪತ್ತಾರು ವರ್ಷದ ಯುವತಿ ಸ್ವಾಗತಿಸಿದಳು..ಇಂಗ್ಲೀಷನಲ್ಲಿ ನೀವು ಮಿಸ್ಟರ್ ಅನಂತ...ರಿಪೋರ್ಟರ್ ಅನಂತ ?" ಎಂದು ಕೇಳಿದಾಗ ಹೆಮ್ಮೆಯಿಂದ ಎದೆ ಉಬ್ಬಿಸಿ ಆತ ನುಡಿದ "ಹೌದು"..ಆಕೆ ಅತ್ಯಂತ ವಿನಯದಿಂದ ಅವರನ್ನು ಒಳಗೆ ಕರೆದೊಯ್ದು ಹಾಲಿನಲ್ಲಿದ್ದ ಸೋಫಾದ ಮೇಲೆ ಕೂಡಿಸಿ ಮೂಲೆಯಲ್ಲಿದ್ದ ರೂಮಿನ ಬಾಗಿಲು ತೆರೆದು ಮರೆಯಾದಳು. ಅನಂತ ಅಚ್ಚರಿಯಿಂದ ಸುತ್ತಲೂ ನಿರೂಪಿಸತೊಡಗಿದ - ಟೀಪಾರ್ಟಿ ಇದೆ ಎಂದು ತಿಳಿಸಿತ್ತು..ಆದರೆ ಇಲ್ಲಿ ?..ತನ್ನ ಬಿಟ್ಟರೆ ಮತ್ತೊಂದು ನರಪಿಳ್ಳೆ ಇಲ್ಲವಲ್ಲ ? ಇದೇನಿದು ?... ಅವನ ಯೋಚನೆಗೆ ಆಕೆ ಪುನಃ ಭಂಗ ತಂದಳು "ಬನ್ನಿ ಸಾಹೇಬರು ತಮ್ಮನ್ನು ಕರೆಯುತ್ತಿದ್ದಾರೆ"... ಅನಂತನೊಂದಿಗೆ ಆಶಾ ಸಹ ಏಳುತ್ತಿದ್ದಂತೆ ಅವಳನ್ನು ತಡೆದು ಅಲ್ಲೇ ಕೂಡುವಂತೆ ತಿಳಿಸಿ ಕೇವಲ ಅನಂತದೊಂದಿಗೆ ಮನೆಯಲ್ಲಿದ್ದ ರೂಮಿನೆಡೆ ನಡೆದಳು. ಆ ಮೋಹನಾಂಗಿ. ಮಧ್ಯೆ ಮಧ್ಯರಾತ್ರಿ ಸಿಕ್ಕಿಹಾಕಿಕೊಂಡ ಪುಟ್ಟ ಬಾಲೆಯಂತೆ ಬೆದರಿದ ಆಶಾ ಮೈಯೆಲ್ಲ ಮುದ್ದೆ ಮಾಡಿಕೊಂಡು ಕುಳಿತಳು ಸೋಫಾದ ಮೇಲೆ..

ಮೋಹನಾಂಗಿ ರೂಮಿನ ಬಾಗಿಲು ತೆರೆದು ಅನಂತನನ್ನು ಒಳಗೆ ಕಳಿಸಿ ತಾನು ಹೊರಗೆ ಉಳಿದಳು. ಬಾಗಿಲು ತನ್ನಷ್ಟಕ್ಕೆ ತಾನೇ ಮುಚ್ಚಿಕೊಂಡಿತು. ಒಳಗೆ ಕಾಲಿಟ್ಟ ಅನಂತ.

ಅದೊಂದು ದೊಡ್ಡ ಹಾಲಿನಂತಿದ್ದ ರೂಮು. ಎಡಬಲಕ್ಕೆ ಬೆಲೆಬಾಳುವ ಸೋಫಾ, ಮಧ್ಯದಲ್ಲಿ ಕಾರ್ಪೆಟ್. ಎದುರಿಗೆ ವಿಶಾಲವಾದ ಮೇಜು. ಮೇಜಿನಮೇಲೆ ನಾಲ್ಕೈದು ಫೋನುಗಳು. ಅದರ ಹಿಂದಿದ್ದ ಚೇರ್‌ಮೇಲೆ ಕುಳಿತಿದ್ದ ವಿಕಾರಮುಖ ಹೊತ್ತ ದುಷ್ಟವ್ಯಕ್ತಿ...ಅನಂತನನ್ನು ನೋಡುತ್ತಲೇ ತನ್ನ ಎಲ್ಲ ಹುಳುಕುಹಲ್ಲು

ಪ್ರದರ್ಶಿಸಿ ಸ್ವಾಗತಿಸಿತು.

''ಬನ್ನಿ ರಿಪೋರ್ಟರ ಮಹಾಶಯರೆ..ನಾನು ನಿಮ್ಮ ಸ್ವಾಗತಕ್ಕೆ ಕಾದಿದ್ದೇನೆ''. ತಕ್ಷಣವೇ ಅನಂತನಿಗೆ ಹೊಳೆದು ಹೋಯಿತು ತಾನು ಅಪಾಯದ ಬಲೆಯಲ್ಲಿ ಸಿಲುಕಿಕೊಂಡೆ ಎಂದು, ಸರಕ್‌ನೆ ಹಿಂದಕ್ಕೆ ಹೊರಳಿ ಬಾಗಿಲು ತೆರೆಯಲು ಪ್ರಯತ್ನಿಸಿದ. ಬಾಗಿಲು ಹೊರಗಿನಿಂದ ಲಾಕ್ ಆಗಿತ್ತು. ಅತನ ಮೈ ತಪ್ಪನೇ ತೋಯುತ್ತಿದ್ದಂತೆ ಹಿಂದಿನಿಂದ ಬಂದಿತು ವಿಕಟನಗೆ...ಅದರೊಂದಿಗೆ ಕಂಚಿನ ಕಂಠ.

''ಮುಠ್ಠಾಳ..ನಾನು ನಿನ್ನಷ್ಟು ಮೂರ್ಖನಲ್ಲ ತಿಳೀತಾ..ನನ್ನ ಆಜ್ಞೆ ಇಲ್ಲದೇ ನೀನು ಹೊರಗೆ ಹೋಗಲಾರೆ..ಹಾಂ..ಇನ್ನು ಒಂದು ಮಾತು..ಇದು ಸೌಂಡ್‌ಪ್ರೂಫ್ ಕೊಠಡಿ.. ನೀನು ಗಂಟಲು ಹರಿಯುವಂತೆ ಕಿರುಚಿದರೂ ಹೊರಗಿದ್ದವಂತೆ ಕೇಳಿಸುವುದು.

ಸದ್ಯದ ಪರಿಸ್ಥಿತಿಯಲ್ಲಿ ಧೈರ್ಯವೇ ತನ್ನನ್ನು ಕಾಯುವ ಅಸ್ತ್ರವೆಂದು ಮನಗಂಡ ಅನಂತ ಆದಕ್ಕೆ ಮೊರೆಹೋದ..ಎದೆಯೊಳಗೆ ಅಳುಕಿದ್ದರೂ ಅದನ್ನು ತೋರಗೊಡದೆ ಧೈರ್ಯದಿಂದ ಹೆಜ್ಜೆ ಇಡುತ್ತ ಮೇಜಿನ ಬಳಿ ಇದ್ದ ಕುರ್ಚಿಜೊತೆ ಅವನಿಗೆದುರಾಗಿ ಕುಳಿತ. ಜೇಬಿನಿಂದ ''ಮಧುರ'' ಸಿಗರೇಟ್ ಪ್ಯಾಕ್ ತೆಗೆದು ಅದರಿಂದ ಒಂದು ಸಿಗರೇಟು ಜಗ್ಗಿ ಬಾಯಿಗಿರಿಸಿಕೊಂಡ. ಲೈಟರನಿಂದ ಅದಕ್ಕೆ ಅಗ್ನಿಸ್ಪರ್ಷಮಾಡಿ ಭುಸಭುಸನೆ ಎರಡುಮೂರು ಬಾರಿ ಎಳೆದು ಘುಸ್ ಎಂದು ಹೊಗೆ ಬಿಟ್ಟ.

ಅನಂತನ ಪ್ರತಿಯೊಂದು ಚಟುವಟಿಕೆ ನಿರೀಕ್ಷಿಸುತ್ತಿದ್ದ ಆ ವ್ಯಕ್ತಿಗೆ ಸ್ವಲ್ಪ ಅಧೈರ್ಯವುಂಟಾಯಿತು. ಮೊದಲು ಬೆದರಿ ಬಾಗಿಲಿಗೆ ಒಡಿದ ಈತನಲ್ಲಿ ಈ ಪರಿಯ ಧೈರ್ಯ ಎಲ್ಲಿಂದ ಬಂದಿತು ಅಂತ. ಅವನ ಮನದಲ್ಲಿ ನಡೆದ ತುಮುಲ ಅರ್ಥವಾಯಿತು ಅನಂತನಿಗೆ. ಹುಬ್ಬುಹಾರಿಸಿ ಕೇಳಿದ. ''ಹೇಳು ಏನಾಗಬೇರು ನನ್ನಿಂದ ?''.. ಉತ್ತರ ಬಾರದಿರಲು ಜೋರಾಗಿ ಪ್ರಶ್ನಿಸಿದ

''ನನ್ನನ್ನು ಈ ರೀತಿ ಇಲ್ಲಿ ಕರೆಸಿದ್ದೇಕೆ ?..'' ಮೇಜಿನ ಮೇಲೆ ಮುಷ್ಠಿಮಾಡಿ ಗುದ್ದಿದಾಗ ಈ ವಿಕಾರ ಮನುಷ್ಯ ಗುಡುಗಿದ.

''ಏಯ್ ಹಾಗೇಕೆ ಕುಟ್ಟುತ್ತಿರುವೆ. ಸ್ವಲ್ಪ ತೆಪ್ಪಗಿರು.''

ಆ ಗುಡುಗಿಗೆ ಅನಂತರ ಎದೆಯಲ್ಲಿ ಎಲ್ಲೋ ಒಂದೆಡೆ ''ಚಳಕ್'' ಎಂದಿತು.

''ಏಯ್ ರಿಪೋರ್ಟರ ಮಹಾರಾಜಾ. ನನ್ನ ಮಾತಿಗೆ ನೀನು ಸರಿಯಾಗಿ ಸತ್ಯವಾದ ಉತ್ತರಕೊಟ್ಟರೆ ನಿನ್ನ ಆರೋಗ್ಯಕ್ಕೆ ಯಾವ ಹಾನಿಯೂ ಇಲ್ಲ... ನೀನೇನಾದರೂ ತಪ್ಪಿದೆಯಲ್ಲಿ ದೇವರೂ ನಿನ್ನ ಕಾಪಾಡಲಾರ ತಿಳಿಯಿತೇ ?''

''ಬೆದರಿಕೆ ಆಮೇಲೆ ಮೊದಲು, ಹೇಳು ನನ್ನನ್ನು ಈ ರೀತಿ ಸುಳ್ಳು ಹೇಳಿಕರಿಸಿದ್ದೇಕೆ ?

''ನಿನ್ನ ಬಾಯಿ ಬಿಡಿಸಲು....!''

''ಯಾವುದರ ಬಗ್ಗೆ....''

''ಅದೇ ಪತ್ರಿಕೆಯಲ್ಲಿ ಬರೆದಿರುವೆಯಲ್ಲ...ಶಬನಮ್ ಮಾರಾಟದ ಬಗ್ಗೆ, ಈ ವಿಷಯ ನಿನಗೆ ತಿಳಿಸಿದವರಾರು ?

''ನನಗಾರೂ ತಿಳಿಸಿಲ್ಲ....ನಾನು ಕಣ್ಣಾರೆ ಕಂಡಿದ್ದನ್ನು ಬರೆದಿರುವೆ !

''ಅಂದರೆ ಹರಾಜು ನಡೆದ ಸಮಯದಲ್ಲಿ ನೀನು ಕ್ಲಬ್‌ನಲ್ಲಿದ್ದೆಯಾ ?''

''ಹೌದು''

''ಇದು ಅಸಾಧ್ಯ... ಕ್ಲಬ್ಬಿನ ಸ್ಥಾಯೀ ಸದಸ್ಯರ ಹೊರತಾಗಿ ಅಲ್ಲಿ ಬೇರೆಯಾರಿಗೂ ಪ್ರವೇಶವಿರಲಿಲ್ಲ...ನೀನ್ಹೇಗೆ ಪ್ರವೇಶಿಸಿದೆ.

''ಅದು ನನ್ನ ವೃತ್ತಿಯ ಗುಟ್ಟು''

''ಗುಟ್ಟು ರಟ್ಟು ಮಾಡುವಂತೆ ಹೇಳಲೆಂದೇ ನಿನ್ನ ಕರೆಸಿದ್ದು.''

''ಅದೆಂದಿಗೂ ಸಾಧ್ಯವಿಲ್ಲ !''

''ಅಸಾಧ್ಯವೆಂಬುದು ನನಗೆ ತಿಳಿಯದು. ನಿನ್ನ ಬಾಯಿ ಹೇಗೆ ಬಿಡಿಸಬೇಕು ಅನ್ನೋದು ನನಗೆ ಚೆನ್ನಾಗಿ ಗೊತ್ತಿದೆ.''

''ಅಷ್ಟು ಸುಲಭವಾಗಿ ನಾನು ಬಾಯಿ ಬಿಡುವವನಲ್ಲ. ಬೇಕಾದರೆ ಪ್ರಯತ್ನಿಸು''

''ಜಂಭದ ಮಾತು ಬೇಡ...ಎಂಥೆಂಥವರನ್ನೇ ನಾನು ಒಂದು ಗಂಟೆಯಲ್ಲಿ ಬೊಂಬೆ ಥರ ಆಡಿಸಿದ್ದೇನೆ...

'ಮೊದಲೇ ಹೇಳಿರುವೆನಲ್ಲ ಪ್ರಯತ್ನಿಸು ಅಂತ. ನೀನು ಒಂದು ಗಂಟೆ ನನ್ನ

ಬಳಿ ಕಳೆಯುವದಾದರೆ ನಾನು ಪ್ರಮಾಣ ಮಾಡಿ ಹೇಳುತ್ತೇನೆ ಸರಿಯಾಗಿ ಅರವತ್ತೊಂದನೇ ನಿಮಿಷ ಅಷ್ಟು ವ್ಯವಸ್ಥೆ ಮಾಡಿಯೇ ನಾನಿಲ್ಲಿಗೆ ಬಂದದ್ದು.''

ಒಮ್ಮಿಂದೊಮ್ಮೆಲೆ ಕಕ್ಕಾಬಿಕ್ಕಿಯಾದ ಆ ದೈತ್ಯಮಾನವ. ಅನಂತರ ಮಾತಿನ ಮೇಲೆ ನಂಬಿಕೆ ಬಾರದು. ಒಂದು ವೇಳೆ ಅದು ಸತ್ಯವಾಗಿದ್ದರೆ.

''ನನ್ನನ್ನು ಹೆದರಿಸಲು ಬುರುಡೆ ಬಿಡಬೇಡ. ನೀನು ಯಾರಿಗೂ ಫೋನು ಮಾಡಿಲ್ಲ ಅಂತ ನನಗೆ ತಿಳಿದಿದೆ''.

''ಫೋನು ಮಾಡಲಿಲ್ಲ ನಾನು....ಚೀಟಿ ಇರಿಸಿಬಂದಿರುವೆ. ಅದರಲ್ಲಿ ಇಲ್ಲಿಯ ವಿಶೇಷವಿದೆ... ಆ ವ್ಯಕ್ತಿಯ ಕೈಗೆ ತಲುಪುತ್ತಲೂ.....

ಅರ್ಧಕ್ಕೆ ಮಾತು ನಿಲ್ಲಿಸಿದ ಅನಂತ ಸಿಗರೇಟು ಆ್ಯಶ್‌ಟ್ರೇಯಲ್ಲಿ ಅದುಮಿದ.

''ಹೇಳು, ಯಾರಿಗೆ ಚೀಟಿ ಇಟ್ಟಿರುವೆ? ಅಸಹನೆಯಿಂದ ಕೂಗಿದ ದೈತ್ಯ''

''ಹೆಸರು ಕಿವಿಗೆ ಬಿದ್ದರೆ ನಿನ್ನ ಎದೆಗುಂಡಿಗೆ ಒಡೆದು ಹೋಗುತ್ತದೆ. ಮೇಜರ್ ಹೇಮಂತನ ಹೆಸರು ಕೇಳಿದ್ದೀಯಲ್ಲ ?''

''ಏನೆಂದೆ ? ಮೇಜರ್ ಹೇಮಂತ ?'' ಹೌಹಾರಿ ಪ್ರಶ್ನೆ ಬಂದಿತು.

''ನಾ ಮೊದಲೇ ಹೇಳಿದ್ದೆ. ನಿನ್ನ ಗುಂಡಿಗೆ ಒಡೆಯುತ್ತೆ ಅಂತ. ಆ ಮೇಜರ ಹೇಮಂತನ ಸಹಾಯಕ ಸಾರ್ಜಟ್ ಷುಮಾರಿಗೆ ಚೀಟಿ ಇಟ್ಟಿರುವೆ''.

''ಯು...ಸ್ಕೌಂಡ್ರೆಲ್ ಇರು ನಿನಗೆ ಮಾಡುತ್ತೇನೆ.''

ವಿಕಾರವಾಗಿ ಅರಚುತ್ತಾ ಆತ ಕುರ್ಚಿಯಿಂದ ಮೇಲೆದ್ದಾಗ ಅವನ ವಿಶಾಲ ದೇಹ ಅಜಾನುಬಾಹು ಆಕೃತಿ ಕಂಡು ತಬ್ಬಿಬ್ಬಾದ ಅನಂತ....ತನ್ನ ಅವತಾರವಿನ್ನು ಮುಗಿಯಿತು ಅಂದುಕೊಂಡು ಕುರ್ಚಿಯಿಂದ ಮೇಲೆದ್ದ. ಮೇಲೆದ್ದು ಹೋಗುವದಾದರೂ ಎಲ್ಲಿಗೆ ಗಡಿಯಲ್ಲಿ ಸಿಲುಕಿಕೊಂಡದ್ದಾಗಿತ್ತು...

ಧಪ್..ಧಪ್ ಎಂದು ಹೆಜ್ಜೆ ಇಡುತ್ತ ಬಂದ ಆತ ಅನಂತನ ಕೆನ್ನೆ, ಬೆನ್ನು ಹೊಟ್ಟೆ.. ಎಲ್ಲಿ ಬೇಕಲ್ಲಿ ಬಾರಿಸತೊಡಗಿದ. ಮೊದಲು ಅದನ್ನು ವಿರೋಧಿಸಿ ಪ್ರತಿಭಟಿಸಿದ ಅನಂತ ಒಂದೆರಡು ಮುಕ್ಕು ಅವನಿಗೆ ಕೊಟ್ಟರೂ ಅದು ತಗಲೇಕ ಬೇಕಲ್ಲ...ಮುಂದೆ ಮುಂದೆ ಕೇವಲ ಅನಂತನ ಚೀರಾಟ ನರಳಾಟ ಆರಂಭವಾಯಿತು.

ಹತ್ತೆಂಟು ನಿಮಿಷಗಳಲ್ಲಿ ಅನಂತ ಧರಾಶಾಹಿಯಾಗಿದ್ದ. ಮೂಗು, ಬಾಯಿ ಕಿವಿಗಳಿಂದ ರಕ್ತ ತೊಟಕಲಾರಂಭಿಸಿತ್ತು.. ಒಂದು ಬಾರಿ ಅವನನ್ನು ಕಾಲಿನಿಂದ ಒದ್ದು ಬುಸಬುಸನೇ ತೇಕುತ್ತ ಮೇಜರ ಬಳಿ ಬಂದ ದೈತ್ಯ ಗಾಜಿನ ಪಾತ್ರೆಯನ್ನೇ ಅದರಲ್ಲಿದ್ದಿ ಎಲ್ಲಾ ನೀರು ಒಂದೇ ಸಾರಿ ಕುಡಿದು ಮುಗಿಸಿದಾಗ ತನ್ನ ಪೂರ್ವದ ಸ್ಥಿತಿಗೆ ಬಂದಿದ್ದ.

ಅದೇ ಸಮಯಕ್ಕೆ ಸರಿಯಾಗಿ ಹೊರಗಡೆಯಿದ್ದ ನಾಯಿ ಬೊಗಳಿತು. ಎದೆ ನಡುಗಿಸುವಂತೆ.. ಧಡಧಡನೆ ಬಾಗಿಲಿಗೆ ಬಂದು ಜೇಬಿನಲ್ಲಿದ್ದ ಬೀಗದ ಕೈಯಿಂದ ಬೀಗ ತೆರೆದು ಹೊರಬಂದ. ಬಂದವ ಅವಾಕ್ಕಾಗಿ ನಿಂತುಬಿಟ್ಟ ಸೋಫಾದ ಮೇಲೆ ಕುಳಿತಿದ್ದ ಆಶಾಳನ್ನು ಕಂಡು... ತನ್ನೆದುರು ಧುತ್ ಎಂದು ಬಂದುನಿಂತ ಆ ರಕ್ಕಸನನ್ನು ಕಂಡ ಆಶಾ ಬೆದರಿ ಎದ್ದುನಿಂತಳು.

''ನೋ..ನೋ..ಹೆದರಬೇಡ..ನನ್ನಿಂದ ನಿನಗೆ ಯಾವ ಅಪಾಯವೂ ಇಲ್ಲ.''

''ಯಾರು ನೀನು ? ನೀನು ಇಲ್ಲಿ ಏಕೆ ಬಂದೆ ?... ಅನಂತ ಎಲ್ಲಿ ?''

''ಓಹೋ...ನೀನು ಅನಂತನೊಂದಿಗೆ ಬಂದಿರುವೆಯಾ ?..ಮೊದಲೇ ಹೇಳಬಾರದೆ ? ಹೋಗು. ಆತ ಒಳಗಿನ ರೂಮಿನಲ್ಲಿದ್ದಾನೆ.''

ಅಷ್ಟು ಹೇಳಿ ಆತ ಸರಸರನೆ ಹಿಂಬಾಗಿಲಕಡೆ ನಡೆದಂತೆ ಮಾಡಿ ಒಮ್ಮೆಲೆ ಹೊರಟಿದ. ಆಶಾ ಬಾಗಿಲು ದೂಡಿ ರೂಮಿನೊಳಗಡೆ ಕಾಲಿಡುತ್ತಿದ್ದಂತೆ ಅವಳ ಹಿಂದೆಯೇ ಬಂದ. ಆತ ಆಕೆಯನ್ನು ಒಳಗೆ ದೂಡಿ ಬಾಗಿಲು ಮುಚ್ಚಿದ.

ಬಲವಾಗಿ ದಬ್ಬಿದ್ದಿದಿಂದಾಗಿ ಆಶಾ ಮುಂಚೋಲಿ ತಪ್ಪಿ ಬಿದ್ದಳು. ನೇರವಾಗಿ ಅನಂತನ ನಿಶ್ಚೇಚ ಶರೀರದ ಮೇಲೆ ಅವಳ ಬಾಯಿಂದ ಚೀತ್ಕಾರ ಹೊರಟಿತು. ನಗುತ್ತ ಅವಳ ತಲೆಯ ಮೇಲೆಯೇ ಬಂದ ಆತ. ''ನಿನ್ನ ಗೆಳೆಯ ತಪ್ಪು ಮಾಡಿದ. ತಾನು ಸಾಯುವವಲ್ಲದೇ ನಿನ್ನನ್ನು ಸಹ ಸಾವಿನ ಬಾಯಿಗೆ ನೂಕಿದ.. ಆತನನ್ನು ಸಾಯಿಸಿದ್ದಾಯಿತು. ನಿನ್ನನ್ನು ಜೀವಸಹಿತ ಬಿಡುವಂತಿಲ್ಲ. ಒಂದು ಬಾರಿ ನಿನ್ನೊಂದಿಗೆ ಚೆನ್ನಾಗಿ ಸುಖಿಪಟ್ಟು ಅನಂತರ ಸೋತು ಮುರಿದು ಬಗೆಯುತ್ತೇನೆ.''

ಆಶಾನ ಮೇಲೆ ನೆಗೆದ ಆತ ಅವನಿಂದ ತಪ್ಪಿಸಿಕೊಂಡು ಆಕೆ ಬಾಗಿಲೆಡೆ ಓಡಿದಳು. ಪೂರ್ಥ ಬಾಗಿಲು ಭದ್ರಬಿತ್ತು. ಅಲ್ಲಿಂದ ಮುಂದಲ್ಲಿ ಹೋಗುವದು ? ದಾರಿ ಕಾಣದೇ ಅತ್ತಿತ್ತ ನೋಡಿದಳು. ದೃಷ್ಟಿಗೆ ಬಿದ್ದಿತು. ಟಿಪಾಯ್...ಪ್ಲಾವರಪಾಟ್. ಅವುಗಳನ್ನೇ ಎತ್ತಿ ಒಂದೊಂದಾಗಿ ಅವಳತ್ತ ಎಸೆದಾಗ

ಅವೆಲ್ಲವನ್ನು ಎದೆಚಾಚಿ ಸ್ವೀಕರಿಸಿದ ಆತ ನಗುತ್ತ ಎದೆ ತಟ್ಟುತ್ತ ಬಂದು ಅವನನ್ನು ಅನಾಮತ್ತಾಗಿ ಎತ್ತಿ ಸೋಫಾದ ಮೇಲೆ ಎಸೆದ. ಅವಳ ಚೀರಾಟ, ಒದರಾಟ ಕೂಗು ಯಾವವೂ ಅವನ ಕಿವಿಗೆ ಬೀಳಲಿಲ್ಲ. ಎರಡುಮೂರು ನಿಮಿಷಗಳು ಆಶಾ ವಿವಸ್ತ್ರವಾಗಿ ಬಿಕ್ಕುತ್ತ ಸೋಫಾದ ಹಿಂದೆ ಅಡಗಿಕೊಂಡಿದ್ದಳು.

ಅಟ್ಟಹಾಸಗೈಯುತ್ತಾ ಆತ ಮುಂದಡಿಯಿಟ್ಟ.

ಹಿಂದಿನಿಂದ ಬಂತು, ಗುರ್ರ ಗುರ್ರ ಸದ್ದು.

ಹೊರಟಿದ ಅವನ ನಾಯಿ ಬ್ಲೌಂಡೆಡಾಗ್ ಜೊತೆ ನಿಂತಿದ್ದಳು ಆರು ಘೂಟಿಗೂ ಸ್ವಲ್ಪ ಮೀರಿ ಎತ್ತರವಿದ್ದ ಮೋಹನಾಂಗಿ..

ಸತ್ಯ - ನಂಬಲಾರದ ಸತ್ಯ. ಅಪರಿಚಿತರ ಮೈಮೇಲೆ ಬಿದ್ದು ಚಿಂದಿ ಚಿಂದಿ ಮಾಡಬಲ್ಲ ನಾಯಿ ಅವಳ ಬಳಿನಿಂತಿತ್ತು ದಾಸನಾಗಿ.

''ಹಲೋ..ಹೇಗಿರುವೆ ಗೆಳೆಯಾ?''...ಆಕೆ ಕೇಳಿದಳು.

''ಯಾರು ನೀನು...ನೀನು ಇಲ್ಲಿಗೆ ಏಕೆ ಬಂದೆ ?''

''ನಾನು ಸಾರ್ಜಂಟ ಸುಷಮಾ - ಅನಂತನ ಕರೆಯಿಂದಾಗಿ ಬಂದಿರುವೆ. ದೈತ್ಯಮಾನವ ಒಮ್ಮೆಲೆ ತಣ್ಣಗಾದ - ಅನಂತನ ಮಾತು ಸತ್ಯವಾಗಿತ್ತು. ಆವಾಗಲೇ ಸುಷಮಾಳ ದೃಷ್ಟಿ ನೆಲದ ಮೇಲೆ ಬಿದ್ದಿದ್ದ ಅನಂತನತ್ತ ಹರಿದು ಆಕೆ ಅತ್ತ ಧಾವಿಸಿದಳು. ಅದೇ ಸರಿಸಮಯ ಎಂದು ಭಾವಿಸಿದ ದೈತ್ಯ ಅವಳ ಮೇಲೆ ಹಾರಿ ಅವಳತ್ತ ತ್ರಿಬಾಹುಗಳಲ್ಲಿ ಬಂಧಿಸಿದ. ವಿಲಿವಿಲಿ ಒದ್ದಾಡುತ್ತ ಸುಷಮಾ ಅವನ ಉಕ್ಕಿನ ಹಿಡಿತದಿಂದ ಬಿಡಿಸಿಕೊಳ್ಳಲು ಪ್ರಯತ್ನಿಸಿ ಆಗದೇ ಸೋತುಬಸವರಿದು ತನ್ನತ್ತಲೇ ನೋಡುತ್ತಿದ್ದ ನಾಯಿಗೆ ಆಜ್ಞೆ ನೀಡಿದಳು.

''ಫ್ರೆಂಡ್..ಕಮ್..ಕ್ಯಾಚ್..ಅಟ್ಯಾಕ್..ಅಟ್ಯಾಕ್..''

ಹುಲಿಯಂತೆ ಗುರುಗುಟ್ಟಿದ ತನ್ನ ನಾಯಿ ತನ್ನ ಮೇಲೆಯೇ ಹಾರಲು ಮುಂದಾದಾಗ ಆತ ಕಕ್ಕಾಬಿಕ್ಕಿಯಾಗಿ ಸುಷಮಾಳನ್ನು ಬಿಟ್ಟು ನಾಯಿಯನ್ನು ನಿಯಂತ್ರಿಸಲು ಮುಂದಾದ.

ಟೈಗರ್..ಟೈಗರ್..ಗೋ ಬ್ಯಾಕ್..ಗೋ..ಗೋ...!

ನಾಯಿ ಕೇಳಬೇಕಲ್ಲ.. ಹಾರಿ ಆತನ ಗಂಟಲನ್ನು ಹಿಡಿಯಿತು. ಕಿಟಾರನೆ

ಕಿರುಚಿಕೊಂಡ ಆತ ಅದರ ಹಿಡಿತದಿಂದ ಪಾರಾಗಲು ಬಿಡಿಸಿಕೊಳ್ಳಲು ಒದ್ದಾಡಿದ.. ಆಗಲಿಲ್ಲ. ಸುಷಮಾ ಮೆಲುವಾಗಿ ಕರೆದಳು.

''ಪ್ರೆಂಡ..ಕಮ್‌ಹಿಯರ್..''

ಆಶ್ಚರ್ಯ..ನಾಯಿ ಅವನ ಗಂಟಲು ಬಿಟ್ಟು ಸುಷಮಾಳ ಬಳಿ ಬಂತು. ಗಂಟಲಿನಿಂದ ಇಳಿಯುತ್ತಿದ್ದ ರಕ್ತವನ್ನು ಕೈಯಿಂದ ಸವರಿ ನೋಡಿಕೊಂಡ ದೈತ್ಯ.

''ಏಕೆ ? ನಂಬಿಕೆ ಆಗಲೊಲ್ಲದೆ...ನಾನು ನಾಯಿಗೆ ತರಬೇತಿ ನೀಡುವಲ್ಲಿ ನಿಪುಣೆ ತಿಳಿಯಿತಾ ?.. ನಿನ್ನ ನಾಯಿಯನ್ನು ಮೂರೇ ನಿಮಿಷಗಳಲ್ಲಿ ನನ್ನ ಕೈವಶ ಮಾಡಿಕೊಂಡೆ. ಅದೀಗ ನಿನ್ನನ್ನೇ ಕೊಂದುಹಾಕುತ್ತದೆ. ಹೇಳು ಯಾರು ನೀನು ?.. ನಿನ್ನ ಹಿಂದೆ ಯಾರಿದ್ದಾರೆ ?'' ಯಾರ ಆದೇಶದ ಮೇರೆಗೆ ನೀನು ಈ ರೀತಿ ಮಾಡಿರುವೆ. ಬೇಗ ಬೊಗಳು.''

ಅಲ್ಲಲ್ಲಿ ಹರಿದು ತುಂಡಾಗಿ ಹರಡಿದ್ದ ವಸ್ತ್ರಗಳನ್ನು ಒಂದೊಂದಾಗಿ ಹೆಕ್ಕಿ ಆಶಾಳತ್ತ ಒಗೆಯುತ್ತ ಕೇಳಿದಳು ಸುಷುಮಾ. ಆ ದೈತ್ಯನಿಂದ ಯಾವ ಉತ್ತರವೂ ಬರದಾಗಲು ಅವಳ ಮೈಯಲ್ಲಿಯ ರಕ್ತ ಕೊತಕೊತ ಕುದಿಯತೊಡಗಿತು. ಕೆಂಗಣ್ಣುಗಳಿಂದ ಅವನನ್ನು ಸುಟ್ಟುಬಿಡುವಂತೆ ನೋಡುತ್ತ ನಾಯಿಗೆ ಆದೇಶವಿತ್ತಳು.

''ಫ್ರೆಂಡ...ಗೋ...ಗೋ...ಕಿಲ್‌ಹಿಮ್''

ನಾಯಿ ಭಯಂಕರವಾಗಿ ಗರ್ಜಿಸುತ್ತ ಮೂಗನ್ನು ಹಿಗ್ಗಿಸಿ, ಮೇಲ್ತುಟಿಯನ್ನು ಎಳೆದು ತನ್ನ ಭಯಾನಕ ಕೋರೆಹಲ್ಲುಗಳನ್ನು ಪ್ರದರ್ಶಿಸುತ್ತ ಅವನ ಮೇಲೆ ನೆಗೆಯಲು ಸಿದ್ಧವಾಗುತ್ತಿದ್ದಂತೆ ಆತ ದಯನೀಯವಾಗಿ ಕೇಳಿಕೊಂಡ.

''ಬೇಡ..ಬೇಡ.. ಈ ನಾಯಿಯನ್ನು ತಡೆಯಿರಿ.''

''ಹಾಗಾದರೆ ಹೇಳು ಯಾರು ನೀನು ? ಯಾರ ಆದೇಶದ ಮೇರೆಗೆ ಕೆಲಸ ಮಾಡುತ್ತಿರುವೆ ?''

''ನಾನೂ ನಿಮ್ಮ ಯಾವ ಪ್ರಶ್ನೆಗೂ ಉತ್ತರಿಸಲಾರೆ...ನಿಮಗೆ ಕೈಮುಗಿಯುತ್ತೇನೆ. ಈ ನಾಯಿಯನ್ನು ತಡೆಯಿರಿ.''

ಸುಷಮಾ ಮುಂದೆ ಮಾತನಾಡಲಿಲ್ಲ. ನಾಯಿಯ ತಲೆಯ ಮೇಲೆ ಮೆಲುವಾಗಿ ಕೈಯಾಡಿಸುತ್ತ ಎರಡುಬಾರಿ ತಟ್ಟಿದಳು. ಅಷ್ಟೇ ಸಾಕಾಯಿತು ಅದಕ್ಕೆ

'ಟಣ್' ಎಂದು ನೆಗೆಯಿತು ಅದು ನೇರವಾದ ಆ ದೈತ್ಯನ ಕುತ್ತಿಗೆಗೆ. ಅದನ್ನು ನಿರೀಕ್ಷಿಸಿದ್ದ ಆತ ಚೀರುತ್ತ ತನ್ನ ಎಡಗೈ ಅಡ್ಡತಂದ. ನಾಯಿಯ ಬಾಯಿಗೆ ಎಡಗೈ ದೊರೆಯಿತು ದಳದಳನೆ ಇಳಿಯಿತು ರಕ್ತ. ಆತ ನೋವಿನಿಂದ ಕಿರುಚಿಕೊಂಡ. ನಾಯಿ ಮತ್ತೆ ನೆಗೆಯಿತು. ಈ ಬಾರಿ ಬಲಗೈ..ಮೂರನೇ ಬಾರಿ .. ನಾಲ್ಕನೇ ಬಾರಿ ನೆಗೆದಾಗ ಅವನ ಎದೆಯ ಮೇಲಾದ ಗಾಯದಿಂದಾಗಿ ರಕ್ತ ಕಾಣಿಸಿಕೊಂಡಿತು. ಆತ ಸೋತು ತಣ್ಣಗಾದ. ಅವನ ಕಣ್ಣುಗಳಲ್ಲಿ ಸಾವಿನ ಕರಿನೆರಳು ಮೂಡುತ್ತಿದ್ದಂತೆ ನಾಯಿ ನೆಗೆದಿತ್ತು ನೇರವಾಗಿ ಕುತ್ತಿಗೆಗೆ. ಅದರ ಆಕ್ರಮಣ ಹುಸಿ ಹೋಗಲಿಲ್ಲ.. ಜೋರಾಗಿ ಸಾಯುವಂತೆ ಕಿರುಚಿದ ಆತ ನೆಲಕ್ಕುರುಳಿದ. ನಾಯಿ ಮನಬಂದಂತೆ ಅವನನ್ನು ಕಡಿದು ಘಾಸಿಗೊಳಿಸಲಾರಂಭಿಸಿತು. ಆತ ನಾಲ್ಕೈದು ನಿಮಿಷಗಳಲ್ಲಿ ಮಾಂಸದ ಮುದ್ದೆಯಾಗಿ ನೆಲದ ಮೇಲೆ ಉರುಳಾಡಲಾರಂಭಿಸಿದ.

ಬಟ್ಟೆಧರಿಸಿದ ಆಶಾ ಭೀತಿಯಿಂದ ಓಡಿಬಂದು ಸುಷಮಾಳನ್ನು ಗಟ್ಟಿಯಾಗಿ ತಬ್ಬಿಕೊಂಡಳು. ಅವಳ ಅಶ್ರು ತುಂಬಿದ ಕಣ್ಣುಗಳು ಅನಂತನ ದೇಹದ ಮೇಲೆ ನೆಟ್ಟಿದ್ದವು..

''ಮೇಡಮ್...ಮೇ.....ವಿಕಾರಕಂಠ ಅಪೂರ್ಣವಾಗಿ ಕರೆಯಿತು. ಫ್ರೆಂಡ..ಸ್ಟಾಪ್..ಕಮ್‌ಬ್ಯಾಕ್..ಕಮ್‌ಬ್ಯಾಕ್..''

ಸುಷಮಾಳ ಪ್ರೀತಿಯ ಕರೆ ನಾಯಿಯನ್ನು ತಡೆಯಿತು. ಅದು ಆಕ್ರಮಣ ಬಿಟ್ಟು ಸುಷಮಾಳ ಪದತಲ ಸೇರಿತು. ವಿಚಿತ್ರ ರೀತಿಯಲ್ಲಿ ಒದ್ದಾಡುತ್ತಿದ್ದ ಆತ ಸುಷಮಾ ಅವನನ್ನು ಸಮೀಪಿಸಿದಳು. ಆಶಾಳಿಗೆ ಅತ್ತ ಕಣ್ಣೆತ್ತಿ ನೋಡಲು ಸಹ ಧೈರ್ಯವಾಗುತ್ತಿರಲಿಲ್ಲ..ಅತ್ಯಂತ ಭೀಭತ್ಸ ದೃಷ್ಯಿಯದು ರಕ್ತದಲ್ಲಿ ಅದ್ದಿ ತೆಗೆದೊಗೆದಂತಿದ್ದ ಪರ್ವತಾಕಾರದ ಮಾಂಸದ ಮುದ್ದೆಗೆ ಆಕೆ ಪ್ರಶ್ನಿಸಿದಳು.

''ಹೇಳು ಯಾರು ನೀನು ?''

''ಡೆವಿಲ್...ಡೆವಿಲ್ ಜಾಕ್ಸನ್''...ಮಾಂಸದ ಮುದ್ದೆಯಿಂದ ಉತ್ತರ ಬಂದಿತು.

''ನಿನ್ನನ್ನು ಯಾರು ಕಳಿಸಿದ್ದರು ?''

''ಕಪ್ಪುಗಂಟೆ ಆದೇಶ ನೀಡಿ...'' ಮುಂದೆ ಮಾತು ಹೊರಡಲೇ ಇಲ್ಲ. ಕಥೆ ಮುಗಿದಿತ್ತು.

(10)

ಅನಂತ ಅಪಾಯದಿಂದ ಪಾರಾಗಿದ್ದನಾದರೂ ಕನಿಷ್ಠಪಕ್ಷ ಆತ ಒಂದು ತಿಂಗಳು ಆಸ್ಪತ್ರೆಯಲ್ಲಿರಬೇಕೆಂದು ವೈದ್ಯರು ಸ್ಪಷ್ಟವಾಗಿ ಹೇಳಿದರು. ಡೆವಿಲ್ ಜಾಕ್ಸನ್ ಬದುಕುವ ಪ್ರಶ್ನೆಯೇ ಇರಲಿಲ್ಲ ಅವನ ಶವವನ್ನೇ ಆಸ್ಪತ್ರೆಗೆ ತರಲಾಗಿತ್ತು. ತಾನು ಈಗ ಸುರಕ್ಷಿತವಾಗಿದ್ದೇನೆ ಎಂಬ ಕಲ್ಪನೆ ಬಂದಾಗ ಆಶಾಸಹ ಸುಧಾರಿಸಿಕೊಂಡಳು. ತನ್ನ ಬಳಿ ಕುಳಿತಿದ್ದ ಸುಷಮಾಳನ್ನು ನೋಡಿ ಕಣ್ತುಂಬ ನೀರು ತಂದು ನುಡಿದಳು.

''ನೀವು ಯಾರೋ ನನಗೆ ಗೊತ್ತಿಲ್ಲ. ಸಮಯಕ್ಕೆ ಸರಿಯಾಗಿ ಬಂದು ನನ್ನ ಮರ್ಯಾದೆ ಉಳಿಸುವದರೊಂಗಿದೆ ನನ್ನ ಜೀವನ ಸಂಗಾತಿಯನ್ನು ಸಹ ಪ್ರಾಣಾಪಾಯದಿಂದ ಪಾರುಮಾಡಿರುವಿರಿ. ನಿಮ ಉಪಕಾರ ಯಾವ ರೀತಿ ತೀರಿಸಬೇಕು ಎಂಬುದೇ ತಿಳಿಯದಂತಾಗಿದೆ.''

''ಅದರ ಬಗ್ಗೆ ಚಿಂತಿಸಬೇಡ ತಂಗೀ. ಮೊದಲು ನೀನು ಮಾನಸಿಕವಾಗಿ ಗಟ್ಟಿಯಾಗು. ಆಮೇಲೆ ಮಿಕ್ಕಿದ್ದನ್ನು ವಿಚಾರಿಸಿದರಾಯ್ತು. ನಿನ್ನಿಂದ ನಮಗೊಂದು ಕೆಲಸವಾಗಬೇಕಾಗಿದೆ.''

''ನನಗೇನಾಗಿದೆ, ನನಗೆ ಏನೂ ಆಗಿಲ್ಲ...ನಾನೀಗ ಪೂರ್ಣ ಸ್ವಸ್ಥಳಾಗಿದ್ದೇನೆ. ಹೇಳಿ ನನ್ನಿಂದ ನಿಮಗೇನಾಗಬೇಕು ?''

''ನಮಗಾಗಿ ಏನೂ ಆಗಬೇಕಾಗಿಲ್ಲ...ನಿಮಗಾಗಿ...ನಿನ್ನ ಅನಂತನಿಗಾಗಿ ಏನಾದರೂ ಮಾಡಬೇಕು.

''ಅನಂತನಿಗಾಗಿ ನಾನು ನನ್ನ ಜೀವವನ್ನಾದರೂ ಕೊಡಲು ಸಿದ್ಧ.''

''ನಮಗೆ ಬೇಕಾಗಿದ್ದು ನಿಮ್ಮ ಜೀವವಲ್ಲ...ನಿಮ್ಮ ಜೀವ ತೆಗೆಯಬಯಸಿದವರಾರು ಅನ್ನುವದೇ ನಮಗೆ ಬೇಕಾಗಿದೆ. ಅವರ ಬಗ್ಗೆ ನಿಮಗೇನು ತಿಳಿದಿದೆ ?''

''ಅವರ ಬಗ್ಗೆ ನನಗೇನೂ ತಿಳಿಯದು. ಇಂದೇ ಅವರನ್ನು ನಾನು ಜೀವನದಲ್ಲಿ ಪ್ರಥಮಬಾರಿ ಕಂಡಿದ್ದು.''

''ಸಾಯುವ ಮುನ್ನ ಆ ಡೆವಿಲ್ ಜಾಕ್ಸನ್ 'ಕಪ್ಪುಗಂಟೆ' ಎಂದು ಉಸುರಿದ ಇದರ ಬಗ್ಗೆ ನಿನಗೇನಾದರೂ ಗೊತ್ತಿದೆಯೇ ?...ನೀನು ಎಲ್ಲಿಯಾದರೂ ಕೇಳಿದ್ದೀಯಾ ?''

ಇಲ್ಲ ಎನ್ನುವಂತೆ ಆಶಾ ತಲೆಯಾಡಿಸಿದಳು. ಸುಷಮಾಳ ಮುಖದ ಮೇಲೆ ನಿರಾಶೆ ಮೂಡಿತು. ಅದನ್ನು ಗಮನಿಸಿದ ಆಶಾ ಅವಳನ್ನು ಅವಳ ಜೊತೆಗಿದ್ದ ಇಬ್ಬರು ಸುಂದರ ತರುಣರನ್ನೂ ಗಮನಿಸಿ ಆಸಕ್ತಿಯಿಂದ ಕೇಳಿದಳು.

''ನೀವು ಯಾರು ?...ನನ್ನನ್ನು ಈ ರೀತಿ ಏಕೆ ಪ್ರಶ್ನಿಸುತ್ತಿದ್ದೀರಿ...''

''ಭಯಪಡಬೇಡ...ನಾವು ನಿನ್ನ ಶತೃಗಳಲ್ಲ.''

''ನನಗದು ಗೊತ್ತು..ನೀವು ಶತೃಗಳಾಗಿದ್ದರೆ ನನ್ನ ಜೀವಸಹಿತ ಬಿಡುತ್ತಲೇ ಇರಲಿಲ್ಲ...''

''ಹಾಗಾದರೆ ನಾವು ಯಾರಿರಬಹುದು ? ನೀನೇ ಊಹಿಸಿಹೇಳು'' ಸುಷಮಾ ತುಂಟತನದಿಂದ ಕೇಳಿದಳು.

''ಪೋಲೀಸರಂತೂ ಅಲ್ಲ...'' ಇದ್ದರೂ ನೀವು ಗುಪ್ತ ಪೋಲೀಸ ಪಡೆಗೆ ಸೇರಿದವರಿರಬೇಕು.

ಅಲ್ಲಿಯವರೆಗೂ ಮೂಕ ಪ್ರೇಷಕನಾಗಿದ್ದ ಹೇಮಂತ ನಗುತ್ತ ಎದ್ದು ಆಶಾಳ ಬಳಿಯಿಂದ ''ನಿನ್ನ ಮಾತು ಪೂರ್ತಿ ನಿಜವಲ್ಲದಿದ್ದರೂ ಪೂರ್ತಿ ಸುಳ್ಳೂ ಅಲ್ಲ.. ನನ್ನ ಹೆಸರು ಮೇಜರ್ ಹೇಮಂತ.''

''ಇವರಿಬ್ಬರೂ ನನ್ನ ಸಹಾಯಕರು... ಸಾರ್ಜಂಟ್ ಸುಷಮಾ...ಕ್ಯಾಪ್ಟನ್ ಅಶೋಕ..''

ಆಶಾ ಮುಗುಳ್ನಗೆಯೊಂದಿಗೆ ಎಲ್ಲರಿಗೂ ವಂದಿಸಿದಳು.

''ನಾನಂದುಕೊಂಡಂತೆಯೇ ಆಯಿತು...ನೀವು ಮಿಲ್ಟ್ರಿ ಪಡೆಯವರು.''

''ಅಲ್ಲ...ನಾನು ಯಾವ ಪಡೆಗೂ ಸೇರಿದವರಲ್ಲ. ಆದರೆ ಪೋಲೀಸ್ ಇಲಾಖೆಯ ಸಹಾಯಕರು.. ಖಾಸಗಿ ಪತ್ತೇದಾರರು...ಪ್ರಸಂಗ ಬಂದರೆ ನಾವು ಗೂಢಾಚಾರಿಗಳೂ ಆಗುತ್ತೇವೆ..''

''ಓಹ್‌ಗಾಡ್ ಈಗ ನನಗೆ ನೆನಪಾಯಿತು. ನೀವು...ನೀವು...ಸುಪ್ರಸಿದ್ಧ ಪತ್ತೇದಾರ ಮೇಜರ್ ಹೇಮಂತ. ಅಯ್ಯೋ ದೇವರೆ ನಿಮ್ಮ ಬಗ್ಗೆ ಎಷ್ಟೋ ಸುದ್ದಿ ಕೇಳಿ, ಓದಿ ಪುಳಕಿತಳಾದ ನಾನು ನೀವು ಸಾಕ್ಷಾತ್ ನನ್ನ ಕಣ್ಣೆದುರು ಇದ್ದರೂ ಗುರುತಿಸಲಾರದೆ ಹೋದೆ...ಕ್ಷಮಿಸಿ..''

''ಇದರಲ್ಲಿ ನಿನ್ನ ತಪ್ಪು ಎಳ್ಳಷ್ಟು ಇಲ್ಲ. ನೀ ಕಳೆದ ಯಮಯಾತನೆಯ ಕ್ಷಣಗಳು ನಿನ್ನನ್ನು ದಿಕ್ಕು ತಪ್ಪಿಸುವಂತೆ ಮಾಡಿವೆ...ಇರಲಿ...ಅನಂತನ ಮನೆ ಎಲ್ಲಿದೆ ನಿನಗೆ ಗೊತ್ತೆ?''

''ಅವರ ಮನೆ ಇಲ್ಲ...ರೂಮು ಇದೆ...ಅವರ ತಂದೆ ತಾಯಿ ಇಲ್ಲಿರುವುದಿಲ್ಲ.''

''ಹೂಂ ರೂಮಿನ ಬೀಗದ ಕೈ ?''

''ಅದು ಅವರ ಜೇಬಿನಲ್ಲೇ ಇರಬಹುದು.''

ಹೇಮಂತ ಅಶೋಕನೆಡೆ ನೋಡಿದ.. ಅದರರ್ಥ ತಿಳಿದುಕೊಂಡ ಅಶೋಕ ಮೇಲೆದ್ದು ಆಸ್ಪತ್ರೆಯ ಆಫೀಸ್‌ಕಡೆ ನಡೆದ. ನಾಲ್ಕಾರು ನಿಮಿಷ ಬಿಟ್ಟು ಬಂದಾಗ ಅವನ ಕೈಯಲ್ಲಿ ವಸ್ತ್ರದಲ್ಲಿ ಕಟ್ಟಿದ ಪುಟ್ಟ ಗಂಟೊಂದಿತ್ತು...ಅದನ್ನು ಮೇಜರನ ಮುಂದಿರಿಸಿದ.

''ಅವನ ಬಳಿಯಲ್ಲಿದ್ದ ಎಲ್ಲಾ ವಸ್ತುಗಳು ಇದರಲ್ಲಿವೆಯಂತೆ.''

ಆಶಾ ಕುರ್ಚಿಯಿಂದ ಎದ್ದುಬಂದು ವಸ್ತ್ರದ ಗಂಟು ಇಸಿದುಕೊಂಡು ಒಂದೊಂದೇ ಸಾಮಾನುಗಳನ್ನು ಬೆರಳಿನಿಂದ ಸರಿಸಿ ನೋಡಲಾರಂಭಿಸಿದಳು. ಪೆನ್ನು, ಚಿಲ್ಲರೆಹಣ...ಹಣದ ಪಾಕೇಟು, ಅಡಿಕೆ ಚೀಟುಗಳು, ಒಂದು ಕೀಗೊಂಚಲು, ಕೀಗೊಂಚಲು ಕೈಗೆ ತೆಗೆದುಕೊಂಡ ಆಕೆ ಅದರಲ್ಲಿಯ ನಾಲ್ಕಾರು ಕೀಲಿಕೈಗಳನ್ನು ಪರೀಕ್ಷಿಸಿ ಅಚ್ಚರಿಯಿಂದ ಉದ್ಗರಿಸಿದಳು...

''ಅರೆ...ಇದರಲ್ಲಿ ರೂಮಿನ ಬೀಗದಕ್ಕೆ ಇಲ್ಲವೇ ಇಲ್ಲ...ಇದರಲ್ಲೇ ಇದ್ದುದು ನನಗೆ ಚೆನ್ನಾಗಿ ನೆನಪಿದೆ. ಹಾಗಾದರೆ ತಮಗಿಂತ ಮೊದಲೇ ಯಾರೋ ಬೀಗದಕ್ಕೆ ಹಾರಿಸಿದ್ದಾರೆಂಬುದರ ಅರಿವಾಗುತ್ತಲೇ ಹೇಮಂತ ಚಟಕ್‌ನೆ ಮೇಲೆದ್ದು ನುಡಿದ.

''ಆಶಾ ಬೇಗ ನಡೆ. ನಮ್ಮನ್ನು ಅನಂತನ ರೂಮಿಗೆ ಕರೆದುಕೊಂಡು ಹೋಗು..ಹೂಂ..ಬೇಗ.''

ಅವರೆಲ್ಲರನ್ನೂ ಕೂಡಿಸಿಕೊಂಡ ಕಾರು ವಾಯುವೇಗದಿಂದ ಓಡತೊಡಗಿತು. ಆಶಾ ದಾರಿ ತೋರಿಸಿದತ್ತ...ಹತ್ತು ನಿಮಿಷಗಲ್ಲಿ ಅವರು ಧೋಂಗಡಿ ಬಾಜಾರಕ್ಕೆ ಬಂದಿದ್ದರು.

"ಇಲ್ಲೇ ಕರ್ನಾಟಕ ಬ್ಯಾಂಕ್ ಪಕ್ಕದಲ್ಲೇ ಇದೆ. ಮಹಡಿಮೇಲೆ...! ಚುಟುಕಾಗಿ ಉತ್ತರಿಸಿದಳು ಆಶಾ. ಹೇಮಂತ ಕಾರನ್ನು ಅಲ್ಲೇ ನಿಲ್ಲಿಸಿ ಕೆಳಗಿಳಿದ.

"ಸುಷಮಾ ನೀನು ಮುಂದಿನ ಬಾಗಿಲಿನಿಂದ ಹೋಗು - ಅಶೋಕ ನಿನ್ನ ಹಿಂದೆ ಇರುತ್ತಾನೆ. ನಾನು ಹಿಂಭಾಗದಲ್ಲಿ ದಾರಿ ಏನಾದರೂ ಇದೆಯೇ ಎಂದು ನೋಡುತ್ತೇನೆ."

"ಅದಕ್ಕೆ ಹಿಂದುಗಡೆಯೇ ಮೆಟ್ಟಲುಗಳಿವೆ." ಮಧ್ಯೆ ಆಶಾ ನುಡಿದಾಗ ಅವಳಿಗೆ ಅಲ್ಲೇ ಕಾರಿನಲ್ಲಿರುವಂತೆ ತಿಳಿಸಿದ ಹೇಮಂತ ಸಂಗಡಿಗರೊಂದಿಗೆ ಓಡಿದ ಕರ್ನಾಟಕ ಬ್ಯಾಂಕಿನತ್ತ.

ಸರಸರನೆ ಮಹಡಿ ಮೆಟ್ಟಲು ಏರಿದಳು. ಸುಷಮಾ, ಅನಂತನ ರೂಮಿಗೆ ದೀಪ ಹಾಕಿರಲಿಲ್ಲವಾದರೂ ಒಂಗಡೆಯಿಂದ ಚಿಲುಕ ಹಾಕಲಾಗಿತ್ತು. ಕಿಟಕಿಯಿಂದ ದೀಪದ ಬೆಳಕು ಹೊರಗೆ ಮಂದವಾಗಿ ಹರಡಿತ್ತು. ಸುಷಮಾ ಬಾಗಿಲಿಗೆ ಕೀಲಿ ಆನಿಸಿದಳು. ಒಳಗಡೆಯಿಂದ ಕಪಾಟು, ಡ್ರಾ ಎಳೆಯುವ - ಅದರಲ್ಲಿಯ ಸಾಮಾನು ಕಿತ್ತಾಡಿ ಚೆಲ್ಲುವ ಸದ್ದು ಅಸ್ಪಷ್ಟವಾಗಿ ಕೇಳಿಬರುತ್ತಿತ್ತು. ಅವಳು ಮೂಗಿನ ಹೊಳ್ಳೆ ಉಬ್ಬಿಸಿದಳು. ಅತ್ಯಾಧುನಿಕ ಬೆಲೆಬಾಳುವ ಸೇಂಟಿನವಾಸನೆ ಮೂಗಿಗೆ ತಾಕಿತು. ಹೀಗಾಗಿ ಒಳಗೆ ಯಾರಿದ್ದಾರೋ ಎಷ್ಟು ಜನರಿದ್ದಾರೋ ತಿಳಿಯದು. ಒಬ್ಬ ಮಹಿಳೆಯಂತೂ ಇದ್ದಾಳೆ ಎಂಬುದು ತಿಳಿದಂತಾಯಿತು. ಅಶೋಕನಿಗೆ ಸಿದ್ಧವಾಗಿರಲು ಕಣ್ಣಸನ್ನೆಯಿಂದಲೇ ತಿಳಿಸಿ ಬಾಗಿಲ ಮೇಲೆ ಚಿಲುಕದಿಂದ ಬಾರಿಸಿದಳು. ಒಳಗಡೆಯಿಂದ ಕೇಳುತ್ತಿದ್ದ ಸಪ್ಪಳ ಒಮ್ಮೊಂದೊಮ್ಮೆಲೆ ನಿಂತುಹೋಯಿತು. ಯಾರೋ ತುದಿಗಾಲಮೇಲೆ ನಡೆಯುತ್ತ ಬಾಗಿಲಿಗೆ ಬಂದಂತೆನಿಸಿತು. ಸುಷಮಾ ಕಿವಿಗೊಟ್ಟು ಕೇಳಿಸಿದಳು. ಅವಳಿಗೆ ಒಂದೇ ಜತೆ ಕಾಲುಗಳ ಸಪ್ಪಳ ಕೇಳಿದ್ದು.. ಇದರಿಂದಾಗಿ ಒಳಗಡೆ ಕೇವಲ ಮಹಿಳೆಯೊಬ್ಬಳೇ ಇದ್ದಾಳೆಂಬುದು ಸ್ಪಷ್ಟವಾಯಿತು. ಮೂಗಿಗೆ ಈ ಬಾರಿ ಸ್ವಲ್ಪ ಉಗ್ರವಾಗಿ ವಾಸನೆ ಬಂದು ತಟ್ಟಿದ್ದರಿಂದ ಅವಳ ಊಹೆಯನ್ನದು ಮತ್ತಷ್ಟು ಪುಷ್ಟೀಕರಿಸಿತು.. ಸುಷಮಾ ಮತ್ತೊಮ್ಮೆ ಬಾರಿಸಿದಳು ತುಸು ಜೋರಾಗಿ..ಒಳಗಿನಿಂದ ಧನಿ ಕೇಳಿಸಿತು.

"ಯಾರು...ಯಾರದು ?"

"ನಾನು ಆಶಾ..ನೀನ್ಯಾರು ? ಅನಂತ ಇಲ್ಲದಾಗ ನೀಏನು ಮಾಡುತ್ತಿರುವೆ. ಬಾಗಿಲು ತೆರೆ. ಇಲ್ಲದಿದ್ದರೆ ನಾನು ಜನರನ್ನು ಕೂಗುತ್ತೇನೆ."

ಸುಷಮಾ ಸ್ವಲ್ಪ ಜೋರಾಗೇ ಮಾತನಾಡಿದಾಗ ಚಿಲುಕ ತೆಗೆದ ಸಪ್ಪಳ ಅದರ ಹಿಂದೆಯೇ ತುಸುವೇ ಬಾಗಿಲು ತೆರೆಯಿತು. ಎರಡು ಹಸಿರು ಕಣ್ಣುಗಳು ಹೊರಗೆ ದೃಷ್ಟಿ ಬೀರಿದವು. ಹಿಂದಿದ್ದ ಅಶೋಕ ಸರಕ್‌ನೆ ಮುಂದೆ ಬರುತ್ತಲೂ ಹಸಿರುಕಣ್ಣಿನ ಒಡತಿ ಪಟಾರನೇ ಬಾಗಿಲು ಮುಚ್ಚಿ ಚಿಲುಕ ಹಾಕಿದಳು. ಇಬ್ಬರೂ ಬಾಗಿಲ ಮೇಲೆ ಧಪ್‌ಧಪ್ ಎಂದು ಬಾರಿಸಿದ್ದು ವ್ಯರ್ಥವಾಯಿತು. ಆಕೆ ಖಂಡಿತವಾಗಿ ಹಿಂಬಾಗಿಲಿಂದ ಪಾರಾಗುತ್ತಾಳೆಂದು ಯೋಚಿಸಿದ ಇಬ್ಬರೂ ಮೆಟ್ಟಿಲು ಇಳಿದು ಕೆಳಗೆ ಬಂದು ಕಾವಲುನಿಂತರು.

ಪಟಾರನೆ ಬಾಗಿಲು ಮುಚ್ಚಿಕೊಂಡ ಹಸಿರು ಕಣ್ಣಿನ ಹುಡುಗಿ ಕೈಗೆಸಿಕ್ಕ, ಆಗಲೇ ಆಯ್ದು ಇಟ್ಟಿದ್ದ ಕೆಲವೊಂದು ಸಾಮಾನುಗಳನ್ನು ತನ್ನ ಲೇಡೀಜ್ ಹ್ಯಾಂಡ್‌ಬ್ಯಾಗಿಗೆ ಸೇರಿಸಿಕೊಂಡು ಹಿಂದಿನಬಾಗಿಲು ತೆರೆದು ಹೊರಗೆ ಕಾಲಿಟ್ಟಳು. ಸಿಗರೇಟು ಸೇದುತ್ತ ಹಾಯಾಗಿ ನಿಂತಿದ್ದ ಮೇಜರ್ ಅವಳೆಡೆ ನೋಡಿ ಮೋಹಕ ನಗೆ ಬೀರಿ ನುಡಿದ. ''ಹಲೋ ಹಲೋ ಹನೀ..ಹೌ ಆರ್ ಯು ?''

''ಹೋದೆಯಾ ಪಿಶಾಚೀ ಅಂದರೆ ಗವಾಕ್ಷಿಯಿಂದೊಳಗಿಂದ ಬಂದೆ ಎಂದಂತಾಯಿತು.''

ಪ್ರತ್ಯಕ್ಷವಾದ ಅಪಾಯ ಕಂಡು ಸರಕ್‌ನೆ ಹಿಂತಿರುಗಿ ಓಡಿ ಮುಂದಿನಬಾಗಿಲಿಗೆ ಬಂದಳಾಕೆ. ಮುಗುಳುನಗೆ ನಕ್ಕ ಹೇಮಂತ ಅವಳನ್ನು ಹಿಂಬಾಲಿಸಲು ಆತುರ ತೋರದೆ ನಿಧಾನವಾಗಿ ಅವಳನ್ನು ಹಿಂಬಾಲಿಸಿದ.

ಮುಂಬಾಗಿಲು ತೆರೆದಾಗ ಹೊರಗಡೆ ಯಾರೂ ಇರದಿರುವುದನ್ನು ಕಂಡ ಆಕೆಯ ಮುಖ ಹೂವಿನಂತೆ ಅರಳಿತು. ಪಟಪಟನೆ ಮೆಟ್ಟಿಲು ಇಳಿಯುತ್ತ ಬಂದ ಆಕೆ ಕೆಳಗಡೆ ತನಗಾಗಿ ಕಾಯುತ್ತಾ ನಿಂತ ಇಬ್ಬರನ್ನು ಕಂಡು ಗಾಬರಿಯಾಗಿ ಮತ್ತೆ ಮಹಡಿ ಮೆಟ್ಟಿಲು ಹತ್ತಲಾರಂಭಿಸಿದಳು... ಕೇವಲ ನಾಲ್ಕಾರು ಮೆಟ್ಟಿಲು ಅಷ್ಟೇ ಮತ್ತೆ ಅವಳ ಕಾಲು ಅಲ್ಲೇ ಜಡವಾದವು. ಮೇಲ್ಗಡೆ ನಿಂತಿದ್ದ ಮೇಜರ ಮುಗುಳುನಗೆ ನಗುತ್ತಾ...

ಆಕೆ ಅವರ ಬಂದಿಯಾಗಿದ್ದಳು.

ಆಶಾ ಅವಳ ಗುರುತು ಹಿಡಿದಳು. ಅನಂತನನ್ನು ಸ್ವಾಗತಿಸಿ ಡೆವಿಲ್ ಜಾಕ್ಸನ್ನನ ರೂಮಿಗೆ ಕಳಿಸಿದವಳು ಇವಳೇ ಎಂದಾಕೆ ನುಡಿದಳು. ಅಶೋಕ ಅವಳ ಹೆಗಲಿಗೆ ತೂಗುಬಿದ್ದ ಬ್ಯಾಗನ್ನು ಕಸಿದುಕೊಂಡು ಅದನ್ನು ತಿರುಪಿ ಹಾಕಿದ ರಾಶಿರಾಶಿ ಸಾಮಾನುಗಳು. ಅವೆಲ್ಲಾ ಅನಂತನ ಕೋಣೆಯಲ್ಲಿದ್ದವು ಎಂದು ಆಶಾ

ಗುರುತಿಸಿದಳು. ಕೀ ಗೊಂಚಲಿನಿಂದ ಕದ್ದ ರೂಮಿನ ಬೀಗದ ಕೈ ಸಹ ಅವಳ ಬಳಿ ದೊರೆಯಿತು. ಅದೆಲ್ಲವನ್ನೂ ಪುನಃಬ್ಯಾಗಿಗೆ ತುರುಕಿದ ಅಶೋಕ ತನ್ನ ಬಳಿ ಭದ್ರವಾಗಿರಿಸಿಕೊಂಡ. ಆಮೇಲೆ ಕೊಠಡಿಗೆ ಬೀಗಹಾಕಿ ಅವಳನ್ನು ಬಂದಿಸಿ ಕಾರಿನಲ್ಲಿ ಕೂಡಿಸಿದರು. ಕಾರು ಓಡತೊಡಗಿತು ಪೋಲೀಸಠಾಣೆಯತ್ತ.

ಮಧ್ಯೆ ಒಂದು ದೊಡ್ಡ ಸರ್ಕಲ್ ಬರುತ್ತಿದ್ದಂತೆ ರಸ್ತೆದೀಪದ ಸಂಕೇತದಂತೆ ಕಾರು ನಿಲ್ಲಿಸಿದ ಹೇಮಂತ ಬಲಬದಿಯಲ್ಲಿ ಭರ್‌ಭರ್ ಎಂದು ವಾಹನಗಳು ಓಡತೊಡಗಿದ್ದವು. ವಿರುದ್ಧದಿಕ್ಕಿಗೆ ಬಾಗಿಲಿಗೇ ಕುಳಿತಿದ್ದ ಆ ಹಸಿರುಕಣ್ಣಿನ ಹುಡುಗಿ ಕಣ್ಣುಮುಚ್ಚಿ ಕಣ್ಣು ತೆಗೆಯುವುದರೊಳಗಾಗಿ ಕಾರು ಬಾಗಿಲು ತೆಗೆದು ಆಚೆ ನೆಗೆದಿದ್ದಳು. ಕಾರಿನಲ್ಲಿದ್ದ ಮೂವರು ಅವಳನ್ನು ತಡೆಯಲು ಕಿರುಚಿಕೊಂಡಿದ್ದು ವ್ಯರ್ಥವಾಯಿತು. ಭರಭರ ಓಡುತ್ತಿದ್ದ ವಾಹನಗಳ ಮಧ್ಯೆ ಸಿಲುಕಿಕೊಂಡ ಆಕೆ ಒಂದೇ ನಿಮಿಷದಲ್ಲಿ ಮಾಂಸದ ಮುದ್ದೆಯಾಗಿ ಪರಿವರ್ತನ ಹೊಂದಿದ್ದಳು...

ಅಪರಾಧಿ ಕೈಗೆ ಸಿಕ್ಕಿದ್ದರೂ ಸಿಕ್ಕದಂತಾಯಿತು.

ಸುಳಿವು ಕೈಗೆ ಸಿಗುವ ಮುನ್ನ ಮತ್ತೆ ಕೈಯಿಂದ ಹರಿದು ಹೋಗಿತ್ತು.

ದಣಿವು, ನಿರಾಶೆ ಮುಂತಾದವುಗಳನ್ನು ಹೊತ್ತು ಹೇಮಂತನ ಪಾರ್ಟಿ ರೂಮಿಗೆ ವಾಪಸಾಯಿತು. ಯಾವದೇ ರೀತಿಯ ಚಟುವಟಿಕೆಗಳಲ್ಲದೇ ಒಂದು ನಿತ್ಯದ ಚಟುವಟಿಕೆ ಅನ್ನುವಂತೆ ಹೊಟ್ಟೆಗೆ ಹೋದಷ್ಟು ಊಟ ಮಾಡಿದರು. ಕಾಫಿ ಕುಡಿದು ಯಾವದೋ ಮ್ಯಾಗಝೀನ್ ಓದುತ್ತ ಕುಳಿತ ಅಶೋಕ. ಸುಷಮಾ ಅಂದಿನ ಕೆಲಸದ ಟಿಪ್ಪಣಿ ಬರೆಯುವುದರಲ್ಲಿ ತನ್ಮಯಳಾದರೆ ಹೇಮಂತ ರೂಮಿನಲ್ಲಿದ್ದ ಡೈರಿಯನ್ನು ಆ ಹಸಿರುಕಣ್ಣಿನ ಹುಡುಗಿ ಅಪಹರಿಸಿದ್ದು ಕೈಗೆ ದೊರೆತಿತ್ತು. ಅದನ್ನೇ ಹೊರಳಿಸಿ ನೋಡುತ್ತಿದ್ದ...

ಐದಾರು ನಿಮಿಷ ಕಳೆದಿದ್ದವು.

''ಯುರೇಕಾ ಯುರೇಕಾ..ಸಿಕ್ಕಿತು'' ಎಂದು ಕೂಗಿಕೊಂಡ ಹೇಮಂತ. ಸುಷಮಾ ಹಾಗೂ ಅಶೋಕ ಗಾಬರಿಯಾಗಿ ಅವನತ್ತ ನೋಡಿದರು.

''ಅಶೋಕ..ಅನಂತನಿಗೆ ಆ ಅಂಡರ್‌ಗ್ರೌಂಡ ನೈಟ್‌ಕ್ಲಬ್ ಬಗ್ಗೆ ಯಾರು ಮಾಹಿತಿ ಕೊಟ್ಟಿದ್ದರು ಎಂಬುದು ತಿಳಿಯಿತು...'' ಹೇಮಂತ ಜೋರಾಗಿ ಹೇಳಿದ.

''ಯಾರವರು ?...'' ಆಸಕ್ತಿಯಿಂದ ಕೇಳಿದ ಅಶೋಕ. ತಟಕ್ಕನೆ ಉತ್ತರ

ಬಂತು.

''ಚರ್ಚಿನ ಫಾದರ್...ಬೇರಾರೂ ಅಲ್ಲ..'' ಕೇಳುತ್ತಿದ್ದಂತೆ ಅಶೋಕ ಅಲ್ಲೇ ಜಡವಾದ.

(11)

''ಢಣ್..ಢಣ್..ಢಣ್..ಢಣ್'' ಚರ್ಚಿನ• ಗಂಟೆ ಒಂದೇ ಸಮನೆ ಆ ವೇಳೆಯಲ್ಲಿ ಬಾರಿಸಿಕೊಳ್ಳಲು ಪ್ರಾರಂಭಿಸುತ್ತಲೇ ಆ ಅಶುಭ ಕಪ್ಪುಗಂಟೆಯನ್ನು ಕೇಳಿ ತಮ್ಮ ರೂಮಿನಲ್ಲಿದ್ದ ಫಾದರ್ ಹೊರಗೆ ಧಾವಿಸಿ ಬಂದರು. ಸುಂದರ ದೃಢಕಾಯ ತರುಣನೊಬ್ಬ ಗಂಟೆ ಬಾರಿಸುತ್ತಲೇ ಇದ್ದ. ಅವನ ಮುಖದ ಮೇಲೆ ಯಾವದೇ ಗ್ಲಾನಿ ಇರಲಿಲ್ಲ. ಹರ್ಷಚಿತ್ತನಂತೆ ಕಂಡುಬರುತ್ತಿದ್ದ ಆತ ಗಂಟೆ ಏಕೆ ಬಾರಿಸುತ್ತಿದ್ದಾನೆಂದು ತಿಳಿಯಲಿಲ್ಲ. ಫಾದರ್ ಬಂದುದನ್ನು ಗಮನಿಸಿದ ಆ ತರುಣ ಗಂಟೆ ಎಳೆಯುವುದನ್ನು ನಿಲ್ಲಿಸಿ ಅವರಿಗೆ ವಂದಿಸಿದ...ಪ್ರತಿವಂದನೆ ನೀಡಿದ ಫಾದರ್ ಕೇಳಿದರು.

''ಮಗು ನಿನ್ನ ಸಮ್ಮಂಧಿಕರಾರಾದರೂ ತೀರಿಕೊಂಡರೆ ?''

''ಇಲ್ಲ ಫಾದರ್''

''ಹಾಗಾದರೆ ಈವೇಳೆಯಲ್ಲೇಕೆ ಕಪ್ಪುಗಂಟೆ ಬಾರಿಸುತ್ತಿರುವೆ ?''

''ಒಬ್ಬರು ತೀರಿಕೊಂಡಿದ್ದರಿಂದ ಫಾದರ್.''

''ಮಗು ಇದೇನು? ಇದಕ್ಕೂ ಮೊದಲು ಕೇಳಿದಾಗ ಯಾರೂ ಇಲ್ಲ ಎಂದಷ್ಟೆ?

''ಕ್ಷಮಿಸಿ ಫಾದರ್..ನನ್ನ ಸಮ್ಮಂಧಿಕರಾರೂ ತೀರಿಕೊಂಡಿಲ್ಲ ಅಂದೆ ?''

''ಹಾಗಾದರೆ ಈಗ ತೀರಿಕೊಂಡವರು ಯಾರು ? ಯಾರ ಸಮ್ಮಂಧಿಕರು ?''

''ಅದು ನನಗೆ ಗೊತ್ತಿಲ್ಲ ಫಾದರ್ - ಬಹುಶಃ ಆ ಜೇಸಿಸ್‌ಗೆ ತಿಳಿದಿರಬೇಕು. ಅವರು ಏಸುವಿನ ಸೇವಕರು ಎಂದು ಮಾತ್ರ ತಿಳಿಯಿತು. ಅದಕ್ಕಾಗಿ ಅವರ ಆತ್ಮಶಾಂತಿಗಾಗಿ ಗಂಟೆ ಬಾರಿಸುತ್ತಿರುವೆ.''

''ಮಗು ಅವರ ಹೆಸರೇನು? ವಿಳಾಸ ಎಲ್ಲಿಯದು?''

"ಅದಾವದೂ ಗೊತ್ತಿಲ್ಲ ಫಾದರ್... ಬೇಕೆಂದರೆ ಅವರ ಚಿತ್ರ ತೋರಿಸಬಲ್ಲೆ ಅಷ್ಟೇ."

"ಅದನ್ನಾದರೂ ತೋರಿಸು."

ಶವಾಗಾರದಲ್ಲಿಟ್ಟಿದ್ದ ಆ ಹಸಿರುಕಣ್ಣಿನ ಯುವತಿಯ ಫೋಟೋ ಅವರ ಮುಂದೆ ಹಿಡಿದ ತರುಣ ನುಡಿದ.

"ಇದೇ ಫೋಟೋ ಫಾದರ್..ನನಗೆನಿಸುವಮಟ್ಟಿಗೆ ನಿಮಗೆ ಸಮ್ಮಂಧಿಕರಾಗಿದ್ದರೂ ಇರಬಹುದು."

ಫೋಟೋ ನೋಡುತ್ತಲೇ ಒಂದೇ ಬಾರಿಗೆ ಬೆಚ್ಚಿಬಿದ್ದರು. ದುಃಖಿಪರಾ ಎದೆಮೇಲೆ ಕೈ ಇಟ್ಟು ನಂತರ ಎರಡೂ ಭುಜಮುಟ್ಟಿ ಕ್ರಾಸ್ ಮಾಡಿ ಪ್ರಾರ್ಥನೆ ಸಲ್ಲಿಸಿದರು. ಮುಚ್ಚಿದ ಕಣ್ಣುಗಳಲ್ಲಿ ಮುತ್ತಿನಂತೆ ಎರಡು ಹನಿ ನೀರು ಕಾಣಿಸಿಕೊಂಡಿತು.

"ಫಾದರ್ ನಿಮ್ಮ ಕಣ್ಣೀರು ನನ್ನ ಮಾತನ್ನು ಸತ್ಯಮಾಡಿತು. ಹೇಳಿ ಫಾದರ್ ಇವಳು ನಿಮಗೇನಾಗಬೇಕು ?"

"ನಿನ್ನ ಪ್ರಶ್ನೆಗೆ ಉತ್ತರಿಸುವ ಮುನ್ನ ನಾನೊಂದು ಪ್ರಶ್ನೆ ಕೇಳಬಹುದೆ?"

"ಅವಶ್ಯವಾಗಿ ಕೇಳಿ ಫಾದರ್"

"ನೀನು ಯಾರು ? ಈ ಫೋಟೋ ನಿನಗೆಲ್ಲಿ ದೊರೆಯಿತು ? ನೀನಿಲ್ಲಿಗೆ ಬರಲು ಕಾರಣವೇನು ? ನಿಜ ಹೇಳು."

"ಫಾದರ್ ತುಂಬಾ ಪ್ರಶ್ನೆ ಕೇಳಿದಿರಿ. ನಾನು ತಮಗೆ ಸುಳ್ಳು ಹೇಳುವುದಿಲ್ಲ. ನನ್ನ ಹೆಸರು ಮೇಜರ್‌ಹೇಮಂತ ಅಂತ..ಈ ಯುವತಿ.."

"ನನಗೆಲ್ಲ ಅರ್ಥವಾಯಿತು. ಮುಂದೆ ಮಾತನಾಡಬೇಡಿ ಮೇಜರ ದಯವಿಟ್ಟು ನನ್ನ ಜೊತೆಬನ್ನಿ."

ಅತ್ತ ಇತ್ತ ಒಂದೆರಡು ಬಾರಿ ಭಯ ತುಂಬಿದ ದೃಷ್ಟಿ ಬೀರಿದ ಫಾದರ್ ಧಡಧಡನೆ ಒಳನಡೆದರು. ಹೇಮಂತ ಅವರನ್ನು ಹಿಂಬಾಲಿಸಿದ. ತಮ್ಮ ರೂಮಿಗೆ ಬಂದ ಫಾದರ್ ಮೇಜರಗೆ ಕೂಡಲು ಆಲಿಸಿ ಬಾಗಿಲು ಕಿಟಕಿ ತಾನೇ ಪರದೆ ಎಳೆದರು. ಅವರು ತುಂಬಾ ಭೀತರಾದಂತೆ ತೋರುತ್ತಿದ್ದರು. ಒಂದೆರಡು ನಿಮಿಷ ಸುಧಾರಿಸಿಕೊಂಡ ಅವರು...

''ಅವಳ ಹೆಸರು ನಿಲ್ವಿಯಾ. ಆಕೆ ನನ್ನಣ್ಣನ ಮಗಳು...ನಿಜವಾಗಿಯೂ ಸತ್ತಿದ್ದಾಳೆಯೇ?''

''ಹೌದು ಫಾದರ್...ಚರಿತ ಮಿಶ್ರಿತ ಧನಿಯಲ್ಲಿ ನುಡಿದ ಹೇಮಂತ...'' ಫಾದರ್...ನಿಲ್ವಿಯಾ ನಿಮ್ಮ...

''ಹೌದು ಆಕೆ ನನ್ನಣ್ಣನ ಮಗಳು. ನಾನು ಮದುವೆಯಾಗಿಲ್ಲ. ಬಾಲ್ಯದಲ್ಲೇ ದೀಕ್ಷೆ ತೆಗೆದುಕೊಂಡೆ. ನಿಲ್ವಿಯಾ ಚಿಕ್ಕವಳಿರುವಾಗಲೇ ಅವಳ ತಂದೆತಾಯಿ ಅಪಘಾತವೊಂದರಲ್ಲಿ ತೀರಿಕೊಂಡರು. ಅಂದಿನಿಂದ ನಾನೇ ಅವಳನ್ನು ಸಾಕಿರುವೆ. ಈಗೆರಡು ತಿಂಗಳುಗಳ ಹಿಂದೆ ನಿಲ್ವಿಯಾ ನನ್ನ ಬಳಿ ಬಂದಳು. ತಾನು ಪ್ರೇಮಿಸಿದ ಹುಡುಗ ಕೈಕೊಟ್ಟು ಇಲ್ಲಿಗೆ ಓಡಿಬಂದಿದ್ದಾನೆಂದು ಅವರನ್ನು ತಾನು ಹುಡುಕಲು ಬಂದಿರುವದಾಗಿಯೂ ಹೇಳಿದಳು. ನನ್ನಂತೆಯೇ ಉಳಿದುಕೊಂಡಳು. ನಾಲ್ಕೆಂಟು ದಿನ ಕಳೆದ ಮೇಲೆ ನನಗೇಕೋ ಅವಳ ಚಟುವಟಿಕೆಗಳು ಸಂಶಯ ಉಂಟು ಮಾಡಿದವು. ಅವಳ ಜೊತೆ ಒಂದೊಂದು ಬಾರಿ ಒಬ್ಬೊಬ್ಬರು ಇರುತ್ತಿದ್ದರು. ದೈತ್ಯಾಕಾರದ ಬೋಳು ತಲೆಯ ವ್ಯಕ್ತಿಯೊಬ್ಬ ಅವಳ ಸಂಗಡ ಹತ್ತಾರುಬಾರಿ ನೋಡಿದ್ದೇನೆ.

ಅವನ ಹೆಸರು ಡೇವಿಲ್ ಜಾಕ್ಸನ್...ಅವನೂ ಸಹಾ ನಿನ್ನೆ ಸಾವಿಗೀಡಾದ.''

''ಏಯ್ ದೇವರೆ..ಆ ರಕ್ಕಸನನ್ನು ಕೊಂದದ್ದಕ್ಕೆ ನಿನಗೆ ವಂದನೆಗಳು.'' ಫಾದರ್ ಉದ್ಗರಿಸಿದರು.

''ಏಕೆ?..ಅವನಿಂದ ನಿನಗೇನಾದರೂ ಅಪಾಯವಿತ್ತೇ?''

''ಅವನಿಂದಲೇ ಎಲ್ಲಾ ಅನಾಹುತಗಳು ನಡೆದದ್ದು ಮೇಜರ್. ಆತ ಮೊದಲ ಬಾರಿ ಬಂದಾಗಲೇ ನಾನು ವಿರೋಧಿಸಿದೆ. ಮರುದಿನ ಆತ ನನ್ನ ಮುಂದೆ ನನ್ನ ಮಗಳ ಜೊತೆ ಹಾಗೂ ಅವನ ಜೊತೆ ಇದ್ದ ಹತ್ತಾರುಫೋಟೋ ತೋರಿಸಿದ. ನಾವು ಸಮಾಜಘಾತಕ ಜನ. ದಯೆಕರುಣೆ ಯಾವುದೂ ನಮಗೆ ತಿಳಿದಿಲ್ಲ ಹಣಕ್ಕಾಗಿ ಏನು ಬೇಕಾದರೂ ಮಾಡಲು ಸಿದ್ಧ. ನೀನೇನಾದರೂ ನಮಗೆ ಅಡ್ಡಿಮಾಡಿದೆ ಎಂದರೆ ನಿನ್ನನ್ನು ಸಾಯಿಸಲು ಹಿಂದುಮುಂದೆ ನೋಡುವುದಿಲ್ಲ. ಆಮೇಲೆ ಸಿಕ್ಕ ನಿಲ್ವಿಯಾಳ ಗತಿ ಏನಾಗಿತ್ತೋ ಯೋಚಿಸು. ಈಗವಳು ನಮ್ಮ ಕೈಗೊಂಬೆ. ನಾವು ಕುಣಿಸಿದಂತೆ ಆಕೆ ಕುಣಿಯುವಳು. ಅದರ ಹೊರತು ಬೇರೆ ದಾರಿ ಇಲ್ಲ. ಇನ್ನು ಒಂದೆರಡು ಫೋಟೋ ಇವೆ ಅವನ್ನು ನೋಡಿ ನಿನ್ನ ಜೀವನ ಸಾರ್ಥಕ ಮಾಡಿಕೊ.''

ಆತ ನನ್ನ ಮುಂದೆ ಮತ್ತೆ ಒಂದೆರಡು ಫೋಟೋ ಹಿಡಿದ ಅದರಲ್ಲಿ ನಿಲ್ವಿಯಾ ಪೂರ್ತಿ ನಗ್ನಳಾಗಿದ್ದು ಒಂದೊಂದು ಫೋಟೋದಲ್ಲಿ ಒಬ್ಬೊಬ್ಬ ಪುರುಷನ ಜೊತೆ ಕಾಮಕೇಳಿಯೇ ತೊಡಗಿದ ನಾಲ್ಕಾರು ಭಂಗಿಗಳಿದ್ದವು. ನಾನವನನ್ನು ನೋಡಿ ಲಜ್ಜೆಯಿಂದ ತಲೆ ತಗ್ಗಿಸಿದೆ. ಆತ ಮತ್ತೆ ಎಚ್ಚರಿಸಿದ.

''ನೀನು ನಮಗಾಗಲಿ..ನಿಲ್ವಿಯಾಗಾಗಲೀ ತೊಂದರೆ ಮಾಡಿದರೆ ಏನಾಗುತ್ತದೆ ಎಂಬುದನ್ನ ಯೋಚಿಸಿ ಮುಂದೆ ಹೆಜ್ಜೇ ಇಡು.''

ಅಂದಿನಿಂದ ನಾನೂ ಅವನ ಕೈಗೊಂಬೆಯಾದೆ. ಅವರು ಯಾವಾಗ ಬೇಕಾದಾಗ ಇಲ್ಲಿಗೆ ಬರುತ್ತಿದ್ದರು. ಬರುವಾಗ ನಾಲ್ಕಾರು ಬ್ಯಾಗ್ ತರುತ್ತಿದ್ದರು. ನಿಲ್ವಿಯಾಳ ಕೋಣೆಯಲ್ಲಿ ಇಡುತ್ತಿದ್ದರು. ತಮ್ಮ ಮನಸ್ಸಿಗೆ ತಿಳಿದಾಗ ಗಂಟೆ ಬಾರಿಸುತ್ತಿದ್ದರೂ ಗಂಟೆ ನಿಂತ ಅರ್ಧಗಂಟೆ ನಂತರ ಯಾರೋಬ್ಬರೂ ಬಂದು ಮಾತಾಡಿ ಅವನಿಂದ ಏನೋ ವಸ್ತುವನ್ನು ಪಡೆದು ಹೊರಟುಹೋಗುತ್ತಿದ್ದರು..

ಒಮ್ಮಿಂದೊಮ್ಮೆಲೆ ಹೇಮಂತನಿಗೆ ಜಯಂತನ ನೆನಪಾಯಿತು. ಇನ್ನೊಂದು ಜೇಬಿನಲ್ಲಿದ್ದ ಅವನ ಫೋಟೋ ತೋರಿಸಿ ಅವನ ಬಗ್ಗೆಯೂ ಕೇಳಿದ ಫಾದರ್ ಸರಳವಾಗಿ ನುಡಿದರು. '' ಈತ ನನಗೆ ಗೊತ್ತು. ಈಗ 15-20 ದಿನಗಳಿಂದ ಈತ ಚರ್ಚಸುತ್ತ ತಿರುಗುತ್ತಿದ್ದ. ಮುಂದೇ ನನಗಿವನ ಬಗ್ಗೆ ಸಂಶಯ ಬಂದಿತು. ಈತ ನಿಲ್ವಿಯಾ ಹಾಗೂ ಅವಳ ಸಂಗಡಿಗರ ಹಿಂದೆ ಬಿದ್ದಿದ್ದಾನೆ. ಬಹುಶಃ ಪೋಲೀಸ್ ಅಧಿಕಾರಿಯಾಗಿರಬಹುದು ಎಂದು ಊಹಿಸಿದ್ದೆ. ನಿಮ್ಮ ಊಹೆ ನಿಜ. ಈತ ಕೇಂದ್ರಸರಕಾರದ ಗುಪ್ತಜಾಲ ಪಡೆಗೆ ಸೇರಿದ ಮೇಲೆ ನಾಲ್ಕೈದು ದಿನಗಳ ಹಿಂದೆ ಇವರನ್ನು ಕೊಂದುಬಿಟ್ಟರು.

ಹೇಮಂತಮೇಲಿದ್ದ.

''ಫಾದರ್ ಜಾಗ್ರತೆಯಿಂದಿರಿ. ಹಾ..ಗಂಟೆ ಬಾರಿಸಿದ ಅರ್ಧಗಂಟೆ ನಂತರ ಬರುವ ವ್ಯಕ್ತಿಯಾರನ್ನು ಬೇಟಿಯಾಗುತ್ತಿದ್ದ ? ಎಲ್ಲಿ ?''

''ನನ್ನ ಮಗಳ ಕೋಣೆ ಹಿಂದೆ ಒಂದು ಗ್ಯಾರೇಜ್ ಇದೆ. ಅಲ್ಲಿ. ಹೇಮಂತ ವಂದಿಸಿ ಹೊರಬಂದ.

ಮೇಲ್ನೋಟಕ್ಕೆ ಬೀಚಿನಿಂದ ಹೊರಗೆ ಹೋದವರಂತೆ ನಟಿಸಿದ ಮೇಜರ್ ಹಿಂದಿದ್ದ ಗ್ಯಾರೇಜ್ ಸೇರಿ ಕಾಯುತ್ತಾ ಕುಳಿತ. ಕಪ್ಪುಗಂಟೆ ಬಾರಿಸಿದ ಅರ್ಧಗಂಟೆ

ನಂತರ ಬರುವ ಆಗಂತುಕ ವ್ಯಕ್ತಿಗಾಗಿ..

ಆ ಆಗಂತುಕನೇ ಕೇಸಿನ ರಹಸ್ಯ ಬಿಡಿಸುವ ಸೂತ್ರಧಾರವಾಗಲಿದ್ದ.

ಆದಕಾರಣ ಯಾವದೇ ಪರಿಸ್ಥಿತಿಯಲ್ಲೂ ಅವನನ್ನು ಕಳೆದುಕೊಳ್ಳುವ ಹಾಗಿರಲಿಲ್ಲ.

ಹೆಚ್ಚೂ ಕಡಿಮೆ ಅರ್ಧಗಂಟೆ ಕಳೆಯುತ್ತಿದ್ದಂತೆ ಕೈಯಲ್ಲೊಂದು ಸೂಟಕೇಸು ಹಿಡಿದುಕೊಂಡ ಐವತ್ತು ಐವತ್ತೈದು ವಯಸ್ಸಿನವರೊಬ್ಬರು ಒಳಗೆ ಬಂದರು. ಹೇಮಂತನನ್ನು ನೋಡುತ್ತಲೇ ಕ್ಷಣಕಾಲ ಬೆಚ್ಚಿದ ಅವರು ಮರುಕ್ಷಣ ''ಕ್ಷಮಿಸಿ - ನಾನು ತಪ್ಪಿಬಂದೆ'' ಎಂದು ಹೇಳುತ್ತಾ ಮರಳುತ್ತಿದ್ದಂತೆ ಹೇಮಂತ ಎದ್ದುನಿಂತು ನಗುತ್ತಾ ನುಡಿದ.

''ಮಿಸ್ಟರ್...ನೀವು ಸರಿಯಾದ ಜಾಗೆಗೇ ಬಂದಿದ್ದೀರಿ. ತಪ್ಪು ಅಲ್ಲ..ಬನ್ನಿ ಒಳಗೆ..ನಾನು ನಿಮಗಾಗಿಯೇ ದಾರಿಕಾಯ್ತುರುವೆ.''

''ಆದರೆ ನೀವು ಯಾರು ಅಂತ ನನಗೆ ಗೊತ್ತಿಲ್ಲ..ಪ್ರಥಮಬಾರಿ ನಾನು ನಿಮ್ಮನ್ನು ನೋಡ್ತಾ ಇರೋದು.''

''ಹೌದು. ಪೋಲೀಸ್ ಇಲಾಖೆಯ ಕ್ರಮದಿಂದಾಗಿ ನಾವು ಸ್ವಲ್ಪ ವಿಚಲಿತರಾಗಿದ್ದೇವೆ. ನಿನ್ನೆ ತಾನೇ ನಮ್ಮ ಇಬ್ಬರು ಕೆಲಸಗಾರರು ಜೀವ ಕಳೆದುಕೊಂಡರು. ಅದಕ್ಕಾಗಿ ಪೂರ್ಣ ಅಪರಿಚಿತವಾದ ನನ್ನನ್ನು ಕಳಿಸಿದ್ದಾರೆ. ಸುರಕ್ಷತೆಯ ದೃಷ್ಟಿಯಿಂದ...ಅದೂ ನಿಮ್ಮ ಸುರಕ್ಷತೆಗಳು - ''ಹಾಂ.ಹಾಂ..ಹೌದು..'' ಮುಖದ ಮೇಲೆ ಮೂಡಿದ ಬೆವರು ಒರಸಿಕೊಂಡ ಆತ''

''ಇರಲಿ, ಬಿಸಿನೆಸ್ ಮುಂದುವರಿಸಿ.''

ಆತ ಸೂಟ್‌ಕೇಸು ಅವನಿದುರು ಸರಿಸಿದ.

''ಎಲ್ಲಾ ಮೊದಲಿನಂತೇ ಇದೆ. ನಿಮ್ಮ ಕಮೀಶನ್. ಹಾಗೂ ಇತರ ವೆಚ್ಚಗಳಿಗೆಂದು ಐದು ಲಕ್ಷರೂಪಾಯಿ ಅದರ ಜೊತೆ ಐವತ್ತು ಪೀಸುಗಳನ್ನು ಇರಿಸಿರುವೆ. ಈ ಬಾರಿ ಮುಂದೆ ಮಾಲು ಹೆಚ್ಚಬೇಕು. ಹತ್ತು ದಿನಗಳಲ್ಲಿ ನಾನು ಕ್ಷಿಪ್ರಕ್ರಾಂತಿ ಮಾಡಬೇಕಾಗಿದೆ ಅದಕ್ಕಾಗಿ ಐವತ್ತು ಪೀಸ್ ಇಟ್ಟಿರುವೆ...ಹತ್ತರಿಂದ ಎಪ್ಪತ್ತೈದರವರೇಗಿನ ಮಾಲು ಪೂರೈಸಿರಿ.

ಆತ ಅಂದದ್ದು ಎಳ್ಳಷ್ಟೂ ಅರ್ಥವಾಗಲಿಲ್ಲ ಮೇಜರ್‌ಗೆ ಆದರೂ

ತರ್ಥವಾದವರಂತೆ ಪಾತ್ರವಹಿಸಿದ ಒಂದು ಮಾತಂತೂ ಅರ್ಥವಾಗಿತ್ತು. ಈ ಬಾರಿ ವ್ಯವಹಾರ ಎರಡು ಮೂರು ಪಟ್ಟು ಹೆಚ್ಚಾಗಿದೆ ಎಂದು ಅಂದರೆ ಐವತ್ತು ಪೀಸು ಎಂದ. ಪ್ರತಿಬಾರಿ ಅದು ಹದಿನೈದು ಇಪ್ಪತ್ತೋ ಅಥವಾ ಹತ್ತೋ ಇರಬೇಕು. ಅದನ್ನು ಪೃಥಪಡಿಸಿಕೊಳ್ಳಲು ಕತ್ತಲೆಯಲ್ಲೇ ಗುರಿ ನೋಡಿ ಆತ ಕಲ್ಲೊಂದನ್ನು ಎಸೆದ.

''ಮಿಸ್ಟರ್. ನಿಮ್ಮ ಎಲ್ಲಾ ಮಾತು ನಮಗೆ ಒಪ್ಪಿಗೆಯಾಯಿತು. ಈ ಬಾರಿ ಮಾಲು ನೀವು ತುಂಬಾ ಹೆಚ್ಚಾಗಿ ಕೇಳುತ್ತಿದ್ದೀರಿ.. ಪ್ರತಿಬಾರಿ ಕೇಳುವುದಕ್ಕಿಂತಲೂ ಹೆಚ್ಚು...

''ಹೌದು. ಪ್ರತಿಬಾರಿ ಹನ್ನೆರಡು ಕೇಳುತ್ತಿದ್ದೆವು.'' ಉತ್ತರ ಬಂದಿತು

''ಅಂದಮೇಲೆ ಈಬಾರಿ ನಾಲ್ಕುಪಟ್ಟು ಹೆಚ್ಚು..ಆದರೆ ಕಮೀಶನ್ ಮಾತ್ರ.''

ಹೇಮಂತ ಅರ್ಥ ನಿಲ್ಲಿಸಿ, ಅವರತ್ತ ನೋಡಿದ.

''ಐದು ಲಕ್ಷ ಇಟ್ಟಿದ್ದೇನಲ್ಲ ?''

''ಅದು ಏತಕ್ಕಾಯಿತು?..'' ಪ್ರತಿಸಾರಿಯು ಆರ್ಡರಿಗೂ ಈ ಬಾರಿಯ ಆರ್ಡರಿಗೂ ತಾಳೆ ನೋಡಿ.

''ಹೌದು. ನೀನು ಹೇಳುವುದು ನಿಜ. ಪ್ರತಿಬಾರಿ ನಾವು ಎರಡೂವರೆ ಲಕ್ಷ ಕೊಡುತ್ತಿದ್ದೆವು. ಅದಕ್ಕೆಂದೇ ಈ ಬಾರಿ ಐದು ಕೊಟ್ಟಿದ್ದೇವಲ್ಲ ?''

''ಜಸ್ಟ್ ಎ ಮಿನಿಟ್ ಮಿಸ್ಟರ್...ಹನ್ನೆರಡು ಪೀಸಿಗೆ ಎರಡೂವರೆ ಲಕ್ಷ. ಐವತ್ತು ಪೀಸಿಗೆ ಎಷ್ಟಾಯಿತು. ನೀವೇ ಹೇಳಿ...ಹತ್ತೂವರೆ ಲಕ್ಷಕ್ಕೆ ಸ್ವಲ್ಪ ಕಡಿಮೆ ಆಗುವುದು ಅಷ್ಟೆ.''

''ಇದು ತುಂಬಾ ಆಯಿತು..ಹತ್ತು ಲಕ್ಷ ಅಂದರೆ ?''

''ಮಿಸ್ಟರ್ ಇದು ವ್ಯವಹಾರ..ಹೆಚ್ಚು ಕಡಿಮೆ ಅನ್ನೋ ಪ್ರಶ್ನೆ ಕಮೀಶನ್‌ನಲ್ಲಿ ಬರೋದಿಲ್ಲ.

ಬೇಕಂದ್ರೆ ಇನ್ನೊಮ್ಮೆ ನಿಮ್ಮ ಬಾಸ್‌ನನ್ನು ವಿಚಾರಿಸಿ ನನಗೇನೂ ಅವಸರವಿಲ್ಲ.''

ಹೇಮಂತ ಸಮಾಧಾನದಿಂದ ಅಷ್ಟೇ ದೃಢವಾಗಿ ನುಡಿದಾಗ ಆತ

ಗಾಬರಿಯಾದ.

''ವಿಚಾರಿಸುವ ಪ್ರಶ್ನೆಯೇ ಇಲ್ಲ ಮಿಸ್ಟರ್...ತಗೋ...ಮೂರು ಲಕ್ಷ. ಇವಕ್ಕಿಂತ ಹೆಚ್ಚು ಒತ್ತಾಯ ಮಾಡಬೇಡಿ ದಯವಿಟ್ಟು...ಇಲ್ಲಿಯ ಮಾರ್ಕೆಟ್ ತುಂಬಾ ಟೈಟ್ ಇದೆ.''

''ಏಕೆ..ಏಕೆ ..? ಎಂದು ಅನ್ನುತ್ತ ಹಣ ಇಸಿದುಕೊಂಡು ಇನ್ನು ಹದಿನೈದು ದಿನ ಬಿಟ್ಟು ಮೆಸೇಜ್ ನೀಡುತ್ತೇವೆ..'' ಎಂದ.

''ಹದಿನೈದು ದಿನಗಳಲ್ಲಿ ಆಗಲಾರದೆ ?''

''ಸಾಧ್ಯವಿಲ್ಲ ಮಿಸ್ಟರ್. ಇನ್ನು ಮೊದಲಿನ ಸಪ್ಲೈ ಆರ್ಡರ್ ಮಾಡಿಲ್ಲ - ಅದಕ್ಕೆ.''

''ಸರಿ ಹಾಗೇ ಆಗಲಿ''..

ಆತ ಹೊರಟು ಹೋದಾಗ ಹೇಮಂತ ವಿಜಯದ ನಗೆ ನಕ್ಕು ಸೂಟುಕೇಸು ತೆರೆದ. ಅದರೊಳಗೆ ದೃಷ್ಟಿ ಬೀಳುತ್ತಲೇ ಅವರ ಬಾಯಿಂದ ಸಿಳ್ಳುಮೊರಬಂತು. ಸೂಟ್‌ಕೇಸಿನ ಅರ್ಧಭಾಗ ಹಣದ ಕಟ್ಟು ಇದ್ದರೆ ಇನ್ನೊಂದರ್ಧಭಾಗ ಪೂರ್ತಿ ಕಪ್ಪು ಬ್ರಾಗಳಿಂದ ತುಂಬಿತ್ತು.

ಹಣದ ಕಟ್ಟು ಎತ್ತಿ ನೋಡಿದ ಹೇಮಂತ ಹೊರಳಿಸಿ ಹೊರಳಿಸಿ ನೋಡಿದ ಮತ್ತವನ ಮುಖದ ಮೇಲೆ ನಗೆ ಮೂಡಿತು. ಎರಡೂ ಹಣ ಒಂದೇ ಬ್ಯಾಗಿನಿಂದ ಒಂದೇ ಬಾರಿ ತೆಗೆಯಲ್ಪಟ್ಟಿತ್ತು. ಅವುಗಳ ನಂಬರ್ ಸಹ ಒಂದೇ ಸೀರಿಯಲ್‌ನಲ್ಲಿದ್ದವು. ಅದರ ಸಹಾಯದಿಂದ ಈ ಹಣ ಯಾರ ಖಾತೆಯಿಂದ ಯಾರು ತೆಗೆದರು ಎಂದು ತಿಳಿದುಕೊಳ್ಳುವುದು ತುಂಬಾ ಸುಲಭದ ದಾರಿಯಾಗಿತ್ತು.

ಮುಂದೆ ಹತ್ತು ನಿಮಿಷಗಳು ಕಳೆಯುವುದರಲ್ಲಿ ಹೇಮಂತ ತನ್ನ ಕಾರಿನಲ್ಲಿದ್ದ. ಕಾರು ಓಡುತ್ತಿತ್ತು ಹೋಟೆಲ್ ರೂಮಿನತ್ತ...ಮಧ್ಯಾದಾರಿಯಲ್ಲಿ ಅವನಿಗೆ ಒಂದೇ ಒಂದು ಯೋಚನೆ...ಈ ಕಪ್ಪು ಬ್ರಾಗಳು ಶಬನಮ್‌ಳದು ಇರಬಹುದೇ?..

''ಏನು ? ಒಂದೇ ದಿನದಲ್ಲಿ ಎಂಟು ಲಕ್ಷದ ದುಡಿಮೆಯೇ? ವಾವ್...ಲಾಟ್ರಿ ಬಂದಂತಾಯಿತು...''

''ಅಶೋಕ..ಅಚ್ಚರಿ ಹಾಗೂ ಸಂಭ್ರಮಗಳೊಂದಿಗೆ ನುಡಿದ

''ಈ ಹಣ ನಮಗಲ್ಲ ಅಶೋಕ..ಒಂದು ದೃಷ್ಟಿಯಿಂದ ಇದು ಪಾಪದಹಣ...ಇದನ್ನು ಮರಳಿ ಸಹ ಕೊಡಲಿಕ್ಕಾಗದು. ಆದ್ದರಿಂದ ಪಾಪದಿಂದ ಗಳಿಸಿದ ಹಣವನ್ನು ಪುಣ್ಯದ ಕೆಲಸಕ್ಕೆ ಖರ್ಚು ಮಾಡಿದರಾಯ್ತು. ಊರಿಗೆ ಹೋಗುತ್ತಲೇ ಅಲ್ಲಿಯ ಅನಾಥಾಶ್ರಮಕ್ಕೆ ಕೊಟ್ಟುಬಿಡೋಣ.

ಸುಷಮಾ ಮೇಜರಿನ ಉದಾರತೆ ಹಾಗೂ ಯೋಚಿಸುವ ದಿಕ್ಕು ಕಂಡು ತುಂಬಾ ಸಂತಸವಾಯಿತು. ಹೇಮಂತ ನೋಟುಗಳ ಕಟ್ಟುಗಳಿಂದ ಒಂದೊಂದು ನೋಟು ಹೊರಗೆ ತೆಗೆದ. ಬ್ಯಾಂಕಿನ ಲೇಬಲ್ ಕಿತ್ತಿ ನೋಟುಗಳ ಜೊತೆ ಸೇರಿಸಿ ಅಶೋಕನ ಕೈಗಿತ್ತ ''ಕೂಡಲೇ ನೀನು ಬ್ಯಾಂಕಿಗೆ ಹೋಗಿ ಮ್ಯಾನೇಜರನ್ನು ಭೇಟಿಮಾಡು. ಈ ನಂಬರಿನ ನೋಟುಗಳು ಯಾರಿಗೆ ಕೊಡಲ್ಪಟ್ಟಿತು ? ಯಾವಾಗ ? ಒಟ್ಟು ಎಷ್ಟು ಹಣ ಬ್ಯಾಂಕಿನಿಂದ ತೆಗೆದರು ಮುಂತಾದವುಗಳನ್ನು ಗುಪ್ತವಾಗಿ ವಿಚಾರಿಸು..''

ಅಶೋಕ ಬಾಗಿಲು ದಾಟಿರಲಿಲ್ಲ ಮತ್ತೆ ಕೂಗಿಕರೆದು ನಿಲ್ಲಿಸಿದ.

''ಚರ್ಚಿನ ಫಾದರ್ ಅಪಾಯಕ್ಕೆ ಹತ್ತಿರವಾಗಿದ್ದಾರೆ ಅನಿಸುತ್ತಿದೆ. ಅವರ ರಕ್ಷಣೆ ಬಗ್ಗೆ ಸಹ ಯೋಚಿಸಬೇಕು. ಬರುವಾಗ ಇನ್‌ಸ್ಪೆಕ್ಟರಿಗೆ ಭೆಟ್ಟಿಯಾಗಿ.ಭಾ.

ಇದೀಗ ಬೆಳಕಿಗೆ ಬಂದ ಹೊಸ ವಿಷಯಗಳಿಂದಾಗಿ ಪ್ರಕರಣಕ್ಕೆ ಹೊಸ 'ತಿರುವು' ಬರತೊಡಗಿತ್ತು ಈ ದಿಶೆಯಲ್ಲಿ ಐ.ಜಿ.ಪಿ. ಅವರನ್ನು ಕಂಡು ಮಾತನ್ನಾಡುವ ಅವಶ್ಯಕತೆ ಬಹಳವಿದ್ದುದರಿಂದ ಮೇಜರ್ ಅವರನ್ನು ಭೇಟಿಮಾಡಲು ಸಿದ್ಧನಾಗಿ ಹೇಳಿದ.

''ಸುಷಮಾ..ನಾನು ಒಂದು ಗಂಟೆ ಬಿಟ್ಟು ಬರುತ್ತೇನೆ. ನಾನು ಬರುವಷ್ಟರಲ್ಲಿ ನೀನು ಸಿನೆಮಾನಟಿ ಶಬನಮ್ ಎಲ್ಲಿದ್ದಾಳೆ ಎಂಬುದನ್ನು ಹುಡುಕಿ ಫೋನು ಮಾಡು. ಇತ್ತೀಚೆಗೇನಾದರೂ ಅವಳ ಬ್ರಾ ಕಳವು ಮಾಡಲ್ಪಟ್ಟಿವೆ? ಎಂದು ವಿಚಾರಿಸು ಅದರೊಂದಿಗೆ ಅವಳ ಬ್ರಾದ ವಿಶೇಷ ಗುಣಗಳು ಯಾವುದು? ಎಂಬುದನ್ನು ಕೇಳಿ ತಿಳಿದುಕೋ''.

ಐ.ಜಿ.ಪಿ. ರಸಾಳಕರೆ ಅವರು ಮನೆಯಲ್ಲಿಯೇ ಇದ್ದರು. ಹೊರಗಡೆ ಲಾನನಲ್ಲಿ ಮೊಮ್ಮಗನ ಜೊತೆ ಚೆಂಡು ಆಡುತ್ತಿದ್ದ ಅವರು ಹೇಮಂತ ಕಾರಿನಿಂದಿಳಿಯುತ್ತಿರುವುದನ್ನು ನೋಡಿ ಆಟ ಅಲ್ಲಿಗೇ ನಿಲ್ಲಿಸಿ ಅಲ್ಲಿಂದಲೇ ಹೇಮಂತನೆಡೆ ಕೈಬೀಸಿ ವಿಶ್ ಮಾಡಿ ಅವನತ್ತ ನಡೆದರು. ''ಅಂಕಲ್...ಮೇಜರ್

ಅಂಕಲ್..." ಎಂದು ಕುಣಿಯುತ್ತಾ ಅವರಿಗಿಂತ ಮುಂದೆ ಓಡಿದ ಆಕಾಶ ಹೇಮಂತ ಅವನ ಕೈಕುಲುಕಿ ಬೆನ್ನು ಚಪ್ಪರಿಸಿದ. ರಸಾಳಕರ ಬರುತ್ತಿದ್ದಂತೆ ಹಸ್ತಲಾಪನೆ ನೀಡಿ ಒಳಗೆ ಕರೆದೊಯ್ದರು. "ನಾನು ಅಂಕಲ್‌ಗೆ ಚಹ ಬಿಸ್ಕಿಟ್ ತರತೇನೆ" ಎಂದೆನ್ನುತ್ತಾ ಆಕಾಶ್ ಒಳಗಡೆ ಓಡಿದ.

ಹತ್ತು ಹದಿನೈದು ನಿಮಿಷ ಎಲ್ಲ ವಿಷಯವನ್ನು ಸವಿಸ್ತಾರವಾಗಿ ತಿಳಿಸಿ ಹೇಳಿದ ಮೇಜರ್ ಕೊನೆಗೆ ಹೇಳಿದ.

"ನನ್ನ ಕಣ್ಣ ಮುಂದೆ ಚಿತ್ರ ಸ್ಪಷ್ಟವಾಗುತ್ತ ಬಂದಿದೆ. ನಾಳೆ ನಾಡಿದ್ದರಲ್ಲಿ ನಾನು ಈ ಸಮಸ್ಯೆ ಬಿಡಿಸಬಲ್ಲೆ ಎಂಬ ವಿಶ್ವಾಸ ಮೂಡುತ್ತದೆ. ನಾನು ಹೇಳಿದಂತೆ ತಾವು ಸಹಕಾರ ನೀಡಬೇಕು...ಅದರಿಂದ ನನಗೆ ತುಂಬಾ ಸಹಾಯವಾಗುತ್ತದೆ."

"ಓಹೋ ಅವಶ್ಯವಾಗಿ ಇದೀಗಲೇ ನೀವು ಹೇಳಿದ ಕೆಲಸ ಮಾಡುತ್ತೇನೆ.."

ರಸಾಳಕರ ಫೋನ್ ಮೇಲೆ ಶ್ಯಾಮಸುಂದರನಿಗೆ ಆದೇಶ ನೀಡಿದರು.

"ಶ್ಯಾಮಸುಂದರ..ಕೂಡಲೇ ನೀನೇ ಖುದ್ದಾಗಿ ಚರ್ಚ್‌ಗೆ ಹೋಗಿ ಫಾದರನ್ನು ಠಾಣೆಗೆ ಕರೆದುಕೊಂಡು ಬಾ ಅವರನ್ನು ವಿಚಾರಣೆಗೆ ಗುರಿಪಡಿಸಬೇಕಾಗಿದೆ. ಜನರ ಕಿವಿಗೆ ಇದು ಬೀಳಬಾರದು. ಬಿದ್ದರೆ ಅನಾಹುತವಾಗುತ್ತದೆ. ಮೂರು ನಾಲ್ಕು ದಿನ ಅವರು ನಿನ್ನ ಗೆಸ್ಟ್ ಆಗಿರಬೇಕು. ಅವರು ಯಾರೊಂದಿಗೂ ಮಾತನಾಡಬಾರದು. ಯಾರನ್ನೂ ನೋಡಕೂಡದು. ಅವರು ಎಲ್ಲಿದ್ದಾರೆ ಅಂತ ಯಾರಿಗೂ ಸಂಶಯ ಬರದ ಜಾಗೆಯಲ್ಲಿ ಮುಚ್ಚಿಡು. ವಕೀಲರು ಯಾರಾದರೂ ಬಂದರೆ ಕೆದರಿ ಕೆದರಿ ಏನಾದರೂ ಕೇಳಿದರೆ ನನಗೇನೂ ಗೊತ್ತಿಲ್ಲ ಎಂದು ಹೇಳು. ತಿಳೀತಾ ?"

ಸರಿಯಾಗಿ ಎರಡೆರಡು ಬಾರಿ ತಿಳಿಸಿಹೇಳಿ ಫೋನು ಕೆಳಗಿಟ್ಟಾಗ ಆಕಾಶ ಕಾಫಿ ಹಾಗೂ ಬಿಸ್ಕಿಟ್‌ನೊಂದಿಗೆ ಬಂದ. ಅವನ ಕೈಯಲ್ಲಿಯ ಟ್ರೇ ಇಸಿದುಕೊಂಡು ಟಿಪಾಯ್ ಮೇಲೆ ಇಟ್ಟ ಹೇಮಂತ ರಸಾಳಕರ ಅವರಿಗೆ ಒಂದು ಕಪ್ಪು ನೀಡಿ ತಾನೊಂದು ತೆಗೆದುಕೊಂಡ. ಅವರು ಮಾತನಾಡುತ್ತಿರುವಾಗ ಆಕಾಶ್ ಕೇಳಿದ ತುಂಟತನದಿಂದ.

"ಮೇಜರ ನನ್ನದೊಂದು ಪ್ರಶ್ನೆ"

ರಸಾಳಕರ ಮುಖದ ಮೇಲೆ ತಿಳಿಯಾದ ನಗೆ ಮೇಜರಗೆ ಅಚ್ಚರಿ

"ಓಕೆ. ಕೇಳು ನೋಡೋಣ"

"ಬ್ಲ್ಯಾಕ್‌ಬುಲರ್ ಟೀಚರ ಅಂದರೆ ಏನು ಹೇಳಿ ?"

"ಏನು ? ಬ್ಲ್ಯಾಕ್ ಬುಲರ್ ಟೀಚರ... ಏನಪ್ಪಾ ಇದು ವಿಚಿತ್ರ..."

ಹೇಮಂತ ಯೋಚಿಸತೊಡಗಿದ. ಆತ ಯೋಚಿಸಿದಂತೆ ಮಾಡುತ್ತಿದ್ದಂತೆ ಆಕಾಶನೆ ಹೆಚ್ಚು ಹೆಚ್ಚು ಆನಂದಿತನಾಗತೊಡಗಿದ. ಎರಡು ನಿಮಿಷ ಬಿಟ್ಟು ಹೇಳಿದ ಹೇಮಂತ.

"ಸಾರಿ ಆಕಾಶ.. ನಾನು ಸೋತೆ... ನೀನೆ ಹೇಳು"

'ಇದು ಅತೀ ಸಿಂಪಲ್ ಅಂಕಲ್ ಬ್ಲ್ಯಾಕ್ ಬುಲರ್ ಟೀಚರ ಅಂದ್ರೆ ಕರಿಬಸವಶಾಸ್ತ್ರಿ ಅಂತ.

"ಓಹೋ ಮೇಜರ ಸೋತ್ರು" ಆಕಾಶ್ ಕೇಕೆ ಹಾಕಿದ.

ಮೇಜರ ಪದೇ ಪದೇ ಅದನ್ನೇ ಮೆಲುಕು ಹಾಕಿದ.

ಕ್ ಅಂದರೆ ಕರಿ-ಕಪ್ಪು, ಬುಲಕ್ ಅಂದ್ರೆ ಎತ್ತು-ಬಸವ ಆಯ್ತು. ದರೆ ಶಿಕ್ಷಕ-ಶಾಸ್ತ್ರಿ ಎಂದರ್ಥ. ಮೂರೂ ಕೂಡಿಸಿದರೆ ಕರಿಬಸವಶಾಸ್ತ್ರಿ. [illegible] ಆಯ್ತಲ್ಲ.

ಮತ್ತೂ ಸ್ವಲ್ಪ ಹೊತ್ತು ಕುಳಿತಿದ್ದ ಆತ ರತ್ನಾಕರ ಅವರಿಂದ ಬೀಳ್ಕೊಂಡ ಆಕಾಶ ತನ್ನ ಅಜ್ಜಿಯ ಜೊತೆ ದೇವಸ್ಥಾನಕ್ಕೆ ಹೋಗಿದ್ದರಿಂದ ಭೆಟ್ಟಿಯಾಗಲಿಲ್ಲ. ಕಾರು ಓಡಿಸುತ್ತಿದ್ದರೂ ಅವನ ತಲೆಯನ್ನು ಬ್ಲ್ಯಾಕ್‌ಬುಲಕ್‌ಟೀಚರ ಅಂದ್ರೆ ಕರಿಬಸವಶಾಸ್ತ್ರಿ ಎಂಬ ಮಾತೇ ಓಡಾಡುತ್ತಿತ್ತು. ಅದನ್ನೇ ಆಧಾರವಾಗಿಟ್ಟುಕೊಂಡು ಬೇರೆಬೇರೆ ಶಬ್ದಗಳನ್ನು ಹೆಸರುಗಳನ್ನು ತರ್ಜುಮೆ ಮಾಡುತ್ತಾ ಕಾಲ ನಡೆಸುತ್ತಿದ್ದ. ಒಮ್ಮಿಂದೊಮ್ಮೆಲೆ "ಅರೆ ! ಹೌದಲ್ಲ ನಾನು ಯೋಚಿಸಲೇ ಇಲ್ಲ" ಎಂದು ತನ್ನಷ್ಟಕ್ಕೆ ತಾನೇ ಅಂದುಕೊಳ್ಳುತ್ತಾ ರಸ್ತೆಪಕ್ಕದಲ್ಲಿ ಮರದ ಕೆಳಗೆ ಕಾರು ನಿಲ್ಲಿಸಿ ಲೆಕ್ಕಾಚಾರ ಪ್ರಾರಂಭಿಸಿದ ಬ್ಲ್ಯಾಕ್ ಅಂದರೆ ಕರಿ-ಕಪ್ಪು.

ಕಪ್ಪು ಅನ್ನಲಿಕ್ಕೆ ಬ್ಲ್ಯಾಕ್. ಅದರಂತೆ ಗಂಟೆ ಅನ್ನಲಿಕ್ಕೆ.. ಗಂಡೆ.. ಗಂಡೆ ಹಾಂ.. ಬೆಲ್.. ಬೆಲ್ ಎಂದಾಯ್ತು. ಎರಡೂ ಸೇರಿಸಿದರೆ ಬ್ಲ್ಯಾಕ್ ಬೆಲ್.. ಬ್ಲ್ಯಾಕ್‌ಬೆಲ್ ಅಂದರೆ ಕಪ್ಪುಗಂಟೆ. ಹೌದು.. ಸತ್ತಾಗ ಬಾರಿಸುವ ಗಂಟೆ ಅಶುಭಗಂಟೆ ಕಪ್ಪುಗಂಟೆ. ಅದೇ ಬ್ಲ್ಯಾಕ್‌ಬೆಲ್ ಜಯಂತ ಇದನ್ನೇ ಏಕೆ

ಹೇಳಿರಬಾರದು ಕೊಡಬಾರದನ್ನು ಕೋಡವಾರನನ್ನ ಕಪ್ಪುಗಂಟೆ ಬಗ್ಗೆ ಜಾಗೃತೆ ಅಪಾಯ...ಇದನ್ನೇ ಬ್ಲ್ಯಾಕ್‌ಬೆಲ್ ನಿಂದ ಅಪಾಯ..ಜಾಗೃತತೆ ಎಂದಿದ್ದರೆ ?...

ಯೋಚಿಸಲಿಕ್ಕೇನು ? ಬೇಕಾದಷ್ಟು ದಾರಿ ಇದೆ.

ಇದೂ ಒಂದು ದಾರಿ ಆಯಿತು.. ಎಂದುಕೊಳ್ಳುತ್ತಾ ಪುನಃ ಕಾರು ಸ್ಟಾರ್ಟ ಮಾಡಿದ. ಆತ ರೂಮಿಗೆ ಬಂದಾಗ ಅಶೋಕ ಮತ್ತು ಸುಷಮಾ ಇಬ್ಬರೂ ತಮ್ಮ ತಮ್ಮ ಪಾಲಿನ ಕೆಲಸ ಮುಗಿಸಿಕೊಂಡು ಬಂದು ಅವರ ವರದಿ ಒಪ್ಪಿಸಲು ಆತುರರಾಗಿ ಕುಳಿತಿದ್ದರು... ಅವರಿಬ್ಬರೂ ತಮ್ಮಕೆಲಸ ಸಮರ್ಪಕವಾಗಿ ಮಾಡಿದ್ದಾರೆ ಎಂದು ಅವರ ಮುಖಭಾವದಿಂದ ಸ್ಪಷ್ಟವಾಗಿತ್ತು.

ಅಶೋಕ ತನ್ನ ಬಳಿಯಿದ್ದ ಕಾಗದ ಮುಂದಿರಿಸಿದ.

''ಮೊನ್ನೆ ದಿವಸ ಬ್ಯಾಂಕಿನಿಂದ ಹತ್ತುಲಕ್ಷರೂಪಾಯಿ ತೆಗೆಯಲಾಗಿದೆ. ಅವರ ಹೆಸರು, ವಿಳಾಸ, ಅಕೌಂಟ ನಂಬರ ಇದರಲ್ಲಿದೆ. ನೀವು ಕೊಟ್ಟ ರೂಪಾಯಿ ಆ ಹತ್ತುಲಕ್ಷದಲ್ಲಿದೆಯೆಂದು ಖಚಿತವಾಯಿತು.''

''ಓಗೋ ಸಮಾಚಾರ.. ಹತ್ತರಲ್ಲಿ ನನಗೆ ಎಂಟು ಬಂದರೆ ಮಧ್ಯೆ ಎರಡು ಲಕ್ಷ ಆತ ನುಂಗಿದಾನೆ ಸರಿ. ಸುಷಮಾ ನಿನ್ನದೇನಾಯಿತು ?''

''ನನಗೆ ಫ್ರೋನ ಮೇಲೆ ನಿಮ್ಮ ಶಬನಮ್ ಸಿಕ್ಕಿದ್ದಳು''

''ಅವಳು ನನ್ನವಳಲ್ಲ. ನನಗೆ ನೀನು ನನ್ನವಳು. ಮುಂದೆ ಹೇಳು''

''ಸಧ್ಯ ಅವಳ ಬ್ರಾಕಳವು ಆಗಿಲ್ಲವಂತೆ. ಇಂದು ರಾತ್ರಿ ಆಕೆ ವಿದೇಶಕ್ಕೆ ಹೋಗಿ ಎರಡುದಿನ ಶೂಟಿಂಗ್ ಮುಗಿಸಿ ಬರುತ್ತಾಳಂತೆ. ಅವಳ ಬ್ರಾದ ವಿವರ ಎಲ್ಲಾ ಬರೆದಿದ್ದೇನೆ ಆಸಕ್ತಿಯಿಂದ ಓದಿ..''

ಮೇಜರ ಮುಗುಳು ನಗುತ್ತಾ ಕಾಗದದ ಕಡೆ ನೋಡಿದ.

ಬ್ರಾದ ಸೈಜು.. ಕಲರ್.. ಬಟನ್ ಬಣ್ಣ ಎಲ್ಲ ಇದ್ದವು. ಬ್ರಾ ಸಪ್ಲೈ ಮಾಡುವ ಅಂಗಡಿಯ ಲೇಬಲ್ ಬ್ರಾನೇ ಇದೆ. ಅದರ ಹೆಸರು.. ಒಮ್ಮೆಲೆ

ಹೆಸರು ಬರುತ್ತಿದ್ದಂತೆ ಹೇಮಂತ ಎದ್ದುನಿಂತು ಆವೇಶ ನೀಡತೊಡಗಿದ.

''ಅಶೋಕ.. ಕೇಸಿನ ಕಥೆ ಮುಗಿದಂತಾಯ್ತು. ನಾನೀಗಲೇ ಊರಿಗೆ ಹೋಗಬೇಕು. ಎರಡು ದಿನ ಬರುವದಿಲ್ಲ. ಹಾಂ ಸುಷಮಾ ನನ್ನ ಏರ್‌ಬ್ಯಾಗ್ ರೆಡಿ

ಮಾಡು'' ಅವರಿಬ್ಬರಿಗೂ ಅಚ್ಚರಿ. ಅವರನ್ನೇ ನೋಡುತ್ತಿದ್ದರೆ ಆತ ನಗುತ್ತಿದ್ದ ಅವರನ್ನೇ ನೋಡುತ್ತ.

(12)

ರಾತ್ರಿಬೀಟಗಿದ್ದ ಕಾನಸ್ಟೇಬಲ್ ಬೋಪಾನಾಯ್ಕ ರೆಸ್ಟಾರೆಂಟಿನಿಂದ ಹೊರಬಂದಾಗ ರಸ್ತೆ ಎಲ್ಲಾ ನಿರ್ಜನವಾಗಿತ್ತು. ಸಮಯ ಒಂದು ಗಂಟೆ. ಸೆಕೆಂಡಶೋ ಸಹ ಬಿಟ್ಟು ಜನರೆಲ್ಲ ಮನೆ ಸೇರಿ ಆಗಿತ್ತು. ಒಂದೆರಡು ಚಿಕ್ಕ ರೆಸ್ಟೋರೆಂಟಗಳನ್ನು ಬಿಟ್ಟರೆ ಉಳಿದೆಲ್ಲ ಅಂಗಡಿಗಳು ನಿದ್ದೆಮಾಡತೊಡಗಿದ್ದವು. ಹೀಗಾಗಿ ರಸ್ತೆ ದೀಪಗಳನ್ನು ಬಿಟ್ಟರೆ ಬೇರೆಲ್ಲಿಯೂ ಬೆಳಕು ಕಾಣುತ್ತಿರಲಿಲ್ಲ. ಮೈಕೊರೆಯುವ ಚಳಿಯಲ್ಲಿ ಬ್ಯಾಟರಿ ಬಡಿಗೆಗಳೊಂದಿಗೆ ಊರೆಲ್ಲ ಸುತ್ತುವ ತನ್ನ ನೌಕರಿ ಬಗ್ಗೆ ಜಿಗುಪ್ಸೆಯುಂಟಾಯಿತು ನಾಯ್ಕಗೆ. ಸ್ವಲ್ಪ ಮೂಗು ಮೊಂಡ ಹಾಗಿದ್ದರೆ ಏನಾಯ್ತು. ರಸದುಂಬಿದ ಬಾಳೆಹಣ್ಣಿನ ಥರಾ ಇರುವ ಒಳ್ಳೆ ಆಕರ್ಷಕ ಮೈಕಟ್ಟಿನ ಇಪ್ಪತ್ತೈದು ಇಪ್ಪತ್ತಾರು ವರ್ಷದ ಹೆಂಡತಿ ಮನೆಯಲ್ಲಿರುವಾಗ ಅವಳನ್ನು ತಬ್ಬಿಕೊಂಡು ಬೆಚ್ಚಗೆ ಮಲಗುವುದನ್ನು ಬಿಟ್ಟು ಇದೊಂದು ಗ್ರಹಚಾರವಾಯಿತಲ್ಲ ಎಂದು ತನ್ನನ್ನು ತಾನೇ ಹರೆದುಕೊಳ್ಳುತ್ತಾ ಬಡಿಗೆಯಿಂದ ಎರಡು ಮೂರು ಬಾರಿ ನೆಲಕುಟ್ಟಿ 'ಕಿರ್ರ' ಎಂಬ ಸೀಟಿ ಹೊಡೆಯುತ್ತ ಪಕ್ಕದ ಗಲ್ಲಿಗೆ ನಡೆದ.

ಒಂದು ಗಲ್ಲಿಯಿಂದ ಮತ್ತೊಂದರಲ್ಲಿ ಹೀಗೆ ಸುತ್ತುತ್ತಾ ಎಡ್ಡಾದಿಡ್ಡಿ ಓಣಿಗೆ ಬಂದಾಗ ಮೈಯಲ್ಲಿ ಏನೋ ಒಂದು ಥರಾ ನೋವು ಕಾಣಿಸಿಕೊಂಡಂತಾಯ್ತು. ನೋವು ಅಂದರೆ ಎಂಥಾನೋವು ಒಂದು ಬಗೆಯ ಮಧುರನೋವು. ಅದಕ್ಕೆ ಕಾರಣವೂ ಇಲ್ಲದಿರಲಿಲ್ಲ. ಆ ಓಣಿ ನಿತ್ಯ ಸುಮಂಗಲಿಯರ ಓಣಿ. ರಾತ್ರಿಯೆಲ್ಲಾ ಚಟುವಟಿಕೆ ಇರುವ ಪ್ರದೇಶ. ಒಂದೊಂದು ಮನೆಯಲ್ಲಿ ಸಂಗೀತ.. ಹಾಡು ಕೇಳಿ ಬಂದರೆ ಕೆಲವೊಂದು ಮನೆಗಳು ಉನ್ಮಾದದ ಕೇಕೆಗಳು. ಕಾಮದ ಹುಚ್ಚುಹುಚ್ಚು ಮಾತುಗಳು ಕೇಳಿ ಬರುತ್ತಿದ್ದವು. ನಾಯ್ಕ ತನಗೆ ರಾತ್ರಿ ಪಹರೆ ಬಂದಾಗ ಈ ಓಣಿಯಲ್ಲೇ ಒಂದೆರಡು ಗಂಟೆ ಸುತ್ತಿ ಸುಮಂಗಲಿಯರ ಜೊತೆ ಮಾತಾಡಿ ಕಣ್ಣಲ್ಲೇ ಅವರ ರಸಸ್ವಾದನೆ ಮಾಡಿ ಅವರಲ್ಲಿಯೇ ಚಹ ಕುಡಿದು ಮುಂದೆ ಹೋಗುತ್ತಿದ್ದ..

'ಕಿರ್ರ' ಎನ್ನುತ್ತ ಬಾಗಿಲು ತೆರೆಯಿತು. ಬೋಪಾನಾಯ್ಕನ ಕಣ್ಣುಗಳು ಅತ್ತ ಹೊರಳಿದವು ಬೆಳಕು ಹೊರಬಂದ ಮನೆಯಲ್ಲಿ ಅದು ಸುಂದ್ರಿ ಮನೆ. ಸುಂದ್ರಿ ಎಂಟು ಹತ್ತು ವರ್ಷಗಳ ಹಿಂದೆ ಪ್ರಥಮದರ್ಜೆ ವೇಶ್ಯೆಯಾಗಿದ್ದಳು. ಸಧ್ಯ ಆಸ್ಥಾನ ಉಳಿದಿರಲಿಲ್ಲ.. ಯೌವನ ಇಳಿದು ಆಕೆ ದ್ವಿತೀಯ ದರ್ಜೆಗೆ ಬಂದಿದ್ದಳು ಅವಳ ಮನೆ

ಬಾಗಿಲು ತೆರೆದಿತ್ತು. ಬಾಗಿಲ ಬೆಳಕಿನಲ್ಲಿ ಮನೆಮುಂದೆ ನಿಂತ ಆಟೋರಿಕ್ಷಾ ಸಹ ಗೋಚರಿಸಿ ಬೋಪಾ ಅವರತ್ತ ಹೆಜ್ಜೆಹಾಕಿದ. ಸುಂದ್ರಿ ಮನೆಯಿಂದ ಹೊರಬಿದ್ದವರು ಇಬ್ಬರು ಅದರಲ್ಲಿ ಒಬ್ಬ ಚೆನ್ನಾಗಿ ಕುಡಿದಿದ್ದ. ಹೀಗಾಗಿ ಆತನಿಗೆ ಎಳ್ಳಷ್ಟೂ ಎಚ್ಚರವಿರಲಿಲ್ಲ. ಸಫಾರಿ ಸೂಟು ಧರಿಸಿದ. ಐವತ್ತರ ಎಡ ಬಂದಷ್ಟು ವಯಸ್ಸಾಗಿರುವ ಅವರನ್ನು ಪೈಲ್ವಾನನ ಹಾಗೆ ಇರುವ ನಲವತ್ತು ನಲವತ್ತೈದು ವರ್ಷವಯಸ್ಸು ಇರುವವ ಒಂದು ದೃಷ್ಟಿಯಿಂದ ಎತ್ತಿಕೊಂಡೇ ಆಟೋಕ್ಕೆ ತಂದು ಹಿಂದೆ ಮಲಗಿಸಿದ. ಎಡಬಲದ ಬಾಗಿಲು ಮುಚ್ಚಿದಾಗ ನಾಯಕನಿಗೆ ತಿಳಿಯಿತು. ಆ ಪೈಲ್ವಾನೇ ಆಟೋ ಚಾಲಕ ಎಂದು.. ಆಟೋ ಅಲ್ಲಿಂದ ಚಲಿಸಿದಾಗ ಸಹಜವಾಗಿ ನಾಯ್ಕನ ದೃಷ್ಟಿ ಅದರ ನಂಬರ ಮೇಲೊಂದು ಸಾರಿ ಹರಿಯಿತು. ಎಷ್ಟಾದರೂ ಅದು ಅವನ ವೃತ್ತಿ ಅಲ್ಲವೆ ?

''ಯಾಕೆ ಹವಾಲ್ದಾರ ಸಾಹೇಬ್ರು, ಒಂದು ತಿಂಗಳಿಂದ ಕಂಡಿಲ್ಲ''

ಸುಂದ್ರಿಯ ಬಾಯಿಯಿಂದ ಸುಂದರವಾದ ವಾಣಿ ಹೊರಹೊಮ್ಮಿತು. ಆಟೊದಿಂದ ದೃಷ್ಟಿ ಕಿತ್ತು ಅವಳೆಡೆ ಹರಿಸಿದ .ನಾಯ್ಕ.. ಅವರ ಕಣ್ಣುಗಳು ಬಟ್ಟಲನಂತಾದವು. ಅಸ್ತವ್ಯಸ್ತವಾಗಿ ಒಂದೇ ಸುತ್ತುಸೀರೆ ಸುತ್ತುಕೊಂಡಿದ್ದ ಸುಂದ್ರಿ ಮೇಲೆ ಏನನ್ನು ಧರಿಸಿರಲೇ ಇಲ್ಲ. ತನ್ನ ಬಿರುಸನ್ನು ಕಳೆದುಕೊಂಡಿದ್ದ ದೊಡ್ಡ ಗಾತ್ರದ ಅವಳ ಕುಚಗಳು ಸ್ವಲ್ಪ ಇಳಿಬಿಟ್ಟಿದ್ದರು ನಾಯ್ಕನಿಗೆ ತನ್ನ ಹೆಂಡತಿಯ ನೆನಪಾಗಿ ಮೈ ಎಲ್ಲಾ ಬೆವೆತ. ಕಿಲಕಿಲ ನಕ್ಕಳು ಸುಂದ್ರಿ. ''ಬೇಕಾದ್ರೆ ಬಂದುಹೋಗಿ ಸಾಹೇಬರೆ.. ನಂದೂ ಧಂಧೆ ಟೈಮು ಮುಗಿದುಹೋಯ್ತು ಹೊರಗೆ ತುಂಬಾ ಚಳಿ. ಸ್ವಲ್ಪವೇ ಬಿಸಿ ಮಾಡಿಕೊಂಡು ಹೋದರಾಯ್ತು''

ಆಕೆ ಮುಕ್ತ ಆಹ್ವಾನ ನೀಡಿದಳು. ಬಲವಾಗಿ ವಿಚಲಿತವಾದ ನಾಯಕ. ಮರುಕ್ಷಣ ಹೆಂಡತಿಯ ನೆನಪಾಗಿ ಛಿ ಅವಳಿಗೇಕೆ ಅನ್ಯಾಯ ಮಾಡಬೇಕು ಎಂದು ಒಳಮನಸ್ಸು ಹೇಳಿತು.

''ಇಲ್ಲ ಸುಂದ್ರಿ.. ನಿನ್ನ ಕರೆಯಂತೆ ನಾನು ನಿನ್ನ ಪಕ್ಕ ಮಲಗಲಾರೆ. ಒಂದೈದು ನಿಮಿಷ ಬೇಕಂದ್ರೆ ಮಾತಾಡಿ ಕೂಡ್ತೇನೆ. ಒಂದು ಕಪ್ ಚಹಾ ದೊರೆತರೆ ಸಾಕು''

ಕಿಲಕಿಲ ನಕ್ಕ ಸುಂದ್ರಿ.. ನಿಮ್ಮಿಷ್ಟ ಬನ್ನಿ ಒಳಕ್ಕೆ ಎನ್ನುತ್ತ ಬದಿಗೆ ಸರಿದಳು. ನಾನು ಒಳಬರ್‍ತಿರಲಿಲ್ಲ ಬಾಗಿಲು ಮುಂದೆ ಮಾಡಿ ಅಡುಗೆ ಮನೆಯಲ್ಲಿ ನಡೆದಳು. ಅವಳ ಕುಲುಕುತ್ತಿರುವ ಹಿಂಭಾಗ ಎಳೆಯುತ್ತಿರುವ ಸೀರೆ. ನಗ್ನವಾದ ಹರವಾದ

ಬೆನ್ನು ಎಲ್ಲಾ ನೋಡುತ್ತಾ ಬೆವೆತ ನಾಯ್ಕ ಧೈರ್ಯ ತಂದುಕೊಳ್ಳಲು ಸಿಗರೇಟಿಗೆ ಮೊರೆಹೋದ. ಸಿಗರೇಟೇನೋ ಬಾಯಿಗೆ ಬಂತು. ಆದರೆ ಬೆಂಕಿಪೊಟ್ಟಣ ? ಅತ್ತಿತ್ತ ನೋಡಿದ ಮಂಚದ ಮೇಲೆ ಇರೋ ದಿಂಬಿಗೆ ಕಾಣಿಸಿತು ಲೈಟರ. ಪರವಾಗಿಲ್ಲ.. ಸುಂದ್ರಿ ಗಿರಾಕಿಗಳಿಗೆ ಬೇಕಾದ ಎಲ್ಲಾ ವ್ಯವಸ್ಥೆ ಇಟ್ಟಿದ್ದಾಳೆ ಎಂದು ಮನದಲ್ಲೇ ಅವಳನ್ನು ಶ್ಲಾಘಿಸುತ್ತ ಲೈಟರ ಎತ್ತಿಕೊಂಡು ಸಿಗರೇಟು ಉರಿಸಿದ.

ಅಷ್ಟರಲ್ಲಿ ತನ್ನ ದೊಡ್ಡದೊಡ್ಡ ಸ್ತನಗಳನ್ನು ಕುಲುಕಿಸುತ್ತಲೇ ಎರಡು ಕಪ್‌ಗಳಲ್ಲಿ ಚಹ ತಂದಳು ಸುಂದ್ರಿ.. ನಾಯ್ಕ ನೀರು ನೀರಾದ.. ನಾನೇಕೆ ಇಲ್ಲಿಗೆ ಬಂದೆ ಎಂದು ಶಪಿಸಿಕೊಳ್ಳುವಂತಾಯಿತು. ಬೇಗನೇ ಇಲ್ಲಿಂದ ಜಾರಿಕೊಳ್ಳಲು ಆತ ಯೋಚಿಸತೊಡಗಿದ. ಅವನಿಗೂ ಚಹ ಕೊಟ್ಟು ತಾನೂ ಕುಡಿಯುತ್ತ ಅವನ ಎದುರೇ ಕುಳಿತಳು ಸುಂದರಿ.. ಮಧ್ಯೆ ಬಾಯಿಯಿಂದ ಚೆಲ್ಲಿದ ಚಹ ಎದೆಯ ಮೇಲೆ ಬೀಳುತ್ತಿದ್ದಂತೆ ಸೆರಗಿನಿಂದ ತಿಕ್ಕಿತಿಕ್ಕಿ ಒರೆಸಿಕೊಂಡಂತಹ ಅವಳ ತೊಡೆ ಅನಾವೃತಗೊಂಡಲು ಅಲ್ಲಿದೆ ಅವಳ ತುಟಿಗಳು ಒಂದಕ್ಕೊಂದು ತಡಕಾಡಿದರು ಅರ್ಧ ಕಪ್ ಚಹ ಹಾಗೇ ಉಳಿದಿರುವಾಗಲೇ ಅದನ್ನು ಅಲ್ಲೇ ಬಿಟ್ಟು ಚಟಕ್‌ನೆ ಎದ್ದ ಬೋಪಾನಾಯ್ಕ 'ನಾ ಬರತೇನೆ ಸುಂದ್ರಿ' ಎಂದು ಕೂಗುತ್ತ ಲಗುಬಗೆಯಿಂದ ಬಾಗಿಲು ತೆರೆದು ಬೀದಿಗಿಳಿದಾಗ ಅವನ ಹಿಂದಿನಿಂದ ಜೋರಾಗಿ ಅಟ್ಟಹಾಸ ಮಾಡಿ ನಕ್ಕ ಸುಂದ್ರಿ ನಗೆ ಅಟ್ಟಿಸಿಕೊಂಡು ಬಂದಿತು.

ಬೋಪಾನಾಯ್ಕನ ಮನಸ್ಸು ಕೆಟ್ಟುಹೋಗಿತ್ತು. ಬೇಗ ಮನೆಸೇರಬೇಕು ಎಂದು ಒದ್ದಾಡತೊಡಗಿತು. ನೌಕರಿ ಹಾಳಾಗಲಿ. ಇನ್ನೊಂದು ರೌಂಡ ಹೊಡೆದು ಮನೆಗೆ ಓಡಿವರಾಯ್ತು... ತಾನೇ ತೀರ್ಮಾನ ಮಾಡಿಕೊಳ್ಳುತ್ತ ಮತ್ತೆ ಒಂದೆರಡು ಗಲ್ಲಿ ಸುತ್ತಿ ಮುಖ್ಯ ಬೀದಿಗೆ ಬಂದ. ಪಕ್ಕದಲ್ಲೇ ದೊಡ್ಡ ಚರಂಡಿ.. ಚರಂಡಿಗೆ ಹೊಂದಿ ತಿಪ್ಪೆಗುಂಡಿ ರಾಶಿರಾಶಿ ತಿಪ್ಪೇ.. ತುಂಬಿತುಳುಕುತ್ತಿತ್ತು.. ಗಬ್ಬು ವಾಸನೆ ಬೇರೆ... ಮೂತ್ರ ಮಾಡಬೇಕೆನಿಸಿತು ಬೋಪಾನಿಗೆ ಅತ್ತಿತ್ತ ನೋಡಿದ ರಾತ್ರಿ ಸಮಯ ಮೂತ್ರ ಎಲ್ಲಿ ಮಾಡದರೇನು ? ನೋಡಲು ಯಾರಿದ್ದಾರೆ ? ತಿಪ್ಪೆಗುಂಡಿಯಿಂದ ತುಸುದೂರದಲ್ಲಿ ಬೆಳೆದ ಮರದ ಕೆಳಗೆ ಕುಳಿತ.

''ಫಟ್.. ಫಟ್ ಫಟರ್'' ಸದ್ದು. ಕುಳಿತಲ್ಲಿಂದಲೇ ದನಿ ಬಂದ ಕಡೆ ನೋಡಿದ ಆಟೋರಿಕ್ಷಾ ಒಂದು ವೇಗವಾಗಿ ಬರುತ್ತಿತ್ತು. ತಿಪ್ಪೆಗುಂಡಿ ಸಮೀಪ ಬಂದಾಗ ಅದರ ವೇಗ ಸ್ವಲ್ಪ ತಗ್ಗಿತು. ಕುಳಿತಲ್ಲಿಂದಲೇ ನಾಯ್ಕ ನೋಡುತ್ತಿದ್ದಂತೆ ತಿಪ್ಪೆ ಸಮೀಪಿಸಿದಾಗ ಆಟೋದ ಹಿಂದಿನ ಬಾಗಿಲು ತೆರೆಯಿತು. ಒಳಗಿದ್ದ ಯಾವದೋ ವಸ್ತು 'ಧಪ್' ಎಂದು ಸದ್ದುಮಾಡುತ್ತ ನೆಲಕ್ಕೆ ಬೀಳುತ್ತಿದ್ದಂತೆ ರಿಕ್ಷಾದ

ವೇಗ ಹೆಚ್ಚಿ ಓಡಿ ಮಾಯವಾಯಿತು.

ಮೂತ್ರ ಮಾಡಿ ಮೇಲೆದ್ದ ಬೋಪಾನಾಯ್ಕ. ಕುತೂಹಲದೊಂದಿಗೆ ಏನೋ ಅನಾಹುತ ನಡೆದಿದೆ ಎಂಬುದು ಹೊಳೆದಿರಲಿಲ್ಲ. ಬಿದ್ದವಸ್ತುವಿನ ಹತ್ತಿರ ಬಂದಾಗ ಬೆಚ್ಚಿಬಿದ್ದ. ಅದೊಂದು ಶರೀರ ಪುರುಶನ ಶವ... ಎಲ್ಲೋ ನೋಡಿದಂತೆನಿಸಿತು. ತಕ್ಷಣವೇ ನೆನಪಾಯಿತು. ಸುಂದ್ರಿ ಮನೆಯಿಂದ ಪಟ್ಟಾಗಿ ಕುಡಿದು ಹೊರಬಿದ್ದ ವ್ಯಕ್ತಿ. ಸ್ವಲ್ಪವಾಗಿ ದೇಹ ಮುಟ್ಟಿ ನೋಡಿದ. ಅಲುಗಿಸಿದ. ಚಲನೆ ಇಲ್ಲ. ಮೂಗಿನ ಎದುರು ಬೆರಳು ತಂದ.. ಉಸಿರೇ ಇಲ್ಲ.. ಆತ ಸತ್ತು ಹೋಗಿದ್ದ.

ಮರ್ಡರ.. ಕೊಲೆ..

ಹಾಗೇ ಓಟಕಿತ್ತಿದ ಬೋಪಾನಾಯ್ಕ ಪೆಟ್ರೋಲ ಪಂಪ ಬಳಿ ಬಂದ ಶ್ಯಾಮಸುಂದರನಿಗೆ ನಡೆದ ವಿಷಯ ತಿಳಿಸಿ ಫೋನ ಮಾಡಿದ ಆಮೇಲೆ ನಿಧಾನವಾಗಿ ನಡೆಯುತ್ತಾ ತನ್ನ ದುರ್ವಿಧಿಯನ್ನು ಹಳಿದುಕೊಳ್ಳುತ್ತ ಹೆಣ ಬಿದ್ದಕಡೆ ನಡೆದ.

ಬೇಗ ಮನೆ ಸೇರಿ ಹೆಂಡತಿಯೊಂದಿಗೆ ಕೂಡಬೇಕೆಂದರೆ ಮಧ್ಯೆ ಬಂದಿತು ಹೆಣ.. ಇನ್ನೂ ಆಸ್ಪತ್ರೆ ಡ್ಯೂಟಿ ಮಧ್ಯಾಹ್ನ ಹನ್ನೆರಡರ ಮನೆಕಂಡರೆ ಪುಣ್ಯ ಆತ ಬಂದು ಐದುಹತ್ತು ನಿಮಿಷಗಳ ನಂತರ ಸೈರನ್ ಮಾಡ್ತಾ ಬಂದ ಪೋಲಿಸ ಜೀಪು ಅವನ ಬಳಿ ಬಂದು ನಿಂತಿತು. ಶ್ಯಾಮಸುಂದರ ಕೆಳಗಿಳಿಯುತ್ತಿದ್ದಂತೆ ಓಡಿ ಬಂದ ನಾಯ್ಕ ಸೆಲ್ಯೂಟು ನೀಡಿ ನಡೆದ ವಿಷಯ ತಿಳಿಸತೊಡಗಿದ.

## (13)

ಸರಿಯಾಗಿ ಮೂರನೇ ದಿವಸ ಹೇಮಂತ ಮತ್ತೆ ಕಾಣಿಸಿಕೊಂಡ. ಆತ ಬಟ್ಟೆ ಬದಲಿಸುತ್ತಿದ್ದಂತೆ ಅವನೆದುರು ಕಾಫಿ ಕಪ್ ಇರಿಸಿ ಸುಷಮಾ ಕೇಳಿದಳು. ''ಹೋದ ಕೆಲಸ ಹಣ್ಣಾಯಿತು ತಾನೇ ?''

ಹೇಮಂತನ ಮುಗುಳು ನಗೆಯೇ ಅದಕ್ಕುತ್ತರವಾಯಿತು. ಖಾಲಿ ಕಪ್ ಕಳುಹಿಸಿದ ಮೇಜರ.

''ಎರಡು ದಿವಸ ನೀವೇನು ಮಾಡಿದಿರಿ ? ಆಲಸಿಯಾಗಿ ರೂಮಿನಲ್ಲೇ ಉಳಿದಿದ್ದಿರೋ ಇಲ್ಲ ಊರು ಅಲೆದು ನಾಲ್ಕಾರು ಪಿಕ್ಚರ್ ನೋಡಿದಿರೋ ?''

ವ್ಯಂಗ್ಯವಾಗಿ ಕೇಳಿದ ಅವನ ಮಾತಿಗೆ ಅಶೋಕ ಚುಟುಕಾಗಿ ಉತ್ತರಿಸಿದ.

''ಎಲ್ಲಾ ಸುಳ್ಳು. ನಿಮಗಾಗಿ ಕಷ್ಟಪಟ್ಟು ಒಂದು ಹೆಣವನ್ನು

ಕಾಯ್ದಿರಿಸಿದ್ದೇವೆ ಮೂವರನ್ನು ಬಂದಿಸಿ ನಿಮ್ಮ ಸೇವೆಗೆ ಅಣಿ ಮಾಡಿದ್ದೇವೆ''

''ಆಂ ?.. ಹೆಣವೆ ?.. ಯಾರದು ?.. ಯಾವಾಗ ?''

ನಮಗೆ ಪೂರ್ತ ಗೊತ್ತಿಲ್ಲ. ಬೋಪಾನಾಯ್ಕ ಎಂಬ ರಾತ್ರಿ ಪಹರೆ ಮೇಲಿದ್ದ ಕಾನಸ್ಟೇಬಲ್‌ನ ಹೇಳಿಕೆ ಮೇರೆಗೆ ಶ್ಯಾಮಸುಂದರ ಸುಂದ್ರಿ ಎಂಬ ವೇಶ್ಯೆ ಹಾಗೂ ಇಬ್ಬರು ರೌಡಿಗಳನ್ನು ಬಂಧಿಸಿದ್ದಾರೆ.. ಹೆಣ ಯಾರದು ಅಂತ ಗೊತ್ತಿಲ್ಲ. ಫೋಟೋ ಇಲ್ಲಿದೆ ನೋಡಿ. ನಿಮಗೇನಾದರೂ ಸಮ್ಮಂಧಿತನೋ ಹೇಗೆ ಯೋಚಿಸಿ''

ನಗುತ್ತಲೇ ಫೋಟೊ ಕೈಗೆ ತೆಗೆದುಕೊಂಡ ಮೇಜರ ''ಅರೆ... ಎಂಟುಲಕ್ಷ'' ಎಂದು ಉದ್ಗರಿಸಿದ.

''ಓಹೋ. ಹಾಗಾದರೆ ಈತ ನಿಮ್ಮ ಸಮ್ಮಂಧಿಕನೋ ?'' ಅಶೋಕ ಕೇಳಿದಾಗ ಬಂತು ಉತ್ತರ

''ಹೌದು. ಈತನಿಂದಲೇ ನಾನು ಎಂಟುಲಕ್ಷ ವಸೂಲು ಮಾಡಿದ್ದು..ಪಾಪ ! ನನ್ನಿಂದಾಗಿ ಈತ ಪ್ರಾಣ ಕಳೆದುಕೊಂಡ... ರೌಡಿಗಳೇನಾದರೂ ಬಾಯಿ ಬಿಟ್ಟರೆ''?

''ನಿಜವಾಗಿಯೂ ಅವನಿಗೆ ಏನೂ ಗೊತ್ತಿದ್ದಂತಿಲ್ಲ ಅವರು ಪರಿಚಯವಿಲ್ಲದ ವ್ಯಕ್ತಿಯಿಂದ ದುಡ್ಡು ತೆಗೆದುಕೊಂಡಿದ್ದಾರೆ. ಇವನಿಗೆ ಚೆನ್ನಾಗಿ ಕುಡಿಸಿ ವೇಶ್ಯೆ ಸುಂದ್ರಿ ಮನೆಗೆ ಕರೆದೊಯ್ದು ಮಜಾ ಮಾಡಿದ್ದಾರೆ.. ಆಮೇಲೆ ಕುತ್ತಿಗೆ ಹಿಸುಕಿ ಕೊಲೆಮಾಡಿ. ಹೆಣ ಬೀದಿಗೆಸೆದು ಹೋಗಿದ್ದಾರೆ.. ಅದಕ್ಕಾಗಿ ದೊರೆತ ಹಣ ಹತ್ತು ಪಾಲು.. ಸುಂದ್ರಿಯ ತಮ್ಮ ಏನೂ ಇಲ್ಲ ಎಂದು ಕಂಡುಬಂದಿದ್ದರಿಂದ ಅವನನ್ನು.ಬಿಡುಗಡೆ ಮಾಡಿ ಉಳಿದ ಇಬ್ಬರನ್ನು ಲಾಕಪ್‌ಗೆ ಸೇರಿಸಿದ್ದಾರೆ ಅಷ್ಟೇ..''

'ಹೂಂ'

ಮೇಲೆದ್ದ ಮೇಜರ ಬಾಥರೂಮಿಗೆ ನಡೆದ. ಅಶೋಕ ಫೋನಮೇಲೆ ಟಿಫಿನ್‌ಗೆ ಆರ್ಡರ ಮಾಡತೊಡಗಿದ.

ತಿಂಡಿ ತಿಂದಾದ ಮೇಲೆ ಮೂವರೂ ಶ್ಯಾಮಸುಂದರನ ಬಳಿಗೆ ಹೊರಟರು. ಆತ ಠಾಣೆಯಲ್ಲೇ ಸಿಕ್ಕ. ಎಂಟು ಲಕ್ಷದ ಗಿರಾಕಿ ಬಗ್ಗೆ ಮತ್ತೆಯೂ ಕೇಳಿ ತಿಳಿದುಕೊಂಡ ಹೇಮಂತ ನುಡಿದ.

''ಶ್ಯಾಮಸುಂದರ.. ನಿಮ್ಮಿಂದ ಒಂದು ಕೆಲಸವಾಗಬೇಕು ನನ್ನ ಬಳಿ ನಗೆಮಾತಾಡುವ ಶಬನಮ್‌ಳ ಮನೆ ವಿಳಾಸ ಇದೆ ನಾಳೆ ಬೆಳಿಗ್ಗೆ ಅವಳು

ವಿದೇಶದಿಂದ ಬರಲಿದ್ದಾಳೆ. ಅವಳ ಮನೆ ಹಾಗೂ ಅವಳ ಶೂಟಿಂಗ್ ಇರುವ ಜಾಗಗಳನ್ನು ಪೋಲೀಸ್ ಗುಪ್ತಪಹರೆ ಇಡಬೇಕು ಅವಳ ಯಾವ ವಸ್ತುಗಳೂ ಕಳವಾಗದಂತೆ ನೋಡಿಕೊಳ್ಳಬೇಕು. ಈ ಕೆಲಸದಲ್ಲಿ ನೀವು ಯಶಸ್ವಿ ಆದಿರೆಂದರೆ ಆಯ್ತು. ಈ ಕೇಸು ಮುಗಿದಂತೆಯೇ''

ಹೇಮಂತ ಹೇಳಿದ ವಿಳಾಸಗಳನ್ನು ಗುರುತು ಹಾಕಿಕೊಂಡ ಶ್ಯಾಮಸುಂದರ ಇಂಟರ್‌ಕಾಂ ಗುಂಡಿ ಒತ್ತಿ ಚವಣಗೆ ಬರಹೇಳಿದ. ಚವಣ ಬರುತ್ತಲೂ ಟೋಣಾಪರಾದ ಹತ್ತು ಹದಿನೈದು ಜನರನ್ನು ಮಫ್ತಿ ಉಡುಪಿನಲ್ಲಿ ಹಾಕುವಂತೆ ತಿಳಿಸಿ ಅವರ ಕೈಗೆ ವಿಳಾಸ ಬರೆದ ಚೀಟಿ ನೀಡಿ ಕಳಿಸಿಕೊಟ್ಟ.

''ಮತ್ತೆ ಏನಾಗಬೇಕು ಹೇಳಿ ಮೇಜರ''

''ಮತ್ತೆ ಏನೂ ಆಗಬೇಕಿಲ್ಲ. ನಮಗೆ ಅಪ್ಪಣೆ ಕೊಡಿಸಾಕು''

ಉತ್ತರ ಕೊಡುವುದಕ್ಕೆ ಮೊದಲೇ ಶ್ಯಾಮಸುಂದರ ಕಿಟಕಿಯಿಂದ ಹೊರಗೆ ನೋಡಿದ. ಗೇಟಿನಿಂದ ಒಳಗೆ ಪ್ರವೇಶಿಸಿದ ವಿದೇಶಿಕಾರು ಕಾಣಿಸಿತು.

''ಓಹ್ ಶಾಂತೀಲಾಲ್.. ಇವರೇಕೆ ಬಂದರು ?''

ಮೇಜರನೆ ಅದೊಂದು ಹೊಸ ಹೆಸರು.

''ಯಾರು ಶಾಂತೀಲಾಲ್''

''ನಗರದ ಗಣ್ಯ ನಾಗರಿಕರು. ಪ್ರಸಿದ್ಧ ಚಿತ್ರ ನಿರ್ಮಾಪಕರು ಇವರ ಎರಡು ಚಿತ್ರಗಳಿಗೆ ಪ್ರಶಸ್ತಿ ಬೇರೆ ತಂದಿವೆ. ಸೂಪರ್‌ಸ್ಟಾರ್‌ಗಳೆಲ್ಲಾ ಇವರ ಮುಂದೆ ಕೈಮುಗಿದುಕೊಂಡು ನಿಲ್ಲುತ್ತಾರೆ''

ಅವನ ಮಾತಿನ್ನು ಮುಗಿದಿರಲಿಲ್ಲ. ಅಚ್ಚ ಬಿಳಿ ಬಣ್ಣದ ಧೋತಿ ಬಿಳಿ ಬಣ್ಣದ್ದೇ ಉದ್ದ ಶರ್ಟ ಅದರ ಮೇಲೆ ಬಿಳಿ ಬಣ್ಣದ್ದೇ ಜಾಕೀಟು ತಲೆ ಮೇಲೆ ಬಿಳಿ ಬಣ್ಣದ್ದೇ ಟೋಪಿ. ಕಾಲಲ್ಲಿ ಬಿಳಿ ಬಣ್ಣದ ಚಪ್ಪಲಿಗಳು. ಮೇಲಿಂದ ಕೆಳಗಿನವರೆಗೂ ವೈಟ್ ಆಗಿದ್ದ. ಐವತ್ತು ನವೀನ ಪ್ರಾಯದ ಟೊಮೋಟೊ ಹಣ್ಣಿನ ಮೈ ಬಣ್ಣದ ಶಾಂತಿಲಾಲ ಒಳಗೆ ಪ್ರವೇಶಿಸಿದ... ಶ್ಯಾಮಸುಂದರ ಎದ್ದು ಅವರನ್ನು ಸ್ವಾಗತಿಸಿ ಕುಳ್ಳಿರಿಸಿದ.

''ಶ್ಯಾಮಸುಂದರ ಅವರೆ ಇಂದು ಸಂಜೆ ನಮ್ಮ 'ಪ್ಯಾರಾಮೌಂಟ್' ಸ್ಟುಡಿಯೋ ಪ್ರಾರಂಭವಾಗಲಿದೆ ಇನ್ನು ಮೇಲೆ ಇಲ್ಲಿಯೇ ಎಡಿಟಿಂಗ್, ಡಬ್ಬಿಂಗ್

ಮುಂತಾದ ಎಲ್ಲ ಕೆಲಸ ಮಾಡಬಹುದು. ಸೆಂಟ್ರಲ್ ಮಿನಿಸ್ಟರ ಬರಲಿದ್ದಾರೆ. ನೀವೂ ಬನ್ನಿ.''

''ಖಂಡಿತ ಬರುತ್ತೇನೆ'' ಹಾಂ ಅಂದಹಾಗೆ ಇವರ ಪರಿಚಯ ಮಾಡಿಕೊಳ್ಳಿ,

ಶ್ಯಾಮಸುಂದರ ಅವರಿಗೆ ಮೇಜರ ಹೇಮಂತನ ಪರಿಚಯ ಮಾಡಿಕೊಟ್ಟಾಗ ಶಾಂತಿಲಾಲನ ಬಾಯಿಯಿಂದ ಮಾತೇ ಹೊರಡಲಿಲ್ಲ. ಸಂತೋಷ ಹಾಗೂ ದಿಗ್ಭ್ರಮೆಯಿಂದಾಗಿ ಸ್ವಲ್ಪ ಸುಧಾರಿಸಿಕೊಂಡ ಮೇಲೆ ಅತ್ಯುತ್ಸಾಹದಿಂದ ನುಡಿದ.

''ಓಹೋ.. ಮೇಜರ.. ಮೇಜರ ಹೇಮಂತ. ಭಾರತದ ಸುಪ್ರಸಿದ್ಧ ವ್ಯಕ್ತಿ. ನಿಮ್ಮನ್ನು ಕಂಡು ತುಂಬಾ ಸಂತೋಷವಾಯ್ತು.. ನಿಮ್ಮ ಫ್ಯಾನ್ ನಾನು.. ನಿಮ್ಮನ್ನೇ ಭೆಟ್ಟಿ ಮಾಡಿ ಚಿತ್ರ ಸಹ ತೆಗೆಯುವೆ. ಮೇಜರ ಸಂಜೆ ಶ್ಯಾಮಸುಂದರ ಜೊತೆ ನೀವೂ ಖಂಡಿತವಾಗಿ ಬನ್ನಿ.. ಮಿಸ್ ಶಬನಮ್‌ಳ ನೃತ್ಯ ನೋಡುವಿರಂತೆ''

ಕಣ್ಣುಮಿಟುಕಿಸಿ ಆತ ನಕ್ಕಾಗ ಹೇಮಂತ ಸಹ ನಕ್ಕುಸಮ್ಮತಿ ಸೂಚಿಸಿದ ಪಾಪ! ಶಬನಮ್‌ಳ ನೃತ್ಯ ನೋಡಲು ಮೇಜರ ಒಂಬೇಕಿಲ್ಲ. ಆತ ತಿಳಿಸಿದರೆ ಸ್ವತಃ ಶಬನಮ್‌ಳೇ ಅವನೆದುರು ಅವನ ರೂಮಿನಲ್ಲಿ ನರ್ತಿಸುತ್ತಾಳೆ ಎಂಬುದು ಅವರಿಗೆ ತಿಳಿದಂತಿರಲಿಲ್ಲ.

ಸಾಯಂಕಾಲ ಆರು ಮುವ್ವತ್ತಕ್ಕೆ ಪ್ಯಾರಾಮೌಂಟ್ ಸ್ಟುಡಿಯೊ ಉದ್ಘಾಟನೆ ಆಗಬೇಕಿತ್ತು. ಆದರೆ ಆಗಲಿಲ್ಲ. ಅದಕ್ಕೆ ಕಾರಣ ಕೇಂದ್ರ ಸಚಿವರು ಬರದೇ ಇದ್ದುದರಿಂದ ಏಳು, ಏಳೂವರೆಗೆ ದಾರಿನೋಡಿಯಾಯ್ತು. ಬರಲಿಲ್ಲ ಅನಂತರ ಬಂತು ಪೋಲೀಸ ಇಲಾಖೆಗೆ ವಾಯರಲೆಸ್ ಮೆಸೇಜ.. ಇನ್ನೆಂಟು ದಿನಕ್ಕೆ ಉದ್ಘಾಟನೆ ಆಗಲಿದ್ದ ಮೂರುನೂರಾ ಮೂವತ್ತನಾಲ್ಕು ಕೋಟಿ ರೂಪಾಯಿ ತಿಂವ ಅಣೆಕಟ್ಟು ಬಿರುಕುಬಿಟ್ಟಿದ್ದರಿಂದಾಗಿ ಸಚಿವರು ವಿಶೇಷ ತನಿಖೆಗಾಗಿ ಅಲ್ಲಿಗೆ ಹೋಗಬೇಕಾಗಿ ಬಂದುದರಿಂದ ಈ ಕಾರ್ಯಕ್ರಮಕ್ಕೆ ಬರಲಾಗುವುದಿಲ್ಲ ಎಲ್ಲರಿಗೂ ಇದ್ದ ಆಸಕ್ತಿ ಕಾರ್ಯಕ್ರಮದಲ್ಲಲ್ಲ. ಕಾರ್ಯಕ್ರಮದ ನಂತರ ಶಾಂತಿಲಾಲ್‌ರು ಏರ್ಪಡಿಸಿದ ಈ ಪಾರ್ಟಿಯಲ್ಲಿತ್ತು. ಪಾರ್ಟಿ ನೀಡುವದರಲ್ಲಿ ಶಾಂತಿಲಾಲ ತುಂಬಾ ಹೆಸರು ಮಾಡಿದ್ದರು. ಹದಿನೈದು, ಇಪ್ಪತ್ತು ಕಡಿಮೆ ವಯಸ್ಸಿನ ಸುಂದರಿಯರನ್ನು ಅವರು ತಪ್ಪದೇ ಕರೆಸುತ್ತಿದ್ದರು. ಅವರು ಪಾರ್ಟಿಗೆ ಆಗಮಿಸಿದ ಜನರ ಮನರಂಜನೆಯ ಭಾರ ಹೊರುತ್ತಿದ್ದರು. ಪಾರ್ಟಿ ಮುಗಿಯಿತು ಮಧ್ಯರಾತ್ರಿ ಎರಡು ಮೂರರ ಸಮಯ. ಆವಾಗ ಆ ಸುಂದರಿ ಮರು ಶಾಂತೀಲಾಲರ ''ಖಾಸಾ'' ಅತಿಥಿಗಳ ಬೆಡ್‌ರೂಮ್ ಸೇವೆಗೆ ಅಣಿಯಾಗುತ್ತಿದ್ದಳು.

ಅಷ್ಟರಲ್ಲಿ ಎಲ್ಲೆಡೆ ಗುಲ್ಲೋಗುಲ್ಲು ಆರಂಭವಾಯಿತು. ಶಬನಮ್‌ಳ ಆಗಮನವಾಗಿತ್ತು. ಎಲ್ಲರೂ ಅವಳತ್ತ ಧಾವಿಸಿದರು. ಹೇಮಂತ, ಸುಷಮಾ, ಅಶೋಕ ಎಲ್ಲರಿಂದ ದೂರಾಗಿ ಒಂದೆಡೆ ನಿಂತಿದ್ದರು. ಅವರು ಕಣ್ಣಿಗೆ ಬೀಳುತ್ತಲೂ ಶಬನಮ್‌ಳ ಮುಖ ಗುಲಾಬಿಯಂತೆ ಅರಳಿತು... ಎಲ್ಲರನ್ನೂ ದೂರಸರಿಸಿ ಅವರ ಮಧ್ಯೆ ದಾರಿ ಮಾಡಿಕೊಂಡು ಮೇಜರನೆಡೆ ಬಂದಳು.

''ನಮಸ್ಕಾರ ಮೇಜರ ಅವರೆ... ನಿಮ್ಮನ್ನು ಇಲ್ಲಿ ನೋಡಿ ನನಗೆ ಅಚ್ಚರಿಯಾಗುತ್ತಿದೆ''

''ಏಕೆ ? ನಾನು ಮನುಷ್ಯ ಅಲ್ಲವೆ ?.. ನಾನು ಪಾರ್ಟಿಗಳಲ್ಲಿ ಭಾಗವಹಿಸಬಾರದೆ ?''

''ಹಾಗೇನೂ ಇಲ್ಲ. ಆದರೂ ನೀವು ಇಂಥ ಅಂದರೆ ಇಂಥ ಪಾರ್ಟಿಗಳಲ್ಲಿ ಭಾಗವಹಿಸುವದಿಲ್ಲವೆಂದು ಕೇಳಿದ್ದೆ''

''ನೀವು ಕೇಳಿದ್ದು ನಿಜ. ಇಲ್ಲಿ ನಾವಾಗಿಯೇ ಬಂದಿಲ್ಲ. ನಿಮ್ಮ ನಿರ್ಮಾಪಕರಾದ ಶಾಂತಿಲಾಲರ ಆಹ್ವಾನದ ಮೇಲೆ ಬಂದಿದ್ದೇವೆ''

ಶಬನಮ್ ಬಂದ ಸಮಾಚಾರ ಕೇಳಿ ಸಚಿವರು ಬರದೇ ಇರುವ ದುಃಖ ಮರೆತು ಶಾಂತಿಲಾಲರು ಅವಳೆಡೆ ನುಗ್ಗಿ ಬಂದರು.

''ಶಬನಮ್ ನೀನು ಬಂದದ್ದು ತುಂಬಾ ಒಳ್ಳೆಯದಾಯ್ತು. ಸ್ಟುಡಿಯೋ ಉದ್ಘಾಟನೆ ಮಾಡಲು ಸಚಿವರು ಬರುವುದಿಲ್ಲವಂತೆ. ಆ ಕಾರ್ಯ ನಿನ್ನಿಂದಾಗಲಿ ?''

''ಬೇಡ ಶಾಂತೀಲಾಲಜಿ ಮೇಜರ ಸಾಹೇಬರು ಅದಕ್ಕೆ ಸರಿಯಾದ ವ್ಯಕ್ತಿ''

ಶಬನಮ್‌ಳ ಮಾತು ಕೇಳಿ ಶಾಂತಿಲಾಲ ಹರಳೆಣ್ಣೆಯಂಥ ಮುಖ ಮಾಡಿ ಹೇಮಂತನೆಡೆ ನೋಡಿದ. ಅವನಿಗಿಂತ ಮೊದಲೇ ಮೇಜರ ಮಾತಾಡಿದ

''ಶಾಂತಿಲಾಲರೆ.. ನೀವು ಶಬನಮ್‌ಳ ಮಾತು ಕೇಳಬೇಡಿ.. ನನಗೆ ಇವೆಲ್ಲ ಆಗೋದಿಲ್ಲ.. ಅವಳಿಂದಲೇ ಮಾಡಿಸಿ ಹೂಂ..''

ಶಾಂತಿಲಾಲಗೆ ಅಷ್ಟೇಸಾಕಾಯ್ತು. ಶಬನಮ್‌ಳನ್ನು ಎಳೆದೊಯ್ಯುತ್ತಿದ್ದಂತೆ ಮೇಜರ ಕೇವಲ ಸುಷಮಾ ಹಾಗೂ ಅಶೋಕ ಇಬ್ಬರಿಗೇ ಕೇಳಿಸುವಂತೆ ಪಿಸುಗುಟಿದ.

''ನೀವು ಇಲ್ಲೇ ಇರಿ. ನನಗೆ ಸ್ವಲ್ಪ ಕೆಲಸವಿದೆ ಬೇಗ ಬರುತ್ತನೇ. ನನ್ನ ಬಗ್ಗೆ ಯಾರಾದರೂ ಕೇಳಿದರೆ ಇಲ್ಲೇ ಇದಾರೆ. ಬಾತರೂಮಿನಲ್ಲಿ, ಅವರ ಆರೋಗ್ಯ ಅಷ್ಟು ಸರಿಯಾಗಿಲ್ಲ ಎಂದು ಹೇಳಿ''

ಅವರ ಉತ್ತರಕ್ಕೂ ಕಾಯದೆ ಭರಭರನೆ ಹೊರನಡೆದ.

ಗಂಟೆಗೆ ನೂರಾನಲವತ್ತು ಕಿಲೋಮೀಟರ ವೇಗದಲ್ಲಿ ಓಡಿದ ಕಾಂಟೆಸಾ ಹೇಮಂತನ ಕಾರು ನಲವತ್ತೈದು ನಿಮಿಷಗಳ ನಂತರ ಆತ ಬಯಸಿದ ನಿರ್ದಿಷ್ಟ ನಿವಾಸದತ್ತ ಅಂದರೆ ಚಿತ್ರನಟಿ ಶಬನಮ್‌ಳ ಮನೆ ತಲುಪಿತು. ಅಂದೇ ಅವಳು ವಿದೇಶದಿಂದ ಶೂಟಿಂಗ್ ಮುಗಿಸಿ ಬಂದಿದ್ದಳು. ಅವಳ ಜೊತೆ ಬಂದಿದ್ದ ಬ್ರಾಗಳನ್ನು ಬೇರೆಯವರು ಎಗರಿಸುವದಕ್ಕೆ ಮೊದಲೇ ಹೇಮಂತ ಎಗರಿಸಲು ಯೋಚಿಸಿದ್ದ.

ಶ್ಯಾಮಸುಂದರ ಆದೇಶದ ಪ್ರಕಾರ ಮಫ್ತಿಯಲ್ಲಿದ್ದ ಪೋಲೀಸರು ಬಂಗಲೆ ಕಾಯುತ್ತಿದ್ದರು. ಎಲ್ಲರೂ ಮುಖ್ಯ ಬೀದಿನೆ ಹೊಂದಿ ಬಂಗಲೆ ಗೇಟಿನ ಮುಂದೆ ಬೇರೆಬೇರೆ ವೇದೆಗಳಿದ್ದರು. ಹಿಂಭಾಗದಲ್ಲಿ ಯಾರೂ ಇಲ್ಲದಿರುವುದನ್ನು ಗಮನಿಸಿ ಅವರ ಮೌಢ್ಯತನಕ್ಕೆ ತಾನೇ ನಕ್ಕು ಬಂಗಲೆ ಹಿಂಬಾಗಕ್ಕೆ ಬಂದ. ಎಲ್ಲೆಡೆ ಸಂಪೂರ್ಣ ಕತ್ತಲೆ ಆವರಿಸಿದ್ದರೂ ಬಂಗಲೆಯ ಹಿಂಭಾಗದಲ್ಲಿದ್ದ ದೀಪಗಳ ಬೆಳಕಿನಿಂದಾಗಿ ಆತ ಸಣ್ಣದಾಗಿ ಕಾಂಪೌಂಡ್ ಹಾರಿ ನೀರಿನ ಪೈಪ್ ಮೂಲಕ ಮೇಲೆ ಏರಿ ಹಿಂಭಾಗದ ಬಾಲ್ಕನಿಗೆ ಬಂದ. ಮುಂದೆ ಅವರ ಕೆಲಸ ಸರಿಹೋಯಿತು. ಬಂಗಲೆಯಲ್ಲಿ ಯಾರೂ ಇರಲಿಲ್ಲ ಇದ್ದ ಇಬ್ಬರು ಕೆಳಗಡೆ ಕೆಲಸದಲ್ಲಿದ್ದುದರಿಂದ ಎಲ್ಲೆಡೆ ಬಿಕೋ ಅನ್ನುತ್ತಿತ್ತು. ಆತ ಮೇಲೆ ಬಂದಾಗ ಮೆಲುವಾಗಿ ಮೇಲುಸಿರು ಬಿಡುತ್ತಿದ್ದ. ಒಂದು ಕೈಯಲ್ಲಿ ಸೂಟುಕೇಸು ಹಿಡಿದು ಒಂದೇ ಕೈಯಿಂದ ಪೈಪ್ ಏರುವುದೆಂದರೆ ಅದು ಸಾಮಾನ್ಯ ಕೆಲಸವೇ ? ಕೇವಲ ಎರಡು ನಿಮಿಷ ಸುಧಾರಿಸಿಕೊಂಡು ಶಬನಮ್‌ಳ ಬೆಡ್‌ರೂಮ ಪ್ರವೇಶಿಸಿದ. ಎಲ್ಲೆಡೆ ಹುಡುಕಿದ ನಂತರ ಗುಪ್ತವಾಗಿರಿಸಿದ ಅವಳ ಸೂಟುಕೇಸು ದೊರೆಯಿತು. ಮಾಸ್ಟರ ಕೀಯಿಂದ ಬೀಗ ತೆರೆದ. ಅವನ ಊಹೆ ನಿಜವಾಗಿತ್ತು. ಸೂಟಕೇಸ ತುಂಬಾ ಬ್ರಾಗಳೇ ಇದ್ದವು. ಅವಳ ಸೂಟಕೇಸಿನಲ್ಲಿದ್ದ ಎಲ್ಲಾ ಬ್ರಾಗಳನ್ನು ಎತ್ತಿ ಹೊರಗಿಟ್ಟ ನಂತರ ಅದರಲ್ಲಿ ತಾನು ತಂದಿದ್ದ ಬ್ರಾಗಳನ್ನು ಇರಿಸಿ ಸೂಟಕೇಸು ಮತ್ತೆ ಲಾಕ್ ಮಾಡಿ ಮೊದಲಿದ್ದ ಜಾಗಕ್ಕೆ ಸರಿಸಿದ. ತನ್ನ ಬ್ಯಾಗಿಗೆ ಅವಳ ಬ್ಯಾಗಿನಲ್ಲಿದ್ದ ಬ್ರಾ ಇರಿಸಿ ಮೇಲೆದ್ದ. ಪುನಃ ಮೊದಲಿನ ದಾರಿ. ಕಾಂಪೌಂಡ ಬಳಿ ಬರುತ್ತಿದ್ದಂತೆ ಯಾರೋ ನಡೆದು ಬರುವ ಸರಸರ ಸಪ್ಪಳ ಕೇಳಿ ಒಂದೆಡೆ ಚಂಗನೆ ನೆಗೆದು ಮರೆಯಾದ.

ಬಂದ ಆಗಂತುಕ ಹೇಮಂತನಂತೆ ಅಡಗುತ್ತಾ ಬಂದ. ಕಾಂಪೌಂಡ್ ಗೋಡೆ ನೆಗೆದು ನೀರು ಪೈಪ್ ಏರಿ ಮರೆಯಾದ. ಐದರೂ ನಿಮಿಷಗಳ ನಂತರ ಆತ ಮತ್ತೆ ಬಾಲ್ಕನಿಯಲ್ಲಿ ಕಂಡಾಗ ಅವನ ಕೈಯಲ್ಲಿ ಮೇಜರ ಬಿಟ್ಟು ಬಂದಿದ್ದ ಸೂಟಕೇಸಿತ್ತು. ಅದನ್ನು ಹಿಡಿದುಕೊಂಡು ಕೆಳಗಿಳಿದ. ಓಡುತ್ತ ಬಂದು ಕಾಂಪೌಂಡ ಗೋಡೆ ಹಾರಿ ಕತ್ತಲೆಯಲ್ಲಿ ಮರೆಯಾದ.. ಒಂದೆರಡು ನಿಮಿಷಗಳಲ್ಲಿ ದೂರದಲ್ಲಿ ಮೋಟಾರ ಬೈಕ್ ಸ್ಟಾರ್ಟ ಆದ ಸದ್ದು ಕೇಳಿಸಿತು.

ಹೇಮಂತನ ಮುಖದ ಮೇಲೆ ನಗೆ ತೇಲಿತು. ಅವನ ಮುಂದಾಲೋಚನೆ ದೂರದರ್ಶತ್ವ ಅವರಿಗೆ ಇಂದು ಖುಷಿ ತಂದುಕೊಟ್ಟಿದ್ದವು. ಒಂದು ವೇಳೆ ಆತ ಸ್ವಲ್ಪ ತಡವಾಗಿ ಬಂದಿದ್ದರೆ ?...

ಮುಂದಿನ ಒಂದು ತಾಸು ಕಳೆಯುವದರಲ್ಲಿ ಆತ ಮತ್ತೆ ಪಾರ್ಟಿಯಲ್ಲಿ ಕಾಣಿಸಿಕೊಂಡ. ಡ್ರಿಂಕ್ಸ್ ತೆಗೆದುಕೊಂಡ ಸುಷಮಾಳೊಂದಿಗೆ ನರ್ತಿಸಿದ. ಶಬನಮ್ ತುಂಬಾ ಸಂತಸದಿಂದ ಇದ್ದಳು. ಜೀವಮಾನದಲ್ಲಿ ಆಕೆ ಇಷ್ಟು ದೊಡ್ಡ ಸಮಾರಂಭದ ಉದ್ಘಾಟನೆ ಮೊದಲ ಬಾರಿ ಮಾಡಿದ್ದಳು. ಅದೂ ಕೇಂದ್ರ ಸಚಿವರು ಮಾಡಬೇಕಾದ ಕೆಲಸ. ಶಾಂತಿಲಾಲರೂ ಆನಂದಿತರಾಗಿದ್ದರು.

ಪಾರ್ಟಿ ಮುಗಿದಾಗ ಎರಡೂವರೆ.

ಎಲ್ಲರಿಗೂ ವಂದಿಸಿ ಮೂವರೂ ತಮ್ಮ ಕಾರಿನ ಬಳಿ ಬಂದರು. ಕಾರನ್ನು ರಸ್ತೆಯ ತಿರುವಿನವರೆಗೂ ತಂದು ನಿಲ್ಲಿಸಿದ ಹೇಮಂತ ಅಶೋಕನ ಕೈಗೆ ಮಿನಿಕ್ಯಾಮರಾ ಕೊಟ್ಟು ಹೇಳಿದ.

"ನೀನಿಲ್ಲೇ ಇಳಿದುಕೊ... ಕಳ್ಳತನದಿಂದ ಶಾಂತೀಲಾಲರ ಮನೆ ಪ್ರವೇಶಿಸು. ಮುಂದಿನ ಕೆಲಸವನ್ನು ಈ ಕೆಮರಾಕ್ಕೆ ಕೊಡು ಅರ್ಥವಾಯ್ತೆ ?

ಕೆಮರಾದೊಂದಿಗೆ ನಗುತ್ತ ಕೆಳಗಿಳಿದ ಅಶೋಕ.

ರೂಮಿಗೆ ಬರುತ್ತಲೂ ಸುಷಮಾಳನ್ನು ಹೂವಿನಂತೆ ಎತ್ತಿ ಗಾಳಿಯಲ್ಲಿ ಎರಡು ಮೂರು ಬಾರಿ ಸುತ್ತು ಹಾಕಿ ಹಾಸಿಗೆಯ ಮೇಲೆ ಮಲ್ಲಿಗೆ ಹೂವಿನಂತೆ ಮೆತ್ತಗೆ ಇಳಿಸಿ ಅವಳ ಮೇಲೆ ಬಾಗಿದ. ಗಾಢವಾದ ಚುಂಬನ... ಅವನ ಪ್ರೀತಿಯ ಮಳೆಯಲ್ಲಿ ಮಿಂದ ಸುಷಮಾ ನಲುಗಿಹೋದಳು. ಅವಳಗರಿವಿಲ್ಲದಂತೆಯೇ ಅವಳ ನೀಳ ತೋಳುಗಳು ಹೇಮಂತನನ್ನು ಬಳಸಿದವು. ಮುಂದೆ ಅವಳ ಬಂಧನ ಬಿಗಿಯಾಗುತ್ತಾ ಹೋಯಿತು. ಐದಾರು ನಿಮಿಷಗಳ ನಂತರ ಆಕೆ "ಆಹ್" ಎಂದು

ನರಳುತ್ತಿದ್ದಂತೆ ಆ ಬಿಗಿಯಾದ ಬಂಧನ ನಿಧಾನವಾಗಿ ಸಡಿಲಾಗುತ್ತ ಬಂದಿತು.. ತನ್ನ ಪಕ್ಕಕ್ಕೆ ಬಂದ ಹೇಮಂತನನ್ನು ತಬ್ಬಿಕೊಂಡು ಹಾಗೇ ಆಕೆ ನಿದ್ದೆಹೋದಳು.

ಎಚ್ಚರವಾದದ್ದು ಟೆಲಿಫೋನ ಗಂಟೆಯ ಕರೆಕೇಳಿ. ಕಣ್ಣು ಬಿಡುತ್ತಲೂ ಮೇಜರ ರಿಸೀವರ ಎತ್ತಿದ್ದು ಕಾಣಿಸಿತು. ಆತ ''ಹಲೋ.. ಮೇಜರ ಹಿಯರ್'' ಎಂದ. ಸ್ವಲ್ಪ ಹೊತ್ತು ಆಕಡೆಯಿಂದ ಬರುತ್ತಿದ್ದ ಮಾತುಗಳನ್ನು ಕೇಳಿ ''ಸರಿ ನೀನು ಬಂದುಬಿಡು'' ಎಂದ.. ರಿಸೀವರ ಕೆಳಗಿರಿಸಿದ.

''ಯಾರು ಅಶೋಕನೆ ?'' ...ಸುಷಮಾ ಕೇಳಿದಳು ಮಾದಕಧನಿಯಲ್ಲಿ.

''ಹಾಂ ಹೌದು.. ಇದೀಗ ಪಾರ್ಟಿಗೆ ಬಂದ ಜನ ಒಬ್ಬೊಬ್ಬರಾಗಿ ಹೋಗುತ್ತಿದ್ದಾರಂತೆ ಶಾಂತೀಲಾಲರ ಮನೆಯಲ್ಲಿ ಉಳಿದವರು ಶಬನಮ್ ಒಬ್ಬಳೇ ಏನು ಮಾಡಲಿ ? ಎಂದ ಕೇಳಿ ಬಂದು ಬಿಡು ಎಂದೆ''

ಅನಾಯಾಸವಾಗಿ ಇಬ್ಬರ ದೃಷ್ಟಿಯೂ ಗೋಡೆ ಗಡಿಯಾರದತ್ತ ಹರಿಯಿತು ಗಡಿಯಾರ ನಸುಕಿನ ಐದೂವರೆ ಸಮಯ ಸೂಚಿಸುತ್ತಿತ್ತು.

(14)

ಲೋಟಸ್.

ಅದೊಂದು ನೈಟಕ್ಲಬ್

ಪ್ರತಿದಿನ ಅಲ್ಲಿ ರಾತ್ರಿ ಹನ್ನೆರಡು ಗಂಟೆಗೆ ಕೆಬರೆ ಡ್ಯಾನ್ಸುಗಳು ನಡೆಯುತ್ತಿದ್ದವು. ದೇಶವಿದೇಶಗಳಲ್ಲಿ ಖ್ಯಾತಿಗಳಿಸಿದ ಆರು ತರುಣಿಯರು ನಗ್ನ ನೃತ್ಯ ಮಾಡಿ ಎಲ್ಲರ ಮೆನ ತಣಿಸುತ್ತಿದ್ದರು. ಕ್ಲಬ್ಬಿಗೆ ಪ್ರವೇಶ ನಿರ್ಬಂಧಿಸಲಾಗಿತ್ತು. ಅದಕ್ಕೆ ಸದಸ್ಯರಾದವರನ್ನು ಬಿಟ್ಟು ಬೇರೆ ಯಾರೂ ಒಳಗೆ ಪ್ರವೇಶಿಸುವಂತಿರಲಿಲ್ಲ. ತಿಂಗಳಿಗೆ ಒಂದು ಬಾರಿ ನಡೆಯುವ 'ವಿಶೇಷ ಪ್ರೋಗ್ರಾಂ'ದು ಎಲ್ಲರಿಗೂ ಎಲ್ಲಾ ಫ್ರೀ. ಅವರಿಗೆ ಸಂಪೂರ್ಣ ಸ್ವಾತಂತ್ರ್ಯ.. ಮನುಷ್ಯ ತನ್ನ ತನ ಮರೆತು ಪಶುವಾಗುತ್ತಿದ್ದಂಥ ದಿನವದು.

ಅಂದು ಅದೇ ದಿನ.

ಹೀಗಾಗಿ ರಾತ್ರಿ ಒಂಭತ್ತಕ್ಕೆಂದರೆ ಕ್ಲಬ್ ತುಂಬಿ ಹೋಯಿತು. ವಿಶಾಲವಾದ ಹಾಲಿನಲ್ಲಿ ನೂರೈವತ್ತು ಟೇಬಲ್‌ಗಳಿದ್ದವು. ಪ್ರತಿಯೊಂದಕ್ಕೂ ಎರಡೆರಡು ಕುರ್ಚಿಗಳು.. ಪ್ರತಿಯೊಂದು ಮೇಜಿಗೂ ಒಂದೊಂದು ಜೋಡಿ. ಒಂದು ಗಂಡಿಗೆ

ಇನ್ನೊಂದು ಹೆಣ್ಣು.

ಸುರೆ ಸೇವಿಸುತ್ತ ಅದರೊಂದಿಗೆ ಮನಸ್ಸಿಗೆ ಬಂದದ್ದನ್ನು ತಿನ್ನುತ್ತ ಎಲ್ಲರೂ ಮುಕ್ತ ಕಾಮಚೇಷ್ಟೆಯಲ್ಲಿ ತೊಡಗಿದ್ದರು. ಕೆಬರೆ ನೃತ್ಯ ಪ್ರಾರಂಭವಾಗಿರುವ ಸೂಚನೆ ಬರುತ್ತಿದ್ದಂತೆ ಅವರೆಲ್ಲ ಕೇಕೆ ಹಾಕಿ ಸ್ವಾಗತಿಸಿದರು.

ಕ್ಲಬ್ ಹೊರಗಡೆಯಿದ್ದ. ಬಹುದೂರದವರೆಗೂ ಹರಡಿದ್ದ ಪಾರ್ಕಿಂಗಗೆ ವಿದೇಶಿಕಾರೊಂದು ಬಂದು ನಿಂತಿತು.. ಕಾವಲಿದ್ದ ಗುರ್ಖಾ ಗನ್‌ನೊಂದಿಗೆ ಓಡಿ ಬಂದು ವಂದನೆ ಹೇಳಿದ.

''ಸಾಬ್.. ನಿಮ್ಮ ಎಂಟ್ರಿ ಕಾರ್ಡ ತೋರಿಸಿ...''

ಅತ್ಯಾಧುನಿಕ ಡ್ರೆಸನಲ್ಲಿದ್ದ ಮೇಜರ ಮತ್ತು ಸುಷಮಾ ಕೆಳಗಿಳಿದರು. ಅವರಿಬ್ಬರೂ ತುಂಬಾ ಕುಡಿದವರಂತೆ ವರ್ತಿಸುತ್ತಿದ್ದರು. ಒಂದು ಬಾರಿ ತೇಗಿ ಹೇಳಿದ ಮೇಜರ.

''ಅರೆಭಾಯಿ.. ನಾವಲ್ಲಿ ಮೆಂಬರ ಇಲ್ಲ''

''ಮೆಂಬರ್ ಇರದಿದ್ದರೆ ಬರಬಾರದು ಸಾಬ್ ದಯವಿಟ್ಟು ಹೊರಟು ಹೋಗಿ''

ಒಂದು ಏಟನ್ನು ಅವನ ಕುತ್ತಿಗೆಯ ಮೇಲೆ ಬಾರಿಸಿದ. 'ಚಪ್' ಎಂಬ ಸಪ್ಪಳ. ಆತ ನರಳುತ್ತ ನೆಲಕ್ಕೆ ಕುಸಿಯುತ್ತಿದ್ದಂತೆ ಅವನ ಹಿಂದೆ ಪ್ರತ್ಯಕ್ಷವಾದ ಅಶೋಕ ತಬ್ಬಿ ಹಿಡಿದುಕೊಂಡು ಕಂಬಿಗಳ ಹಿಂದೆ ಮರೆಯಾದ. ಆತ ಮತ್ತೆ ಮೇಜರ ಎದುರು ಬಂದಾಗ ಅಶೋಕನಾಗಿರಲಿಲ್ಲ.. ಅಲ್ಲಿಯ ಪಹರೆ ಕಾಯುವ ಗುರ್ಖಾ ಆಗಿದ್ದ.

''ಹೇಗೆ ಕಾಣಿಸುತ್ತೇನೆ''

''ಅಸಲಿ ಗುರ್ಖಾನ ಹಾಗೆ... ಜಾಗೃತೆಯಿಂದಿರು''...

ಮುಂದಿನ ಸರದಿ ಸುಷಮಾಳದು... ಆಕೆ ತೂರಾಡುತ್ತ ಮೆಟ್ಟಲು ಏರಿ ಕ್ಲಬ್ ರಿಸೆಪ್ಷನ್ ಬಳಿ ನಡೆದಳು. ಬೆಕ್ಕಿನ ಹೆಜ್ಜೆಯಲ್ಲಿ ಸ್ವಲ್ಪ ಅಂತರವಿಟ್ಟು ಹೇಮಂತ ಹಿಂಬಾಲಿಸಿದ.

ಬಾಗಿಲ ಬಳಿ ಸದ್ದಾಗುತ್ತಲೇ ಅಕೌಂಟ ಬರೆಯುತ್ತಿದ್ದಾತ ತಲೆಯೆತ್ತಿ ನೋಡುತ್ತಿದ್ದಂತೆ ಆತ ತನ್ನನ್ನು ತಾನೇ ಮರೆಯುವಂತಾಯಿತು. ಟೈಪ್ ಮಾಡುತ್ತಿದ್ದ ತರುಣಿದ ಟೈಪ್ ಮಾಡುವದನ್ನು ಮರೆತು ಅತ್ತ ನೋಡಿದಳು. ಅವರ

ಜೀವಮಾನದಲ್ಲೇ ಇಷ್ಟು ಸುಂದರವಾದ ಆಧುನಿಕ ಕನ್ನೆಯನ್ನು ನೋಡಿರಲಿಲ್ಲ. ತೂರಾಡುತ್ತ ತನ್ನ ದೇಹಸೌಂದರ್ಯದ ಮುಕ್ತ ಪ್ರದರ್ಶನ ಮಾಡುತ್ತಾ ಬಂದ ಸುಷಮಾ ಮೇಜು ಬಾರಿಸಿ ಕೇಳಿದಳು.

''ವ್ಹೇರ್ ಇಜ್ ಶಾಂತೀಲಾಲ್ ?... ಶಾಂತಿಲಾಲ್ ಎಲ್ಲಿ ?''

ತಡಬಡಿಸಿದ ಆತ ಕೇಳಿದ.

''ಯಾವ ಶಾಂತಿಲಾಲ್ ಮಿಸ್''

''ಮಿಸ್ ಸುಮನ್ ಗ್ರೇಟೆಸ್ಟ್ ಆರ್ಟಿಸ್ಟ ಮಿಸ್ ಸುಮನ್ ನಾನು.. ನನಗೆ ಬೇಕು ಶಾಂತೀಲಾಲ್...ಶಾಂತೀಲಾಲ್.

ಆತ ಜೋರಾಗಿ ಅರಚಿಕೊಂಡಾಗ ಅಲ್ಲಲ್ಲಿ ನಿಂತು ಸುತ್ತಲೂ ಹದ್ದಿನಕಣ್ಣು ಹರಡಿದ್ದ ನಾಲ್ಕಾರು ಜನ ಅತ್ತ ಆಕರ್ಷಿತರಾಗಿ ಕೂಗಿದ ಕಡೆ ನುಗ್ಗಿದರು. ಇದೇ ಬೇಕಾಗಿತ್ತು ಹೇಮಂತನೆ ಮೆಲ್ಲನೆ ನೆಲಕ್ಕೆ ತುಸುಬಾಗಿ ಅವರ ಕಣ್ಣಿಗೆ ಬೀಳದಂತೆ ಒಳಗೆ ಪ್ರವೇಶಿಸಿದ. ಉದ್ದಕ್ಕೂ ಹೋದ ಕಾರಿಡಾರ್. ಕಾರಿಡಾರ್ ಮೂಲೆಯಲ್ಲಿ ಲಿಫ್ಟ್.. ಸ್ವಯಂಚಾಲಿತ ಲಿಫ್ಟ್ ಗುಂಡಿ ಅದುಮಿದ. ಅದು ಪಾತಾಳಕ್ಕೆ ಇಳಿಯತೊಡಗಿತು. ಲಿಫ್ಟಿನಿಂದ ಹೊರ ಬಂದು ತುಸು ನಿಧಾನಿಸಿದ.. ಕಿವಿ ಕೊಟ್ಟು ಆಲಿಸಿದ. ಕೇಕೆ ನಗು ಅಟ್ಟಹಾಸಗಳು ಬರುತ್ತಿದ್ದ ದಿಕ್ಕಿನತ್ತ ನಡೆದ. ಈಗವನ ಒಂದು ಕೈಯಲ್ಲಿ ಮಿನಿ ಮೂವೀ ಕೆಮರಾ ಕಾಣಿಸತೊಡಗಿತು. ಬೆಳಕು ಬರುತ್ತಿದ್ದ ಕಿಟಕಿ ಬಳಿ ಬಂದು ಫರದೆ ಸರಿಸಿದ. ಅದು ಸರಳುಗಳಿಲ್ಲದ ಕಿಟಕಿ. ಅಲ್ಲಿಂದಲೇ ಆತ ಎಲ್ಲವನ್ನೂ ತನ್ನ ಕೆಮರಾದಲ್ಲಿ ಸೆರೆಹಿಡಿಯಲಾರಂಭಿಸಿದ.. ಸ್ಟೇಜ ಮೇಲೆ ಕೆಬರೆ ನೃತ್ಯ ನಡೆದಿತ್ತು.. ಇಬ್ಬರು ಮದಮತ್ತ ಸುಂದರ ತರುಣಿಯರು ಹಂತಹಂತವಾಗಿ ನಗ್ನ ರಾಗತೊಡಗಿದರು. ಹಾಲ್‌ನಲ್ಲಿದ್ದ ಅನೇಕರಾಗಿ ನೃತ್ಯ ನೋಡುತ್ತಿದ್ದರು. ಪಶುಗಳಾಗಿ ತಮ್ಮ ತಮ್ಮ ಸಂಗಾತಿಗಳನ್ನ ಕ್ರಮೇಣ ನಗ್ನ ಮಾಡಿ ಕಾಮಕೇಳಿಗೆ ಪ್ರೇರೇಪಿಸತೊಡಗಿದ್ದರು. ನೋಡಲು ಹೇಸಿಗೆ ಅನಿಸಿದರೂ ನಿರ್ವಾಹವಿಲ್ಲದೇ ಅದನ್ನೆಲ್ಲ ನೋಡುತ್ತ ಕೆಮರಾದಲ್ಲಿ ಸೆರೆಹಿಡಿಯತೊಡಗಿದ ಹೇಮಂತ.

ಮೊದಲ ಹಂತದ ನೃತ್ಯ ಮುಗಿಯುತ್ತಲೂ ಲೋಟಸ್ ಕ್ಲಬ್ ಮಾಲಿಕ ಕಮಲಾಪತಿ ಅವರ ಸ್ಟೇಜಿಗೆ ಬಂದರು. ಬೆಲೆಬಾಳುವ ವಿದೇಶಿ ಸೂಟು ಚೆನ್ನಾಗಿ ಬಾಚಿದ ಕಪ್ಪು ಕೂದಲುಗಳು ತೆಳುವಾದ ಮೀಸೆ, ಚೆನ್ನಾಗಿ ಮುಂದೆ ಬಂದ ಹೊಟ್ಟೆ. ಇವರನ್ನು ಎಲ್ಲೋ ನೋಡಿದ್ದೇನೆ ಎಲ್ಲಿ ? ಎಂದು ಹೇಮಂತ ಯೋಚಿಸುತ್ತಿದ್ದ ಹಾಗೆ

ಕಣ್ಣುಗಳು ಮಿನುಗಿದವು. ಆತ ಯಾರು ಎಂದು ಅರ್ಥವಾಯ್ತು.

ಮಿತ್ರರೆ,

ನಿಮಗೆಲ್ಲರಿಗೂ ಕೊನೆಯ ಅವಕಾಶ. ಇಂಥ ಸ್ಪೆಶಲ್ ಪ್ರೋಗ್ರಾಂ. ಇನ್ನು ಮುಂದೆ ಇಂಥ ಕಾರ್ಯಕ್ರಮ ನಡೆಯಲಾರದು. ತಮ್ಮೆಲ್ಲರೆದುರು ಖ್ಯಾತ ಸೆಕ್ಸೀಕ್ವೀನ್ ಸಿನೆಮಾ ನಟಿ ಶಬನಮ್‌ಳ ಐವತ್ತು ಬ್ರಾ ಇಡುತ್ತಿದ್ದೇವೆ. ಈ ಬ್ರಾ ತಯಾರು ಮಾಡುತ್ತಿದ್ದ ವಿದೇಶಿ ಕಂಪನಿ ಮುಚ್ಚಿಹೋದ ಕಾರಣ ಮುಂದೆಂದೂ ಇಂಥ ಬ್ರಾ ದೊರೆಯಲಾರದು. ಐವತ್ತು ಬ್ರಾಗಳಿದ್ದು ಇವುಗಳನ್ನು ಸವಾಲಿನಲ್ಲಿ ಯಾರು ಬೇಕಾದರೂ ಕೊಂಡುಕೊಳ್ಳಬಹುದು.. ಹಾಂ.. ಸವಾಲು ಪ್ರಾರಂಭವಾಗಲಿ.

ಮೊದಲ ಕೂಗು ನನ್ನದು... ಐವತ್ತು ಸಾವಿರ.

ಆರಂಭವಾಯಿತು ಹರಾಜು.. .ಐವತ್ತು ಸಾವಿರದ್ದು ಐದು ಲಕ್ಷಕ್ಕೇರಿತು.

ಇದೇ ರೀತಿ ಐವತ್ತು ಬ್ರಾಗಳು. ಮಾರಾಟವಾದವು. ಒಟ್ಟಾರೆ ಸೇರಿದ ಹಣ ಮೂರು ಕೋಟಿಗೆ ಮಿಕ್ಕಿ.. ಹರಾಜು ಕೂಗಿದವರು ಅಷ್ಟು ಅಷ್ಟು ಹಣ ಕೊಟ್ಟು ಬ್ರಾ ಕೊಂಡುಕೊಂಡರು. ಅವರೆಲ್ಲರಿಗೂ ಈ ವಿಷಯ ಮೊದಲೇ ತಿಳಿದಿರುವುದರಿಂದಾಗಿ ಅಷ್ಟು ಅಷ್ಟು ಹಣ ತಂದಿದ್ದರೇನೋ... ಎಲ್ಲವನ್ನೂ ಮೇಜರ ಕೆಮರಾದಲ್ಲಿ ಸೆರೆಹಿಡಿದ.

ಹರಾಜು ಮುಗಿಯುತ್ತಿದ್ದಂತೆ ಮತ್ತೆ ಆರಂಭವಾಯಿತು. ಕೆಬರೆ ನೃತ್ಯ ಅಲ್ಲಿಗೆ ಮೇಜರನ ಕೆಲಸ ಮುಗಿದಿತ್ತು. ಹೀಗಾಗಿ ಆತ ಮೆಲ್ಲನೆ ಹಿಂದೆ ಸರಿದ ಲಿಫ್ಟ್ ಮೂಲಕ ಬೇರೆ ಒಂದು ಮುಂದಿನ ಬಾಗಿಲಿಗೆ ಬರದೇ ಹಿಂಬಾಲಿಸಿ ಬಂದ. ಅಲ್ಲಿಂದ ಮುಂದಿನ ಗೇಟಿಗೆ ಬರಲು ಹದಿನೈದು ನಿಮಿಷಗಳು ಹಿಡಿದವು. ಅವನ ಕಾರು ಅವನ ಹಾದಿ ಕಾಯುತ್ತಿತ್ತು ರಸ್ತೆಯ ಬದಿಗೆ. ಹೇಮಂತ ಕಾರಿನಲ್ಲಿ ಕುಳಿತುಕೊಳ್ಳುತ್ತ ಸಿಳ್ಳೆ ಹಾಕಿದ. ಗೇಟಿನಲ್ಲಿದ್ದ ಅಶೋಕ ಅದೇ ಡ್ರೆಸ್‌ನಲ್ಲಿ ಓಡಿ ಬಂದು ಹಿಂದೆ ಕುಳಿತ.

ಐದತ್ತು ನಿಮಿಷಗಳು ಕಳೆಯುತ್ತಿದ್ದಂತೆ ಲೋಟಸ್ ಕ್ಲಬ್ ಆವರಣದಿಂದ ಹೊರಬಿದ್ದ ಬೆಂಜ್ ಕಾರು ಮಗ್ಗುಲಲ್ಲೇ ಹಾಯ್ದು ಹೋಗುತ್ತಿದ್ದಂತೆ ಮೇಜರ ದೂರದಿಂದ ಅದನ್ನು ಹಿಂಬಾಲಿಸತೊಡಗಿದ.. ಹೊಸದಾಗಿ ನಿರ್ಮಾಣಗೊಂಡ ಬಡಾವಣೆಯತ್ತ ಕಾರು ಓಡುತ್ತಿದ್ದಂತೆ ಹೇಮಂತ ಎಡಬಲಕ್ಕೆ ನೋಡಿದ. ಪರಿಚಿತದಾರಿ ಎನಿಸಿತು. ಹಿಂದೊಮ್ಮೆ ಬಂದ ನೆನಪಾಯಿತು.

ಮುಂದೆ ಕಾರಿನ ವೇಗ ಕಡಿಮೆಯಾಯಿತು. ಬಹುಶಃ ಮನೆ ಬಂದಿರಬೇಕು ಅನಿಸಿತು. ಹೇಮಂತ ವಾಚಿನಕಡೆ ನೋಡಿದ. ಮೂವತ್ತು ನಲವತ್ತು ನಿಮಿಷಗಳ ಪ್ರಯಾಣ ಅದು. ಒಂದೆಡೆ ಮುಂದಿನ ಕಾರಿನ ಹಿಂಭಾಗದ ಕೆಂಪು ದೀಪಗಳು ಪ್ರಜ್ವಲಿಸಿ ಎಡಭಾಗಕ್ಕೆ ಸಂದೇಶ ನೀಡಿದಾಗ ಹೇಮಂತ ಕಾರು ಅಲ್ಲೇ ನಿಲ್ಲಿಸಿ ಕಾರಿನಿಂದ ಕೆಳಗಿಳಿದ. ಮಿನಿ ಮೂವೀ ಕೆಮರಾದೊಂದಿಗೆ ಕತ್ತಲೆಯಲ್ಲೇ ಅಭ್ಯಾಸ ಹೆಜ್ಜೆ ಹಾಕುತ್ತ ಹೇಳಿದ.

''ನೀವಿಲ್ಲೇ ಇರಿ. ನಾನು ಅರ್ಧಗಂಟೆಯಲ್ಲಿ ಬಂದೆ''

ಆತ ಹೇಳುವಂತೆ ಅರ್ಧಗಂಟೆಯಲ್ಲಿ ಆತ ಬರಲಿಲ್ಲ. ಮುಕ್ಕಾಲು ಗಂಟೆ ನಂತರ ಬಂದ.

''ಏನಾಯ್ತು ?''... ಕೇಸಿನ ಈ ಶಬನಮ್‌ಳ ಬ್ರಾಕ್ಕೆ ಇತಿಶ್ರೀ ಹಾಡಿಯಾಯಿತಾ ? ಸುಷಮಾಳತ್ತ ತುಂಟತನದಿಂದ ನಗೆಬೀರಿ ಹೇಮಂತನಿಗೆ ಕೇಳಿದ ಅಶೋಕ.

''ಶಬನಮ್‌ಳ ಬ್ರಾಕ್ಕೆ ಅಲ್ಲ. ಅವಳ ಬ್ರಾ ಕೇಸಿಗೆ ಜಯಂತನ ಮರ್ಡರ ಕೇಸಿಗೆ, ಎರಡಕ್ಕೂ ಇತಿಶ್ರೀ ಹಾಡಿದೆ. ಹೂಂ ನಡೆಯಿರಿ. ನಾಳೆ ರಾತ್ರಿ ನಮ್ಮೂರಿಗೆ ಹೊರಡೋಣವಂತೆ... ಕಾರು ಹೊರಟಿತು ಲಾಜಿನತ್ತ.

ಅಂದು ಯಾವ ವಿಶೇಷ ಕಾರ್ಯಕ್ರಮಗಳಿಲ್ಲದಿದ್ದರೂ ಲೋಟಸ್ ಕ್ಲಬ್‌ಗೆ ಒಂದರ ಹಿಂದೆ ಒಂದರಂತೆ ಐವತ್ತಕ್ಕೂ ಹೆಚ್ಚು ಕಾರುಗಳು ಬಂದು ನಿಂತವು. ಅವುಗಳಿಂದ ಕೆಳಗಿಳಿದವರೆಲ್ಲರೂ ಕುಪಿತರಾದಂತೋ ವ್ಯಗ್ರರಾದಂತೋ ಕಾಣುತ್ತಿದ್ದರು. ಅವರೆಲ್ಲ ಒಳಗೆ ಹೋದ ಹತ್ತು ನಿಮಿಷಗಳ ನಂತರ ಬೆಂಜ್‌ಕಾರು ಗೇಟು ಪ್ರವೇಶಿಸಿತು. ದೂರದಿಂದಲೇ ಇದೆಲ್ಲವನ್ನೂ ಬೈನಾಕುಲರ ಮೂಲಕ ಗಮನಿಸುತ್ತಿದ್ದ ಮೇಜರ ಐ.ಜಿ.ಪಿ ಅವರಿಗೆ ಸೂಚನೆ ನೀಡಿದ.

''ಸರ್ ನಾನು ಹೇಳಿದ ಸಮಯ ಬಂದಿತು. ಮುಂದಿನ ಜವಾಬ್ದಾರಿ ತಮ್ಮದು ತಮ್ಮ ಸೈನ್ಯಕ್ಕೆ ಮುನ್ನುಗ್ಗಲು ಅನುಮತಿ ಕೊಡಿ.''

ರಸಾಳಕರ ಅವರ ಒಂದೇ ಒಂದು ಸಂಜ್ಞೆ.

ಡಿ.ಜಿ.ಪಿ. ಪ್ರತಾಪ ಹಾಗೂ ಎಸ್.ಪಿ. ಶ್ಯಾಮಸುಂದರ ಅವರ ನೇತೃತ್ವದಲ್ಲಿ ಎರಡು ತುಕಡಿ ಪೋಲಿಸ ಪಡೆಗಳು ಬೇರೆ ಬೇರೆ ದಿಕ್ಕುಗಳಿಂದ ಲೋಟಸ್ ಕ್ಲಬ್‌ನ್ನು

ಸುತ್ತುವರೆದರು. ರಸಾಳಕರ ಅವರೊಂದಿಗೆ ಹೇಮಂತ್ ಕ್ಲಬ್ ಪ್ರವೇಶಿಸಿದಾಗ ಎಲ್ಲರೂ ಬಂದಿಗಳಾಗಿದ್ದರು.

ಹೇಮಂತನನ್ನ ಕಾಣುತ್ತಲೇ ಪ್ರತಾಪ್ ಓಡಿ ಬಂದರು.

''ಮಿಸ್ಟರ್ ಹೇಮಂತ್ ಕ್ಲಬ್‌ನ ಒಂದೊಂದು ಅಂಗುಲ ನಾನು ಶೋಧಿಸಿದೆ. ನನಗೆ ಎಲ್ಲಿಯೂ ನೀವು ಹೇಳಿದ ಸ್ಥಳ ದೊರೆಯಲಿಲ್ಲ''

ಅಚ್ಚರಿಯಾಯಿತು ಮೇಜರನಿಗೆ, ಪ್ರತಾಪನೊಂದಿಗೆ ಅವನೂ ಸುತ್ತಾಡಿದ ಹಿಂದಿನ ರಾತ್ರಿಯ ಕ್ಲಬ್ಬೇ ಬೇರೆ ಈ ಕ್ಲಬ್ಬೇ ಬೇರೆ ಅನಿಸಿತು.

ಹಾಗಾದರೆ ತಾನು ಕಂಡದ್ದು ಸುಳ್ಳೆ ? ಅಥವಾ ಕನಸೆ ?

ಎರಡೂ ಅಲ್ಲ.. ಕಂಡದ್ದು ನಿಜ ಎಂದು ಪ್ರತಿವಾದಿಸಲು ಫಿಲ್ಮರೀಲು ಇರುವಾಗ ಕನಸು ಹೇಗಾದೀತು ?..

ಕೌಂಟರ ಬಳಿ ನಿಂತು ರಾತ್ರಿ ತಾನು ಮೊಣಕಾಲೂರಿ ಎತ್ತ ಸಾಗಿದೆ ? ದಾರಿ ಎಲ್ಲಿ ಎಲ್ಲಿ ಇತ್ತು ? ಎಂದು ನೆನಪಿಸಿಕೊಂಡು ಅತ್ತಸಾಗಿದ. ಗೊಡೆ ಅಡ್ಡ ಬಂದಿತು. ಅರೆ ! ಈ ಗೋಡೆ ರಾತ್ರಿ ಇರಲಿಲ್ಲ. ಈಗ ಹೇಗೆ ಬಂತು ?

ತಲೆ ಕೆರೆದುಕೊಂಡು ಸುತ್ತಲೂ ನೋಡಿದ.

ಸುಂದರವಾದ ತೈಲಚಿತ್ರಗಳು. ಅವುಗಳಲ್ಲಿ ನಿಂತು ಸ್ನಾನ ಮಾಡುತ್ತಿರುವ ಯುವತಿಯ ಚಿತ್ರ ತುಂಬಾ ಸೊಗಸಾಗಿತ್ತು. ಅವಳ ಹೊಕ್ಕಳಂತೂ ಚಕ್ರತೀರ್ಥದ ಸುಳಿ ನೆನಪಿಗೆ ತರುವಂತಿತ್ತು. ಹೇಮಂತ ಆ ತೈಲಚಿತ್ರವ ಮೇಲೆ ಮೆಲುವಾಗಿ ಕೈಯಾಡಿಸಿ ಯುವತಿಯ ಅಂಗಗಳನ್ನೆಲ್ಲ ಸ್ಪರ್ಷಿಸಿ ನೋಡುತ್ತಿದ್ದಂತೆ ಕೆಲವರು ಮೂಗು ಮುರಿದರು.

ಎಂಥ ಅಸಭ್ಯವರ್ತನೆ ಎಂದು ಗೊಣಗಿದರು.

ಮೇಜರ ತನ್ನ ಕೆಲಸದಲ್ಲಿ ತನ್ಮಯನಾಗಿದ್ದ. ಅವನ ಬೆರಳು ಹೊಕ್ಕಳ ಮೇಲೆ ಬಂದಾಗ ತಟಸ್ತವಾದವು. ಬೆರಳಿಗೆ ಸೂಕ್ಷ್ಮವಾದ ಮೊಳೆ ತಗಲಿತು ಅದನ್ನ ಅದುಮಿದ. ಗರಗರ ಸದ್ದಿನೊಂದಿಗೆ ಎದುರಿಗಿದ್ದ ಗೋಡೆ ಬದಿಗೆ ಸರಿದು ಉದ್ದಕ್ಕೂ ಹರಡಿದ ಕಾರಿಡೋರ ಗೋಚರಿಸಿದಾಗ ಎಲ್ಲರೂ ಮೇಜರನ ಜಾಣ್ಮೆಗೆ ಕಂಡೆ ಮೂಗಿನ ಮೇಲೆ ಬೆರಳಿಟ್ಟುಕೊಂಡರು. ರಸಾಳಕರ ಅವನ ಬೆನ್ನು ಚಪ್ಪರಿಸಿದರು. ಮುಂದೆ ಲಿಫ್ಟ್ ದೊರೆಯಿತು. ಸಮಯ ಹಿಡಿಯಿತು. ಮೊದಲು ಹೇಮಂತ,

ಅಶೋಕ, ಸುಷಮಾ, ರಸಾಳಕರ, ಪ್ರತಾಪ ಕೆಳಗೆ ಹೋಗಿ ಲಿಫ್ಟ ಮೇಲೆ ಕಳಿಸಿದರು. ಅನಂತರ ಆರು ಆರು ಜನರಂತೆ, ಪೋಲೀಸರು ಕೆಳಗಿಳಿಯತೊಡಗಿದರು.

ಒಳಗೆ ಹಾಲಬಳಿ ಬಂದಾಗ ಚೀರಾಟ, ಒದರಾಟ, ಬೈಗಳು ಎಲ್ಲಾ ಕೇಳಿ ಬರಲಾರಂಭಿಸಿದತ್ತ ಮನ ಬಂದಂತೆ ಮಾತನಾಡುತ್ತಿದ್ದರು.

''ನನ್ನ ಇಪ್ಪತ್ತೈದು ಲಕ್ಷ''

''ನನ್ನದು ಐದು''

''ಹದಿನೈದು ಲಕ್ಷದಂತೆ ನಾನು ಎರಡು ಕೊಂಡಿದ್ದೆ''

''ಮೋಸ ಈ ರೀತಿ ಮಾಡಬಾರದು''

''ನಮ್ಮ ಪ್ರಾಣ ಗಂಡಾಂತರದಲ್ಲಿವೆ. ಕಾಪಾಡುವವರಾರು ?''

''ಎಲ್ಲರೂ ಶಾಂತರಾಗಿರಿ''. ಗುಡುಗಿನಂಥ ಧನಿ ಬಂದಿತು. ವಿದೇಶಿ ಸೂಟು ಧರಿಸಿದ್ದ ಲೋಟಸ್ ಕ್ಲಬ್ ಮಾಲಿಕರು ಗುಡುಗಿಸಿದರು''

ಒಮ್ಮೆಲೆ ಶಾಂತಿ ನೆಲೆಸಿತು.

''ನೋಡಿ.. ಪ್ರಾಮಾಣಿಕತೆಯ ಈ ಧಂಧೆಯಲ್ಲಿ ಪ್ರಥಮ ಬಾರಿ ಈ ಮೊಸ ನಡೆದಿದೆ. ನಾನು ನನಗೆ ನೇರವಾಗಿ ಬಂದ ಸರಕನ್ನೇ ತಮಗೆ ತಲುಪಿಸಿದ್ದೇನೆ. ಮೊದಲಿನ ಮಾಲಿಗೂ ಈ ಮಾಲಿಗೂ ಏನೂ ಅಂತರವಿರಲಿಲ್ಲ''

ಅಂತರವಿದೆ ಸರ್ ನಮಗೆ ಪ್ರತಿಭಾರಿ ದೊರೆಯುತ್ತಿದ್ದ ಟೋಕನ್ ಅವುಗಳಿಲ್ಲ ಅಲ್ಲಿ ಕೇವಲ ಬಿಳಿಹಾಳೆ ಇದೆ. ಅದಕ್ಕಾಗಿ ನಾವು ಹೇಳುತ್ತಿರುವುದು. ಇದು ಮೋಡಿ ಎಂದು. ಈ ರೀತಿ ಒಬ್ಬರಿಗೆ ಆಗಿದ್ದರೆ ಕಣ್ತಪ್ಪಿ ಆಗಿದೆ ಅನ್ನಬಹುದಿತ್ತು. ಆದರೆ ಐವತ್ತೂ ಜನರಿಗೆ ಆಗಿದೆ. ಅಂದರೆ ಇದಕ್ಕೆ ನೀವೇನು ಹೇಳುತ್ತೀರಿ.

''ನನಗೆ ಏನು ಹೇಳಬೇಕೆಂಬುದೇ ತಿಳಿಯದಂತಾಗಿದೆ.''

ಮೊದಲು ನುಡಿದಾತ ಗಟ್ಟಿಯಾಗಿ ಹೇಳಿದ.

''ನನಗೆ ಅನಿಸುವ ಮಟ್ಟಿಗೆ ಮಾಲು ಬದಲಾಗಿದೆ ಸರ್. ಅಸಲಿಮಾಲನ್ನು ಯಾರೋ ಹಾರಿಸಿ ಅದರ ಜಾಗದಲ್ಲಿ ನಕಲಿ ಮಾಲು ಇಟ್ಟಿದ್ದಾರೆ.

''ಈ ರೀತಿ ಮಾಡುವವರಾರು ? ಮಾಡಿದರೂ ಅಸಲಿ ಮಾಲು ಎಲ್ಲಿದೆ ?''

''ಮಿಸ್ಟರ್ ಶಾಂತೀಲಾಲ್''

ಮೊದಲ ಬಾರಿ ಹಾಲ್ ಪ್ರತಿಧ್ವನಿಸಿತು ಅಪರಿಚಿತ ಕಂಠದಿಂದ ''ಯಾರು ? ಯಾರು ಶಾಂತಿಲಾಲ್ ? ಕ್ಲಬ್‌ಮಾಲಿಕ ಪ್ರಶ್ನಿಸಿದ.

''ನೀನೇ ನೀನೇ ಶಾಂತಿಲಾಲ್. ಖ್ಯಾತ ಚಲನಚಿತ್ರ ನಿರ್ಮಾಪಕ ಡ್ರೆಸ್‌ಬದಲು ಮಾಡಿ, ಮೇಕಪ್ ಮಾಡಿಕೊಂಡಾಕ್ಷಣ ನಿನ್ನ ಗುರುತು ಸಿಗುವುದಿಲ್ಲ ಎಂದುಕೊಂಡೆಯಾ. ನಾನು ನಿನ್ನೆಯೇ ನಿನ್ನ ಗುರುತು ಹಿಡಿದೆ. ನಿನ್ನ ಅಸಲಿಮಾಲು ನನ್ನ ಬಳಿ ಇದೆ. ಮಾಲು ಬದಲಿಸಿದವ ನಾನು.

ಒಮ್ಮಿದೊಮ್ಮೆಲೆ ಗುಸುಗುಸು..ಗದ್ದಲ.

''ಯಾರು ನೀನು...ನೀನು ಯಾರು ? ಬಾ ಬೆಳಕಿಗೆ''.

''ಶಾಂತೀಲಾಲ್...ನಾನು ಬೆಳಕಿಗೆ ಬರುವುದಲ್ಲದೆ ನಿಮ್ಮ ಮುಖದ ಮೇಲಿನ ಮುಖವಾಡ ಕಳಚಿ ಕತ್ತಲೆಯ ಕೊಠಡಿಯಲ್ಲಿದ್ದ ನಿಮ್ಮೆಲ್ಲರನ್ನು ಜಗದ ಬೆಳಕಿಗೆ ತಂದು ನಂತರ ಜೈಲು ಕೊಠಡಿಗೆ ದಬ್ಬಲು ಬಂದವನು ನಾನು ಇದೊ ಬಂದೆ ನೋಡು ಬೆಳಕಿಗೆ''.

ಹೇಮಂತ ಹಾಲ್ ಪ್ರವೇಶಿಸುತ್ತಲೂ ಕ್ಲಬ್ ಮಾಲಿಕ ಉದ್ಗರಿಸಿ

''ಏನು ಮೇಜರ್ ಹೇಮಂತ.''

''ಈಗಲಾದರೂ ಗುರುತು ಸಿಕ್ಕಿತೆ ಶಾಂತಿಲಾಲ್. ಇಂದಿಗೆ ನಿನ್ನ ಆಟ ಮುಗಿಯಿತು.''

ಹೇಮಂತ ಚಪ್ಪಾಳೆ ತಟ್ಟುತ್ತಲೇ ಐವತ್ತು ಜನ ಪೋಲೀಸರು ಕೈಯಲ್ಲಿ ರೈಫಲ್ ಹಿಡಿದು ಅವರನ್ನು ಸುತ್ತುವರೆದಿದರು...ಮುಂದಿನ ಕ್ಷಣ ಅವರೆಲ್ಲಾ ಬಂದಿಗಳಾಗಿದ್ದರು.

[16]

ಮೇಜರನ ನಿರೀಕ್ಷೆಯಂತೆ ಮಿಸ್ ಶಬನಮ್ ಬಂದಿಳಿದಳು ತನ್ನ ಕಾರಿನಿಂದ...ಏಕೋ ಆಕೆ ತುಂಬಾ ಸುಸ್ತಾಗಿದಾಳೆ ಅನಿಸಿತು. ಮೇಜರ್‌ನೆ. ಪ್ರಶ್ನಿಸಿದ ''ಏಕೆ ಮೈಯಲ್ಲಿ ಚೆನ್ನಾಗಿಲ್ಲವೆ ?''

''ಹಾಗೇನಿಲ್ಲ..ಚೆನ್ನಾಗಿಯೇ ಇದೇನೆ. ನಿನ್ನೆ ರಾತ್ರಿ ಶೂಟಿಂಗ್ ಇತ್ತು ಮಲಗಿದಾಗ ಬೆಳಗಿನ ಐದುಗಂಟೆ ಹೀಗಾಗಿ ತಲೆ ಸ್ವಲ್ಪ ಭಾರವಾಗಿದೆ. ಕಣ್ಣು ಉರಿತಾ ಇದೆ.

"ಓಹ್ ಹೀಗೋ...ನಾನು ಕೇಸು ಮುಗಿದಾಯ್ತಲ್ಲ..ಮೂರು ಲಕ್ಷ ಕೊಡಬೇಕಾಗಿ ಬಂತು ಅಂತ ತಿಳಿದು ಬೇಸರ ಮಾಡಿಕೊಂಡಿರಬಹುದು ಅಂದುಕೊಂಡೆ."

"ಇಲ್ಲ..ಹಾಗೇನೂ ಇಲ್ಲ. ಕೇಸು ಮುಗಿದದ್ದೇ ನನಗೆ ತುಂಬಾ ಸಂತೋಷವಾಗಿದೆ. ಮೂರಲ್ಲ ಐದು ಕೇಳಿದರೂ ನಾನು ಕೊಡಲು ಸಿದ್ಧ. ಅದೇ ಶಾಂತೀಲಾಲರ ಬಗ್ಗೆ ಮನಸ್ಸಿಗೆ ಕೆಡುಕೆನಿಸಿತು. ಅವರ ಬಗ್ಗೆ ಎಷ್ಟು ಗೌರವ ಇಟ್ಟುಕೊಂಡಿದ್ದೆ. ಅವರೇ ಏಕೆ ಹೀಗೆ ಮಾಡಿದರು ಅಂತಾ ತಿಳೀತಾ ಇಲ್ಲ."

"ಅದನ್ನು ತಿಳಿಸಲೆಂದೇ ನಿಮ್ಮನ್ನು ಕರೆಸಿದ್ದು. ನನ್ನ ಬಹುಮಾನದ ಹಣ ತಂದಿರುವಿರಲ್ಲವೆ ?"

"ಏಕೆ ? ನನ್ನ ಬಗ್ಗೆ ಅಪನಂಬಿಕೆಯೇ ?"

"ಏನೇ ಆಗಲಿ ಸಿನಿಮಾದವರನ್ನು ನಂಬುವದೇ ಕಠಿಣವಾಗಿದೆ. ಅದು ಶಾಂತೀಲಾಲರನ್ನು ಬಂಧಿಸಿದ ಮೇಲೆ. ಇಂದೇ ಸಂಜೆ ಊರಿನ ಕಡೆ ಹೋಗಬೇಕೆಂದಿರುವೆ ಅದಕ್ಕೇ ಕೇಳಿದ್ದು."

"ಹೆದರಬೇಡಿ ನೀವು ಹೇಳಿದಂತೆ ಹಣ ತಂದಿರುವೆ. ಕ್ಯಾಶ್."

"ಗುಡ್, ಒಳಗೆ ನಡೆಯಿರಿ."

ಅವಳೊಂದಿಗೆ ಹೇಮಂತನು ಬಂದ.

ಎಸ್.ಪಿ. ಅವರ ಮೀಟಿಂಗ್ ಹಾಲ್ ಈಗ ಕಾನ್‌ಫರೆನ್ಸ್ ಹಾಲ್ ಆಗಿ ಪರಿವರ್ತನೆಗೊಂಡಿತ್ತು. ತನಗಾಗಿ ಸಿದ್ಧಪಡಿಸಿದ ಆಸನದ ಮೇಲೆ ಕುಳಿತುಕೊಳ್ಳುತ್ತಾ ಒಂದು ಬಾರಿ ಸುತ್ತಲೂ ದೃಷ್ಟಿ ಬೀರಿದ ಹೇಮಂತ. ಕೇಸಿಗೆ ಸಮ್ಮಂಧಪಟ್ಟ ಜನರನ್ನು ಬಿಟ್ಟರೆ ಪೋಲೀಸ್ ಅಧಿಕಾರಿಗಳು ಹಾಗೂ ಅವರ ಸಿಬ್ಬಂದಿ, ಪತ್ರಿಕಾ ಪ್ರತಿನಿಧಿಗಳು, ಪ್ರತಿಷ್ಠಿತ ನಾಗರಿಕರು. ಎಲ್ಲರೂ ಸೇರಿದರೆ ನೂರು ಜನ ಮೀರಿರಲಿಲ್ಲ...ಇನ್ನೊಂದೆಡೆ ಶಾಂತೀಲಾಲರು ಕುಳಿತಿದ್ದರು ಮುಖ ಕೆಳಗೆ ಮಾಡಿಕೊಂಡು. ತುಸು ಕೆಮ್ಮಿ ಗಂಟಲು ಸರಿಪಡಿಸಿಕೊಂಡು ಹೇಮಂತ ಡಾಕ್ಟರ ಉಪಾಧ್ಯಾಯರ ಕಡೆ ನೋಡಿದ. ಅವರು ಮೆಲುವಾಗಿ ತಲೆಯಾಡಿಸಿದರು. ಮುಂದಿನ ಕ್ಷಣ ಮೇಜರ್‌ನ ಕಂಚಿನ ಕಂಠ ಕೇಳಿಬರಲಾರಂಭಿಸಿತು. ಮೊದಮೊದಲು ನಿಧಾನವಾಗಿ, ಮೆಲುವಾಗಿ ಕೇಳಿಬಂದ ಕಂಠ ಕ್ರಮೇಣ ಬಿರುಸಾಗುತ್ತ ಏರುಹಂತಕ್ಕೆ ಬಂದಿತು.

ಪ್ರಿಯ ಬಂಧುಗಳೆ,

ನಾನು ಇಲ್ಲಿಗೆ ಬಂದುದು ನನ್ನ ಕೊರಳಿಗೆ ಈ ಕೇಸು ಬಿದ್ದುದು ನಾನದನ್ನು ಬಿಡಿಸಿದ್ದು ಎಲ್ಲಾ ಒಂದು ಆಕಸ್ಮಿಕ, ಒಂದು ಸಂಯೋಗ ಮಾತ್ರ ನಾನು ಊರಿನಿಂದ ಹೊರಡುವ ಮುನ್ನ ನನಗಿದರ ಬಗ್ಗೆ ವಾಸನೆ ಸಹ ಬಡಿದಿರಲಿಲ್ಲ. ಮದುವೆಗೆಂದು ಬಂದವ ಎರಡು ಕೇಸು ಕೈಗೆತ್ತಿಕೊಂಡೆ.

''ಏನು ? ಎರಡು ಕೇಸುಗಳೆ ?..ವಿಚಿತ್ರವಾಗಿದೆಯಲ್ಲ ?''

ಓರ್ವ ಪತ್ರಕರ್ತರು ಕೇಳಿದರು.

ಹೌದು ಎಲ್ಲರಿಗೂ ತಿಳಿದದ್ದು ಒಂದೇ ಕೇಸು. ನನ್ನ ಕೈಗೆ ಬಂದವು ಎರಡು ಕೇಸುಗಳು. ಮೊದಲನೆಯದು ಜಯಂತ ಮರ್ಡರ್ ಕೇಸು. ಎರಡನೇಯದು ಮಿಸ್ ಶಬನಮ್‌ರ ಬ್ರಾಕ್ಕೆ ಸಮ್ಮಂಧಿಸಿದ್ದು. ಶಬನಮ್‌ಳ ಬ್ರಾದ ಕೇಸು ಎಂದಾಕ್ಷಣ ಕೆಲಕಾಲ ನಗೆ ಅಲೆತೇಲಿಯ. ಅದನ್ನು ಯಾರೂ ಸೀರಿಯಸ್ ಆಗಿ ತೆಗೆದುಕೊಳ್ಳಲಿಲ್ಲ.

''ಮೇಜರ್..ನೀವು ಮೊದಲಿನಿಂದ ಎಲ್ಲವನ್ನು ವಿಷದವಾಗಿ ವಿವರಿಸಿದರೆ ಹೆಚ್ಚು ಅನುಕೂಲವಾಗುತ್ತದೆ ಅಲ್ಲವೆ ?'' ಉಪಾಧ್ಯಾಯರು ಸೂಚನೆ ಮುಂದಿಟ್ಟರು. ಅದನ್ನಾತ ಒಪ್ಪಿಕೊಂಡ.

''ಹಾಗೇ ಆಗಲಿ ಡಾಕ್ಟರ್ ಉಪಾಧ್ಯಾಯರೆ, ನಾನು ಮೊದಲಿನಿಂದ ಬರುತ್ತೇನೆ, ನಾನಿಲ್ಲಿಗೆ ಉಪಾಧ್ಯಾಯರ ಮಗಳ ಮದುವೆಗೆ ಬಂದಿದ್ದೆ. ನಾನು ಬರುವ ಹಿಂದಿನ ದಿನ ಇಲ್ಲಿ ಜಯಂತನ ಕೊಲೆಯಾಗಿತ್ತು. ಜಯಂತ ಕೇಂದ್ರ ಗುಪ್ತಚಾರ ಪಡೆಯಲ್ಲಿ ಇನ್‌ಸ್ಪೆಕ್ಟರ್ ಅಂತರರಾಷ್ಟ್ರೀಯ ಮಟ್ಟದಲ್ಲಿ ನಮ್ಮ ದೇಶದ ಹೆಸರು ಕೆಡಿಸುವ ಕುತಂತ್ರ ನಡೆದಿದೆ ಎಂಬುದು ಬಗ್ಗೆ ಶೋಧಿಸಲು ಇವನನ್ನು ನಿಯುಕ್ತಿ ಮಾಡಲಾಗಿತ್ತು. ಆತ ಕೆಲ ಜನರ ಹಿಂದೆ ಬಿದ್ದ. ಎರಡು ತಿಂಗಳ ಪರಿಶ್ರಮದ ನಂತರ ಅವನ ಕೈಗೆ ಸೂತ್ರ ದೊರೆಯಿತು. ಚರ್ಚ್ ಫಾದರ್ ಬಳಿ ಇರುವ ಒಂದು ಹುಡುಗಿಯ ಬಗ್ಗೆ ಆತ ಸಂಶಯ ತಾಳಿದ. ಅವಳನ್ನು ಅವಳ ಸ್ನೇಹಿತರನ್ನು ಹಿಂಬಾಲಿಸಿದ. ಅವಳ ಹೆಸರು ಸಿಲ್ವಿಯಾ. ಫಾದರ್‌ಗೆ ಅಣ್ಣನ ಮಗಳಾಗಬೇಕು. ಅವಳಿಗೆ ಮೋಸ ಮಾಡಿ ಬ್ಲ್ಯಾಕ್‌ಮೇಲ್ ಜಾಲದಲ್ಲಿ ಸಿಲುಕಿಸಿದ್ದರಿಂದ ಫಾದರ್ ಸಹ ಅವರ ಕೈಗೊಂಬೆಯಾದರು. ಸಿಲ್ವಿಯಾ ಮೂಲಕ ಅವೈಧ ವ್ಯಾಪಾರ ಆರಂಭವಾಯತು. ಅದಕ್ಕೂ ಮುಂಚೆ ಫಾದರ್ ಅಸಮಯದಲ್ಲಿ ಗಂಟೆ ಬಾರಿಸುತ್ತಿದ್ದರು. ಗಂಟೆ ಆದ ಅರ್ಧ ತಾಸಿನ ನಂತರ ಒಂದು ವ್ಯಕ್ತಿ ಬಂದು,

ವ್ಯಾಪಾರ ಕುದುರಿಸುತ್ತಿತ್ತು. ಇದರ ಸುಳಿವು ಜಯಂತಗೆ ದೊರೆಯಿತು. ಜಯಂತ ಸಮಯ ಸಾಧಿಸುತ್ತಿದ್ದ ಅಂದು ಮಾಲು ಸಹ ಅವರ ಕೈಗೆ ದೊರೆಯಿತು. ಹೊಟೆಲ್‌ನಲ್ಲಿ ಬಾಂಬ್ ಇಟ್ಟು ಓಡಿಬರುವಾಗ ಶತೃಗಳ ಕೈಗೆ ಸಿಲುಕಿಹಾಕಿಕೊಂಡ. ಅವನ ಕೊಲೆಯಾಯಿತು. ಅವನ ಕೈಯಲ್ಲಿದ್ದ ಶತೃಗಳ ಮಾಲು ಪುನಃ ಅವರ ಕೈಗೆ ದೊರೆಯಿತು. ಇದನ್ನೆಲ್ಲ ಗಮನಿಸಿದ ಒಬ್ಬ ಕುಡುಕ ಇನ್ನೊಬ್ಬ ರಂಗಾ. ರಂಗಾ ಅಪರಾಧಿಗಳ ಬಾಸ್‌ನನ್ನು ನೋಡಿ ಗುರುತಿಸಿದ್ದ. ಆತ ಫೋಟೋ ಸಿಕ್ಕಿದರೆ ಬಾಯಿ ಬಿಡುತ್ತಾನೆಂದು ಅವನ ಕೊಲೆಯಾಯಿತು.

ಅಂತೂ ಇಂತೂ ಕೇಸನ್ನು ಕೈಗೆ ಬಂದ ಮೇಲೆ ನಾನು ಫಾದರ್‌ನ ಮೇಲೆ ಸಂಶಯ ಬಂದು ಚೆಕ್ ಮಾಡಿದೆ. ಅವರಿಂದ ವಿಷಯ ತಿಳಿಯಿತು. ಈ ಮಧ್ಯೆ ಒಂದು ಬಾರಿ ಕೊಲೆ ಬೆದರಿಕೆ ನೀಡಿದರು. ಒಮ್ಮೆ ಐವತ್ತು ಲಕ್ಷ ಹಣದ ಆಸೆ ತೋರಿಸಿ ನನಗೆ ಈ ಕೇಸಿನಿಂದ ದೂರ ಸರಿಯುವಂತೆ ಸೂಚಿಸಿದರು. ನಾನು ಒಪ್ಪದಾಗಲು ಐ.ಜಿ.ಪಿ. ಅವರ ಮನೆಯಲ್ಲಿ ಬಾಂಬ್ ಇಟ್ಟು ಕೊಲ್ಲಲು ಪ್ರಯತ್ನಿಸಿ ವಿಫಲರಾದರು. ಈ ಮಧ್ಯೆ ಶಬನಮ್‌ಳ ಬ್ರಾದ ಅಪಹರಣ ಹಾಗೂ ಅದರ ಮಾರಾಟದ ಬಗ್ಗೆ ಅನಂತ ವರದಿ ಮಾಡಿದ. ಶಬನಮ್ ಬಂದು ನನ್ನ ಭೆಟ್ಟಿಯಾಗಿ ಐದು ಲಕ್ಷ ರೂಪಾಯಿ ಸಂಭಾವನೆ ಮೇಲೆ ನನಗೆ ಈ ಕೇಸು ಒಪ್ಪಿಸಿದಳು. ಅವಳ ಬ್ರಾ ಕಪ್ಪುಬಣ್ಣದ್ದಿದ್ದು ವಿಶೇಷವಾಗಿ ವಿದೇಶದಲ್ಲಿ ತಯಾರಾಗಿ ಬರುತ್ತವೆ. ಅವುಗಳನ್ನು ತಯಾರಿಸುವ ಕಂಪನಿ ಬ್ಲ್ಯಾಕ್‌ಬೆಲ್ ಕಂಪನಿ ಅಂದರೆ ಕಪ್ಪುಗಂಟೆ ಎಂದು ತರ್ಜುಮೆ ಮಾಡಬಹುದು. ಈ ಕಂಪನಿ ಫಾರಿನ್‌ನಲ್ಲಿ ಇದ್ದರೂ ಇದರ ಮಾಲಿಕ ಭಾರತೀಯ. ಈಗ ನಾಲ್ಕಾರು ದಿನಗಳ ಹಿಂದೆ ಆತ ತಲೆಮರೆಸಿಕೊಂಡಿದ್ದಾನೆ. ನಾನು ಈ ಕೇಸು ಹಿಂದೆ ಬಿದ್ದೆ. ಅನಂತ ಹಾಗೂ ಆಶಾರನ್ನು ಕೊಲ್ಲುವ ಪ್ರಯತ್ನ ನಡೆದರೂ ನನ್ನ ಸಹಾಯಕರಾದ ಸುಷಮಾ ಹಾಗೂ ಅಶೋಕ ಅವರನ್ನು ಉಳಿಸಿದರು..ನನ್ನ ಮನದಲ್ಲಿ ಒಂದೇ ಸಂಶಯ ಕಾಡುತ್ತಿತ್ತು ಬ್ರಾದ ಬೆಲೆ ಲಕ್ಷಲಕ್ಷ ಆಗಬೇಕಾದರೆ ಅದರಲ್ಲಿ ಯಾವದೇ ರಹಸ್ಯ ಅಡಗಿದೆ ಎಂದು. ಅದಕ್ಕೆ ನಾನು ವಿದೇಶಕ್ಕೆ ಹೋಗಿ ಅಲ್ಲಿ ಪರಿಶೋಧನೆ ನಡೆಸಿದಾಗ. ನನಗೆ ಹೊಸವಿಷಯ ಕಂಡುಬಂದವು.

ಅಂತರರಾಷ್ಟ್ರೀಯ ಪೋಲೀಸರ ದಕ್ಷತೆಯಿಂದಾಗಿ ಬ್ರೌನ್ ಶುಗರ್ ಮುಂತಾದ ಮಾದಕದ್ರವ್ಯ ಸಾಗಿಸುವದು ತುಂಬಾ ಕಷ್ಟವಾಯಿತು. ಅದಕ್ಕಾಗಿ ಬಾರದವನ್ನು ಮುಖ್ಯ ಕೇಂದ್ರವಾಗಿಟ್ಟುಕೊಂಡು ಇಲ್ಲಿಂದ ಇತರ ಕಡೆಗೆ ಸಾಗಿಸುವ ಯೋಜನೆ ಸಿದ್ಧವಾಯಿತು. ಮಾಲನ್ನು ಒಂದೆಡೆ ಭದ್ರವಾಗಿಡುವಾಗ ಅದರ ಬೆಲೆ

ಕೊಟ್ಟಮೇಲೆ ಅವರಿಗೆ ಒಂದು ಟೋಕನ್ ಕೊಡಲಾಗುತ್ತಿತ್ತು. ಆ ಟೋಕನ್ ತೋರಿಸಿದ ವ್ಯಕ್ತಿಗೆ ಅಷ್ಟು ಬೆಲೆಯ ಮಾದಕಪದಾರ್ಥ ದೊರೆಯುತ್ತಿತ್ತು. ಈ ಯೋಜನೆಗೆ ದೇಶ ವಿದೇಶದ ಐವತು ಜನ ಸದಸ್ಯರಾದರು. ಈ ಟೋಕನ್ ಅಥವಾ ಸಂದೇಶ ಹೇಗೆ ಬರುತ್ತಿತ್ತು ಗೊತ್ತಿದೆಯಾ ?..

ಯಾರಿಂದಲೂ ಉತ್ತರ ಬರದಾಗಲು ಅವನೇ ಹೇಳಿದ.

''ಈ ಸಂದೇಶ ಈ ಟೋಕನ್ ಶಬನಮ್‌ಳ ಬ್ರಾದ ಮೂಲಕ ಬರುತ್ತಿತ್ತು.''

ಬೊಳ್ ಎಂದು ನಕ್ಕರು ಎಲ್ಲರೂ. ಹೇಮಂತ ಮುಂದುವರೆಸಿದ ''ಬ್ಲ್ಯಾಕ್‌ಬೆಲ್ ಅಂದರೆ ಕಪ್ಪುಗಂಟೆ ಬ್ರಾ ತಯಾರಿಸುವ ಮುನ್ನ ಅದರಲ್ಲಿ ಸಂದೇಶದ ಟೋಕನ್ ಇಟ್ಟು ಹೊಲಿಯುತ್ತಿದ್ದರು. ಶಬನಮ್ ವಿದೇಶದಲ್ಲಿ ಶೂಟಿಂಗ್ ಮುಗಿಸಿ ಬರುವಾಗ ಆಕೆಗೆ ಇವುಗಳನ್ನು ಕಡಿಮೆ ದರದಲ್ಲಿ ಮಾರಲಾಗುತ್ತಿತ್ತು. ಆಕೆ ಭಾರತಕ್ಕೆ ಬರುತ್ತಲೇ ಆ ಬ್ರಾಗಳನ್ನು ಕಳವು ಮಾಡಿ ಕ್ಲಬ್ಬಿಗೆ ಕಳಿಸಲಾಗುತ್ತಿತ್ತು. ಅಲ್ಲಿ ಬ್ರಾ ಹರಾಜು ಹಾಕಿದಾಗ ಎಷ್ಟು ಬೆಲೆಯ ಮಾದಕ ಪದಾರ್ಥ ಬೇಕೋ, ಅಷ್ಟು ಬೆಲೆ ಕೊಟ್ಟು ಬ್ರಾ ಕೊಳ್ಳುತ್ತಿದ್ದರು. ಅದರಲ್ಲಿಯ ಟೋಕನ್ ಮೂಲಕ ಮಾಲು ಪಡೆಯುತ್ತಿದ್ದರು.

ಇದಕ್ಕೆಲ್ಲ ಒಡೆಯ ಖ್ಯಾತ ನಿರ್ಮಾಪಕ ಶಾಂತೀಲಾಲರು ಬೇಕೆಂತಲೇ ಶಬನಮ್‌ಳನ್ನು ಚಿತ್ರದಲ್ಲಿ ತೆಗೆದುಕೊಂಡು ವಿದೇಶದಲ್ಲಿ ಶೂಟಿಂಗ್ ಇಡುತ್ತಿದ್ದರು. ಬರುವಾಗ ಈ ವ್ಯಾಪಾರ ನಡೆಸುತ್ತಿದ್ದರು. ಶಾಂತೀಲಾಲ್ ಒಬ್ಬರೇ ಆದರೂ ಅವರು ಎರಡು ವ್ಯಕ್ತಿತ್ವ ಪಡೆದಿದ್ದರು. ಒಂದೆಡೆ ನಿರ್ಮಾಪಕ ಇನ್ನೊಂದೆಡೆ ಕ್ಲಬ್ ಮಾಲಿಕ. ಇವರ ಕೀಪ್ ಹೆಸರು ''ಡಾಲಿ''..ಇವರಿಗೆ ಚಿತ್ರ ತೆಗೆಯಲು ಬೇಕಾದ ಅಪಾರಹಣ ಈ ಉದ್ಯಮದಿಂದಲೇ ದೊರೆಯುತ್ತಿತ್ತು.

ಶಾಂತೀಲಾಲರು ಸಾಕ್ಷಿಸಹಿತ ಸೆರೆಸಿಕ್ಕಿದ್ದಾರೆ. ಅವರು ಮತ್ತೆ ವಿದೇಶದಿಂದ ಬರುವಾಗ ಐವತ್ತು ಬ್ರಾ ಶಬನಮ್‌ಳಿಗೆ ತೋರಿಸಿದ್ದರು. ಅದನ್ನು ನಾನು ಮತ್ತೆ ಶಬನಮ್‌ಳ ಪತಿಯಿಂದ ಹಾರಿದೆ. ಆ ಜಾಗದಲ್ಲಿ ನಕಲಿ ಬ್ರಾ ಇಟ್ಟಾಗ ಅವರ ಮೋಸಜಾಲ ಬಯಲಾಯಿತು.

ಇದರೊಂದಿಗೆ ಶಾಂತೀಲಾಲರ ರಾತ್ರಿ ವ್ಯಾಪಾರದ ಬಗ್ಗೆ ಮಿನಿಮೂವಿ ಕೆಮರಾದಿಂದ ತೆಗೆದ ಮೂರು ರೀಲು ಚಿತ್ರ ಸಾಕ್ಷಿ ನೀಡುತ್ತದೆ. ಶಾಂತೀಲಾಲರನ್ನಲ್ಲದೇ ಅವರ ಉಳಿದ ಐವತ್ತು ಜನ ಏಜೆಂಟರನ್ನು ಕ್ಲಬ್ಬಿನ

ಸಿಬ್ಬಂದಿಯವರನ್ನು ಬಂಧಿಸಲಾಗಿದೆ. ಪೋಲೀಸ್ ಇಲಾಖೆ ಅವರ ಮೇಲೆ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳುವದು.

ಇಲ್ಲಿಗೆ 'ಕಪ್ಪುಗಂಟೆ'ಗೆ ಸಮ್ಮಂಧಿಸಿದ ಕೇಸು ಸಮಾಪ್ತಿಹೊಂದುತ್ತದೆ. ಅಪರಾಧಿಗಳು ತುರಂಗ ಸೇರುತ್ತಾರೆ. ಪತ್ರಿಕೆಗಳಲ್ಲಿ ವಿಷಯ ದೊಡ್ಡದಾಗಿ ಪ್ರಕಟವಾಗುತ್ತದೆ. ನನ್ನನ್ನು, ನನ್ನ ಸಂಗಡಿಗರ ಮುಕ್ತ ಪ್ರಶಂಶೆ ಎಲ್ಲೆಡೆಯಿಂದ ಹರಿಯ ಬರುತ್ತದೆ...ನನಗದರ ಬಗ್ಗೆ ಸಮಾಧಾನವಿಲ್ಲ... ಅದಕ್ಕೆ ಕಾರಣ... ಕೆಲದಿನ ಕಳೆದರೆ ಸಾಕು ದೇಶದ ಮತ್ತೊಂದು ಕಡೆ ಎಲ್ಲೋ ಒಂದೆಡೆ ಇದರಂಥ ಅಥವಾ ಇದಕ್ಕಿಂತ ಭಿನ್ನವಾದ ಒಂದು ಹೆಜ್ಜೆ ಮುಂದೆ ಹೋದ ಘಟನೆ ನಡೆಯುತ್ತವೆ. ಸಂಸ್ಕೃತಿ ಪರಂಪರೆಗೆ ಜಗತ್ತಿನಲ್ಲೇ ಮನೆಮಾತಾಗಿರುವ ಭಾರತ ಮತ್ತೆ ಹೆಜ್ಜೆಹೆಜ್ಜೆಗೆ ನಗ್ನವಾಗುತ್ತ ನಡೆಯುತ್ತದೆ. ಪೂಜನೀಯವಾದ ಭಾರತೀಯ ಸ್ತ್ರೀ ಕಾಮುಕರ ಮಾರುಕಟ್ಟೆಯಲ್ಲಿ ಚೆಲ್ಲಾಟದ ವಸ್ತುವಾಗಿ ನಿಲ್ಲುತ್ತಾಳೆ. ಮುಂದೆ ಬೆಳೆದು ತಮ್ಮ ಸಮರ್ಥ ಬಲಿಷ್ಠ ಬಾಹುಗಳಿಂದ ಭಾರತವನ್ನು ಕಟ್ಟುವ ಯುವ ಜನಾಂಗ ಮಾದಕದ್ರವ್ಯ ಸೇವಿಸಿ ಕಾಮುಕ ಸಾಮ್ರಾಜ್ಯದಲ್ಲಿ ಹೂವಿನಂತೆ ಹರಿದಾಡುತ್ತದೆ. ಹೀಗಾದರೆ ಹೇಗೆ ?.... ಭಾರತ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಬಗೆ ಯಾವದು? ಇದರ ಬಗ್ಗೆ ಗಂಭೀರವಾಗಿ ಆಲೋಚಿಸುವುದು ನಮ್ಮ ನಿಮ್ಮ ಹೊಣೆ ಮುಂದೆ...ಸರಕಾರಕ್ಕೆ ನಿಮ್ಮಂಥ ಬುದ್ಧಿವಂತರ, ಸಭ್ರಾಂತ ಜನಾಂಗದ, ದೇಶಪ್ರೇಮಿಗಳ ಸರಕಾರ ಮಾರ್ಗದರ್ಶನ ಅವಶ್ಯವಾಗಿದೆ... ಇದರೊಂದಿಗೆ ನಾವು ನೀವು . ಕೂಡಿ ಮಾಡಬೇಕಾದ ಮತ್ತೊಂದು ಮಹತ್ವದ ಕೆಲಸ ಹೊಂದಿದೆ...ಕಪ್ಪುಗಂಟೆಯಂಥ ಅಪಾಯಕಾರಿ ಕೃತ್ಯಗಳ ಬಗ್ಗೆ ಕಿಂಚಿತ್ ಸುಳಿವು ಸಿಕ್ಕರೂ ಅದನ್ನು ಸಮ್ಮಂಧಪಟ್ಟವರೆಗೆ ಪೋಲಿಸ್ ಇಲಾಖೆಗೆ ತಿಳಿಸಬೇಕಾದುದು ಪರಮಕರ್ತವ್ಯವಾಗಿದೆ.... ಇದೇ ನಾವೆಲ್ಲ ನೀಡುವ ಅತಿ ಹೆಚ್ಚಿನ ಸಹಕಾರ....

ಈ ಕೇಸಿನಲ್ಲಿ ನನಗೆ ಸಹಕರಿಸಿದವರಿಗೆಲ್ಲ ನಾನು ನನ್ನ ಸಹಕಾರಿಗಳ ಪರವಾಗಿ ಕೃತಜ್ಞತೆ ಅರ್ಪಿಸುತ್ತೇನೆ. ವಿಶೇಷವಾಗಿ ಶ್ಯಾಮಸುಂದರ, ಇನಸ್ಪೆಕ್ಟರ ಸಾವಂತರಂಥ ದಕ್ಷ ಪ್ರಾಮಾಣಿಕ ಅಧಿಕಾರಿಗಳ ಬಗ್ಗೆ ನನಗೆ ಹೆಮ್ಮೆ ಎನಿಸುತ್ತದೆ. ಪೋಲಿಸ್ ಇಲಾಖೆಗೆ ಇತ್ತೀಚೆಗೆ ತಗಲುತ್ತಿರುವ ಕಳಂಕ ಅಳಿಸಲು ಇಂಥ ಇಬ್ಬರು ಅಧಿಕಾರಿಗಳೇ ಸಾಕು... ಅವರಿಗೆ ನಮ್ಮೆಲ್ಲರ ಶುಭಹಾರೈಕೆಗಳು...ಜೈಹಿಂದ....

ಮೇಜರ ಕುಳಿತುಕೊಳ್ಳುತ್ತಿದ್ದಂತೆ ಚಪ್ಪಾಳೆಯಿಂದ ಹಾಲ್ ಪ್ರತಿಧ್ವನಿಸಿತು ಶ್ಯಾಮಸುಂದರ ಹಾಗೂ ಸಾವಂತ ಕಣ್ಣಿಗೆ ಹೇಮಂತ ದೇವಮಾನವನಾಗಿ ಕಂಡು

ತಾವು ನೀಡಿದ ಸಹಕಾರವನ್ನೇ ಆತ ದೊಡ್ಡದು ಮಾಡಿ ನುಡಿದ. ಪ್ರಶಂಸಿಸಿದ್ದ. ಹಾಗೆ ನೋಡಿದರೆ ತಮ್ಮ ಇಲಾಖೆ ಪರವಾಗಿ ನಾವು ಅಭಿನಂದಿಸಬೇಕಾಗಿತ್ತು...

ಎಂಥ ಮಾನವತೆ !

ಎಂಥ ಉದಾರ ಹೃದಯ !

ಅವನ ಸಂಗಡಿಗರೂ ಅಷ್ಟೇ.....

ಮಿಸ್ ಶಬನಮ್ ಎದ್ದು ಬಂದು ಎಲ್ಲರೆದುರು ಮೂರುಲಕ್ಷ ರೂಪಾಯಿ ಹೇಮಂತನಿಗೆ ಕಾಣಿಕೆ ನೀಡಿ ವಂದಿಸಿದಳು. ಮತ್ತೊಮ್ಮೆ ಚಪ್ಪಾಳೆ. ಆಕೆ ಹೊರಡುತ್ತಿದ್ದಂತೆ ಹೇಮಂತ ಅವಳನ್ನು ತಡೆದ

''ಮಿಸ್ ಶಬನಮ್... ಒಂದು ಅಧ್ಯಾಯ ಮುಗಿಯಿತು. ಇನ್ನೊಂದರ ಆರಂಭವಾಗಲಿದೆ... ಸ್ವಲ್ಪ ವಿಶ್ರಮಿಸಿಕೊಳ್ಳಿ.... ಈ ಕೇಸಿಗೆ ಸಮ್ಮಂದಿಸಿದ 'ಫ್ಲಾಷ್‌ಬ್ಯಾಕ್' ಕಥೆಯೊಂದನ್ನು ನಾನು ಹೇಳಲಿದ್ದೇನೆ....

ಮೊದಲು ಸ್ವಲ್ಪ ಚಹಾಪಾನವಾಗಲಿ... ನಂತರ....

ಸೋಲಾಪುರದ ಹತ್ತಿರ ಒಂದು ಊರಿದೆ. ಅದು ತಾಲೂಕಾ ಪ್ರದೇಶವೂ ಹೌದು. ಅಲ್ಲಿಯ ಕಡುಬಡತನ ಮನೆಯಲ್ಲೊಂದು ಸುಂದರ ಮಗುವಿನ ಜನ್ಮವಾಗಿತ್ತು. ''ರೇಣು'' ಅವಳ ಹೆಸರು. ರೇಣು ಬೆಳೆದಂತೆ ಕಾಮನ ಅರಗಿಣಿಯಾಗಿ ಬೆಳೆದಳು. ದೇವರು ಅವಳಿಗೆ ಎಂಥ ರೂಪನೀಡಿದ್ದನೆಂದರೆ ಅವಳ ಮುಂದೆ ರತಿಯೂ ನಾಚುತ್ತಿದ್ದಳು. ಆ ಸೌಂದರ್ಯದಲ್ಲಿ ಅತೀತ ಪ್ರತಿಭೆ ಇರದೇ ಉತ್ತೇಜಕಾರಿಯಾದ ಕಾಮ ವಿಜೃಂಭಿಸುತ್ತಿತ್ತು... ಬಡವನ ಮನೆಯಲ್ಲೊಂದು ಮಾಣಿಕ್ಯವೆಂದೇ ಆಕೆ ಹೆಸರುಗಳಿಸಿದಳು. ಅವರ ಜೊತೆ ಒಬ್ಬ ಅಣ್ಣ, ಅವಳಿಗಿಂತ ನಾಲ್ಕು ವರ್ಷ ದೊಡ್ಡವ. ತಂದೆತಾಯಿಗಳಿಗೆ ಈ ಎರಡು ಮಕ್ಕಳನ್ನು ಸಾಕಿಕೊಂಡು ತಮ್ಮ ಹೊಟ್ಟೆ ಹೊರೆದುಕೊಳ್ಳುವುದು ದುಸ್ತರವಾದಾಗ ಮಗ ಮೋಹನ ತಾನೂ ಕೂಲಿನಾಲಿ ಮಾಡಿ ಒಂದಿಷ್ಟು ಗಳಿಸಲಾರಂಭಿಸಿದ.

'ರೇಣು' ಹದಿನೆಂಟರ ಗಡಿಗೆ ಬಂದಾಗ ಊರಿಗೆ ಊರೇ ಅವಳ ಪ್ರಜ್ವಲಮಾನವಾದ ರೂಪದಿಂದ ಬೆಳಗಲಾರಂಭಿಸಿತು. ಎಸ್.ಎಸ್.ಎಲ್.ಸಿ. ಪಾಸಾದ ಆಕೆ ಮನೆಯಲ್ಲೇ ಕುಳಿತುಕೊಳ್ಳುವಂತಾಯಿತು... ಅದೇ ಸಮಯದಲ್ಲಿ ಮುಂಬಯಿಯಿಂದ 'ಚಲನಚಿತ್ರ' ತಂಡವೊಂದು ಆ ಊರಿಗೆ ಆಗಮಿಸಿತು.

ಅದರಲ್ಲಿ ಅಸಿಸ್ಟೆಂಟು ಡೈರಕ್ಟರ ಆಗಿದ್ದ ಶಿವರಂಜನನ ದೃಷ್ಟಿಗೆ ರೇಣು ಬಿದ್ದಳು. ಅವಳನ್ನು ಕಂಡು ಆತ ದಂಗಾಗಿ ಹೋದ. ಎಂಥ ರೂಪ! ಎಂಥ ಸೌಂದರ್ಯ.. ಈ ಹಾಳು ಕೊಂಪೆಯಲ್ಲಿ ಹಾಳಾಗಿ ಹೋಗುತ್ತಿದೆಯಲ್ಲ ಎಂದು ಕೊರಗಿದ. ಒಂದು ದಿನ ನೇರವಾಗಿ ಅವರ ಮನೆಗೇ ಬಂದು ತಂದೆತಾಯಿಗಳನ್ನು ಭೆಟ್ಟಿಯಾಗಿ 'ರೇಣು'ಳನ್ನು ಚಲನಚಿತ್ರರಂಗಕ್ಕೆ ಕಳಿಸಿಕೊಡುವಂತೆ ಒತ್ತಾಯಿಸಿದ. ಅವಳಿಂದ ನಿಮ್ಮೆಲ್ಲರ ದಾರಿದ್ರ್ಯ ನಿವಾರಣೆ ಯಾಗುವದು ಎಂದು ಆಸೆ ತೋರಿಸಿದ. ತಂದೆತಾಯಿಗಳ ಬಾಯಿಯಲ್ಲಿ ನೀರೂರಿತು. 'ಪಟ್' ಎಂದು ಸಾವಿರ ರೂಪಾಯಿ ಅವರ ಮುಂದಿಟ್ಟಾಗ ಬಾಯಿಯೇ ಬಂದಾಯಿತು. ಕೊನೆಗೆ ನಿರ್ಣಯ ತೆಗೆದುಕೊಂಡರು. ರೇಣುಳನ್ನು ಕರೆದುಕೊಂಡು ಮೋಹನ ಅವರ ಜೊತೆ ಮುಂಬಯಿಗೆ ಹೊರಡುವದೆಂದು....

ರೇಣು ಕನಸಿನ ಸಾಗರದೊಂದಿಗೆ ಸ್ವಪ್ನನಗರ ಮುಂಬಯಿಗೆ ಬಂದಳು. ಕನಸಿನಲ್ಲಿ ಕಂಡರಿಯದಂಥ ಬಿಲ್ಡಿಂಗು.. ಬಂಗಲೆ ಕಂಡು ಕಕ್ಕಾಬಿಕ್ಕಿ ಯಾಲು ತಾನು ಸಹ ಅಂತಹದೇ ಬಂಗಲೆಯಲ್ಲಿ ಉಳಿದಾಗಲಂತೂ ಹಸುಗೂಸಿನಂತೆ ಕುಪ್ಪಳಿಸಿ ಕುಣಿದಳು... ಎರಡು ಮೂರು ದಿನ ಐಷಾರಾಮಾಗಿ ಕಳೆದವು. ಅಂದು ಶಿವರಂಜನ ಅವರಿಬ್ಬರನ್ನೂ ತನ್ನ 'ಶೇಠನ' ಬಳಿಗೆ ಕರೆದೊಯ್ದ.. ಹೊಸದಾಗಿ ನಿರ್ಮಿಸಲಿರುವ ಚಿತ್ರಕ್ಕೆ ನಾಯಕಿಯಾಗಲು ಯೋಗ್ಯವೆಂದು ವಾದಿಸಿ ಅವನನ್ನು ಒಪ್ಪಿಸಿದ... ಶೇಠು ಒಪ್ಪಿಕೊಂಡ. ಐದು ಲಕ್ಷ ಸಂಭಾವನೆ ನಿರ್ಧಾರವಾಯಿತು.

ಐದುಲಕ್ಷ.. ಒಂದೇ ಬಾರಿ ಐದು ಲಕ್ಷ

ಅಣ್ಣ-ತಂಗಿ ಇಬ್ಬರೂ ದಿಕ್ಕೇ ತಪ್ಪಿದಂತಾಗಿತ್ತು.

ಅಂದು ಅಲ್ಲೇ ತಂಗಿದರು...

ರಾತ್ರಿ ಮೋಹನನಿಗೆ ಎಚ್ಚರವಾದಾಗ ತಂಗಿ ರೇಣು ಇರಲಿಲ್ಲ.. ಎಲ್ಲಿ ಹೋದಳು ಎಂದು ಹುಡುಕುತ್ತ ಮಹಡಿಗೆ ಬಂದ.. ಅಲ್ಲಿಯ ದೃಷ್ಯ ಕರುಳಲ್ಲಿ ಚೂರಿ ಆಡಿಸಿದಂತಾಯಿತು.. ರೇಣುಳನ್ನು ಮಂಚಕ್ಕೆ ಕಟ್ಟಿಹಾಕಿ ಶಿವರಂಜನ ಮತ್ತು ಶೇಠ ಇಬ್ಬರೂ ಅತ್ಯಾಚಾರ ನಡೆಸಿದ್ದರು. ಅವನಿಂದ ತಡೆಯಲಾಗಲಿಲ್ಲ.. ಒಳಗೆ ಹೋಗುವ ದಾರಿ ಹುಡುಕಿದ. ಯಾವ ಭಯವಿಲ್ಲವೆಂದು ನಿಶ್ಚಿಂತೆಯಿಂದ ಇಬ್ಬರೂ ಬಾಗಿಲು ಕೊಂಡಿ ಹಾಕಿರಲಿಲ್ಲ... ಒಳಗೆ ಬಂದ.. ದೃಷ್ಟಿ ಹಾರಿಸಿದ. ಭಾರಿಗಾತ್ರದ ಫ್ಲಾವರಪಾಟು ಕಣ್ಣಿಗೆ ಬಿತ್ತು... ಮೆಲ್ಲನೆ ಅವರ ಹಿಂದೆ ಬಂದು ಇಬ್ಬರ ತಲೆಯ

ಮೇಲೂ ಬಾರಿಸಿದ. ಇಬ್ಬರೂ ಅಲ್ಲೇ ಉರುಳಿದರು. ರೇಣುಕ ಕಾಲು ಬಿಚ್ಚಿ ಅವಳನ್ನು ಸಮಾಧಾನ ಪಡಿಸಿದ. ಬಟ್ಟೆ ತೊಡಿಸಿದ. ಕೆಲಹೊತ್ತು ಒಬ್ಬನೇ ಕುಳಿತು ಯೋಚಿಸಿದ. ಕೋಣೆ ಸುತ್ತಿದ. ಬೀರು ಕಣ್ಣಿಗೆ ಬಿತ್ತು ಬೀಗದ ಗೊಂಚಲು ಅದರ ಜೊತೆಯಲ್ಲೇ ಇತ್ತು. ತೆರೆದ ಅದರ ಮೂರು ನೋಟು ಕಂತುಗಳು ಬಿಚ್ಚಿದ. ವಜ್ರದ ಆಭರಣಗಳು ಕಾಗದಪತ್ರಗಳು.. ಅಲ್ಲೇ ಇದ್ದ ಸೂಟುಕೇಸು ಖಾಲಿಮಾಡಿ ಅದರಲ್ಲಿ ಎಷ್ಟು ಬೇಕೋ ಅಷ್ಟು ನೋಟಿನ ಕಂತು ಆಭರಣ ಕಾಗದ ಪತ್ರ ಹಾಕಿ ಮುಚ್ಚಿದ.. ಮತ್ತೆ ಯೋಚಿಸಿದ.. ಕೆಮರಾ ಕಣ್ಣಿಗೆ ಬಿತ್ತು ಬೆತ್ತಲೆಯಾಗಿ ಬಿದ್ದಿದ್ದ ಅವರಿಬ್ಬರ ಹತ್ತಾರು ಫೋಟೋ ತೆಗೆದ....

ಒಂದು ಯೋಜನೆ ಸಿದ್ಧವಾಯಿತು.

ಕಾಗದದ ಮೇಲೆ ಮನಸ್ಸಿಗೆ ಬಂದಂತೆ ಗೀಚಿದ.

''ನಮ್ಮ ಬಗ್ಗೆ ರಿಪೋರ್ಟ್ ಕೊಟ್ಟರೆ ನಿಮ್ಮ ನಗ್ನ ಫೋಟೋ ಹಾಗೂ ನಿಮ್ಮೆಲ್ಲ ಧಂಧೆ ಪತ್ರಿಕೆಗಳಿಗೆ ಕೊಡುತ್ತೇವೆ''

ಅಷ್ಟು ಬರೆದಿಟ್ಟು ತಂಗಿಯೊಂದಿಗೆ ಹೊರಬಂದವ ನೇರವಾಗಿ ಶೋಲಾಪುರಕ್ಕೆ ಬಂದ ಊರಿಗೆ ಹೋಗಲಿಲ್ಲ. ಅಲ್ಲಿದ್ದ ಸ್ನೇಹಿತರ ಸಹಾಯದಿಂದ ಎರಡು ತಿಂಗಳಲ್ಲಿ ಇಬ್ಬರೂ ವಿದೇಶಕ್ಕೆ ಹಾರಿದರು.. ಸಾಕಷ್ಟು ಹಣವಿತ್ತು. ಅಲ್ಲಿ ನೌಕರಿಯೂ ದೊರೆಯಿತು.. ತಂಗಿಗೆ ನೃತ್ಯದ ತರಬೇತಿ ಕೊಡಿಸಿದ. ಆಕೆ ಒಳ್ಳೆ 'ಡಾನ್ಸರ' ಎಂದು ಪ್ರಖ್ಯಾತಳಾದಳು... ಅವಳೂ ಸಹ ಹೇರಳವಾಗಿ ಸಂಪತ್ತು ಗಳಿಸಿದಳು.

ಪರದೇಶದ ಸಹವಾಸ ಸಾಕಾಗಿತ್ತು.

ಸೇಡು ಗರಿಗೆದರಿತ್ತು.

ಶಿವರಂಜನರನ್ನು ಹುಡುಕಿಕೊಂಡು ಮತ್ತೆ ಭಾರತಕ್ಕೆ ಬಂದರು....

ಈಗ ಶಿವರಂಜನ ದೊಡ್ಡ ನಿರ್ಮಾಪಕನಾಗಿದ್ದ.

ಅವನಿಗೆ ಇವರಿಬ್ಬರ ಪರಿಚಯ ದೊರೆಯಲಿಲ್ಲ.

ರೇಣು ಈಗ ಮತ್ತೊಂದು ಹೆಸರು ಪಡೆದು ತನ್ನ ರೂಪಜಾಲದಲ್ಲಿ ಅವನನ್ನು ಸೆಳೆದುಕೊಂಡಳು ಚಿತ್ರ ನಿರ್ಮಾಣದೊಂದಿಗೆ ಬ್ರೌನ್‌ಶುಗರ್, ವ್ಯಾಪಾರ ಆರಂಭವಾಯಿತು. ಎಲ್ಲಾ ಶಿವರಂಜನ್ ವಿದೇಶದಲ್ಲಿ ಅವಳ ಅಣ್ಣ ಈ ರಾಕೆಟ್

ನಡೆಸುತ್ತಿದ್ದ ಇಲ್ಲಿ ಶಿವರಂಜನ್.

ಇದರ ಹಿಂದೆ 'ರೇಣು'ಳ ಪ್ರಚಂಡ ಬುದ್ಧಿ ಕೆಲಸ ಮಾಡುತ್ತಿತ್ತು.

ಅವಳು ಒಂದು ಸದಾವಕಾಶಕ್ಕಾಗಿ ಕಾಯುತ್ತಿದ್ದಳು.

ಅದು ಅವಳಿಗೆ ದೊರೆಯಿತು...

ನಾನು ಡಾ|| ಉಪಾಧ್ಯಾಯರ ಮಗಳ ಮದುವೇಗೆ ಬಂದ ವಿಷಯ ನನ್ನನ್ನು ಭೆಟ್ಟಿಯಾಗಲು 'ನೆವ' ಬೇಕಾಗಿತ್ತು.... ಬ್ರಾದ ಕಳವು ನಡೆಯುತ್ತಿತ್ತು. ಅದರ ಶೋಧನಿಗೆ ನಿಯಮಿಸಿದಳು...

ಅವರ ಉದ್ದೇಶ. ಶಿವರಂಜನ ನಾಶ..

ಅವಳ ಸೇಡು... ಎರಡೂ ಇಂದು ನೆರವೇರಿತು.

ಒಂದು ಕ್ಷಣ ತಡೆದ ಹೇಮಂತ,

ನಾಟಕ ಈಗ ತಮಗೆಲ್ಲ ತಿಳಿರಬಹುದು. ರೇಣು ಯಾರು... ಶಿವರಂಜನ್ ಯಾರು ಅಂತ ?.....

ಯಾರೂ ಉತ್ತರಿಸಲಿಲ್ಲ... ಎಲ್ಲರ ದೃಷ್ಟಿ ಶಬನಮ್‌ಳತ್ತ ಹರಿಯಿತು. ಈಗವಳು ಎಲ್ಲರ ಕಣ್ಣಿಗೆ ಕಾಮದ ಗೊಂಬೆಯಾಗಿ ಕಾಣದೆ ಸುಂದರವಾದ ಮೂರ್ತಿಯಾಗಿ ಕಂಡಳು. ಪ್ರತಿಯೊಬ್ಬರ ಅನುಕಂಪ ಆಕೆ ಗಳಿಸಿದ್ದಳು.

''ಮಿಸ್ ಶಬನಮ್'' ನನ್ನನ್ನು ಕ್ಷಮಿಸು... ನೀನೂ ಅಪರಾಧಿನಿ.. ಹೀಗಾಗಿ ನಿನ್ನನ್ನು ಬಂಧಿಸಬೇಕಾಗುತ್ತದೆ.

ಶಬನಮ್ ತಲೆ ಎತ್ತಿ ಹೇಮಂತನತ್ತ ನೋಡಿದಳು.

ಅವಳ ಅಶ್ರುತುಂಬಿದ ಕಣ್ಣುಗಳಲ್ಲಿ ವಿಚಿತ್ರ ಬೆಳಕು ಮೂಡಿತ್ತು.

''ಮೇಜರ ತಮ್ಮೊಂದಿಗೆ ಸ್ವಲ್ಪ ಮಾತಾಡಬೇಕು''

ಹೇಮಂತ ಎದ್ದು ಬಂದ... ಗೋಡೆಗೆ ಇಬ್ಬರೂ ಆತು ನಿಂತರು.

''ಇದೆಲ್ಲ ನಿಮಗೆ ಹೇಗೆ ತಿಳಿಯಿತು ?''

''ನಿನ್ನಣ್ಣನಿಂದ ''

''ಅಂದರೆ ಅವನನ್ನೂ....''

''ಹೌದು''

''ಓಹ್ ದೇವರೆ....''

''ಕಳವಳಪಡಬೇಡ... ನಾನವನನ್ನು ಬಿಟ್ಟು ಬಿಟ್ಟಿರುವೆ. ಆತ ಈಗ ಸ್ವತಂತ್ರ''...

''ಹೌದೇ ?''

''ಹೌದು''

''ಹೇಮಂತ ನಿಜವಾಗಿಯೂ ನೀವು ಮಹಾ ಮಾನವತಾವಾದಿಗಳು''

ಹೇಮಂತ ಅವಳಿಂದ ದೂರಾಗಿ ಎಲ್ಲರ ಬಳಿ ಬಂದ

ಸಾವಂತ ಶಬನಮ್‌ಳತ್ತ ಹೆಜ್ಜೆ ಹಾಕಿದ.

''ಸಾಧ್ಯವಿಲ್ಲ... ನಾನೆಂದೂ ಬಂದಿ ಆಗಲಾರೆ... ನನಗೆ ಈ ಜೀವನ ಸಾಕಾಗಿದೆ'' ಶಬನಮ್ ಆಕ್ರೋಶದಿಂದ ನುಡಿದಳು.

ಅವಳ ಕೈಯಲ್ಲೊಂದು ಪುಟ್ಟ ರಿವಾಲ್ವರ್ ಕಾಣಿಸಿತು.

''ಮೇಜರ.. ದಯವಿಟ್ಟು ಕ್ಷಮಿಸಿ... ನನ್ನಾಶೆಗಳೆಲ್ಲ ಮುಗಿದಿವೆ. ಈ ಕೊಳಕು ಪಾಪಿ ದೇಹ ಹೊತ್ತು ಜೀವಿಸಲಾರೆ''....

''ಶಬನಮ್ ನಾನು ಹೇಳುವುದನ್ನು ಕೇಳು''

''ಕ್ಷಮಿಸಿ ಮೇಜರ... ಮುಂದಿನ ಜನ್ಮವೊಂದಿದ್ದರೆ.. ನಿಮ್ಮ ಮನೆಯಲ್ಲಿ ಸೇವಕಿಯಾಗಿ ಹುಟ್ಟಿ ಬರುವೆ...''

''ಢಂ.. ಢಂ'' ಎರಡು ಗುಂಡು

ಮೊದಲೆರಡು ಗುಂಡುಗಳು ಹಾರಿದವು.. ಶಾಂತಿಲಾಲ ಚೀರಿ ಧರೆಗುರುಳಿದ.

ಮತ್ತೊಂದು ಗುಂಡು ಅವಳ ತಲೆಯನ್ನ ಸೀಳಿತು....

ಅಲ್ಲಿಗೆ ಮುಗಿಯಿತು ಕಾಮದರಗಿಣಿಯ ದುರಂತಕಥೆ.

(18)

ಮರುದಿನ ನಾಗರಿಕ ಸನ್ಮಾನದೊಂದಿಗೆ ಹೇಮಂತ.. ಸುಷಮಾ.. ಹಾಗೂ

ಅಶೋಕರನ್ನು ಬೀಳ್ಕೊಡಲಾಯಿತು.. ಸರಕಾರದ ಪರವಾಗಿ ಐದು ಲಕ್ಷ ಬಹುಮಾನ ಬೇರೆ....

ಎರಡು ಮೂರು ದಿನಗಳ ನಂತರ ಪತ್ರಿಕೆಯಲ್ಲಿ ಮೇಜರ ಅನಾಥಾಶ್ರಮಕ್ಕೆ ಹತ್ತು ಲಕ್ಷ ನೀಡಿದ ಸುದ್ದಿ... ಹೇಮಂತ ಮತ್ತೆ ತನ್ನ ಮಹಾನತೆ ಮೆರೆದಿದ್ದ... ಎಷ್ಟೆಂದರೂ ಆತ ಭಾರತಮಾತೆಯ ಪ್ರಿಯ ಪಾತ್ರನಲ್ಲವೇ ?....

(ಮುಕ್ತಾಯ)

123

# ಮುಚ್ಚಿದ ಫೈಲು

## (1)

ಒಂದೇ ಬಾರಿ ರಿಂಗ್ ಆಗುತ್ತಲೇ ರಿಸೀವರ ಎತ್ತಿದ ಇನಸ್ಪೆಕ್ಟರ ಅರಿಹಂತ

''ಇನಸ್ಪೆಕ್ಟರ ಅರಿಹಂತ್''

''ಇನಸ್ಪೆಕ್ಟರ ನಿಮಗೊಂದು ಮೆಸೇಜ್ ಇದೆ.''

''ನಿಮ್ಮ ಹೆಸರು ?''

''ನಿಮಗೆ ಹೆಸರು ಮುಖ್ಯವೋ ಮೆಸೇಜ್ ಮುಖ್ಯವೋ ?''

''ಎರಡೂ ಮುಖ್ಯ''

''ಹಾಗಾದರೆ ನಾನು ರಿಸೀವರ ಕೆಳಗಿಡುತ್ತೇನೆ''

''ನೋ... ನೋ....''

''ಸರಿ ಹೇಳಿ''

''ಮೆಸೇಜ್ ಸಾಕು''

''ಗುಡ್.... ಇದಪ್ಪ ಮಾತು''

''ಆಂ ? ಏನೆಂದಿರಿ ?''

ತುಸು ಗೊಗ್ಗರು ಧ್ವನಿಯಲ್ಲಿ ಮಾತಾಡುತ್ತಿರುವ ವ್ಯಕ್ತಿಯ ಪರಿಚಯ ಸಿಕ್ಕಂತಾಗಿತ್ತು. ಅದನ್ನೆಲ್ಲೋ ಕೇಳಿದ ನೆನಪು. ಅದಕ್ಕಾಗೇ ತಟಕ್ನೆ ಕೇಳಿದ ಅರಿಹಂತ್.

''ಏನೂ ಇಲ್ಲ.... ಇನಸ್ಪೆಕ್ಟರ ನಿಮ್ಮ ಐಡಿಯಾ ನನಗರ್ಥವಾಗಿದೆ. ನನ್ನಿಂದ ಹೆಚ್ಚು ಹೆಚ್ಚು ಮಾತನಾಡಲು ಹಚ್ಚಿಸಿ ಧ್ವನಿಯ ಪರಿಚಯ ಹಿಡಿಯುವದರೊಂದಿಗೆ ನಾನೆಲ್ಲಿಂದ ಮಾತಾಡುತ್ತಿರುವೆ ಎಂದು ಶೋಧಿಸಲು ಮುಂದಾಗುತ್ತೀರಿ. ಇದು ನಿಮ್ಮ ತಂತ್ರ. ಅದಕ್ಕಾಗಿ ಸ್ಪೇಶಲ್ ತಂತ್ರ ಒಂದೆರಡು ಮಾತುಗಳಲ್ಲಿ ಹೇಳುತ್ತಿದ್ದೇನೆ''

''ಬೇಗ ಹೇಳಿ''

"ಇಂದೇ ರಾತ್ರಿ ಹನ್ನೆರಡರಿಂದ ಒಂದು ಗಂಟೆಯೊಳಗೆ ಮೂರು ಲಾರಿ ಬರುತ್ತವೆ. ಆ ಲಾರಿಗಳ ನಂಬರು ನನಗೂ ತಿಳಿಯದು....ಮೂರು ಲಾರಿಗಳ ಮೇಲೆ ಹಸಿರು ಬಣ್ಣದಿಂದ ನವಿಲನ್ನು ಚಿತ್ರಿಸಿರುತ್ತಾರೆ. ಇದೇ ಬಾಸ್ ಗುರುತು. ಆ ಲಾರಿಗಳನ್ನು ತಡೆಯಿರಿ"

"ಅವುಗಳಲ್ಲಿ ಏನಿದೆ ?"

"ರಾಜಧಾನಿಯ ಪ್ರಸಿದ್ಧ ರಾಜಕಾರಣಿಗೆ ಸೇರಿದ ಲಾರಿಗಳವು.... ಕಳ್ಳಮಾಲು ಸಾಗಿಸುತ್ತಿವೆ... ಸರಕಾರದ.... ಪೋಲೀಸರ ಮತ್ತು ಟ್ಯಾಕ್ಸ ವಿಭಾಗದವರ ಕಣ್ಣು ತಪ್ಪಿಸಿ"

"ಸರಿ"

"ಸರಿ ಅಂದರಾಗದು, ಮೊದಲು ಅವುಗಳನ್ನು ತಡೆದು ಸೀಜ್ ಮಾಡಿ ಸಾಕು..."

ಅರಿಹಂತ ಉತ್ತರಿಸುವ ಮೊದಲೇ ಆ ವ್ಯಕ್ತಿ ಸಮ್ಮಂಧ ಕಡಿದಿತ್ತು.

ರಿಸೀವರ ಕೆಳಗಿಳಿಸಿದ ಅರಿಹಂತ ಯೋಚನಾಮಗ್ನನಾದ.... ಇದೇನು ಅಷ್ಟು ದೊಡ್ಡ ಕೇಸಲ್ಲ, ಮಾಮೂಲಿ ಕೇಸು, ಕೇವಲ ರಾಜಕಾರಣಿಗಳಷ್ಟೇ ಅಲ್ಲ ಪ್ರತಿಷ್ಠಿತ ವ್ಯಕ್ತಿಗಳು, ಹಿರಿಯ ವ್ಯಾಪಾರಿಗಳೂ ಮಿಲ್ಲಿನ ಮಾಲಿಕರು 'ಟ್ಯಾಕ್ಸ' ಉಳಿಸುವ ದೃಷ್ಟಿಯಿಂದ ಕಳ್ಳತನದಲ್ಲಿ ಲೋಡ್ ಮಾಡಿದ ಲಾರಿಕಳಿಸುತ್ತಿರುವುದು ಸ್ವಾಭಾವಿಕವಾಗಿತ್ತು. ಅಂತಹದೇ ಈ ಕೇಸು ಆಗಿದ್ದರೆ ?...

ಐದು ಹತ್ತು ನಿಮಿಷ ಆಲೋಚನೆಯ ಕಡಲಲ್ಲಿ ಮುಳುಗಿದ ಅರಿಹಂತ. ಕೊನೆಗೊಂದು ನಿರ್ಧಾರಕ್ಕೆ ಬಂದ.... ಈ ಕೇಸು ಸಾಮಾನ್ಯವೆಂದೆನಿಸಿದರೂ ಇದರ ಹಿಂದೆ ಯಾವದೋ ಒಂದು ರಹಸ್ಯವಡಗಿದೆ. ಈ ಮೂರು ಲಾರಿಗಳ ಹಿಂದೆ ಬಿಡಲು ತನ್ನನ್ನೇ ಆಯ್ಕೆ ಮಾಡಬೇಕೆಂದರೆ ಖಂಡಿತವಾಗಿಯೂ ಏನೋ ಇದೆ..."

ಅದೇ ಏನೋ ಇದೆ ಎಂಬುದನ್ನು ಕೆದಕಿ ತೆಗೆಯಲು ಮುಂದಾದ ಅರಿಹಂತ....ಇನಸ್ಪೆಕ್ಟರ ಅರಿಹಂತ.... ಮುವ್ವತ್ತಾರು ವರ್ಷಗಳ ಹುರಿಕಟ್ಟಾದ ದೇಹದ ಅರಿಹಂತ ಗೋದಿಯ ಮೈಬಣ್ಣ ಹೊಂದಿದವನಾಗಿದ್ದ. ಹುರಿಮೀಸೆ ಅವನ ತುಸು ದೊಡ್ಡ ಗುಂಡುಗಿನ ಮುಖಕ್ಕೆ ಒಪ್ಪುತ್ತಿತ್ತು. ಹುರಿಮೀಸೆಯ ಕೆಳಗೆ ಬಿಗಿದ ತುಟಿಗಳು.... ತೋಪಿನ ಗೋಲಿಯಂತಿದ್ದ ಕಪ್ಪು ಕಣ್ಣುಗಳು.

ಒಟ್ಟಾರೆ ಒಂದೇ ಮಾತಿನಲ್ಲಿ ಹೇಳುವದಾದರೆ ಅರಿಹಂತ ಚಾಕಲೇಟ್ ಹಿರೋ ಆಗಿರಲಿಲ್ಲ... ಮುಟ್ಟಿದರೆ ಸಿಡಿಯುವ ಸಿಡಿ ಮದ್ದಾಗಿದ್ದ. ಪೋಲೀಸ್ ಇಲಾಖೆಗೆ ಹೇಳಿ ಮಾಡಿಸಿದಂಥ ಅಫೀಸರ್ ಆಗಿದ್ದ... ಹನ್ನೆರಡು ವರ್ಷಗಳ ತನ್ನ ಸೇವಾ ಅವಧಿಯಲ್ಲಿ ಎಂಥೆಂಥವರನ್ನೋ ಹಿಡಿದು ಅವರಿಗೆ ನೀರು ಕುಡಿಸಿದ್ದ. ನಾನೇ ಅನ್ನುವಂಥವರನ್ನು ಎಳೆತಂದು ಒದ್ದು ಲಾಕಪ್‌ಗೆ ಹಾಕಿದ್ದ. ಆತನಿದ್ದ ಠಾಣೆಯಿಂದಷ್ಟೇ ಅಲ್ಲ ಊರಿನಿಂದಲೇ ಅಪರಾಧಿಗಳು ಪಲಾಯನ ಮಾಡುತ್ತಿದ್ದರು. ಅವರು ಪುನಃ ಮರಳಿ ಬರುತ್ತಿದ್ದುದು ಆ ಠಾಣೆಯಿಂದ ಬೇರೆಡೆ ವರ್ಗವಾದಾಗಲೇ.... ಅವನಿಂದ ಅತ್ಯಂತ ಆತಂಕಿತಗೊಂಡವರೆಂದರೆ ಜೇಬುಗಳ್ಳರು. ಜೇಬುಕತ್ತರಿಸಿ ಹಣ ಲಪಟಾಯಿಸುವುದರೊಂದಿಗೆ ಆ ವ್ಯಕ್ತಿಯ ಜೀವನವನ್ನೇ ಕಾರ್ಗತ್ತಲೆಯಲ್ಲಿ ಮುಳುಗಿಸುತ್ತಿದ್ದರು. ಅನೇಕ ಆಶೆ-ಕನಸು ಹೊತ್ತ ಜೀವನದ ಅವರ ಎಲ್ಲಾ ಆಶಯಗಳನ್ನು ಮಣ್ಣುಗೂಡಿಸುತ್ತಿದ್ದರು. ಬಡವರು ಕಣ್ಣೀರಿನಲ್ಲೇ ಅನ್ನ ಕಲಸಿ ಉಣ್ಣುವಂತೆ ಮಾಡುತ್ತಿದ್ದರು. ಒಬ್ಬ ಶ್ರೀಮಂತ ಸಾವಿರಾರು ರೂಪಾಯಿ ಕಳೆದುಕೊಂಡರೆ ಅದರಿಂದೇನೂ ಪರಿಣಾಮವಾಗುತ್ತಿರಲಿಲ್ಲ. ಅದೇ ಒಬ್ಬ ಬಡವ ನೂರಾರು ರೂಪಾಯಿ ಕಳೆದುಕೊಂಡರೆ ಪಡುವ ಸಂಕಟ... ಕಷ್ಟ... ನೋವು ಇವೆಲ್ಲ ಕರಳುಕೊರೆಯುವಂತಹವು. ಇವನ್ನೆಲ್ಲ ಹತ್ತಿರದಿಂದ ಕಂಡಿದ್ದ ಅರಿಹಂತ ತನ್ನ ಠಾಣೆಯ ವ್ಯಾಪ್ತಿಯಲ್ಲಿ ಬರುವ ಜೇಬುಗಳ್ಳರನ್ನು ಹಿಡಿದು ಅವರ ಎರಡೂ ಕೈಗಳ ಬೆರಳು ಕಲ್ಲಿನಿಂದ ಜಜ್ಜಿ ಮುದ್ದೆ ಮುದ್ದೆ ಮಾಡುತ್ತಿದ್ದ.... ಜೀವನ ಪರ್ಯಂತ ಅವರು ಹೆಸರಿಗೆ ಮಾತ್ರ ಕೈಗಳನ್ನು ಪಡೆದು ಸಾಗುತ್ತಿದ್ದರು. ಅದರ ಉಪಯೋಗ ಮಾತ್ರ ಅವರಿಗೆ ತೆಗೆದುಕೊಳ್ಳಲು ಆಗುತ್ತಿರಲಿಲ್ಲ.

ಇದನ್ನೆಲ್ಲ ಅರಿತಿದ್ದ ಅಪರಾಧಿಗಳು ಅರಿಹಂತನ ಹೆಸರು ಕೇಳಿದರೆ ಓಡಿ ಹೋಗುತ್ತಿದ್ದರು. ಅವರನ್ನು ಕಂಡರೆ ಗಡಗಡನಡುಗಿ ಮೂರ್ಛೆ ತಪ್ಪಿ ಬೀಳುತ್ತಿದ್ದರು. ಆತ ಅಟ್ಟಹಾಸ ಮಾಡಿ ನಕ್ಕರೆ... ತೋಪಿನ ಗೋಲಿಗಳಂತಿದ್ದ ಕಣ್ಣುಗಳು ಧಕಧಕ ಕುಣಿಯುತ್ತಿದ್ದಂತೆ ಹುರಿಮೀಸೆ ವಿಚಿತ್ರರೀತಿಯಲ್ಲಿ ನರ್ತಿಸತೊಡಗುತ್ತಿದ್ದವು. ಅದರರ್ಥ ಯಾವದೋ ಭಯಾನಕ ಘಟನೆ ಘಟಿಸುತ್ತದೆ ಎಂದು ಅದು ಮುಂದೆ ಸತ್ಯವೂ ಆಗುತ್ತಿತ್ತು. ಟಕ್‌ನೆ ನಗು ನಿಲ್ಲಿಸಿದ ಆತ ಅಪರಾಧಿಗಳ ಮೇಲೆ ಮುಗಿ ಬೀಳುತ್ತಿದ್ದ. ಯಾರೋ ಕೈಕಾಲು ಕಳೆದುಕೊಂಡರೆ ಇನ್ನ್ಯಾರೋ ತಲೆಯೊಡೆದುಕೊಳ್ಳುತ್ತಿದ್ದರು. ಅಳ್ಳೆದೆಯವರು ಎದೆಯೊಡೆದುಕೊಂಡು

ನೆಲ ಕಚ್ಚುತ್ತಿದ್ದರು.

ಇಂಥ ವಿಶಿಷ್ಟ ವ್ಯಕ್ತಿತ್ವ ಹೊಂದಿದ ಇನಸ್ಪೆಕ್ಟರ ಹರಿವಂತನಿಗೆ ಮೊದಲೇ ಫೋನು ಮಾಡಿ ಪೂರ್ವ ಸೂಚನೆ ನೀಡಿ ಮೂರು ಲಾರಿಗಳ ಬಗ್ಗೆ ಸುಳಿವು ನೀಡಬೇಕೆಂದರೆ ಖಂಡಿತವಾಗಿಯೇ ಬೆನ್ನ ಹಿಂದೆ ಏನೋ ಇದೆ.

ಅರಿಹಂತ ಸಮಯ ನೋಡಿಕೊಂಡ. ಸಾಯಂಕಾಲ ಆರು ಗಂಟೆಗೆ ಸಮೀಪಿಸಿತ್ತು. ಆರ್.ಟಿ.ಓ ಆಫೀಸು ಆಗಲೇ ಬಂದಾಗಿರಬೇಕು. ಆದರೂ ಪ್ರಯತ್ನ ಮಾಡೋಣ ಎಂದುಕೊಂಡ. ಆತ ಲಾರಿಗಳ ನಂಬರೇ ತಿಳಿಯದಿದ್ದ ಮೇಲೆ ಅವರಿಂದ ಏನು ಮಾಹಿತಿ ಸಿಕ್ಕೀತು ಎಂದು ನೆನೆದುಕೊಂಡು ಮೇಲೆದ್ದ. ಒಂದರ್ಧಗಂಟೆ ಹಾಯಾಗಿ ಹೊರಗಡೆ ಸುತ್ತಾಡಿದರೆ ತಲೆಗೆ ಹಿಡಿದ ಜಿಡ್ಡು ಬಿಡುತ್ತದೆ, ಮುಂದೆ ಫ್ರೆಶ್ ಆಗಿ ಕೆಲಸ ಮುಂದುವರೆಸಬಹುದು ಎಂದು ಯೋಚಿಸಿ ಠಾಣೆಯಿಂದ ಹೊರಬಂದ. ಜೀಪನ್ನು ಅಲ್ಲಿಯೇ ಬಿಟ್ಟು ನಿಧಾನವಾಗಿ ನಡೆಯುತ್ತ ಆತ ಬೀದಿಗೆ ಬಂದ. ಆತ ಸಿವಿಲ್‌ಡ್ರೆಸ್ ಮೇಲೆ ಇದ್ದುದ್ದು ಅನುಕೂಲವಾಯಿತು. ಯಾರೂ ಆತನನ್ನು ಗುರುತಿಸಲಿಲ್ಲ.

ತುಸು ದೂರದಲ್ಲೇ ಇತ್ತು ಪಾರ್ಕ ಕ್ಯಾಂಟೀನ್... ಹೊರಗಡೆ ಬಣ್ಣಬಣ್ಣದ ಛತ್ರಿಗಳನ್ನು ನೆಡಿಸಿ ಕೆಳಗಡೆ ಟೇಬಲ್ಲು ಕುರ್ಚಿ ಇರಿಸಿದ್ದರು. ಮಂದವಾದ ಗಾಳಿ ಸಹ ಬೀಸುತ್ತಿದ್ದುದರಿಂದ ಹೊರಗಡೆಯೇ ಕೂಡ್ರಲು ನಿರ್ಧರಿಸಿದ ಅರಿಹಂತ. ಪರಿಚಯವಿದ್ದ ಒಂದಿಬ್ಬರು "ಸಲಾಂಸಾಬ್" ಎಂದಾಗ ಮೂಡ್ ಬದಲಾಯಿತು. ಪೋಲೀಸ್ ಡ್ರೆಸ್ ಬದಲು ಮಾಡಿದ ಮಾತ್ರಕ್ಕೆ ಮುಖ ಬದಲಾಗಲು ಸಾಧ್ಯವೇ ? ಅದರಲ್ಲೂ ಪೋಲೀಸ್ ಮುಖ ? ಪೋಲೀಸ್ ಶಬ್ಧ ಕಿವಿಗೆ ಬಿದ್ದ ಮಾತ್ರಕ್ಕೆ ಚಡ್ಡಿ ಒದ್ದೆಯಾಗುವ ಜನ ಹೇರಳವಾಗಿರುವಾಗ ಅರಿಹಂತನ ಪೋಲೀಸ್ ಅಧಿಕಾರಿಯ ಮೌನ ಪರಿಚಯ ಸಿಗಲಾರದೆ ?..... ಒಂದೆರಡು ಬಾರಿ ಠಾಣೆಯ ಮೆಟ್ಟಲು ಹತ್ತಿ ಎದಿಗೆ ಏಟು, ಬೂಟಿನ ಒದೆ ತಿಂದ ಸಣ್ಣಪುಟ್ಟ ಕಸಬುದಾರರು ಮೆತ್ತಗೆ ಜಾಗ ಖಾಲಿ ಮಾಡಿದರು. ಹೋಟೆಲ್ ಮಾಲಿಕ ಓಡಿಬಂದು ಆಂಜನೇಯನಂತೆ ಕೈಮುಗಿದು ಎದುರಿಗೆ ನಿಂತಾಗಲಂತೂ ತಾನೇಕೆ ಇಲ್ಲಿಗೆ ಬಂದೆ ಎಂದು ಪಶ್ಚಾತ್ತಾಪ ಪಡುವಂತಾಯಿತು. ಅವನಿಗೆ....ಪರಿಚಯವಿದ್ದವರಿಂದ ಗುಸುಗುಸು ಆರಂಭವಾಗಿ, ಪರಿಚಯವಿಲ್ಲದವರ ಮುಂದೆ ಬೊಗಳೆ ಕೊಚ್ಚಿಕೊಳ್ಳುವ ಸಲುವಾಗಿ ಅರೆ...ಇನಸ್ಪೆಕ್ಟರ ಅರಿಹಂತ ಎಂದು ಉದ್ಗರಿಸಿದ್ದು ಒಟ್ಟಾರೆ ಎಲ್ಲಾ ಸೇರಿ ಆತ ಎಲ್ಲರ ಪಾಲಿಗೆ ಒಂದು ಮೋಜಿನ ಬೊಂಬೆಯಾದ. ಹೆಣ್ಣುಮಕ್ಕಳೂ ಹುಡುಗಿಯರೂ

ಅವನತ್ತ ಆಕರ್ಷಿತರಾದಾಗ ಅವರ ಪತಿಮಹಾಶಯರು ಬಾಯ್‌ಫ್ರೆಂಡೂ ಕಸಿವಿಸಿ ಪಟ್ಟು ಕೈಕೈ ಹಿಸುಕಿಕೊಳ್ಳಬೇಕಾಯಿತು.

ಸ್ವಲ್ಪ ನೆಮ್ಮದಿಯಿಂದ ಕಳೆಯಬೇಕೆಂದು ಬಂದವನಿಗೆ ಶಿಕ್ಷೆಯಾದಂತಾಯಿತು. ಕಾಟಾಚಾರಕ್ಕೆ ಮೇಲಾಗಿ ಹೋಟೆಲ್ ಮಾಲಿಕನ ಒತ್ತಾಯಕ್ಕೆ ಆತ ತರಿಸಿದ್ದನ್ನು ತಿಂದು ಕೊಟ್ಟದ್ದನ್ನು ಕುಡಿದು, ಬಿಲ್ ಕೊಡಲಿಕ್ಕಾಗದೇ.... ಹೆಜ್ಜೆಗೊಂದರಂತೆ ಅವನಿಂದ ಸೆಲ್ಯೂಟ್ ಪಡೆದು ಹೊರಗೋಡಿ ಬಂದಾಗ ಒಂದು ದೃಢನಿರ್ಧಾರಕ್ಕೆ ಬಂದಿದ್ದ.

ಇನ್ನೆಂದೂ ಹೊರಗಿರುವ ಹೋಟೆಲ್‌ಗೆ ಕಾಫಿ ಕುಡಿಯಲು ಹೋಗಬಾರದು. ಏನೇಬೇಕಾದರೂ ಠಾಣೆಗೇ ತರಿಸಿಬೇಕು....ಎಂದುಕೊಂಡ. ಆತ ಅರ್ಧಗಂಟೆಯೊಳಗಾಗಿ ವಾಪಾಸಾಗುತ್ತಲೂ ಹಾಯಾಗಿ ಕಾಲ ಕಳೆಯುತ್ತಿದ್ದ ಸಿಬ್ಬಂದಿಗೆ ಆಘಾತವಾದಂತಾಯಿತು. ಮತ್ತವರು ಜಾಗೃತರಾಗಬೇಕಾಯಿತು.... ಒಳಗಿನ ಕೋಣೆಗೆ ಬಂದ ಅರಿಹಂತ ಕುರ್ಚಿಗೆ ತಲೆಯಾನಿಸಿ ಅಪರಿಚಿತನ ಫೋನಿನ ಬಗ್ಗೆ ಯೋಚಿಸತೊಡಗಿದ. ಅದನ್ನು ನಂಬಬೇಕೋಬೇಡವೋ...ಯಾರಾದರೂ ತಮಾಶೆ ಮಾಡಿದ್ದರೆ ?....

ತನಗೆ ಮೋಸ ಮಾಡಿದರೂ ಪರವಾಗಿಲ್ಲ... ಸುಳ್ಳು ಮೆಸೇಜ್ ನೀಡಿದ್ದರೂ ಪರವಾಗಿಲ್ಲ. ರಾತ್ರಿ ಕಾವಲು ಕಾಯುವುದೆ ಸೂಕ್ತ ಎಂದು ನಿರ್ಧಾರಕ್ಕೆ ಬಂದಾಗ ಮನಸ್ಸಿಗೆ ಒಂದು ಬಗೆಯ ಸಮಾಧಾನವಾಯಿತು.... ತನ್ನ ಕಚೇರಿಯೊಳಗೆ ಬಂದು ಕುಳಿತ. ಆತ ಸಟಸಟನೆ ನಿರ್ದೇಶನ ನೀಡತೊಡಗಿದ. ಪಿ.ಎಸ್.ಐ. ಜಾಧವನನ್ನು ಕರಿಯಿರಿ, ಸೂಚನೆ ನೀಡಿ ಎಂಟು ಎಂಟು ಜನರ ಎರಡು ಗ್ರುಪ್ ರೆಡಿಮಾಡಲು ಹೇಳಿದ. ಒಂದು ಗ್ರುಪ್ ನೀವು ನೋಡಿಕೊಳ್ಳಿ... ಇನ್ನೊಂದನ್ನು ಪಿ.ಎಸ್.ಐ. ಚಂದ್ರು ನೋಡಿಕೊಳ್ಳಲಿ... ಇಬ್ಬರೂ ನನ್ನ ಆದೇಶಕ್ಕಾಗಿ ಕಾಯಿರಿ ಎಂದು ಎಚ್ಚರಿಕೆ ನೀಡಿ ಮನೆಗೆ ಹೋಗಿ ಊಟ ಮುಗಿಸಿ ಹನ್ನೊಂದು ಗಂಟೆಗೆ ಎಲ್ಲರಿಗೂ ಸರಿಯಾಗಿ ಬರುವಂತೆ ನೆನಪಿಸಿ ತಾನೂ ಮೇಲೆದ್ದ.

ಮನೆಗೆ ಹೋಗಲು ಬೇಜಾರು.

ಹೆಂಡತಿ ಲಾವಣ್ಯ ಮಗು ಸಮರ್ಥನೊಂದಿಗೆ ತವರಿಗೆ ಹೋಗಿದ್ದಳು. ಮನೆ ಮನ ಎರಡೂ ಬಿಕೋ ಅನ್ನುತ್ತಿದ್ದವು. ಹೊರಗೆ ಹೋಗಿ ಬೇರೆ ಕಡೆ ಊಟ ಮಾಡಿಕೊಂಡು ಬರಲು ಭಯ.... ಸಾಯಂಕಾಲದಂತಾದರೆ ಊಟ ಮಾಡಲೂ

ಮನಸ್ಸು ಬಾರದು, ಅದಕ್ಕೆಂದೇ ಮನೆಗೆ ಹೋಗಲು ತೀರ್ಮಾನಿಸಿದ. ಹೇಗಿದ್ದರೂ ಅಡುಗೆಯಾಕೆ ಊಟದ ತಟ್ಟೆ ತಂದಿಟ್ಟಿರುತ್ತಾಳೆ. ಅದನ್ನೇಕೆ ವೇಸ್ಟ್ ಮಾಡಬೇಕು !.... ಸರಿ .... ಮನೆಗೇ ಹೋದರಾಯಿತೆಂದುಕೊಂಡು ಜೀಪನ್ನು ಹೊರಳಿಸಿದ...

ಅವನೆಣಿಕೆಯಂತೆ ಊಟದ ತಟ್ಟೆ ಅವನ ದಾರಿ ಕಾಯುತ್ತಿತ್ತು. ಕೈಕಾಲು ಮುಖ ತೊಳೆದುಕೊಂಡು ಫ್ರೆಶ್ ಆಗಿ ಬಂದು ಊಟದ ತಟ್ಟೆಗೆ ಕೈಹಚ್ಚಿದ. ಅರ್ಧ ಗಂಟೆಯಲ್ಲಿ ಊಟ ಮುಗಿದು ಹಾಸಿಗೆ ಮೇಲೆ ಉರುಳಿದ.

ರಾತ್ರಿ ಹನ್ನೊಂದು ಗಂಟೆಯಾಗುತ್ತಿದ್ದಂತೆ ಅರಿಹಂತನ ಜೀಪು ಠಾಣೆಯೆದುರು ಬಂದು ನಿಂತಿತು. ಜಾಧವ ಆಗಲೇ ಎಲ್ಲಾ ವ್ಯವಸ್ಥೆ ಮಾಡಿದ್ದ... ಹತ್ತತ್ತರಂತೆ ಎರಡು ಗುಂಪುಗಳಾಗಿ ಕಾನಸ್ಟೇಬಲ್ ನಿಂತಿದ್ದರು. ಎಲ್ಲರಿಗೂ ಅರಿಹಂತನ ನಿರೀಕ್ಷೆಯಿತ್ತು. ಒಂದು ಬಾರಿ ಎಲ್ಲಾ ಸೂಕ್ಷ್ಮವಾಗಿ ಪರಿಶೀಲಿಸಿದ ಅರಿಹಂತ. ಅವರೆಲ್ಲರಿಗೆ ನಿರ್ದೇಶನ ಕೊಡತೊಡಗಿದ. ಚೆಕ್ಕಿಂಗ ನಾಕಾದಿಂದ ಎರಡೂ ಕಡೆಗೆ ಒಂದೊಂದು ಗುಂಪು ನಿಲ್ಲಲು ಆದೇಶ ನೀಡಿದ, ಮೇಸೇಜ್ ನೀಡಿದ ಅಪರಿಚಿತ ವ್ಯಕ್ತಿ ಮೂರು ಲಾರಿಗಳ ಬಗ್ಗೆ ಹೇಳಿದ್ದ... ಅವು ಯಾವ ಕಡೆಯಿಂದ ಬಂದು ಯಾವ ಕಡೆ ಸಾಗುತ್ತವೆ ಎಂದು ತಿಳಿಸಿರಲಿಲ್ಲ. ಹೀಗಾಗಿ ಎರಡೂ ಕಡೆ ಪೋಲೀಸ್ ಪಡೆ ನಿಲ್ಲಿಸುವ ಅವಶ್ಯಕತೆಯಿತ್ತು.... ನಾಕಾದ ಬಳಿ ಮಾರುವೇಷದಲ್ಲಿ ನಿಂತು ಪ್ರತಿವಾಹನ ನಿರೀಕ್ಷಿಸುವ ಜವಾಬ್ದಾರಿಯನ್ನು ಜಾಧವ ಒಬ್ಬ ಅನುಭವಿ ಕಾನಸ್ಟೇಬಲ್‌ಗೆ ನೀಡಿದ್ದ... ಬಸವಂತ ಐವತ್ತು ಐವತ್ತೆರಡು ವರ್ಷಗಳನ್ನು ದಾಟಿದವ. ಇಪ್ಪತ್ತೈದು ವರ್ಷಕ್ಕಿಂತ ಹೆಚ್ಚು ಅನುಭವ ಪಡೆದಿದ್ದ... ಹಸಿರು ನವಿಲಿನ ಗುರುತಿದ್ದ ಲಾರಿ ಬರುತ್ತಲೇ ಆತ ಗುಪ್ತ ಸೂಚನೆ ನೀಡಬೇಕಾಗಿತ್ತು. ಅವನ ಸೂಚನೆಯ ಮೇಲೆ ಉಳಿದ ಪೋಲೀಸ್ ಪಡೆಯ ಕಾರ್ಯ ನಿರ್ಧರಿತವಾಗಿತ್ತು... ಬಸವಂತ್ ಪೂರ್ವ ತಯಾರಿಯಲ್ಲಿಯೇ ಬಂದಿದ್ದ. ಸೇಂಗಾ ಕಡಲೆ ಮಾರು-ವೇಷದಲ್ಲಿ... ದೂಡುವ ಗಾಡಿ, ಗಾಡಿ ಮೇಲೆ ಒಂದು ಎಲೆ... ಕಡಾಯಿ ಹುರಿದು ಸಿದ್ಧವಾದ ಸೇಂಗಾಕಡಲೆ... ಅವನ ಬೆನ್ನು ಚಪ್ಪರಿಸಿ ಪ್ರೋತ್ಸಾಹಿಸಿದ ಅರಿಹಂತ ಹೊರಡಲು ಆಜ್ಞಾಪಿಸಿದ... ಹನ್ನೊಂದುವರೆಗೆ ಎಲ್ಲರೂ ತಮ್ಮ ತಮ್ಮ ಸ್ಥಾನಗಳನ್ನು ಆಕ್ರಮಿಸಿದ್ದರು. ಬಸವಂತನ ಮೇಲೆಯೇ ದೃಷ್ಟಿ ನೆಟ್ಟು ಮರದ ಮರೆಯಲ್ಲಿ ಅರಿಹಂತ ನಿಂತಿದ್ದ. ಹಿಂದುಗಡೆ ಹತ್ತಾರು ಹೆಜ್ಜೆಯಲ್ಲಿ ಜೀಪು ನಿಂತಿತ್ತು.

ಸಮಯ ಸರಿಯತೊಡಗಿತು... ಚಳಿ ಹೆಚ್ಚಾಗತೊಡಗಿತು. ಈ ಮಧ್ಯೆ ನೂರಾರು ವಾಹನಗಳು ಬರುತ್ತಿದ್ದವು ಹೋಗುತ್ತಿದ್ದವು. ಬಸವಂತ ಸಿಗ್ನಲ್

ಕೊಡಲಿಲ್ಲ... ಎಲ್ಲರೂ ಅವನತ್ತಲೇ ಕಣ್ಣು ನೆಟ್ಟಿದ್ದರು. ಒಂದೂವರೆ ಗಂಟೆ. ಅಪರಿಚಿತ ನೀಡಿದ ಸೂಚನೆ ಮೇರೆಗೆ ಬರಬೇಕಾಗಿದ್ದ ಲಾರಿಗಳು ಬರಲಿಲ್ಲ. ಎರಡು ಗಂಟೆ ವರೆಗೆ ದಾರಿ ಕಾಯ್ದು ಮುಂದೆ ಜಾಗ ಖಾಲಿಮಾಡಿದರಾಯಿವೆಂದು ನಿರ್ಧರಿಸಿದ ಅರಿಹಂತ..

ಮತ್ತೆ ಹತ್ತು ಹದಿನೈದು ನಿಮಿಷಗಳು ಕಳೆದವು.

ಶಹರದ ಕಡೆಯಿಂದ ಒಂದೇ ಬಾರಿ ಮೂರು ವಾಹನಗಳು ಬರುತ್ತಿರುವದು 'ಕಾಣಿಸಿತು. ಆರು ಜೊತೆ ದೀಪಗಳು ಪ್ರಕಾಶಮಾನವಾಗಿ ಬೆಳಗುತ್ತಿದ್ದವು. ಅರಿಹಂತ ಅಲರ್ಟ ಆದ... ಎಲ್ಲರಿಗೂ ಎಚ್ಚರಿಕೆ ನೀಡಿದ. ಕೈಲಿದ್ದ ಬ್ಯಾಟರಿ ಮೂಲಕ. ನಿಧಾನವಾಗಿ ಬಂದ ಮೂರು ಲಾರಿಗಳೂ ನಾಕಾದ ಹತ್ತಿರ ಬರುತ್ತಲೇ ವಿಚಿತ್ರ ರೀತಿಯಲ್ಲಿ ಹಾರ್ನ ಬಾರಿಸಿದವು. ಆ ಶಬ್ದ ಕೇಳುತ್ತಲೇ ನಾಕಾದೊಳಗಿನಿಂದ ಇಬ್ಬರು ಹೊರಗೋಡಿ ಅಡ್ಡಗೇಟನ್ನು ಸರಿಸುತ್ತಿದ್ದಂತೆ ಒಂದರ ಹಿಂದೆ ಒಂದರಂತೆ ಲಾರಿ ಮುಂದೆ ಬಂದವು. ಬಸವಂತ ತಡಮಾಡಲಿಲ್ಲ. ಹಸಿರು ನವಿಲು ಕಣ್ಣಿಗೆ ಬೀಳುತ್ತಿದ್ದಂತೆ ಕಡಾಯಿ ಮೇಲೆ ನಾಲ್ಕು ಬಾರಿ ಬಾರಿಸಿ' ಗರಮ್ ಸೇಂಗಾ-ಗರಮ್ ಎಂದು ಕೂಗಿದ. ಮುತ್ತಿಗೆ ಹಾಕುವಂತೆ ಬ್ಯಾಟರಿ ಬೆಳಕಿನ ಮೂಲಕ ಆದೇಶನೀಡಿದ. ಅರಿಹಂತ ಕೈಲಿದ್ದ ರಿವಾಲ್ವರ ಭದ್ರಪಡಿಸುತ್ತ ಲಾರಿಗಳತ್ತ ಧಾವಿಸಿದ.

ಮುಂದಿದ್ದ ಲಾರಿಯಿಂದ ಚಿಕ್ಕ ಪೊಟ್ಟಣವೊಂದು ಹಾರಿ ಬಂದಿತು. ಅದನ್ನು ಕುಶಲ ಕ್ರಿಕೆಟ್ ಆಟಗಾರರಂತೆ ಹಿಡಿದ ನಾಕಾ ಕೆಲಸಗಾರ ಒಳನಡೆದ. ಅವನ ಹಿಂದೆ ಕಾವಲುಗಾರ... ಬಸವಂತ ಮುಂದೆ ಬಂದ. ನೋಡನೋಡುತ್ತಿದ್ದಂತೆ ತನ್ನ ಮೂಡುವ ಗಾಡಿಯನ್ನು ಮುಂದಿನ ಲಾರಿಗೆ ಅಡ್ಡತಂದು ನಿಲ್ಲಿಸಿದ. ಲಾರಿ ಡ್ರೈವರನೆ ಸಂಶಯ ಬಂದು ವೇಗ ಹೆಚ್ಚಿಸಿದ.. ಅದರೊಳಗಿನ ಹಾರ್ನ ಬಾರಿಸಿ ಹಿಂದಿದ್ದವನಿಗೆ ಇದರ ಬಗ್ಗೆ ಮೇಸೇಜ್ ಪಾಸ್ ಮಾಡಿದ. ಮೂರೂ ಲಾರಿಗಳ ವೇಗ ಒಮ್ಮಿಂದೊಮ್ಮೆಲೇ ಎರಡು ಪಟ್ಟು ಹೆಚ್ಚಿತು... ಪೋಲೀಸ್ ಪಡೆ ಗಾಬರಿಯಾಯಿತು. ಅರಿಹಂತ ಜೋರಾಗಿ ಕೂಗಿದ.. 'ಅಟ್ಯಾಕ್.. ರೈಟ್.. ಅಟ್ಯಾಕ್ ಜಾಧವ ರಿವಾಲ್ವರದೊಂದಿಗೆ ಧಾವಿಸಿದ. ಅವರು ರೋಡಿಗೆ ಬರುವುದಕ್ಕೆ ಮೊದಲೇ ಅವರ ಎದುರು ಹಾಯ್ದುಹೋದವು. ಮೂರೂ ಲಾರಿಗಳು ಪೋಲೀಸ್ ಪಡೆಗೆ ಅದನ್ನು ತಡೆಯುವ ಪ್ರಮೇಯವೇ ಬರಲಿಲ್ಲ.

"ಜಾಧವ್.. ಶೂಟ್.. ಶೂಟ್" ಅರಿಹಂತ ಕೂಗಿ ಆದೇಶ ನೀಡಿದ.

ಅದರೊಂದಿಗೆ ತನ್ನ ರಿವಾಲ್ವರ ಗುಂಡಹಾರಿಸಿದ. 'ಢಂ.. ಢಂ..'' ... ಇಬ್ಬರ ರಿವಾಲ್ವರಗಳಿಂದ ಹತ್ತಾರುಗುಂಡುಗಳು ಸಿಡಿದವು. ಮೂರು ಲಾರಿಗಳಲ್ಲಿ ಎರಡು ಲಾರಿ ಸೆರೆ ಕುಡಿದವರಂತೆ ಹೊಯ್ದಾಡಿ ರಸ್ತೆ ಪಕ್ಕದಲ್ಲಿರುವ ಮರಕ್ಕೆ ಢೀ ಕೊಟ್ಟು ಅಲ್ಲೇ ನಿಂತುಕೊಂಡವು. ಮುಂದಿದ್ದ ಲಾರಿ ಮಾತ್ರ ತನ್ನ ವೇಗ ಇನ್ನೂ ಹೆಚ್ಚಿಸಿತು. ಮರಕ್ಕೆ ಢೀಕೊಟ್ಟ ಎರಡೂ ಲಾರಿ ತಮ್ಮ ವಶಕ್ಕೆ ತೆಗೆದುಕೊಳ್ಳುವಂತೆ ಆಜ್ಞಾಪಿಸಿದ ಅರಿಹಂತ. ಜೀಪ ಕಡೆ ಓಡಿದ... ಮುಂದೆ ಓಡಿದ್ದ ಲಾರಿ ಬೆಂಬತ್ತಲು.

ಹತ್ತು ಹದಿನೈದು ನಿಮಿಷಗಳ ಕಣ್ಣುಮುಚ್ಚಾಲೆ ಆಟದ ನಂತರ ಮುಂದೆ ಇದ್ದ ಲಾರಿ ಅರಿಹಂತನ ಕೈಗೆ ಎಟಕುವಂತಾಯಿತು. ಮುಂದೇನು ? ಸರ್ವಿಸ್ ರಿವಾಲ್ವರದಿಂದ ಸಿಡಿದ ಗುಂಡು ಡ್ರೈವರನ ಬುಜ ಸವರಿಕೊಂಡು ಹೋಗುತ್ತಿದ್ದಂತೆ ವಿಕಾರಕಂಠದಲ್ಲಾತ ಚೀರಿಕೊಂಡ ಅರಿಹಂತ ತನ್ನ ಜೀಪಿನ ಬ್ರೆಕ್ ಬಲವಾಗಿ ತುಳಿದ. ಲಾರಿ ಮತ್ತು ಜೀಪು ಎರಡೂ ಸಮಾನಾಂತರದಲ್ಲಿ ಓಡುತ್ತಿದ್ದು ಈಗ ಲಾರಿ ಒಂದೇ ವೇಗದಿಂದ ಮುನ್ನುಗ್ಗಿ ಅತ್ತಿತ್ತ ಓಲಾಡಿ ಒಂದೆಡೆ ರಸ್ತೆ ಬಿಟ್ಟು ಚಿಕ್ಕ ಪೂಲನ್ನು ಒಡೆದುಕೊಂಡು ತೊರೆಗೆ ನುಗ್ಗಿತು. ಸಾವಧಾನವಾಗಿ ಜೀಪನ್ನು ತಂದು ಪೂಲಿನ ಪಕ್ಕದಲ್ಲಿ ನಿಲ್ಲಿಸಿದ ಅರಿಹಂತ. ಎರಡು ಮೂರು ನಿಮಿಷದಲ್ಲಿ ಹಿಂದಿನಿಂದ ಪೋಲೀಸ್ ಗಾಡಿಯಲ್ಲಿ ಬಂದ ಸಿಬ್ಬಂದಿ ಸುತ್ತಲೂ ಹರಡಿಕೊಂಡಿತು.

(2)

ಬೆಳಗಾಯಿತು....

ಎಲ್ಲೆಡೆ ಒಂದೇ ಸುದ್ದಿ... ಮೂರೂ ಲಾರಿಗಳದು... ಮೂರೂ ಲಾರಿಗಳ ಡ್ರೈವರ ಗಾಯಹೊಂದಿ ಬದುಕಿ ಉಳಿದಿದ್ದರು. ಪ್ರತಿ ಲಾರಿಗಳಲ್ಲಿ ಕಳ್ಳತನ ಸರಕು ಒಂದರಲ್ಲಿ ಸಕ್ಕರೆ ಇನ್ನೊಂದರಲ್ಲಿ ಕಡಲೆಕಾಯಿ ಎಣ್ಣೆ ಇನ್ನೊಂದರಲ್ಲಿ ಗಂಧದ ಮರದ ತುಂಡುಗಳು ರಾಜಧಾನಿಯಿಂದ ಹೊರಟ ಮೂರೂ ಲಾರಿಗಳು. ಕನಿಷ್ಠ ಹದಿನಾಲ್ಕು ಚೆಕಿಂಗ್ ನಾಕಾಗಳ ಮುಂದೆ ಹಾಯ್ದು ಬಂದಿದ್ದವು. ಒಂದು ಕಡೆಯೂ ಅವುಗಳ ಎಂಟ್ರಿಯಿರಲಿಲ್ಲ. ಕರಕಟ್ಟಿ ಪಾವತಿ ಪಡೆದಿರಲಿಲ್ಲ.... ಎಲ್ಲೆಡೆ ಹಾಯ್ದು ಬಂದರೂ ಆ ಮೂರೂ ಲಾರಿಗಳನ್ನು ಯಾರೂ ತಡೆದಿರಲಿಲ್ಲ.

ವ್ಯವಸ್ಥಿತವಾಗಿ ನಡೆದುಕೊಂಡು ಬಂದ ಈ ಕಳ್ಳ ವ್ಯವಹಾರವನ್ನು ಸಕಲರೂ ಶಾಮೀಲಾದ್ದರಿಂದ ವಿಚಾರಣೆ ನಡೆಸಬೇಕೆಂದು ಅರಿಹಂತ ಕೇಳಿಕೊಂಡಿದ್ದ. ಗಾಯಹೊಂದಿದ ಲಾರಿ ಚಾಲಕರು ಪ್ರತಿಯೊಂದು ಕಡೆ ತಾವು ದುಡ್ಡು ನೀಡುತ್ತ

ಬಂದಿದ್ದು ಯಾರೂ ತಮ್ಮನ್ನು ತಡೆದಿಲ್ಲೆಂದು ತಿಳಿಸಿದಾಗಲಂತೂ ಅರಿಹಂತ ಬೆರಳುಕಚ್ಚಿಕೊಂಡ... ಒಂದು ಚೆಕಿಂಗ ನಾಕಾದಲ್ಲಂತೂ ತನ್ನ ಕಣ್ಣೆದುರೇ ನಡೆದ ಅವ್ಯವಹಾರ ಕಂಡು ದಂಗಾಗಿದ್ದ. ನಾಕಾದಲ್ಲಿದ್ದ ಇಬ್ಬರನ್ನು ತನ್ನ ವಶಕ್ಕೆ ತೆಗೆದುಕೊಂಡಾಗ ಆತ ಡ್ರೈವರನಿಂದ ಬಂದಿದ್ದ ಚಿಕ್ಕ ಪುಡಿಕೆಯನ್ನೇ ಅವನ ಮುಂದಿರಿಸಿದ. ನೂರರ ನೋಟುಗಳು ಒಂದು ಲಾರಿಗೆ ನೂರರಂತೆ ಸರಿಯಾದ ನ್ಯಾಯ. ಅದರ ನಂತರ ನಾಕಾದ ಅಧಿಕಾರಿಯಿಂದ ತಿಳಿದ ಸುದ್ದಿ ಇನ್ನೂ ಚಕಿತಗೊಳಿಸಿತು.. ಇದರಂತೆಯೇ ಮೂರು ನಾಲ್ಕು ಪ್ರತಿಷ್ಠಿತರ ಹತ್ತಾರು ಗಾಡಿಗಳು. ಇದೇ ರೀತಿ ಲೋಡು ತುಂಬಿಕೊಂಡು ಪಕ್ಕದ ರಾಜ್ಯ ಪ್ರವೇಶಿಸುತ್ತಿವೆ. ಅವುಗಳನ್ನು ತಡೆಯುವದಾಗುವುದಿಲ್ಲ. ಕಾರಣ ರಾಜಧಾನಿಯಿಂದ ಮೊದಲೇ ಬರುವ ಫೋನುಗಳು... ಈ ಫೋನು ಸಹ ಸಚಿವರ ಮನೆಯಿಂದಲೋ ಅವರ ಸಮ್ಮಂಧಿಕರಿಂದಲೋ ಹಿರಿಯ ಪೋಲೀಸ ಅಧಿಕಾರಿಗಳಿಂದಲೋ ಬರುತ್ತಿದ್ದುದರಿಂದ ನಾಕಾದಲ್ಲಿರುತ್ತಿದ್ದ ಸಿಬ್ಬಂದಿ ಅವರ ವಿರುದ್ಧವಾಗಿ ನಡೆಯುವ ಸಮಾರ್ಥ್ಯ ತೋರಿಸಲಿಲ್ಲ. ವಿರೋಧ ವ್ಯಕ್ತ ಪಡಿಸಿದ. ಒಂದಿಬ್ಬರು ಗುಂಡಾಗಳಿಂದ ಒದೆ ತಿಂದು ಕೈಕಾಲು ಮುರಿದುಕೊಂಡೋ ತಲೆ ಒಡೆದುಕೊಂಡೋ ಆಸ್ಪತ್ರೆ ಸೇರಿದ್ದನ್ನೂ ಕಣ್ಣಾರೆ ಕಂಡ ಮೇಲಂತು, ಯಾರಿಗೂ ಉಸಿರೆತ್ತುವ ತಾಕತ್ತು ಉಳಿಯಲಿಲ್ಲ... ಅವರಿಗೆ ಸಹಕಾರಕೊಡದೇ ಬೇರೆ ದಾರಿ ಉಳಿಯಲಿಲ್ಲ. ಕೈತುಂಬ ಹಣವೂ ದೊರೆಯಲಾರಂಭಿಸಿತು.

ಅರಿಹಂತನಿಗೆ ಕೇಸಫೈಲ್ ಮಾಡಲು ಸಾಕಷ್ಟು ಮಾಹಿತಿ ದೊರೆತರೂ ಪುಷ್ಟೀಕರಿಸಲು ಸಾಕ್ಷ್ಯಾಧಾರಗಳು ದೊರೆಯದಾದವು. ಫೋನು ಮಾಡಿ ಹೇಳುವವರ ಪರಿಚಯ ನಮಗಿಲ್ಲ ಎಂದು ರಾಜಧಾನಿಯಲ್ಲಿರುವ ರಾಜಕಾರಣಿ ಅಥವಾ ಸಚಿವರು ಹೇಳಿದಲ್ಲಿ ಕೇಸ್ ಫೈಲ್ ಮಾಡಿದ ಪೋಲೀಸ್ ಅಧಿಕಾರಿಗೆ ದೇವರೇ ಗತಿ... ಇದನ್ನೆಲ್ಲ ಸೂಕ್ಷ್ಮವಾಗಿ ಅವಲೋಚಿಸಿದ ಅರಿಹಂತ ರಾಜಧಾನಿಯ ರಾಜಕಾರಣಿಗಳನ್ನು ತಡವರಿಸಲು ನಿರ್ಧರಿಸಿದ. ಮಾಲಿನೊಂದಿಗೆ ಓಡಿಹೋಗುತ್ತಿದ್ದಾಗ ಸೆರೆಸಿಕ್ಕ ಮೂವರು ಡ್ರೈವರ ಮೇಲೆ ಮುಕದ್ದಮೆದಾಖಲಿಸಿದ. ಡ್ರೈವರರೂ ಸಹಿತ ಇದಕ್ಕೆ ಯಾವ ತಕರಾರೂ ಮಾಡಲಿಲ್ಲ. ಲಾರಿಯೊಳಗಿದ್ದ ಮಾಲು ನಮ್ಮದು ನಾವೇ ಅದಕ್ಕೆ ಒಡೆಯರು ಎಂದು ಒಪ್ಪಿಕೊಂಡರು.

ಜನರಿಗೆ ಪತ್ರಿಕೆ ಮೂಲಕ ಈ ಸಮಾಚಾರ ತಲುಪಿದ ದಿನ ಅರಿಹಂತ ಅವರ ಹೀರೋ ಆದ.. ಭಲೆಭಲೆ. ಇದ್ದರೆ ಇರಬೇಕು ಇಂಥ ಗಂಡಸು ಎಂಬ ಬಿರುದು

ಬಾವಲಿ ಪಡೆದ.. ಇಲಾಖೆವತಿಯಿಂದ ನಿರುತ್ಸಾಹದ ವಾತಾವರಣ ಎದುರಿಸಿದ.. ಅವನ ಸಹೋದ್ಯೋಗಿಗಳಲ್ಲಿ ಕೆಲವರು ಹರ್ಷ ವ್ಯಕ್ತ ಪಡಿಸಿದರೆ ಬಹಳಷ್ಟು ಜನ ನೀನು ಮೂರ್ಖ ಮಹಾ ಮೂರ್ಖ ಎಂಬ ಬಿರುದು ನೀಡಿದರು. ಒಂದಿಬ್ಬರು ಸ್ಪಷ್ಟವಾಗಿ ನುಡಿದೇ ಬಿಟ್ಟರು. ''ನಿಮ್ಮ ಕೇಸು ಫೈಲ ಮಾಡಿದ ಮಾತ್ರಕ್ಕೆ ಏನೂ ಆಗದು ಅರಿಹಂತ ನಿನ್ನೆದುರಿದ್ದವರು ರಾಕ್ಷಸ ಗಾತ್ರದವರು. ನೀನವರ ಮುಂದೆ ತೃಣಸಮಾನ... ಅವರ ಒಂದು ಉಸುರಿಗೆ ನಿನ್ನ ಕೇಸು ಗಾಳಿಗೆ ಹಾರಿಹೋಗುತ್ತದೆ. ನಿನಗೆ... ನಿನಗೆ... ಡಿಪಾರ್ಟಮೆಂಟನಿಂದ ಮೆಮೊ ಬರುತ್ತದೆ. ಇದಕ್ಕಿಂತ ಅವರ ಪಾಡಿಗೆ ಅವರನ್ನು ಬಿಟ್ಟಿದ್ದರೆ ಒಂದೆರಡು ವರ್ಷಗಳಲ್ಲಿ ಹತ್ತು ಲಕ್ಷದ ಮನೆ ಮಾಡಿಕೊಳ್ಳುತ್ತಿದ್ದೆ.. ಒಂದೇ ಮಾತಲ್ಲಿ ಹೇಳುವದಾದರೆ ನೀನು ಅವರನ್ನು ಕೆಣಕಿ ಕಣಕ್ಕೆ ಕರೆದಿರುವೆ....''

ಅವರ ಮಾತನ್ನು ಶಾಂತವಾಗಿ ಆಲಿಸಿದ ಅರಿಹಂತ ಅಷ್ಟೇ ಸಮಾಧಾನದಿಂದ ಉತ್ತರಿಸಿದ. ''ಇದೆಲ್ಲಾ ನನಗೆ ಗೊತ್ತಿಲ್ಲ ಅಂತ ತಿಳಿಯಬೇಡಿ. ನನಗೆ ಅದೆಲ್ಲಾ ಇಷ್ಟವಾಗುವುದಿಲ್ಲವೆಂದೇ ಈ ಕ್ರಮ ಕೈಕೊಂಡದ್ದು.. ಮುಂದಾಗುವ ಪರಿಣಾಮದ ಬಗ್ಗೆ ನಾನು ಎಳ್ಳಷ್ಟು ಚಿಂತಿಸುವುದಿಲ್ಲ, ನನ್ನ ಕರ್ತವ್ಯ ನಾನು ಮಾಡಿರುವೆ ಎಂದು ಸಮಾಧಾನ ಪಡುವೆ ಅಷ್ಟೇ.''

ಇದರ ಮರುದಿನವೇ ಎರಡು ಮೂರು ಕರೆಗಳು ಅರಿಹಂತನನ್ನು ಅಲ್ಲಾಡಿಸಿಬಿಟ್ಟವು. ರಾಜಧಾನಿಯಿಂದ ಹಣಕಾಸು ಸಚಿವರ ಆಪ್ತರೊಬ್ಬರು ಮಾತನಾಡಿ ಕೂಡಲೇ ಹಾಕಿದ್ದ ಕೇಸನ್ನು ಮರಳಿ ಪಡೆಯುವಂತೆ ಸೂಚಿಸಿದರೂ ಇದೇ ಮಾತನ್ನು ಪುನರುಚ್ಚರಿಸಿದ ಇಬ್ಬರು ಎಂ.ಪಿ.ಗಳು ಒಬ್ಬರು ಸಚಿವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಗಂಭೀರ ಪರಿಣಾಮ ಎದುರಿಸಲು ಸಿದ್ದನಾಗು ಎಂದರು. ಅರಿಹಂತನ ಮೇಲಧಿಕಾರಿ ''ನೀನು ತಪ್ಪು ಮಾಡಿದೆ. ಅವರ ವಿರೋಧ ಕಟ್ಟಿಕೊಳ್ಳುವುದರಿಂದ ಯಾವ ಪ್ರಯೋಜನಗಳಿಲ್ಲ ಗೆಳೆತನ ಮಾಡಿಕೊಂಡರೆ ಅಧಿಕ ಲಾಭ ಈಗಲೂ ಮನಸ್ಸು ಮಾಡಿದರೆ...''

ತಮ್ಮ ಮಾತನ್ನು ಅರ್ಧಕ್ಕೆ ನಿಲ್ಲಿಸಿದರು ಅವರು ಅರ್ಥವತ್ತಾಗಿ..

ಅರಿಹಂತ ಎಲ್ಲವನ್ನು ನಿರಾಕರಿಸಿ ಮೂವರೂ ಲಾರಿ ಡ್ರೈವರನ್ನು ಕೋರ್ಟುಮೆಟ್ಟಲು ಹತ್ತಿಸಿದ.. ಎಲ್ಲರೂ ನಿರೂಪಿಸಿದಂತೆಯೇ ಆಯಿತು, ಕೋರ್ಟನಲ್ಲಿ ಮೂವರು ಲಾರಿ ಬಗ್ಗೆ ತಮಗೇನೂ ಗೊತ್ತಿಲ್ಲ.. ರಾತ್ರಿ

ಸೆರೆಯಂಗಡಿಯಲ್ಲಿ ಕುಡಿಯುತ್ತ ಕುಳಿತ ನಮ್ಮನ್ನು ಎಳೆದು ತಂದು ಸಿಕ್ಕಾಪಟ್ಟೆ ಹೊಡೆದು ನಿಶೆಯಲ್ಲಿದ್ದಾಗ ನಮ್ಮಿಂದ ಒತ್ತಾಯ ಪೂರ್ವಕವಾಗಿ ಸಹಿಪಡಿದಿದ್ದಾರೆ ಎಂದರು.''

ಪರಿಣಾಮ ಇನಸ್ಪೆಕ್ಟರ ಅರಿಹಂತನಿ ಗಂಭೀರವಾಗಿ ಎಚ್ಚರಿಕೆ ನೀಡಿದ ನ್ಯಾಯಾಧೀಶರು ಮೂವರೂ ಆ ಆಪಾದಿತರನ್ನೂ ನಿರ್ದೋಷಿಗಳೆಂದು ಸಾರಿ ಬಿಡುಗಡೆ ಮಾಡಿದರು... ಅರಿಹಂತನಿಗೆ ಅಲ್ಲಿಂದ ಎತ್ತಂಗಡಿಯಾಯಿತು...

(3)

ಅರಿಹಂತ ತುಂಬಾ ವ್ಯಗ್ರನಾಗಿದ್ದ. ಪ್ರಾಮಾಣಿಕತೆಯಿಂದ ಕರ್ತವ ನಿರ್ವಹಿಸಿದ್ದಕ್ಕೆ ಸರಿಯಾದ ಶಾಸ್ತಿಯಾಗಿತ್ತು.. ಚಿನ್ನದ ಪದಕ ದೊರೆಯುವ ಮಾತು ದೂರ.. ನಾಲ್ಕು ಒಳ್ಳೆಯ ಮಾತುಗಳೂ ಕೇಳಿಬಂದಿರಲಿಲ್ಲ. ಕಿವಿಗೆ ಬಿದ್ದವು ಚುಚ್ಚು ಮಾತುಗಳೇ ;

'ತಾನೊಬ್ಬನೇ ಪೋಲೀಸ್ ಆಫೀಸರ ಎಂದು ತಿಳಿದಿದ್ದ

'ಜಗತ್ತಿನಲ್ಲಿ ತಾನೇ ಮೇಲು ಎನ್ನುತ್ತಿದ್ದ...

'ಯಾರಿಗೆ ಬೇಕಾಗಿತ್ತಪ್ಪ ಗೋಡೆಯಲ್ಲಿದ್ದ ಗೂಟವನ್ನು ಕಿತ್ತುವದು...'

'ಹೋಗಲಿ ಬಿಡು. ನನ್ನದೆ ಮೂಗು ನೇರ ಅಂತಿದ್ದನಲ್ಲ.. ಸರಿಯಾದ ಶಾಸ್ತಿ ಆಯಿತು'

'ಈತ ಹೋದದ್ದೇ ಒಳ್ಳೆಯದಾಯಿತು ನೋಡಿ... ಯಾವ ಮೂಲಾಜಿಲ್ಲದೆ ಯಾರ ಹೆದರಿಕೆಯಿಲ್ಲದೆ ಹಾಯಾಗಿ ಮೇಯಬಹುದು...

ಮೇಲಿನ ಸಾಹೇಬರೂ ಅಷ್ಟೇ. ಎತ್ತಂಗಡಿ ಮಾಡಿದ ಆರ್ಡರ ಕೈಗೆ ತಲುಪಿದ ಐದೇ ನಿಮಿಷಗಳಲ್ಲಿ ಅರಿಹಂತನನ್ನು ಕರೆಯಿಸಿ ಬಿಡುಗಡೆ ಮಾಡಿದ್ದರು, ಬಿಡುಗಡೆ ಮಾಡಿದ ಮೇಲೂ ಸುಮ್ಮನೇ ಕಳಿಸಿಕೊಡಲಿಲ್ಲ.

'ನೋಡು.. ಅಲ್ಲಾದರೂ ತಿಳುವಳಿಕೆಯಿಂದ ನಡೆದುಕೊ.. ಇಲ್ಲಂತೂ.. ಹೋಗಲಿ ಬಿಡು, ನಿನ್ನ ಹಿತಕ್ಕೇ ಹೇಳಿದ್ದು.. ನಾನೂ ಸರ್ವಿಸ ಸೇರಿದಾಗ ನಿನ್ನಂತೆಯೇ ಇದ್ದೆ ಐದಾರು ವರ್ಷಗಳಲ್ಲೇ ಬುದ್ಧಿ ಬಂತು. ಈಗ ನೋಡು ರಾಜಧಾನಿಯಲ್ಲಿ ಎರಡು ಫ್ಲೈಟ್ ಆರ್ ಸೈಟ್ ಮೈಸೂರಿನಲ್ಲಿ ಮೂರು ಸೈಟ್ ಇಲ್ಲಿ ಎಂಟು.. ಮೂರು ಕಾರು ಐದು ಲಾರಿ.. ಒಂದಿಷ್ಟು ಹಣ.. ನಲವತ್ತು ಐವತ್ತು ತೊಲಿ..

''ಸಾಕು ಸರ್.. ನಿಮ್ಮ ಆಸ್ತಿ ವಿವರ ನನ್ನ ಮುಂದೆ ಬೇಡ.. ಇನ್‌ಕಮ್‌ಟ್ಯಾಕ್ಸ ಅಧಿಕಾರಿ ಮುಂದೆ ಹೇಳಿ.. ಅಥವಾ ಲೋಕಾಯುಕ್ತ ಸುಪರಿಂಟೆಂಡೆಂಟ ಮುಂದೆ.. ಕರೆಸು ಅಂದರೆ ಫೋನು ಮಾಡಿ ಕರೆಸುತ್ತೇವೆ. ಕರೆಸಲೇ ಸರ್ ?''

ಅರಿಹಂತ ರಿಸೀವರ ಎತ್ತಿದಾಗ ಅವನ ಕೈಯಿಂದ ಪಟಕ್‌ನೇ ರಿಸೀವರ ಕಿತ್ತಿಕೊಂಡು ಯಥಾಸ್ಥಾನದಲ್ಲಿ ಕುಕ್ಕಿದ ಮೇಲಧಿಕಾರಿ ಕೈ ಮುಗಿದು ಬಿರುನುಡಿದ. 'ಸಾಕಪ್ಪ ಸಾಕು.. ನಿನ್ನ ಸಹವಾಸ... ನಿನಗೆ ಬುದ್ಧಿ ಹೇಳಲಿಕ್ಕೆ ಬಂದದ್ದು ತಪ್ಪಾಯಿತು. ಬೇಕೆಂದರೆ ನನ್ನ ಎಕ್ಕಡ ತಗೊಂಡು ನನಗೆ ನಾಲ್ಕು ಬಾರಿಸಿ ಇಲ್ಲಿಂದ ದಾರಿ ಬಿಡು''

ಮುಗುಳ್ನಗುತ್ತ ಮೇಲಿದ್ದ ಅರಿಹಂತ. ''ಸರ್.. ನಿಮ್ಮನ್ನು ಬಿಟ್ಟು ಹೋಗಲು ನನಗೆ ಮನಸ್ಸೇ ಆಗದು. ನೀವು ನೀಡಿದ ಸಹಕಾರ, ಸಹಾಯ ಎಲ್ಲಾ ನೆನೆಸಿದರೆ ಕರುಳೇ ಕಿತ್ತಿ ಬರುತ್ತದೆ. ಹೇಗಾದರೂ ಪ್ರಯತ್ನಮಾಡಿ ಒಂದೇ ವಾರದಲ್ಲಿ ಪುನಃ ಇಲ್ಲಿಗೆ ಬರುತ್ತೇನೆ.

''ಬೇಡಪ್ಪ ಬೇಡ. ನೀನೂ ಬೇಡ ನಿನ್ನ ಸಹವಾಸವೂ ಬೇಡ ನಿನಗೆ ಕೈಮುಗಿಯುತ್ತೇನೆ ದೇವರಿಗೆ ಡಜನ್ ಕಾಯಿ ಒಡಿಸುತ್ತೇನೆ. ನೀನು ಎಲ್ಲಾದರೂ ಹಾಳಾಗಿ ಹೋಗು. ಇಲ್ಲಿಗೆ ಮಾತ್ರ ಬರಬೇಡ.. ದಯವಿಟ್ಟು ಇಲ್ಲಿಂದ... ನೀವು...''

ಅರಿಹಂತ ಜೋರಾಗಿ ನಗುತ್ತ ಆಫೀಸಿನಿಂದ ಹೊರಬಂದ.

ಎರಡೇ ಗಂಟೆಯಲ್ಲಿ ಆತ ಸಿದ್ದನಾದ. ಮೊದಲೇ ಒಂಟಿಯಾಗಿದ್ದ.. ಊರಿಗೆ ಹೋಗಿದ್ದ ಹೆಂಡತಿ ಮಗು ಬಂದಿರಲಿಲ್ಲ.. ಇಬ್ಬರು ಹಮಾಲರನ್ನು ಕರೆತಂದ. ಒಂದು ಗಂಟೆಯಲ್ಲಿ ಅವರು ಎಲ್ಲಾ ಸಾಮಾನು ಪ್ಯಾಕ್ ಮಾಡಿ ಲಾರಿಗೆ ಏರಿಸಿದರು. ಅಂದೇ ರಾತ್ರಿ ಹನ್ನೊಂದು ಗಂಟೆಗೆ ಆತ ಬಂದು ತಲುಪಿದ್ದ ಪುಂಡಪೋಕರಿಗಳ ಊರೆಂದೇ ಪ್ರಸಿದ್ಧವಾದ ಬಂಡರಗಟ್ಟಿಗೆ. ಬಂಡರಗಟ್ಟಿ ಪೋಲೀಸ್ ಠಾಣೆ ಎಂದರೆ ಪನಿಶಮೆಂಟ ಮೇಲೆ ಬರುವ ಪೋಲೀಸ ಅಧಿಕಾರಿಗಳಿಗೆಂದೇ ಸ್ಥಾಪಿಸಲ್ಪಟ್ಟ ಪೋಲೀಸ್ ಠಾಣೆ. ಐದಾರು ಸಣ್ಣಸಣ್ಣ ಗ್ರಾಮಗಳನ್ನು ಸೇರಿಸಿ ಒಂದು ಠಾಣೆ ಪ್ರಾರಂಭಿಸಿದ್ದರು.. ಪಿ.ಎಸ್.ಐ. ಹೆಸರಿಗೆ ಕೆಲಸ ಮಾಡುತ್ತಿದ್ದ... ಇನ್‌ಸ್ಪೆಕ್ಟರಾದವರು ಮನಸ್ಸು ತಿಳಿದಾಗೊಮ್ಮೆ ಯಾವನಾದರೂ ಒಂದು ಊರಿಗೆ ಹೋಗಿ ಭೆಟ್ಟಿ ಕೊಟ್ಟು ಬಂದರೆ ಮತ್ತೆ ಒಂದು ವಾರ ಮರಳಿ ಮುಖ ತೋಚುತ್ತಿರಲಿಲ್ಲ ರಿಜಿಸ್ಟರನಲ್ಲಿ ಸಹಿಮಾಡಿ ಹೊರಗೆ ಬಿದ್ದರೆ ಸಿಟಿಗೆ ಬಂದು ಒಂದು ವಾರ ಮಜಾ ಮಾಡಿ ಮರಳುತ್ತಿದ್ದರು. ಖಾಲಿಯಾಗಿದ್ದ ಒಂದು ವಾರದ ಸಹಿಯೆಲ್ಲ ಮಾಡಿ ತುಂಬಾ

ದಣಿದವರಂತೆ ಮತ್ತೆ ವಿಶ್ರಾಂತಿಗೆಂದು ಮನೆಗೆ ತೆರಳುತ್ತಿದ್ದರು. ಪುಂಡಪೋಕರಿಗಳಿಗೆ, ದರೋಡೆ ಕಳವು ಮಾಡುವವರಿಗೆ, ಕಸಬುದಾರರಿಗೆ ಹಾಸಿಗೆ ಹಾಸಿ ಕೊಟ್ಟಂತಾಗುತ್ತಿತ್ತು. ತಿಂಗಳೆಲ್ಲ ದುಡಿದು ಕೊಂಡ ಅವರು ಸಾಹೇಬರ ಮೆಹರ್ಬಾನಿಗೆ ಖುಶ ಆಗಿ ತಿಂಗಳಿಗೊಂದು ಸಾರೆ ಬಂದು ಸವಾರಿ ಹೊಡೆದು ಕಪ್ಪ ಕಾಣಿಕೆ ಕೊಟ್ಟು ಹೋಗುತ್ತಿದ್ದರು. ಒಂದೊಂದು ಬಾರಿ ಕಾಣಿಕೆಯನ್ನೂ ಮೊದಲೇ ತಂದು ಮುಂದಿಟ್ಟು ಒಂದು ವಾರ ರಜೆಯ ಮೇಲೆ ಹೋಗಿ... ಇತ್ತ ಕಡೆ ಹೊರಳಿ ನೋಡಬೇಡ ಎಂದೂ ವಿನಂತಿಸಿಕೊಳ್ಳುತ್ತಿದ್ದರು. ಅವರ ಆಶಯ ಅರ್ಥಮಾಡಿಕೊಂಡ ಅಧಿಕಾರಿ ಕಾಣಿಕೆಯೊಂದಿಗೆ ಊರುಬಿಟ್ಟವ ಒಂದೆರಡು ವಾರದ ನಂತರ ಠಾಣೆಗೆ ಬಂದಾಗ ಕನಿಷ್ಠ ಎರಡು ಮೂರು ಕೊಲೆಗಳಾಗುತ್ತಿದ್ದವು ಅಥವಾ ಎಂಟುಹತ್ತ ಕಡೆ ದರೋಡೆ... ಅಪರಾಧಿಗಳು ಮಾತ್ರ ನಾಪತ್ತೆ...

ಇಂಥ ಒಂದು ಠಾಣೆಗೆ ಬಂದ ಅರಿಹಂತ.

ಆತ ಜ್ವಾಲಾಮುಖಿಯಂತಾಗಿದ್ದ... ಠಾಣೆಗೆ ಬರುತ್ತಲೂ ಸಿಡಿದು ಎಲ್ಲರಿಗೂ ಮಂಗಳಾರತಿ ಮಾಡಿದ. ಭೆಟ್ಟಿಗೆ ಬಂದ ಚಿಕ್ಕ ಮೊಟ್ಟ ಮೊಸಳೆಗಳಿಗೆ ಚೆನ್ನಾಗಿ ಉಗಿದು ಸುಮ್ಮನೆ ಜೀವನ ಸಾಗಿಸುವಂತೆ ಎಚ್ಚರಿಕೆ ನೀಡಿದ... ಮೊದಲ ದಿನ ಆತ ಯಾವ ಕೆಲಸವನ್ನೂ ಮಾಡಲಿಲ್ಲ.. ಹಾಯಾಗಿ ಕಳೆದ. ಮನೆಯಲ್ಲಿ ಎಲ್ಲಾ ಸಾಮಾನು ಹೊಂದಿಸಿದ. ಹೆಂಡತಿಯನ್ನು ಕರೆಯಲು ಜೀಪು ಕಳಿಸಿದ. ತಿಂದುಂಡು ಮಜಾ ಮಾಡುತ್ತ ಕಳೆದ. ರಾತ್ರಿ ಹೆಂಡತಿ ಮಗು ಬಂದಾಗ ಆತ ಗೆಲುವಾಗಿದ್ದ ಎಂಟು ದಿನಗಳ ನಂತರ ಹೆಂಡತಿ ಲಾವಣ್ಯ ಮಗು ಸಮರ್ಥನ ಮುಖ ದರ್ಶನವಾಗಿತ್ತು. ಅವರೊಂದಿಗೆ ಮಾತಾಡಿದ... ನಕ್ಕ...

ರಾತ್ರಿ ಲಾವಣ್ಯಳಿಂದ ಸ್ಪೇಶಲ್ ಟ್ರೀಟ್‌ಮೆಂಟ ದೊರೆತ ಮೇಲಂತೂ ಅವ ಎಲ್ಲಾ ಮರೆತು ಮರುದಿನ ಠಾಣೆಗೆ ಬಂದಾಗ ಮೊದಲಿನ ಇನಸ್ಪೆಕ್ಟರ ಅರಿಹಂತ ಆಗಿದ್ದ... ಅರಿ ಅಂದರೆ ವೈರಿ.. ಹಂತ ಎಂದರೆ ನಾಶಮಾಡುವವ. ಸಾವು ನೀಡುವವ... ಅಂದು ಠಾಣೆಯಲ್ಲಿದ್ದ ಎಲ್ಲಾ ಫೈಲು ತಿರುವಿ ಹಾಕಿದ. ಫೈಲುಗಳ ಒಟ್ಟು ಸಂಖ್ಯೆ ತೊಂಭತ್ತನಾಲ್ಕು... ಅವುಗಳಲ್ಲಿ ಮುಚ್ಚಿದ ಫೈಲುಗಳ ಸಂಖ್ಯೆ ಮೂವತ್ತಾರು. ಪ್ರತಿಯೊಂದು ಫೈಲನ್ನು ಸರಿಯಾಗಿ ದಾರದಿಂದ ಕಟ್ಟಿ ಅದರ ಮೇಲೆ ಕೆಂಪು ಮಸಿಯಿಂದ "Closed" ಎಂದು ಬರೆದ ಫೈಲುಗಳು... ಆ ಫೈಲನ್ನು ಜಮಾದಾರ ಗುನ್ಹೆ ತಾಗಿನಿಲ್ಲ.. ಗುನ್ಹೆ ಮಾಡಿದವ ಸಿಕ್ಕಿಲ್ಲ ಎಂದರ್ಥ.. ಆ ಮುಚ್ಚಿದ ಫೈಲುಗಳಿಂದಲೇ ಕೆಲವರು ಲಕ್ಷಾಧೀಶ್ವರರಾಗಿರಬಹುದು.. ಲಕ್ಷಾಧೀಶ್ವರರಾದ

ಮೇಲೆ ಫೈಲು ಸ್ಟಡಿ ಮಾಡುವ ಅವಶ್ಯಕತೆ ಏನಿದೆ ? ಅದಕ್ಕಾಗಿ ಮುಚ್ಚಿ ಎಸೆದಿದ್ದರು ಅಷ್ಟೇ.

ಅಂಥ ಮುಚ್ಚಿದ ಫೈಲುಗಳ ಸ್ಟಡಿ ಮಾಡಿ ವಿಶೇಷವೆನಿಸಿದ ಮುಚ್ಚಿದ ಫೈಲುಗಳನ್ನು 'ರಿಓಪನ್' ಮಾಡುವದೇ ಇವನ ಉದ್ದೇಶವಾಗಿತ್ತು. ಇದರ ಹಿಂದೆ ಇರುವ ಮಹತ್ವದ ಕಾರಣಗಳು ಎರಡು. ಮೊದಲನೆಯದಾಗಿ ಮುಚ್ಚಿದ ಫೈಲುಗಳಲ್ಲಿ ಅಡಗಿಕೊಂಡಿರುವ ನಿಜವಾದ ಘಾತಕರನ್ನು ಬಯಲಿಗೆ ತರುವದು. ಎರಡನೆಯದಾಗಿ ಇಂಥ ಫೈಲುಗಳನ್ನು ಮುಟ್ಟುವುದರಿಂದ ಉಂಟಾಗುವ ಕೋಲಾಹಲದ ಸದುಪಯೋಗ ಪಡೆದುಕೊಂಡು ಎತ್ತಂಗಡಿಯಾಗುವದು.

ಎರಡೂ ಸಾಧನೆಗಳು ಒಂದೇ ದಾರಿಯಲ್ಲಿ ಕ್ರಮಿಸುವುದರಿಂದ ಆಗುವದಾದಲ್ಲಿ ಮುಚ್ಚಿದ ಫೈಲುಗಳನ್ನೇಕೆ ತೆರೆಯಬಾರದು ? ಇವೆರಡನ್ನೂ ಮೀರಿಸಿ ಆಗುವ ಇನ್ನೊಂದು ಸದುಪಯೋಗವೆಂದರೆ ಸಮಾಜಕಂಟಕರಿಂದ ಸಮಾಜಕ್ಕೆ ಮುಕ್ತಿಯಾದರೂ ದೊರೆಯುತ್ತದಲ್ಲ...

ಎಲ್ಲಾ ಫೈಲುಗಳನ್ನು ತಿರುವಿಹಾಕಲು ಎರಡು ದಿನಗಳು ಹಿಡಿದವು. ಅವುಗಳಲ್ಲಿ ಎರಡು ಮೂರು ಫೈಲುಗಳು ಅತ್ಯಂತ ಮಹತ್ವದವೆನಿಸಿದರೂ ಒಂದು ಫೈಲು ಮಾತ್ರ ಅರಿಹಂತವನ್ನು ತನ್ನತ್ತ ಶೀಘ್ರವಾಗಿ ಆಕರ್ಷಿಸಿತು... ಅದೇ ''ಕೋಮು ಗಲಭೆಯಲ್ಲಿ ಹತ್ಯೆಗೊಳಗಾದ ಅಪರಿಚಿತನ ಕೇಸು'' ಕೊಲೆಯಾದವ ಯಾರು ಎಂದೇ ತಿಳಿಯದಿದ್ದಾಗ ಕೊಲೆಗಾರನನ್ನು ಕಂಡು ಹಿಡಿದು ಪ್ರಯೋಜನವಾದರೂ ಏನು ಎಂದು ಭಾವಿಸಿದ ಅಂದಿನ ಪೋಲೀಸ್ ಅಧಿಕಾರಿ ಫೈಲ್ ಮೇಲೆ ಕೆಂಪು ಶಾಹಿಯಿಂದ ''ಕ್ಲೋಜ್'' ಎಂದು ಬರೆದು ಫೈಲು ಮುಚ್ಚಿಬಿಟ್ಟಿದ್ದ. ಅದನ್ನೇ ಅರಿಹಂತ ಮರುವಿಚಾರಣೆಗಾಗಿ ಕೈಗೆತ್ತಿಕೊಂಡ.. ಮೇಲಧಿಕಾರಿಗಳ ಅನುಮತಿಗಾಗಿ ಬರೆಯುವಂತೆ ರೈಟರ ಚನ್ನಬಸಪ್ಪನಿಗೆ ತಿಳಿಸಿ ಫೈಲೊಂದಿಗೆ ಮನೆಕಡೆಗೆ ನಡೆದ.

ಸಮರ್ಥನೊಂದಿಗೆ ಕೆಲಕಾಲ ಆಟವಾಡಿ ಆತನನ್ನು ಮಲಗಿಸಿದ. ಲಾವಣ್ಯಳೊಂದಿಗೆ ಸರಸವಾಡುತ್ತ ಊಟ ಮುಗಿಸಿ ತನ್ನ ರೂಮಿಗೆ ಬಂದು ಫೈಲು ಕೈಗೆತ್ತಿಕೊಂಡು ಸ್ಟಡಿ ಮಾಡಲಾರಂಭಿಸಿದ.

ಬಂಡರಗಟ್ಟಿ ಅಷ್ಟೇನೂ ದೊಡ್ಡದಲ್ಲದ ಗ್ರಾಮ.. ಸುತ್ತಲಿದ್ದ ಐದ್ಹಾರು ಗ್ರಾಮಗಳಲ್ಲಿ ಅದೇ ದೊಡ್ಡದು. ಎರಡು ಎರಡೂವರೆ ಸಾವಿರ ಜನಸಂಖ್ಯೆ ಇರಬಹುದು ಅಷ್ಟೇ. ಸುಮಾರು ಸಾವಿರದಷ್ಟು ಮುಸ್ಲೀಮರಿದ್ದು ಅವರೇ ಇತರ

ಜನಾಂಗದಲ್ಲಿದ್ದ ಹೆಚ್ಚಿನ ಜನಸಂಖ್ಯೆ ಹೊಂದಿದವರು. ಅವರು ತಮಗಾಗಿ ಎರಡುಕಡೆ ಪ್ರಾರ್ಥನಾಮಂದಿರ ಕಟ್ಟಿಕೊಂಡಿದ್ದರು. ಹಿಂದುಗಳು ಮೂರುನಾಲ್ಕು ಪ್ರಾರ್ಥನಾ ಮಂದಿರಗಳು ಬೇರೆಡೆಯಿದ್ದು ಬಂಡರಗಟ್ಟಿಯ ಜನರು ಜಾತಿಪಂಥ ಎಲ್ಲಾ ಮರೆತು ಒಬ್ಬರ ಹಬ್ಬದಲ್ಲಿ ಇನ್ನೊಬ್ಬರು ಭಾಗವಹಿಸುತ್ತಾ ಸೌಹಾರ್ದತೆಯಿಂದಿರುತ್ತಿದ್ದರು.

ಅಕಸ್ಮಾತ್ತಾಗಿ ನಡೆದ ಒಂದು ಚಿಕ್ಕ ಘಟನೆ ಗ್ರಾಮದ ಶಾಂತಿಗೆ ಭಂಗ ತಂದಿತು. ದನಕಾಯಲು ಹೋಗಿದ್ದ ಹರಿಜನ ಫಕೀರಪ್ಪನ ಹನ್ನೆರಡು ವರ್ಷದ ಮಗಳನ್ನು ಉರ್ದು ಶಿಕ್ಷಕ ಕಿತ್ತೂರ ಸಾಹೇಬರ ಮಗ ದಿಲಾವರ ಕೆಣಕಿ ಅತ್ಯಾಚಾರ ಮಾಡಲು ಹೋಗಿದ್ದ-ಅವಳು ಕೂಗಿಕೊಳ್ಳುತ್ತಲೇ ಸುತ್ತಲೂ ಹೊಲದಲ್ಲಿ ಕೆಲಸ ಮಾಡುತ್ತಿದ್ದವರು ಓಡಿಬಂದು ದಿಲಾವರನನ್ನು ಹಿಡಿದು ಮರಕ್ಕೆ ಕಟ್ಟಿ ಸಿಕ್ಕಾಪಟ್ಟೆ ಹೊಡೆದರು. ಇದು ಮುಸ್ಲಿಂ ಜನಾಂಗದವರನ್ನು ಕೆರಳಿಸಿತು. ದಿಲಾವರ ನಾನೇನೂ ಇಂಥಾ ಹಲ್ಕಾಕೆಲಸ ಮಾಡಲಾರ ಎಂದು ಅವನ ವಾದ. ಮಗು ಮಾತ್ರ ಅಳುತ್ತ ಅವನನ್ನೇ ನೋಡುತ್ತಿದ್ದಳು. ಅವಳ ಬಾಯಿಯಿಂದ ಮಾತು ಹೊರಡುತ್ತಿರಲಿಲ್ಲ ಮೈಮೇಲಿದ್ದ ಬಟ್ಟೆಗಳು ಹರಿದು ಹೋಗಿದ್ದವು. ಅಲ್ಲಿಂದ ಆರಂಭವಾಯಿತು ಅಶಾಂತಿ ಪರ್ವ. ಹಿಂದುಗಳ ಹಬ್ಬದಲ್ಲಿ ಮುಸ್ಲಿಮರ ಗಲಾಟೆ, ಮುಸ್ಲಿಮರ ಹಬ್ಬದಲ್ಲಿ ಹಿಂದುಗಳ ಗಲಾಟೆ ಆರಂಭವಾಯಿತು. ಹಿಂದೂ ದೇವರ ಮೆರವಣಿಗೆ ಉತ್ಸವ ಮಸೀದೆ ಮುಂದೆ ಹಾಯದಂತಾದರೆ ಮುಸಲ್ಮಾನರ ದೇವರು ಹಿಂದುಗಳ ದೇವಾಲಯದ ಮುಂದೆ ಹಾಯದಂತಾಯಿತು.

ಈ ವಾತಾವರಣ ಹೆಚ್ಚು ಕಡಿಮೆ ಎರಡು ವರ್ಷ ಮುಂದುವರೆದುಕೊಂಡು ಬಂದಿತು. ಅದೇ ತಾನೆ ಆ ಊರಿಗೆ ವರ್ಗವಾಗಿ ಬಂದಿದ್ದ ಶಿವಾನಂದಪ್ಪ ಮಾಸ್ತರರ ತಿಳುವಳಿಕೆ ಮಾತುಗಳಿಂದಾಗಿ ಎರಡು ಪಂಗಡದವರು ತಮ್ಮ ತಮ್ಮ ತಪ್ಪುಗಳನ್ನು ಒಪ್ಪಿಕೊಂಡು ಪಶ್ಚಾತ್ತಾಪ ವ್ಯಕ್ತ ಪಡಿಸಿದರು. ಇಬ್ಬರ ಮಧ್ಯೆ ಮೈತ್ರಿ ಏರ್ಪಟ್ಟಿತು... ಅವರ ಮೈತ್ರಿ ಹೊಸದಾಗಿ ಠಾಣೆಗೆ ಬಂದಿದ್ದ ಪೋಲೀಸ್ ಇನಸ್ಪೆಕ್ಟರ ದೇವೇಂದ್ರಪ್ಪನವರ ಸಮ್ಮುಖದಲ್ಲಿ ನಡೆಯಿತು. ಮತ್ತೆ ಮೊದಲಿನಂತೆ ಎಲ್ಲಾ ಕಡೆ ಸಮಾಧಾನ ವಾತಾವರಣ ಹರಡಿತು.

ಅಂದು...

ಕೊಲೆ ನಡೆದ ದಿವಸ.. ಮುಂಜಾನೆಯ ಸೂರ್ಯ ನೆತ್ತರು ಕಾಲುವೆ

ಹರಿಸಲೆಂದೆ ಹುಟ್ಟಿ ಬಂದಂತೆ ಅನಿಸಿತು. ಬಂಡರಗಟ್ಟಿ ಗ್ರಾಮದ ತುಂಬೆಲ್ಲಾ ಹಾಹಾಕಾರ ಕೋಲಾಹಲ... ಒಂದು ಬಗೆಯ ಭಯದ ವಾತಾವರಣ ಹರಡಿತು. ಎರಡೂ ಕೋಮಿನ ಪ್ರಾರ್ಥನಾ ಮಂದಿರಗಳ ಹೊರವಲಯದಲ್ಲಿ ಒಂದೊಂದು ಸತ್ತ ಪ್ರಾಣಿಗಳ ದೇಹ ಬಿದ್ದಿದ್ದು ಕಂಡು ಬಂದಿತು. ಕೋಮಿನವರು ಆ ಕೋಮಿನವರ ಮೇಲೆ ಆ ಕೋಮಿನವರು ಈ ಕೋಮಿನವರ ಮೇಲೆ ಕೆಂಡಕಾರಿದರು. ಒಂದು ಕೈ ನೋಡುವದಾಗಿ ಕೂಗಾಡಿದರು... ಠಾಣೆಗೆ ಬಂದರೆ ಇನಸ್ಪೆಕ್ಟರ ದೇವೇಂದ್ರಪ್ಪ ರಜೆಯ ಮೇಲೆ ಹೋಗಿದ್ದರು.. ಸಬ್‌ಇನಸ್ಪೆಕ್ಟರ ಜ್ಯೋತಿ ಸಾಹೇಬರ ಭೆಟ್ಟಿಗೆಂದು ಜಿಲ್ಲಾ ಕಚೇರಿಗೆ ಹೋಗಿದ್ದ... ಇದ್ದ ಮೂರನಾಲ್ಕಜನ ಕಾನಸ್ಟೇಬಲ್ ಭೀತಿಯಿಂದ ತತ್ತರಿಸಿ ಕೈಕಾಲು ಆಡದೇ ಠಾಣೆ ಬಿಟ್ಟು ಹೊರಗೆ ಬರಲೇ ಇಲ್ಲ... ರಾತ್ರಿಯಾಯಿತು... ಹನ್ನೆರಡು ಒಂದು ಗಂಟೆ ಸುಮಾರಿಗೆ ಊರ ಮಧ್ಯೆ ದಂಗೆ ಆರಂಭವಾಯಿತು. ಒಂದೆರಡು ಚಿಕ್ಕ ಚಿಕ್ಕ ಅಂಗಡಿಗಳು ಅಗ್ನಿಗಾಹುತಿಯಾದವು. ಅಂಗಡಿಗೆ ಹೊಂದಿದ್ದ ಮನೆಯವರು ಕೈಯಲ್ಲಿ ಕೊಡಲಿ ಬಡಿಗೆ ಹಿಡಿದು ಹೊರಬಂದರು... ಅವರಿಗೂ ಹೊರಗಿರುವವರಿಗೂ ಯುದ್ಧ ನಡೆಯಿತು. ಮನೆಯಲ್ಲಿದ್ದ ಶಿವಾನಂದಪ್ಪನವರಿಗೆ ಗಲಾಟೆಯ ಸುದ್ದಿ ಬಡಿಯುತ್ತಲೂ ಧಾವಿಸಿಬಂದ ಅವರು ಅರ್ಧಗಂಟೆಗೂ ಹೆಚ್ಚು ಕಾಲ ಒದ್ದಾಡಿ ಒದ್ದಾಡಿ ಎರಡೂ ಪಂಗಡದವರನ್ನು ಸಮಾಧಾನ ಪಡಿಸಿದರು. ಈ ಜಗಳ ಬಿಡಿಸಲು ಮುಂದಾದ ಅವರಿಗೂ ಎರಡು ಮೂರು ಕಡೆ ಗಾಯವಾಗಿ ರಕ್ತಕಾಣಿಸಿಕೊಂಡಿತ್ತು.

ಅಂತೂ ಇಂತೂ ಜಗಳ ಕೊನೆಗೊಂಡು ಒಂದು ನಿರ್ಣಯಕ್ಕೆ ಬರುವ ಸೂಚನೆ ಕಾಣ ಬರುತ್ತಿರುವಾಗಲೇ ಪಕ್ಕದ ಜಗಲಿಯ ಮನೆ ಚಂದ್ರಿ ಆಕ್ರಂದನ ಎಲ್ಲರನ್ನೂ ಅತ್ತ ಸೆಳೆಯಿತು. ಹತ್ತಾರು ಜನ ಅತ್ತ ಓಡಿದರು. ಅಲ್ಲಿಯ ದೃಶ್ಯಕಂಡು ಎಲ್ಲರೂ ಸ್ತಬ್ಧರಾದರು.

ಎದೆಯಲ್ಲಿ ಚೂರಿ ಇರಿದುಕೊಂಡು ಬಿದ್ದ ಶವ.

ಒಬ್ಬ ಯುವಕನ ಶವ, ದಾಡಿ ಮೀಸೆ ನೋಡಿದ ಆತನ ಜಾತಿ ಧರ್ಮದ ಅಂದಾಜು ಕಟ್ಟಿದ ಒಂದು ಪಂಗಡದವರು ಮತ್ತೆ ಆಕ್ರೋಶಗೊಂಡು ಮನಸ್ಸಿಗೆ ಬಂದಂತೆ ಕೂಗಾಡಿ ಜನರನ್ನು ಸೇರಿಸಹತ್ತಿದರು. ಆವಾಗಲೂ ಅವರನ್ನು ತಡೆದವರು ಶಿವಾನಂದಪ್ಪನವರೇ... ಅವರೆಲ್ಲರ ಮುಂದೆ ಎದೆಯೊಡ್ಡಿ ನಿಂತು ಅವರು ಘಂಟಾಘೋಷವಾಗಿ ಸಾರಿದರು.

"ಇದರಲ್ಲೇನೋ ತಂತ್ರವಿದೆ. ಇದರ ಹಿಂದೆ ಯಾವದೇ ಮೋಸ ಅಡಗಿದೆ. ಈ ಹಲ್ಕಾ ಕೆಲಸ ನಮ್ಮ ಗ್ರಾಮದವರು ಮಾಡಿದ್ದಿಲ್ಲ ಸತ್ತ ಬಿದ್ದ ತರುಣ ಸಹ ನಮ್ಮ ಊರವನಲ್ಲ. ಅವ ಯಾವಾಗ ಬಂದ ? ಎಲ್ಲಿಂದ ಬಂದ ? ಯಾರ ಬಳಿಬಂದ ? ಯಾರು ಕರೆತಂದರು ? ಇವೆಲ್ಲ ಪ್ರಶ್ನೆಗಳಿಗೆ ಮೂಲ ಉತ್ತರ ಕೊಡುತ್ತೀರಾ ? ಕೊಡಿ."

ಯಾರ ಬಾಯಿಯಿಂದಲೂ ಮಾತು ಹೊರಡಲಿಲ್ಲ.

ಅವರ ಮಾತಿನಲ್ಲಿ ಶಕ್ತಿಯಿತ್ತು... ಸತ್ಯವಿತ್ತು.

ಎಲ್ಲರ ಬಾಯಿಗೆ ಬೀಗ ಬಡಿದಂತಾಯಿತು. ತೆಪ್ಪಗಾದರು ಅವರ ಮನದ ಇಂಗಿತ ತಿಳಿದ ಶಿವಾನಂದಪ್ಪ ಮತ್ತಷ್ಟು ಅವರನ್ನು ಹಣ್ಣುಮಾಡಿದರು. "ನನ್ನ ಮಾತು ಕೇಳಿ ಎಲ್ಲರೂ ಮನೆಗೆ ಹೋಗಿ ನಾಳೆ ಬೆಳಿಗ್ಗೆ ಪೋಲೀಸ್ ವಿಚಾರಣೆ ಕಾಲಕ್ಕೆ ಏನಾಗುತ್ತದೋ ನೋಡೋಣ... ನನ್ನ ಮಾತು ಮೀರಿ ಯಾರಾದರೂ ಮುಂದೆ ಬಂದರೆ ನನ್ನ ಹೆಣ ದಾಟಿ ಹೋಗಬೇಕಾಗುತ್ತದೆ.. ನಾಳೆ ಪೋಲೀಸರು ಬರುವವರೆಗೂ ನಾನು ಹೆಣ ಕಾಯುತ್ತಿರುತ್ತೇನೆ...."

ಯಾರೂ ಅವರ ಮಾತಿಗೆ ಎದುರಾಡಲಿಲ್ಲ.

ಒಬ್ಬೊಬ್ಬರಾಗಿ ತೆಪ್ಪಗೆ ಅಲ್ಲಿಂದ ಜರಿದುಕೊಂಡರು...ಗಾಯಹೊಂದಿದ್ದ ಶಿವಾನಂದ ಮಾಸ್ತರರು ಆ ಚಳಿಯಲ್ಲಿ ನಡಗುತ್ತ ಹೆಣಕಾಯುತ್ತ ಕುಳಿತರು... ಅವರ ಬಗ್ಗೆ ಅನುಕಂಪ ತೋರಿದವಳೆಂದರೆ ಚಂದ್ರಿ ಒಬ್ಬಳೇ. ಎರಡು ಬಾರಿ ಚಹ ಮಾಡಿ ತಂದುಕೊಟ್ಟಳು. ತಾನೂ ಅವರ ಜೊತೆ ಮಾತನಾಡುತ್ತ ತನ್ನ ಮನೆ ಕಟ್ಟೆಯ ಮೇಲೆಯೇ ಕುಳಿತಿದ್ದಳು...

ಬೆಳಗು ಹರಿಯುವಷ್ಟರಲ್ಲಿ ಗ್ರಾಮದ ಜನರ ಮನಸ್ಸಿನಲ್ಲಿ ದ್ವೇಷ ಅರ್ಧದಷ್ಟು ಕಡಿಮೆಯಾಗಿತ್ತು. ಶಿವಾನಂದಪ್ಪನವರ ಮಾತು ಅವರ ಮನಸ್ಸನ್ನು ಬದಲಿಸಿತ್ತು. ಹೀಗಾಗಿ ಹತ್ತು ಹನ್ನೆರಡು ಗಂಟೆಗೆ ಠಾಣೆಗೆ ಬಂದ ದೇವೇಂದ್ರಪ್ಪನಿಗೆ ಸುದ್ದಿ ತಿಳಿಯುತ್ತಲೇ ಓಡಿಬಂದ. ಆತ ಉಳಿದ ಎಲ್ಲಾ ಕಾರ್ಯ ನೆರವೇರಿಸಿದ. ಶಿವಾನಂದಪ್ಪ ಸಹಾಯ ಮಾಡಿದರು. ಅವರ ಮಾತು ನಿಜವಾಗಿತ್ತು. ಸತ್ತ ಯುವಕ " ಯಾರು ?.... ಅಲ್ಲಿಗೇಕೆ ಬಂದಿದ್ದ ? ಯಾರ ಬಳಿಬಂದಿದ್ದ ಎಂದು ತಿಳಿದಿದ್ದರೂ ಅವನೇ ಎರಡೂ ಪ್ರಾರ್ಥನಾ ಮಂದಿರದಲ್ಲಿ ಸತ್ತ ಪ್ರಾಣಿಗಳನ್ನು ಚೆಲ್ಲಿರಬಹುದೊ ಅದನ್ನು ನೋಡಿ ಯಾರೋ ರೊಚ್ಚಿನಿಂದ ಅವನ ಕೊಲೆ ಮಾಡಿದ್ದಾರೆ ಎಂದು

ಭಾವಿಸಿ ಫೈಲ್ ಕ್ಲೋಜ್ ಮಾಡಲು ಮೇಲಾಧಿಕಾರಿಗಳ ಒಪ್ಪಿಗೆ ಕೇಳಿದ. ಕೆಲವು ದಿನಗಳ ನಂತರ ನಿರೀಕ್ಷೆಯಂತೆ ಒಪ್ಪಿಗೆಯೂ ಬಂದಿತು. ದೇವೇಂದ್ರಪ್ಪ ಫೈಲ್ ಮೇಲೆ ಕೆಂಪು ಶಾಹಿಯಿಂದ ಕ್ಲೋಜ್ ಎಂದು ಬರೆದು ಫೈಲ ಕಟ್ಟಿ ಬೀರುವಿಗೆಸೆದ....

ಎಲ್ಲಾ ಓದಿಯಾದ ಮೇಲೆ ಸಮ್ಮಂಧಪಟ್ಟವರ ಹೇಳಿಕೆ....ಘಟನೆ ವಿಸ್ತರಣೆ ಕೊಲೆನಡೆದ ಮೂರನೇ ದಿವಸಕ್ಕೆ ಕಾನಸ್ಟೇಬಲ್ ಬಸವಂತುವಿಗೆ ಸಡನ್ ಆಗಿ ವರ್ಗವಾದದ್ದು ಶವ ಕೇವಲ ಚಂದ್ರಿಯ ಕಣ್ಣಿಗೇ ಏಕೆ ಬಿದ್ದಿತು ಎಂಬ ಸಂಶಯ. ಶವದ ಮರಣೋತ್ತರ ಪರೀಕ್ಷೆ ಮಾಡಿದ ವೈದ್ಯರು ಏನೆಂದು ರಿಪೋರ್ಟ ನೀಡಿದರು. ಮುಂತಾದ ಸಂಶಯಗಳು ಅರಹಂತನ ಮನದಲ್ಲಿ ಒಂದೊಂದಾಗಿ ತಲೆಯೆತ್ತಿ ಈ ಕೇಸಿನ ಹಿಂದೆ ಖಂಡಿತವಾಗಿಯೂ ಯಾರದೋ ಕೈವಾಡವಿದೆ. ಭಯಂಕರವಾದ ಉದ್ದೇಶವಡಗಿದೆ. ಅಥವಾ ಯಾವದೋ ದೊಡ್ಡ ವ್ಯಕ್ತಿಯ ಕರಾಳ ಹಸ್ತವಿದೆ ಎಂದು ಮನದಟ್ಟಾಯಿತು.

ಅದರ ಜೊತೆಯೇ ಮುಚ್ಚಿದ ಆ ಫೆಲಿನ ಕೇಸನ್ನು ಹೊರತೆಗೆದು ನಿಜ ವಿಷಯ ಬಯಲಿಗೆ ತಂದು ಅದರ ಹಿಂದಿರುವ ಪ್ರಭಾವಿವ್ಯಕ್ತಿಯ ಬಾಲ ಕತ್ತರಿಸಲೇಬೇಕೆಂದು ನಿರ್ಧರಿಸಿದ....

ಹೆಗಲ ಮೇಲೆ ಮಲ್ಲಿಗೆಯ ರಾಶಿವಾಲಿದಂತಾಯಿತು.

ಘಮಘಮಿಸುವ ಸುಗಂಧ ಹೊರೆಸೂಸುವ ಶರೀರದ ಸ್ಪರ್ಷ... ಮಾದಕತೆ ತುಂಬಿ ತುಳುಕುವ ಲಾವಣ್ಯಳ ಕಂಠ ಅವನನ್ನು ಎಚ್ಚರಿಸಿತು.

''ಛೀ ಒಂದು ಗಂಟೆಯಾಯಿತು. ಇಷ್ಟು ನಿದ್ದೆಗೆಡುವದು ಶರೀರಕ್ಕೆ ಒಳ್ಳೆಯದಲ್ಲ... ಬನ್ನಿ ಮಲಗಿಕೊಳ್ಳಿ''..

ಓಹ್ ಎಂಥ ಆಪ್ಯಾಯಮಾನವಾದ ಆಮಂತ್ರಣ ? ಮೈಮನ ಎರಡನ್ನು ಮುದಗೊಳಿಸುವ ಕರೆ... ಮುಚ್ಚಿದ ಫೈಲನ್ನು ಪಕ್ಕಕ್ಕೆ ಸರಿಸಿ ದೀಪವಾರಿಸಿದ ಅರಿಹಂತ... ಏಳುಮಲ್ಲಿಗೆ ತೂಕದ ಲಾವಣ್ಯಳನ್ನು ಹಾಯಾಗಿ ಎತ್ತಿ ಮಡಿಲಿಲ್ಲಿ ತೂಗುತ್ತ ಅವಳನ್ನು ಮುದ್ದಿಸುತ್ತ ಅವಳನ್ನು ಛೇಡಿಸುತ್ತ ಮಂಚದೆಡೆ ನಡೆದ.

ಅರಿಹಂತ ಇನ್ನೂ ನಿದ್ದೆಯ ಮಬ್ಬಿನಲ್ಲಿದ್ದ.

ಹೊರಗಡೆ ಬಾಗಿಲು ಧಪ ಧಪ ಬಾರಿಸಿದ ಸದ್ದು... ಏಳಲು ಮನಸ್ಸಾಗದೇ ಅಲ್ಲೇ ಮಲಗುಟ್ಟೆ ಮಗ್ಗಲು ಬದಲಿಸಿದ. ಲಾವಣ್ಯಳೇ ಎದ್ದು ಬಾಗಿಲತ್ತ ನಡೆದಾಗ

ಮುಸುಕಿನಲ್ಲೇ ಕೇಳಿದ.

''ಎಷ್ಟು ಗಂಟೆ ?''

''ನಾಲ್ಕೂವರೆ'' ಭಾರವಾದ ಕಂಠದಲ್ಲಿ ಆಕೆ ಉತ್ತರಿಸಿದಳು.

ಆಕೆ ಬಾಗಿಲು ತೆರೆದ ಸದ್ದು... ಒಂದೆರಡು ಕಂಠ ಕೇಳಿದವು. ಆಕೆ.. ಇದು ಹವಾಲ್ದಾರ ಗುರುಸಿದ್ದಪ್ಪನ ಧನಿ. ನಿದ್ದೆ ಹಾರಿಹೋಯಿತು. ಚಟಕ್‌ನೇ ಮೇಲೆದ್ದು ಹೊರಗೆ ಬಂದ.

''ಗುರುಸಿದ್ದಪ್ಪ ಏನಾಯ್ತು ?''

''...ಯಾರೋ ಖದೀಮರು ಠಾಣೆಯೊಳಗೆ ನುಸಳಿ ಬಂದು ಎಷ್ಟೋಫೈಲುಗಳನ್ನು ಸುಟ್ಟು ಹಾಕಿದ್ದಾರೆ ರಾವ್‌ಸಾಹೇಬ್''

''ಇಷ್ಟಾಗುವವರೆಗೂ ನೀವೆಲ್ಲಿದ್ದಿರಿ ?'' ಏನಮಾಡುತ್ತಿದ್ದಿರಿ ಯ

ಆತನು ಮುಖವ ನೆಲದಲ್ಲಿ ಹುದುಗಿಸಿದಾಗ ಅವನಿಗೆ ಅರ್ಥವಾಯಿತು. ಅವರೆಲ್ಲ ಹಾಯಾಗಿ ಮಲಗಿರ್ಬಹುದು ಎಂದ...

'ಹೂಂ ... ಹೋಗಿ... ಈಗ ಬಂದು ಏನೂ ಮಾಡುವಂತಿಲ್ಲ... ಬೆಳಿಗ್ಗೆ ನೋಡೋಣ'

ಅವರಿಗೂ ಅದೇ ಬೇಕಾಗಿತ್ತು ಅಂತ ಕಾಣುತ್ತದೆ ಮೈನವರಸಿಕೊಂಡು ನಡೆದರು. ಬಾಗಿಲು ಮುಚ್ಚಿ ಅರಿಹಂತ ಒಳಗೆ ಬಂದ. ನಿದ್ದೆ ಎಲ್ಲೋ ಓಡಿಹೋಗಿತ್ತು. ಟೇಬಲ್‌ಬಳಿ ಬಂದು ದೀಪ ಉರಿಸಿ ಮುಚ್ಚಿದ ಫೈಲ್ ಕಡೆ ನೋಡಿದ. ರಹಸ್ಯಮಯ ನಗೆ ಅವನ ತುಟಿಗಳ ಮೇಲೆ ಲಾಸ್ಯಮಾಡಿತು... ಮುಚ್ಚಿದ ಫೈಲುಗಳು ಮಾತನಾಡತೊಡಗಿದ್ದವು....

(4)

ಕಣ್ತುಂಬನಿದ್ದೆ ಮಾಡಿ, ಹೊಟ್ಟೆತುಂಬ ತಿಂಡಿತಿಂದು ನಿಧಾನವಾಗಿ ಠಾಣೆಗೆ ಬಂದ. ಇನಸ್ಪೆಕ್ಟರ ಅರಿಹಂತ ರಾತ್ರಿ ಠಾಣೆಗೆ ನುಗ್ಗಿ ಗಲಾಟೆ ಮಾಡಿ ಫೈಲುಗಳನ್ನು ಸುಟ್ಟು ಹಾಕಿದವರ ಬಗ್ಗೆ ಯಾವ ಆಸಕ್ತಿಯನ್ನೂ ತೋರಿಸಲಿಲ್ಲ. ಒಂದು ಬಾರಿ ರಿಕಾರ್ಡ ರೂಮಿನೊಳಗೆ ಕಾಲಿಟ್ಟು ನಿರೀಕ್ಷಿಸಿದ. ಎಲ್ಲಾ ಫೈಲುಗಳು ವ್ಯವಸ್ಥಿತವಾಗಿ ಹೊಂದಿಸಲ್ಪಟ್ಟಿದ್ದು ಅವುಗಳನ್ನು ಮುಟ್ಟಿರಲೇ ಇಲ್ಲ. ಮುಚ್ಚಿದ ಫೈಲುಗಳನ್ನು ಮಾತ್ರ

ತೆಗೆದು ಅದರ ಮೇಲೆ ಸೀಮೆ ಎಣ್ಣೆ ಚೆಲ್ಲಿ ಬೆಂಕಿಹಚ್ಚಿದ್ದರು. ಅವು ಪೂರ್ಣವಾಗಿ ಸುಡುವವರೆಗೂ ಅವರು ನಿಂತಿರಲಿಲ್ಲ.

ಇದರಿಂದ ಎರಡು ವಿಷಯಗಳು ಸ್ಪಷ್ಟವಾದವು.

ಠಾಣೆಯಲ್ಲಿದ್ದ ಯಾರೋ ಒಬ್ಬರು ಮುಚ್ಚಿದ ಫೈಲುಗಳು ಪುನಃ ಟೇಬಲಿಗೆ ಬರಲಿರುವ ಸಮಾಚಾರ ಹೊರಗಿನವರಿಗೆ ತಿಳಿಸಿದ್ದಾರೆ. ಭೀತಿಗೊಂಡ ಅವರು ಅಂದೇ ಆ ಫೈಲುಗಳನ್ನು ನಾಶಮಾಡಲು ಬಾಡಿಗೆ ಜನರನ್ನು ಕಳಿಸಿಕೊಟ್ಟಿದ್ದಾರೆ. ಬಂದವರು ತರಾತುರಿಯಲ್ಲಿ ಎಲ್ಲಿ ಸಿಕ್ಕಿಹಾಕಿಕೊಳ್ಳುತ್ತವೆಯೋ ಎಂಬ ಭಯದಲ್ಲಿ ಅವಸರದಲ್ಲೇ ಈ ಕೃತ್ಯವೆಸಗಿ ಪಲಾಯನ ಮಾಡಿದ್ದಾರೆ. ಅವರಿಗೆ ಬೇಕಾದದ್ದು ಯಾವ ಫೈಲೋ ಏನೋ.. ಅವುಗಳನ್ನು ಹೆಕ್ಕಿ ತೆಗೆಯುವವರ ಬದಲು ಒಟ್ಟಾರೆ ಕ್ಲೋಜ್ಡ್ ಎಂದು ಬರೆದಿಟ್ಟಿದ್ದ ಎಲ್ಲಾ ಫೈಲು ಎತ್ತಿ ರಾಶಿ ಹಾಕಿದ್ದಾರೆ. ಸೀಮೆಎಣ್ಣೆ ಸುರಿದಿದ್ದಾರೆ. ಬೆಂಕಿ ಹಚ್ಚಿದ್ದಾರೆ. ಅಷ್ಟೇ ಅವೆಲ್ಲ ಪೂರ್ತಿಯಾಗಿ ಸುಡುವ ವರೆಗೆ ನಿಲ್ಲುವದು ಅವರ ಕೆಲಸವಲ್ಲ. ಅದಕ್ಕಾಗಿಯೇ ಹೊರಗೆ ಹೋಗಿದ್ದಾರೆ...ಬಾಡಿಗೆ ಜನರು ಮಾಡುವದೇ ಇಷ್ಟು...ಪೂರ್ತಿ ಸುಟ್ಟ ಫೈಲುಗಳನ್ನು ಎತ್ತಿ ತಿಪ್ಪಗೆ ಹಾಕಿ ಅರೆಮರೆ ಸುಟ್ಟ ಫೈಲು ಬೇರ್ಪಡಿಸಿದರು. ಅವನು ಗುರುತಿಸಿದ ಐದಾರು ಫೈಲುಗಳಿಗೆ ಹೆಚ್ಚು ಷತಿಯಾಗಿರಲಿಲ್ಲ ಮುಖದಲ್ಲಿ ನಗೆ ಮಿಂಚಿತು.

ಅದನ್ನರಿತ ಅರಿಹಂತ ಮುಗುಳ್ನಕ್ಕ...

ತೆರೆಯ ಹಿಂದಿರುವವರನ್ನು ಆದಷ್ಟು ಬೇಗ ಬಯಲಿಗೆ ತಂದು ಸಂಕೋಲೆಗಳಿಂದ ಅಲಂಕರಿಸಬೇಕೆಂದು ನಿರ್ಧರಿಸಿಕೊಂಡು ತನ್ನ ರೂಮಿಗೆ ಬಂದ. ಮೇಜಿನ ಮೇಲಿದ್ದ ಒಂದೆರಡು ಕಾಗದಗಳನ್ನು ನೋಡಿ ಸಹಿ ಹಾಕಿ ಮೇಲೆದ್ದವ ಮನೆಗೆ ಬಂದ. ಲಾವಣ್ಯಳಿಗೆ ಅಚ್ಚರಿ.. ಎಂದೂ ಆಫೀಸಿನಿಂದ ಎದ್ದು ಬಂದವನಲ್ಲ ಅರಿಹಂತ ಇದೇಕೆ ? ತನ್ನತ್ತ ಕೌತುಕತೆಯಿಂದ ನೋಡುತ್ತಿದ್ದ ಲಾವಣ್ಯಳಿಗೆ ಹೇಳಿದ ಅರಿಹಂತ. ''ತೊಂದರೆ ಕೊಡಬೇಡ ನಿನ್ನ ಹೂವಿನಂಥ ಹೃದಯಕ್ಕೆ.. ರೇಶಿಮೆಯಂಥ ಮೆದುಳಿಗೆ ಮನೆಗೆ ಬಂದವ ನಿನ್ನ ಪತಿ ಮಹಾಶಯನೇ.. ನಿಃಸಂಶಯವಾಗಿ ಒಂದು ಕಪ್‌ಸ್ಟ್ರಾಂಗ ಚಹಾ ಮಾಡಿಕೊಟ್ಟು ಎರಡು ಮೂರು ಗಂಟೆ ಅವನನ್ನು ಅವರ ಪಾಡಿಗೆ ಬಿಡು ಸಾಕು... ಠಾಣೆಗಿಂತ ಮನೆಯೇ ವಾಸಿ ಎಂದು ಬಂದಿರುವೆ''...

ಲಾವಣ್ಯ ತುಟಿ ಎರಡು ಮಾಡಲಿಲ್ಲ... ಎಷ್ಟೆಂದರೂ ಅವನೊಂದಿಗೆ

ಐದಾರು ವರ್ಷ ಸಂಸಾರ ಸಾಗಿಸಿದವಳು. ಪತಿಯ ಸ್ವಭಾವ ಚೆನ್ನಾಗಿ ಅರಿತವಳಾಗಿದ್ದಳು. ಅವನ ತಲೆಯಲ್ಲಿ ಬೇಯುತ್ತಿರುವ 'ಖಿಚಡಿ' ಅವಳಿಗೆ ಅರ್ಥವಾಗಿತ್ತು. ಬಿಸಿಯಾಗೇ ಇದ್ದ ಸ್ಟ್ರಾಂಗ್ ಟೀ ಮಾಡಿ ಫ್ಲಾಸ್ಕಿಗೆ ಸುರಿದ ಆಕೆ ಮೂರು ನಾಲ್ಕು ಕಪ್‌ಗಳೊಂದಿಗೆ ಟಿಪಾಯ್ ಮೇಲಿಟ್ಟು ಅವನೆಡೆ ಕಣ್ಣೆತ್ತಿ ಸಹ ನೋಡದೇ ಬಾಗಿಲು ಮುಚ್ಚಿಕೊಂಡು ಬಿರಬಿರನೆ ಹೊರಬಂದಳು...

ಮೊದಲು ಅರ್ಧ ಕಪ್ ಟೀ ಗುಟುಕರಿಸಿದ ಅರಿಹಂತ ಗಂಭೀರವಾಗಿ ಯೋಚಿಸತೊಡಗಿದ. ಎಲ್ಲಿಂದ ಆರಂಭಿಸಬೇಕು ಎಂದು.. ಹತ್ತು ಹದಿನೈದು ನಿಮಿಷಗಳಲ್ಲಿ ಒಂದು ರೂಪರೇಖೆ ಸಿದ್ಧವಾಯಿತು.

ಮೊತ್ತ ಮೊದಲು ಠಾಣೆಯಲ್ಲೇ ಇದ್ದ ಅವರ ಗೂಢಚಾರವನ್ನು ಪತ್ತೆ ಹಚ್ಚಿ ಅವನ ಬಾಲ ಕತ್ತರಿಸುವದು. ಶಿವಾನಂದಪ್ಪನವರನ್ನು ಪ್ರಶ್ನಿಸುವದು. ನಂತರ ಅಂದಿನ ಇನಸ್ಪೆಕ್ಟರ ದೇವೇಂದ್ರಪ್ಪ ಈಗೆಲ್ಲಿದ್ದಾರೆ ಹುಡುಕಿ ಅವರೊಂದಿಗೆ ಮಾತನಾಡುವದು... ಅಪರಿಚಿತ ಶವ ಪರೀಕ್ಷೆ ಮಾಡಿ ವರದಿ ನೀಡಿದ ಡಾಕ್ಟರರನ್ನು ಕಂಡು ಮಾತನಾಡುವದು... ಗ್ರಾಮದಲ್ಲಿ ಸುತ್ತಿ ಆಯ್ಕೆ ಮಾಡಿದ ಜನರೊಂದಿಗೆ ಕೊನೆಯ ಸುಳಿವು ಕಂಡುಹಿಡಿಯಲು ಚರ್ಚಿಸುವದು.. ಕೊನೆಯದಾಗಿ ಚಂದ್ರಿಯನ್ನು ಚೆನ್ನಾಗಿ ತದಕುವದು...

ಅರಿಹಂತನ ದೃಷ್ಟಿಯಲ್ಲಿ ಚಂದ್ರಿ ಎಲ್ಲರಿಗಿಂತ ಹೆಚ್ಚು ಮಹತ್ವದ ಕೊಂಡಿಯಗಿದ್ದಳು. ಅವಳ ಬಾಯಿ ಬಿಡಿಸಬೇಕು ಅಷ್ಟೇ...

ಠಾಣೆಯಲ್ಲಿದ್ದವರು ಒಟ್ಟು ಎಂಟುಜನ ಕಾನಸ್ಟೇಬಲ್, ನಾಲ್ಕು ಜನ ಹಗಲು ಕೆಲಸಮಾಡಿದರೆ ನಾಲ್ಕು ಜನರದು ರಾತ್ರಿ ಡ್ಯೂಟಿ. ಒಬ್ಬ ಎಸ್.ಐ. ಅದೇ ತಾನೇ ತರಬೇತಿ ಪಡೆದ ವಶೀಲಿಯೂ ಇಲ್ಲದ ಎಸ್.ಸಿ. ಕ್ಯಾಂಡಿಡೇಟ್. ಕೇಳುವ ಹೇಳುವ ದಿಕ್ಕಿಲ್ಲದವ, ಹೀಗಾಗಿ ಬಂಡಗಟ್ಟೆಯಂಥ ದರಿದ್ರ ಠಾಣೆಗೆ ಕಳಿಸಿದ್ದರು. ಹೊಸ ನಿಯುಕ್ತಿ ಬೇರೆ ನಿರಾಕರಿಸುವಂತಿಲ್ಲ. ಬಂದು ಹಾಜರಾಗಿ ಎಂಟು ದಿನಗಳೂ ಕಳೆದಿರಲಿಲ್ಲವೆಂದು ಕಾಣುತ್ತದೆ. ಅರಿಹಂತ ಡ್ಯೂಟಿಗೆ ಸೇರಿದ ದಿನ ಬಂದು ಒಂದು ಬಾರಿ ಸೆಲ್ಯೂಟ್ ನೀಡಿ ತನ್ನ ಪರಿಚಯ ಮಾಡಿಕೊಟ್ಟಿದ್ದ ಅಷ್ಟೇ...

''ಸರ್ ದತ್ತಾತ್ರಯ ಬೆಂಗಾಡಿ. ಎಸ್.ಐ. ಸರ್..!''

ವಂದನೆಗೆ ಪ್ರತಿವಂದನೆ ಸಲ್ಲಿಸಿದ ಅರಿಹಂತ ಅವನನ್ನು ಬಳಿ ಕುಳ್ಳಿರಿಸಿಕೊಂಡು ಒಂದೆರಡು ಮಾತು ಆಡಿದ್ದ. ಅವನ ತಂದೆ ಕುಡುಕ. ತಾಯಿ

ಯಾರ ಜೊತೆಗೋ ಓಡಿಹೋದಳು. ದತ್ತಾತ್ರೇಯನ ಅಕ್ಕನೇ ಸಾಕಿ ಬೆಳೆಸಿ ಶಾಲೆ ಕಲಿಸಿದವಳು. ಆಕೆಯ ಮದುವೆಯಾದಾಗ ದತ್ತಾತ್ರೇಯ ಕಾಲೇಜು ಮೆಟ್ಟಿಲು ಹತ್ತಿದ್ದ. ಅಭ್ಯಾಸದಲ್ಲಿ ಮುಂದು ಕ್ರಿಮಿನಾಲಜಿ ವಿಷಯದಲ್ಲಿ ಪರಿಣತಿ ಪಡೆದು ಯೂನಿವರ್ಸಿಟಿಗೆ ಪ್ರಥಮವಾಗಿ ಪಾಸಾದ... ಅವನ ಅದೃಷ್ಟ ಪೋಲೀಸ್ ಸಬ್ ಇನಸ್ಪೆಕ್ಟರ್ ಹುದ್ದೆಗೂ ಸಹ ಆತ ಸರಳವಾಗಿ ಆಯ್ಕೆಯಾದ. ಯಾರ ವಶೀಲಿ ಹಚ್ಚಲಿಲ್ಲ. ವಶೀಲಿ ಇರಲಿಲ್ಲ ಕೂಡ. ಇನ್ನೂ ಮದುವೆಯಗಿರಲಿಲ್ಲ. ಅಕ್ಕ ಮೇಲಿಂದ ಮೇಲೆ ಇದೇ ವಿಷಯಕ್ಕಾಗಿ ಪೀಡಿಸುತ್ತಿದ್ದಳು...

ಎಷ್ಟು ಯೋಚಿಸಿದರೂ ಅಪರಿಚಿತ ಕೊಲೆಯ ಕೇಸು ಮೂರು ನಾಲ್ಕು ಜನರ ಮಧ್ಯೆಯೇ ಸುತ್ತುತ್ತಿತ್ತು. ಚಂದ್ರಿ.. ಡಾಕ್ಟರ..ಠಾಣೆಯಲ್ಲಿದ್ದ ವಕ್ತಿ ಮತ್ತೆ ಶಿವಾನಂದಪ್ಪ ಚಂದ್ರಿಠಾಣೆಯಲ್ಲಿದ್ದು ರಹಸ್ಯವಾಗಿ ಮುಚ್ಚಿದ ಫೈಲುಗಳ ಬಗ್ಗೆ ವರದಿ ರವಾನಿಸಿದ ಗುಪ್ತಚಾರ ಇಬ್ಬರೂ ಅವನ ಬಳಿಯಲ್ಲೇ ಇದ್ದರು. ಶಿವಾನಂದಪ್ಪ.. ಶವಪರೀಕ್ಷೆ ಮಾಡಿ ವರದಿ ಸಲ್ಲಿಸಿದ ಡಾಕ್ಟರ ಎಲ್ಲಿದ್ದಾರೆಂದು ಶೋಧಿಸಬೇಕಾಗಿತ್ತು... ಮತ್ತೊಂದು ಬಾರಿ ಫೈಲು ತಿರುವಿ ಹಾಕಿದ. ಡಾಕ್ಟರ ವಿಳಾಸ ದೊರೆಯಿತು. ಡಾ. ರಂಗರಾಜನ್.. ಹೆಸರು ಓದುತ್ತ ಅವರ ವಿಳಾಸ ಒಂದೆಡೆ ಗುರುತು ಹಾಕಿಕೊಂಡ. ಶಿವಾನಂದಪ್ಪನವರು ಅದೇ ಊರಲ್ಲಿ ಶಿಕ್ಷಕರಾಗಿದ್ದರು. ಅವರ ಬಗ್ಗೆ ವಿಚಾರಿಸಬೇಕಾಗಿತ್ತು. ಇವೆರಡು ಕೆಲಸಗಳ ನಂತರ ಕೇಸು ಯಾವ ರೂಪಧಾರಣ ಮಾಡುತ್ತಿದೆಯೋ ಎಂಬುದನ್ನು ಗಮನಿಸಿ ಮುಂದಿನ ಹೆಜ್ಜೆ ಇಡಲು ಅರಿಹಂತ ನಿರ್ಧರಿಸಿ.. ಫೈಲು ಮುಚ್ಚಿ ಬದಿಗೆ ಸರಿಸಿದ. ರೂಮಿನಿಂದ ಹೊರಬಂದು ಬೆಡ್‌ರೂಮಿನತ್ತ ನಡೆದ. ಕಾಟದ ಮೇಲೆ ಬೋರಲಾಗಿ ಬಿದ್ದು ಸುಖವಾಗಿ ನಿದ್ರಿಸುತ್ತಿದ್ದ ಲಾವಣ್ಯ ಕಣ್ಣಿಗೆ ಬೀಳುತ್ತಲೂ ಹೃದಯದಲ್ಲಿ ಮಲ್ಲಿಗೆ ದಂಡೆಯಿಂದ ಮಾಡಿದ ಚೂರಿಯನ್ನು ಆಳವಾಗಿ ಹಿತವಾಗುವಂತೆ ಇಳಿಸಿದಂತಾಯಿತು.

ಹರವಾದ ಕುತ್ತಿಗೆಯ ಮೇಲೆ ಕಪ್ಪು ರೇಶಿಮೆಯಂಥ ಕೂದಲು ಹರಡಿದ್ದವು. ಆಕರ್ಷಕವಾದ ಪುಷ್ಟ ನಿತಂಬಗಳು ಎದ್ದು ಕಾಣುತ್ತಿದ್ದವು. ಎಡಗಾಲನ್ನು ಹೊಟ್ಟೆಯೊಳಗೆ ಎಳೆದುಕೊಂಡು ಬಲಗಾಲನ್ನು ಚಾಚಿದ್ದರಿಂದ ನೋಡುತ್ತಲೂ ಎದೆಯಲ್ಲಿ ಕಿಚ್ಚು ಹಚ್ಚುವಂತಿದ್ದವು. ಸೀರೆ ತೊಡೆಯವೆಗೂ ಸರಿದು ಮುತ್ತಿನ ಬಣ್ಣದ ಕಾಲು ಮೀನಗಂಡ ತೊಡೆ ಸ್ಪಷ್ಟವಾಗಿ ಕಾಣಿಸುತ್ತಿದ್ದವು.

ಮೆಲ್ಲನೆ ಬೆಕ್ಕಿನ ಹೆಜ್ಜೆಯಿಡುತ್ತ ಅವಳ ಬಳಿಸರಿದ ಅರಿಹಂತ ಮೇಲುವಾಗಿ ಅವಳ ಬೆನ್ನ ಮೇಲೆ ವಾಲಿ ಕಪೋಲದ ಮೇಲೆ ಮುತ್ತನಿತ್ತ. ಅವನ ಬಿಸಿಯುಸಿರು

ಬಿರುಸಾದ ಗಡ್ಡ ಮೀಸೆ ಎರಡೂ ಮೃದುವಾದ ಗಲ್ಲಕ್ಕೆ ಕಚಗುಳಿ ಇಟ್ಟಂತಾಗಿ ಆಕೆ ಹೊರಳಿ ಕಣ್ತೆರೆದಳು. ಅರಿಹಂತ ಸಂಪೂರ್ಣವಾಗಿ ಅವಳನ್ನು ಆಕ್ರಮಿಸಿದ.. ಅವಳೂ ಸಹ ಅವನ ನಿರೀಕ್ಷೆಯಲ್ಲೇ ನಿದ್ದೆ ಹೋದಂತ್ತಿತ್ತೇನೋ ತನ್ನ ನೀಳವಾದ ಕೈಗಳು ಅವನ ಕೊರಳಿಗೆ ಚೆಲ್ಲಿ ಹಿತವಾಗಿ ತನ್ನೆದೆಗೆ ಅವನನ್ನು ಒತ್ತಿಕೊಳ್ಳುತ್ತಿದ್ದಂತೆ ಅರಿಹಂತ ಜಗತ್ತನ್ನೆಲ್ಲ ಮರೆತು ಅವಳಲ್ಲಿ ಒಂದಾದ...

(5)

ಶಿವಾನಂದಪ್ಪ ಮಾಸ್ತರರು ಭೆಟ್ಟಿಯಾಗಲಿಲ್ಲ. ಎರಡು ತಿಂಗಳುಗಳ ಹಿಂದೆಯೇ ಅವರು ನಿವೃತ್ತಿ ಹೊಂದಿದ್ದು ಮಗಳ ಮನೆಯಲ್ಲಿ ವಾಸವಾಗಿದ್ದಾರೆ ಎಂದು ತಿಳಿಯಿತು. ಅವರ ಅಳಿಯ ಇಂಜನಿಯರ.. ಸಾಕಷ್ಟು ಹಣ ಮಾಡಿದ್ದು ಮಾಸ್ತರರನ್ನು ಸುಖವಾಗಿ ನೋಡಿಕೊಳ್ಳುತ್ತಿದ್ದಾನೆಂದು ಹೇಳಿದ ಮನೆಮಾಲಿಕ ◌ಂಗಡಿ ಬಸಪ್ಪ ಅವರ ವಿಳಾಸ ಫೋನ ನಂಬರ ಎಲ್ಲಾ ಬರೆದುಕೊಟ್ಟ ಆ [illegible]ಯನ್ನು ಭದ್ರವಾಗಿಟ್ಟುಕೊಳ್ಳುವಂತೆ ಸೂಚನೆ ನೀಡಿದ ಅರಿಹಂತ ಎಸ್.ಐ. ದತ್ತಾತ್ರೇಯನೆಡೆ ಕೊಟ್ಟ... ಬೇಡಬೇಡವೆಂದರೂ ಬಸಪ್ಪ ಟೀ ಮಾಡಿಸಿ ತಂದ. ಕುಡಿದು ಅವನಿಗೆ ವಂದಿಸಿ ಹೊರಬಂದರು.

''ಮುಂದೆ ಯಾವ ಕಡೆ ಸರ್ ?'' ದತ್ತಾತ್ರೇಯ ಕೇಳಿದ.

''ಇನ್ನೆಲ್ಲಿಗೆ ಠಾಣೆಗೆ ನಾಳೆಯೋ ನಾಡಿದ್ದೋ ಶಿವಾನಂದಪ್ಪನವರನ್ನು ಕಂಡರಾಯಿತು.''

''ಹಾಗಾದರೆ.. ನಾನು ಸ್ವಲ್ಪ ಮನೆಕಡೆ ಹೋಗಿ ಬರಲಾ ಸರ್ ?''

'ಇದೇನು ದತ್ತಾತ್ರೆಯ ?... ಹೆಂಡತಿ ಇಲ್ಲ ಮಕ್ಕಳಿಲ್ಲ.. ಈ ಸಮಯದಲ್ಲಿ ಮನೆ ನೆನಪಾಯ್ತು.'' ನಾಚಿ ಮುಖ ಕೆಂಪಗೆ ಮಾಡಿಕೊಂಡ ದತ್ತಾತ್ರೆಯ ಮೆಲ್ಲನೆ ಹೇಳಿದ.

''ಹಾಗೇನಿಲ್ಲ ಸರ್.. ಬೆಳಗಿನಿಂದ ಲೂಜ್‌ಮೋಶನ್.. ಅದಕ್ಕಾಗಿ..

''ಸರಿ ಹಾಗಾದರೆ.. ಹೋಗಿ ಮತ್ತೆ ಬರಬೇಡ ರೆಸ್ಟ ತಗೊಳ್ಳಿ''

'ಥ್ಯಾಂಕ್ಯೂ.. ಥ್ಯಾಂಕ್ಯೂ ಸರ್''.

ದತ್ತಾತ್ರೆಯನನ್ನು ಬಿಟ್ಟು ನಡೆಯುತ್ತಲೇ ಠಾಣೆಗೆ ಬಂದ ಅರಿಹಂತ.

ಒಂದರ್ಧಗಂಟೆ ಕುಳಿತವ ಪಟಕ್‌ನೆ ಮೇಲೆದ್ದ... ಚಂದ್ರಿ ಮನೆ ಕಡೆ ಹೊರಟ. ಚಂದ್ರಿ ಮನೆಯಲ್ಲೇ ಇದ್ದಳು. ಆದೇ ಊಟಮಾಡಿ ಬಂದು ಎಲೆಯಡಿಕೆ ಮೆಲ್ಲತೊಡಗಿದಳು... ಇನಸ್ಪೆಕ್ಟರ ಅರಿಹಂತ ತನ್ನ ಮನೆಯತ್ತಲೇ ಬರುತ್ತಿರುವದನ್ನು ಕಿಟಕಿಯಿಂದ ನೋಡಿ ತಾನೇ ಬಾಗಿಲಿಗೆ ಬಂದು ಮೈ ಎಲ್ಲಾ ಕುಲುಕುತ್ತಾ ಸ್ವಾಗತಿಸಿದಳು.

''ಓಹ್.. ಹೊಸ ಇನಸ್ಪೆಕ್ಟರ ಸಾಹೇಬರು.. ಈಗ ನೆನಪಾಯಿತಾ ?''

ಅವಳೆಡೆ ಮೋಹಕ ನಗೆ ಸೂಸುತ್ತ ಅವಳ ಹತ್ತಿರವೇ ಬಂದು ನಿಂತು ದಿಟ್ಟಿಸಿದ ಅರಿಹಂತ. ಚಂದ್ರಿ ಹೆಸರಿಗೆ ತಕ್ಕಂತೆ ಚಂದ್ರಿಯೇ.. ಚಂದ್ರನ ಮೈ ಬಣ್ಣ ಹೊತ್ತ ಆಕೆ ಒಳ್ಳೆ ರಸಪುರಿ ಮಾವಿನ ಹಣ್ಣಿನಂತಿದ್ದಳು. ಎಲ್ಲಿ ಮುಟ್ಟಿದರೂ ಮೆತ್ತಗೆ.. ಎಲ್ಲಿ ಹಿಡಿದರೂ ಮುದ್ದೆ ಮುದ್ದೆ. ಕಣ್ಣು ಮೂಗಿನಿಂದಲೂ ನೋಡಲು ಅಂದವಾಗಿದ್ದಳು. ಯಾರೇ ಆದರೂ ಒಂದೇ ನೋಟಕ್ಕೆ ಅವಳಿಗೆ ಮರುಳಾಗುತ್ತಿದ್ದರು.

ಮೊದಲಿದ್ದ ಇನಸ್ಪೆಕ್ಟರ ದೇವೇಂದ್ರಪ್ಪ ಅವಳ 'ಖಾಸಾ' ಆಗಿದ್ದ ಎಂಬುದೂ ಅವರಿವರಿಂದ ತಿಳಿದು ಬಂದಿತ್ತು.

''ಅರೆ.. ಹಾಗೇ ನಿಂತು ಬಿಟ್ಟಿರಲ್ಲ.. ಒಳಗೆ ದಯಮಾಡಿಸಿ''

ಒಳಗೆ ಬಂದ ಅರಿಹಂತ ಮೆತ್ತಗಿನ ತೆಕ್ಕೆ ಇರಿಸಿದ್ದ ಸೋಫಾದ ಮೇಲೆ ಕುಳಿತ. ಅವನತ್ತ ಎಲೆಅಡಿಕೆ ತುಂಬಿದ ತಟ್ಟೆ ಸರಿಸಿ ಹುಬ್ಬು ಹಾರಿಸಿದಳು ಚಂದ್ರಿ. ''ಸಾಹೇಬರಿಗೆ ನಾನು ತಾಂಬೂಲ ಮಡಸಿಕೊಟ್ಟರೆ ಹಿಡಿಸುತ್ತೋ ಇಲ್ಲವೋ''. ಮೈಯೆಲ್ಲಾ ಆಕೆ ಕುಲುಕಿದಾಗ ಸೆರಗು ಸರಿದು ಎರಡು ಕುಚಗಳು ಒಂದಕ್ಕೊಂದು ತಾಕಲಾಡಿದ್ದು ಸ್ಪಷ್ಟವಾಗಿ ಕಂಡಿತು ಅರಿಹಂತನಿಗೆ.

ರಹಸ್ಯಮಯ ಮುಗುಳ್ನಗೆ ಸೂಸುತ್ತ ಮುಂದೆ ಬಂದ ಚಂದ್ರಿ ಎಲೆಗೆ ಸುಣ್ಣ ಸವರಿ ಅಡಿಕೆ ಯಾಲಕ್ಕಿ ಇಡುತ್ತ ನಯವಾಗಿ ನುಡಿದಳು.

''ಸಾಹೇಬರಿಗೆ ಯಾವಾಗ ಮನಸ್ಸಾಗುತ್ತೋ ಆವಾಗ ಬರಬಹುದು.. ಬರಿ ತಾಂಬೂಲ ತಿಂದರೆ ಐವತ್ತು ಕೊಡಿ.. ತಾಂಬೂಲದೊಂದಿಗೆ ಹಣ್ಣು ಹೆಣ್ಣು ಎರಡೂ ಬೇಕು ಅಂದರೆ ನೂರು ಕೊಡಿ.. ಇಲ್ಲ.. ತಿಂಗಳಿಗೆ ಎರಡೂ ಸಾವಿರ ಕೊಟ್ಟುಬೇಕಾದಾಗ ಬಂದು ಬೇಕಾದ್ದನ್ನು ತಿಂದುಹೋಗಬಹುದು..ಹಾಂ..ರಾತ್ರಿ

ಮಾತ್ರ ಇಲ್ಲ...ಗೌಡರು ಬಂದು ಹೋಗುತ್ತಾರೆ...ಅವರ ಮನಸ್ಸಿಗೆ ನೋವಾಗಬಾರದು ನೋಡಿ ನನ್ನದು ಕಸಬಾದರೂ ನೀಯತ್ತಿನ ಕಸಬು. ಮೋಸಮಾಡಲಾರೆ....

''ಚಂದ್ರಿ ನನ್ನ ಮದುವೆಯಾಗಿ.. ಹೆಂಡತಿಯೂ ನನ್ನ ಜೊತೆ ಬಂದಿದ್ದಾಳೆ''

''ನನಗೆಲ್ಲಾ ಗೊತ್ತು ಸಾಹೇಬರೆ...''

ಎಲೆ ಮಡಿಚಿ.. ಲವಂಗ ಚುಚ್ಚಿ ಬೀಡಾ ಮಾಡಿ ಅವನೆಡೆ ಚಾಚುತ್ತ ಆಕೆ ಹೇಳಿದಳು.

''ಮನೆಯೂಟವೇ ಬೇರೆ..ಖಾನಾವಳಿ ಊಟವೇ ಬೇರೆ''

''ಅದು ನನಗೆ ಚೆನ್ನಾಗಿ ತಿಳಿದಿದೆ ಚಂದ್ರಿ ನಾಲಿಗೆ ರುಚಿ ಅಂತ ಖಾನಾವಳಿ ಊಟ ಮಾಡಿದರೆ ಆರೋಗ್ಯ ಕೆಡುತ್ತದೆ.. ಆರೋಗ್ಯ ಕೆಟ್ಟಿತು ಅಂದರೆ ಮನೆಯೂಟವೂ ರುಚಿ ಕೊಡುವುದಿಲ್ಲ...''

ಅರಿಹಂತನ ಉತ್ತರಕ್ಕೆ ಚಂದ್ರಿ ಜರ್‍ರನೆ ಇಳಿದು ಹೋದಳು. ಅವಳಣಿಕೆ ಹುಸಿಯಾಗಿತ್ತು.

''ಚಂದ್ರಿ ನಾನು ಬಂದದ್ದು ನಿನ್ನೊಂದಿಗೆ ಸುಖ ಪಡಲು ಅಲ್ಲ...''

''ಮುಚ್ಚಿ ಹೋಗಿದ್ದ ಕೊಲೆಯ ಕೇಸನ್ನು ಮತ್ತೆ ಕೆದಕಲು ಬಂದಿದ್ದೇನೆ''

''ಯಾವ ಕೊಲೆ ಸಾಹೇಬರೆ ?''

''ಇನಸ್ಪೆಕ್ಟರ ದೇವೇಂದ್ರಪ್ಪ ಇದ್ದಾಗ ಆದ ಕೊಲೆ ಕೇಸು. ಕೋಮು ಗಲಭೆ ನಡೆದಾಗ ನಿನ್ನ ಮನೆ ಮೆಟ್ಟಲು ಬಳಿ ಬಿದ್ದಿತ್ತಲ್ಲ ಅಪರಿಚಿತ ಯುವಕನ ಶವ ಅದರ ಬಗ್ಗೆ''

''ಆಂ ? ...ಮತ್ತೆ ವಿಚಾರಣೆಯೇ ?'' ಚಂದ್ರಿಯ ಮುಖ ಬಿಳುಪಾಯಿತು.

''ಹೌದು''

''ಮತ್ತೆ ಮತ್ತೆ ಆ ಕೇಸು ಮುಚ್ಚಿ ಬಿಟ್ಟಿದೆ ಅಂತ ಹೇಳಿದ್ದರಲ್ಲ''

''ಯಾರು''

''ದೇವೇಂದ್ರಪ್ಪನವರು''

ಒಮ್ಮೆಲೆ ಚಂದ್ರಿ ನಾಲಗೆ ಕಚ್ಚಿಕೊಂಡಳು ಅವಳ ಬಾಯಿಯಿಂದ ಸತ್ಯ ಹೊರಬಂದಿತ್ತು.

'ಚಂದ್ರಿ.. ನಾನೊಂದು ಮಾತು ಸ್ಪಷ್ಟವಾಗಿ ಹೇಳುತ್ತೇನೆ ಕೇಳು. ದೇವೇಂದ್ರಪ್ಪನವರು ನಿನ್ನ ಬಾಸಾಗಿದ್ದರು. ಕೈತುಂಬ ಹಣವನ್ನು ಕೊಟ್ಟಿದ್ದರು. ಇದರಿಂದಾಗಿ ನೀನು ಅವರು ಹೇಳಿದಂತೆ ಎಲ್ಲಾ ಕೆಲಸ ಮಾಡಿರುವೆ... ಅವರು ಏನೇನೂ ಹೇಳಿದರು ! ನೀನು ಏನೇನು ಮಾಡಿದೆ ಅದೂ ಸಹ ನನಗೆ ಚೆನ್ನಾಗಿ ತಿಳಿದಿದೆ. ನನಗೆ ಬೇಕಾಗಿದ್ದು ಅದೆಲ್ಲಾ ನಿನ್ನ ಬಾಯಿಯಿಂದ ಬರಬೇಕು. ಅಂದ್ರೆ ನಿನಗೆ ಶಿಕ್ಷೆ ಆಗುವದಿಲ್ಲ.. ನಿನಗೆ ಯಾವ ತೊಂದರೆ ಆಗದಂತೆ ನೋಡಿಕೊಳ್ಳುವ ಜವಾಬ್ದಾರಿ ನನ್ನ ಮೇಲಿರಲಿ.. ಒಂದು ಮತಾ ಸೆರಗಿನಲ್ಲಿ. ಗಂಟು ಹಾಕಿಕೊ.. ನಿನ್ನಿಂದ ಈ ಕೆಲಸ ಮಾಡಿಸಿದವ ದೇವೇಂದ್ರಪ್ಪನಾದರೂ.. ಅವನಿಂದ ಕೆಲಸಮಾಡಿಸಿದವರು ಆವರ ಹಿಂದೆ ಇರುವವರು ಬೇರೆಯೇ ಇದ್ದಾರೆ. ಅವರೆಲ್ಲಾ ಪರದೆಯ ಹಿಂದಿರುವ ರಾಕ್ಷಸರು. ಅವರು ಯಾವ ಕೆಲಸ ಮಾಡಲೂ ಹಿಂಜರಿಯುವುದಿಲ್ಲ. ನಿನ್ನ ಬಗ್ಗೆ ಅವರಿಗೇನಾದರೂ ಸಂಶಯ ಬಂದಿತೋ. ಮುಗಿದೇ ಹೋಯಿತು. ನೀನು ನಂಬದ ಅದೇ ದೇವೇಂದ್ರಪ್ಪನೂ ಬದುಕಿರಲಾರೆ.. ಅವರು ನಿನ್ನನ್ನೂ ದೇವೇಂದ್ರಪ್ಪನನ್ನೂ ತಗಣೆಯಂತೆ ಹೊಸೆದು ಸಾಯಿಸುತ್ತಾರೆ. ಒಂದು ದಿನ ನಿನಗೆ ಕಾಲಾವಕಾಶಕೊಡುತ್ತೇನೆ. ನಿನ್ನ ತಪ್ಪು ನೀನೇ ಒಪ್ಪಿಕೊಂಡು ಪೋಲೀಸ್ ಸಾಕ್ಷಿಯಾಗು ತಿಳಿಯಿತೆ ?.. ನಾನು ನಾಳೆ ಬರುತ್ತೇನೆ.. ಹಾಂ.. ಊರಿನಿಂದ ಓಡಿಹೋಗಲು ಯತ್ನಿಸಬೇಡ. ಈಗಾಗಲೇ ನಿನ್ನ ಮನೆಯ ಮೇಲೆ ಪೋಲೀಸ್ ಕಾವಲು ಹಾಕಿದ್ದೇನೆ...''

ದಂಗಾಗಿ ಬಾಯಿತೆಗೆದುಕೊಂಡು ಕುಳಿತಿದ್ದ ಅವಳ ಬಾಯಿಗೆ ತನ್ನ ಕೈಯಲ್ಲಿದ್ದ ಅವಳೇ ಕೊಟ್ಟಿದ್ದ ಬೀಡಾ ತುರುಕಿ ಮೇಲೆದ್ದ ಅರಿಹಂತ..

ಸಾಕಷ್ಟು ಸಮಯವಾಗಿತ್ತು. ಠಾಣೆಯ ಬದಲು ಮನೆಗೆ ಹೋಧರಾಯಿತೆಂದು ಕಾಲುನಡೆಗೆಯಲ್ಲಿಯೇ ಮನೆಯತ್ತ ನಡೆದ. ಎದುರುಬಂದವರೆಲ್ಲ ಬದಿಗೆ ಸರಿದು ದಾರಿಮಾಡಿಕೊಟ್ಟು ನಮಸ್ಕರಿಸುತ್ತಿದ್ದರು... ಅರ್ಧದಾರಿ ನಡೆದಿದ್ದ ಎದುರಿಗೆ ಬಂದರು. ರಂಗಪ್ಪ ಪೋಸ್ಟ ಮಾಸ್ತರರು.

''ನಮಸ್ಕಾರ ಸಾಹೇಬರೆ... ಏನು ? ಕೇಸು ರೀ ಓಪೆನ್ ಮಾಡಿದಿರಾ ?''

ಒಮ್ಮಿಂದೊಮ್ಮೆಲೆ ಬಂದ ಪ್ರಶ್ನೆಗೆ ಅರಿಹಂತ ತಬ್ಬಿಬ್ಬಾದ.

''ಏಕಷ್ಟು ಗಾಬರಿ ಆಗ್ತೀರಾ ? ಇದೀಗೆ ಒಂದು ಗಂಟೆ ಹಿಂದೆ ನಿಮ್ಮ ಅಸಿಸ್ಟೆಂಟ ಬಂದು ಯಾರಿಗೋ ಫೋನು ಮಾಡಿದ ನಾನು ಕೇಳಿಸಿಕೊಂಡೆ. ಶಿವಾನಂದಪ್ಪ ಮಾಸ್ತರರ ವಿಳಾಸ ಫೋನ ನಂಬರ ಸಹ ಆತ ಕೊಟ್ಟ ಫೋನ ಮೇಲೆ....''

ರಂಗಪ್ಪ ಮಾಸ್ತರರ ಮಾತು ಕೇಳುತ್ತಿದ್ದಂತೆ ಕಣ್ಣಿಗೆ ಮಿಂಚುಹೊಡೆದಂತಾಯಿತು. ಲೂಜ್‌ಮೋಷನ್ ಎಂದು ಹೇಳಿ ಮನೆಗೆ ಹೋಗುವ ಬದಲು ನೇರವಾಗಿ ಪೋಸ್ಟ ಆಫೀಸಿಗೆ ಹೋಗಿ ಫೋನು ಮಾಡಿ ಮೆಸೇಜ್ ಪಾಸ್ ಮಾಡಿದ ತನ್ನ ಅಸಿಸ್ಟಂಟ ದತ್ತಾತ್ರಯನ ಮುಖವಾಡ ಕಳಚಿ ಅವರ ಕೈಗೆ ಬಂದಿತು. ತನ್ನ ಠಾಣೆಯಲ್ಲಿರುವ ಗುಪ್ತಾಚಾರ ಅವನೆ ಅವನಿಂದಲೇ ಎಲ್ಲಾ ಸುದ್ಧಿ ತಿಳಿಯುತ್ತಿದೆ ಎಂಬ ಮನವರಿಕೆ ಸಹ ಆಯಿತು.

ಮರುಕ್ಷಣ ಮನದಲ್ಲಿ ಮಾಡಿದ ಅಶಂಕೆಯಿಂದ ಆತ ಚಿಂತಿತನಾದ. ಪಾಪ ಶಿವಾನಂದಪ್ಪ ಮಾಸ್ತರರ ಜೀವನವೆಲ್ಲಿ ಗಂಡಾಂತರದಲ್ಲಿ ಸಿಲುಕುತ್ತದೋ ಎಂಬ ಭಯ 'ಏಕೆ ? ಏನಾಯ್ತು ? ಸಾಹೇಬರೆ'' ರಂಗಪ್ಪ ದುಗುಡದಿಂದ ಕೇಳಿದರು.

''ಏನಿಲ್ಲ ರಂಗಪ್ಪನೋರೆ ನಿಮಗೆ ತೊಂದರೆ ಕೊಡಬೇಕು ಅನಿಸಿತು''

''ಪರವಾಗಿಲ್ಲ ಹೇಳಿ... ಏನಾಗಬೇಕು ?''

''ನನ್ನ ಅಸಿಸ್ಟಂಟ ಇದೀಗ ಊರಿಗೆ ಹೋದ. ಅವನ ಕೈಯಲ್ಲಿ ನಾನು ಫೋನ ನಂಬರ ಬರೆದ ಚೀಟಿ ಕೊಟ್ಟಿದ್ದೆ. ಅವನ ಕಡೆಯೇ ಉಳಿಯಿತು. ನೀವು ದೊಡ್ಡ ಮನಸ್ಸು ಮಾಡಿ....''

''ಅಯ್ಯಯ್ಯೋ ಇಷ್ಟಕ್ಕೆಲ್ಲ ತೊಂದರೆ ಅಂದರೇನು ಸಾಹೇಬರ.. ಬನ್ನಿ ನನ್ನ ಜೊತೆ - ಪೋಸ್ಟ ಆಫೀಸಿನಲ್ಲಿದೆ ಕೊಡುತ್ತೇನೆ''

''ನೀವು ಊಟಕ್ಕೆ ಹೊರಟಿದ್ದೀರಿ''

''ಹೌದು.. ಏನಾಯಿತು.. ಒಂದರ್ಧಗಂಟೆ ಲೇಟಾಗುತ್ತದೆ ಅಷ್ಟೇ ತಾನೇ ?''

ಅರಿಹಂತನ ತಂತ್ರ ಫಲಿಸಿತು.

ಪೋಸ್ಟ ಆಫೀಸಿಗೆ ಬಂದ ರಂಗಪ್ಪನವರು ರಸೀದಿ ಪುಸ್ತಕ ತೆಗೆದು ಅದರಲ್ಲಿ ನಮೂದಿಸಿದ ನಂಬರ ಬರೆದುಕೊಟ್ಟರು.

''ಒಂದು ಸಾರಿ ಟ್ರಾಯ್ ಮಾಡಲೇ''... ಅರಿಹಂತ ಕೇಳಿದ.

''ಧಾರಾಳವಾಗಿ ಮಾಡಿ ಸಾಹೇಬರೇ''...

ನಂಬರ ನೋಡಿ ಜೋಡಿಸಿದ.. ಎರಡು ಮೂರು ಬಾರಿ ರಿಂಗ ಆಗುತ್ತಲೇ ರಿಸೀವರೆತ್ತಿದ ಯಾರೋ ಹಲೋ ದೇವೇಂದ್ರಪ್ಪ ಮಾತಾಡ್ತಿರೋದು ಏನ್ನುತ್ತಿದ್ದಂತೆ ರಿಸೀವರ ಕೆಳಗಿಟ್ಟ. ರಂಗಪ್ಪ ಅವನ ಮುಖ ಹುಳು ಹುಳು ನೋಡಿದರು. ಮೀಟರ ನೋಡಿ ಮೂರುವರೆ ರೂಪಾಯಿ ಬಿಲ್ಲು ಅವರ ಮುಂದಿಟ್ಟ ಅರಿಹಂತ ನಮಸ್ಕರಿಸಿ ಸರಸರನೆ ಹೊರಬಂದ. ಶಿವಾನಂದಪ್ಪನವರನ್ನು ಉಳಿಸಲು ಏನಾದರೂ ಮಾಡಬೇಕಾಗಿತ್ತು...

ಮನೆಗೆ ಹೋಗುವ ವಿಚಾರ ಕೈಬಿಟ್ಟು ದತ್ತಾತ್ರಯನ ಮನೆಯತ್ತ ಬಂದ. ಹಾಯಾಗಿ ಆತ ಕುರ್ಚಿ ಮೇಲೆ ಕುಳಿತು ಸಿಗರೇಟು ಸೇದುತ್ತಿದ್ದ. ಸಟಕ್‌ನೆ ಎದ್ದು ನಿಂತು ''ಸರ್ ನೀವು' ಎಂದ.'' ''ಹಾಂ ಅರ್ಜಂಟು ಕೆಲಸವಿದೆ. ಬೇಗ ಹೊರಡು'' ಎಂದ ಅರಿಹಂತ. ಐದೇ ನಿಮಿಷಗಳಲ್ಲಿ ಇಬ್ಬರೂ ಠಾಣೆಗೆ ಬಂದರು. ಅವನ ಮುಂದೆ ದೇವೇಂದ್ರಪ್ಪನ ಫೋನ ನಂಬರ ಬರೆದ ಚೀಟಿ ಇರಿಸಿ ಆದೇಶಿಸಿದ.

''ಶಿವಾನಂದಪ್ಪ ಇದೀಗ ತಾನೇ ಇಲ್ಲಿಗೆ ಬಂದಿದ್ದಾರೆ. ಎರಡು ದಿವಸ ಇಲ್ಲೇ ಇರುತ್ತಾರಂತೆ ಎಂದು ಹೇಳು.. ನಿನ್ನ ದೇವೇಂದ್ರಪ್ಪನಿಗೆ..''

ಚೇಳು ಕುಟಿಕಿದಂತೆ ಬಿಚ್ಚಿಬಿದ್ದ ದತ್ತಾತ್ರಯ.

ಅವನನ್ನು ರೆಡ್‌ಹ್ಯಾಂಡಾಗಿ ಹಿಡಿದಿದ್ದ ಅರಿಹಂಸ. ಬೇರೆ ಮಾರ್ಗವೇ ಇರಲಿಲ್ಲ. ಅರಿಹಂತ ಹೇಳಿದಂತೆ ಮಾತಾಡಿ ರಿಸೀವರ ಕೆಳಗಿಟ್ಟ.

''ದತ್ತಾತ್ರಯ ಇದೇ ಕ್ಷಣದಿಂದ ನೀನು ಸಸ್ಪೆಂಡ್ ಆಗಿರುವೆ. ನಿನ್ನೆಲ್ಲ ವಸ್ತು ಒಪ್ಪಿಸಿ ಮನೆಗೆ ಹೋಗು. ನನ್ನ ಒಪ್ಪಿಗೆಯಿಲ್ಲದೆ ಮನೆಯಿಂದ ಹೊರಗೆ ಬಂದರೂ ನಿನ್ನನ್ನ ಅರೆಸ್ಟಮಾಡಿ ಲಾಕಪ್‌ಗೆ ತಳ್ಳುತ್ತೇನೆ.. ಹುಷಾರ್''

ಇನ್ಸಪೆಕ್ಟರ ಅರಿಹಂತನ ಗುಡುಗಿಗೆ ಧರೆಗಿಳಿದು ಹೋದ ದತ್ತಾತ್ರೆಯ .. ಬಾಯಿ ಮುಚ್ಚಿಕೊಂಡು ಅವನ ಹೇಳಿಕೆಯಂತೆ ಮಾಡಿ ಠಾಣೆಯಿಂದ ಹೊರಗೆ ಬಂದ...

ಶಿವಾನಂದಪ್ಪನವರ ಜೀವಕ್ಕೆ ಸಧ್ಯದಂತೂ ಅಪಾಯವಿರಲಿಲ್ಲವಾದರೂ ಅವರು ಸುರಕ್ಷಿತವೆಂದು ಹೇಳಲಿಕ್ಕಾಗುತ್ತಿರಲಿಲ್ಲ. ಅರಿಹಂತ ಬುದ್ಧಿ ಉಪಯೋಗಿಸಿ

ದತ್ತಾತ್ರಯನಿಂದ ದೇವೇಂದ್ರಪ್ಪನವರಿಗೆ ಫೋನು ಮಾಡಿ ಎರಡು ದಿವಸ ಅವರ ಆಯುಷ್ಯ ಮುಂದಕ್ಕೆ ಹಾರಿಸಿದ್ದ ಅಷ್ಟೇ. ಎರಡು ದಿನಗಳ ನಂತರ ಏನಾಗುತ್ತದೆ ಎಂದು ಯಾರಿಗೆ ಗೊತ್ತು ? ಇಂದೇ ಅವರ ಸುರಕ್ಷತೆ ಬಗ್ಗೆ ವ್ಯವಸ್ಥೆ ಮಾಡಬೇಕೆಂದು ನಿರ್ಧರಿಸಿಕೊಂಡ. ಮನೆಗೆ ಹೋಗುವ ವಿಚಾರ ಕೈಬಿಟ್ಟ ಜೀಪಿನಲ್ಲಿ ಶಿವಾನಂದಪ್ಪನವರನ್ನು ಭೆಟ್ಟಿಯಾಗಲು ಸಧ್ಯ ಅವರು ವಾಸವಾಗಿದ್ದ ತೇಗೂರಿಗೆ ಹೊರಟು ನಿಂತ. ಅದರಂತೆ ಮನೆಗೆ ಸುದ್ದಿ ಕಳಿಸಿ ದಾರಿನೋಡಬಾರದೆಂದೂ ರಾತ್ರಿ ತಡವಾಗಿ ಬರುವುದಾಗಿಯೂ ತಿಳಿಸಿದ... ಈಗವನ ಜೀಪು ತೇಗೂರಿನತ್ತ ಓಡತೊಡಗಿತ್ತು.

ಒಂದು ಮಾತು ನಿಚ್ಚಳವಾಗಿ ವಾಗಿ ಮೂಡಿ ಬಂದಿತ್ತು.

ಪೋಲೀಸ್ ಇನಸ್ಪೆಕ್ಟರ ದೇವೇಂದ್ರಪ್ಪನ ಕೈವಾಡ ಮುಚ್ಚಿದ ಫೈಲಿನಲ್ಲಿ ಸಂಪೂರ್ಣವಾಗಿದೆ... ಆತನೇ ಇದರ ಸೂತ್ರಧಾರ.. ಮರುಕ್ಷಣ ದೇವೇಂದ್ರಪ್ಪನೇ ಇದರ ಸೂತ್ರಧಾರ ಎಂದು ನಂಬಲು ಮನಸ್ಸಾಗಲಿಲ್ಲ. ದೇವೇಂದ್ರಪ್ಪ ಕೇವಲ ಒಂದು ಬೊಂಬೆ ಮಾತ್ರ. ಬೊಂಬೆಯನ್ನು ಕುಣಿಸುವ ಸೂತ್ರಧಾರ ಬೇರೆ ಯಾರೋ ಇರಬೇಕು ಎಂಬ ತೀರ್ಮಾನಕ್ಕೆ ಬಂದ..

ಆದರೂ ದೇವೇಂದ್ರಪ್ಪನ ಬಾಯಿ ಬಿಡಿಸುವದು ಅವಶ್ಯವಾಗಿತ್ತು.

ಇದು ಸರಳ ಕೆಲಸವಿಲ್ಲದಿದ್ದರೂ ಅಸಾಧ್ಯವಂತೂ ಅವನಿಗಿರಲಿಲ್ಲ. ಅರಿಹಂತನಿಗೆ ಯಾವುದಕ್ಕೂ ದೇವೇಂದ್ರಪ್ಪ ಮಹತ್ವದ ಕೊಂಡಿಯಾಗಿದ್ದ. ಇದರಲ್ಲಿ ಇನ್ನೂ ಒಂದು ತೊಡಕಿತ್ತು. ದೇವೇಂದ್ರಪ್ಪ ಇಲಾಖೆಯ ಹಿರಿಯ ಅಧಿಕಾರಿ.. ಅಂದು ಇನಸ್ಪೆಕ್ಟರ ಆಗಿದ್ದವ. ಇಂದು ಡಿ.ಎಸ್.ಪಿ. ಅಂತೂ ಆಗಿರಲೇಬೇಕು. ಅಥವಾ ಹೆಚ್ಚುವರಿ ಎಸ್.ಪಿ. ಅಂಥವರನ್ನೂ ವಿಚಾರಿಸಲು ಇಲಾಖೆಯಿಂದ ಒಪ್ಪಿಗೆ ಪಡೆಯಬೇಕು... ಅವರ ಕೈವಾಡ ಏನಿದೆಯೆಂಬುದನ್ನು ಪ್ರತ್ಯಕ್ಷ ಸಾಕ್ಷಿ ಆಧಾರದೊಂದಿಗೆ ನಿರೂಪಿಸಬೇಕು. ಒಂದು ವೇಳೆ ಇದರಲ್ಲಿ ವಿಫಲವಾದರೆ ಮುಂದಾಗುವ ಪರಿಣಾಮದ ಬಗ್ಗೆಯೇ ಯೋಚಿಸಬೇಕಾಗಿತ್ತು. ಈಗಾಗಲೇ ಅರಿಹಂತನ ಕೈಗೆ ಎರಡು ಸಾಕ್ಷಿಗಳು ದೊರೆತಿದ್ದವು. ಚಂದ್ರಿ ಮತ್ತು ದತ್ತಾತ್ರೇಯ, ಅವರು ಧೈರ್ಯದಿಂದ ಸಾಕ್ಷಿ ಹೇಳಲು ಮುಂದೆ ಬಂದರೆ ಅಂದೇ ದೇವೇಂದ್ರಪ್ಪನವರ ಮೇಲೆ ಕೈಹಾಕಲು ಅರಿವಂತ ಸಿದ್ಧನಾಗಿದ್ದ... ಆದರೆ ಅವರನ್ನೆಂತು ನಂಬುವುದು ? ನಾಳೆ ಅವರು ಹೊರಳಿಬಿದ್ದರೆ ?... ಇದೇನೂ

ಹೊಸದಲ್ಲ. ಠಾಣೆಯಲ್ಲಿ ಎಲ್ಲಾ ಒಪ್ಪಿಕೊಂಡು ಸಹಿ ಮಾಡಿ[illegible]ವರೇ ನ್ಯಾಯಾಲಯದಲ್ಲಿ ನಮಗೇನೂ ತಿಳಿಯದು ಪೋಲೀಸರ ಹಿಂಸೆ ತಾಳ[illegible]ವೆ ಈ ರೀತಿ ಹೇಳಿಕೆ ಕೊಟ್ಟಿರುವದಾಗಿ ಹೇಳುವದು ಸರ್ವೇಸಾಮಾನ್ಯವಾಗಿತ್ತು.

ಆದಕಾರಣ ತೀರ ಎಚ್ಚರಿಕೆಯಿಂದ ಹೆಜ್ಜೆ ಇಡಲು ಆತ ನಿರ್ಧರಿಸಿದ.

ತೇಗೂರು ತಲುಪಿದಾಗ ಸಾಯಂಕಾಲ ಏಳು ಗಂಟೆಗೆ ಸಮೀಪಿಸಿತ್ತು. ಆ ಊರು ಅರಿಹಂತನ ಕಾರ್ಯ ವ್ಯಾಪ್ತಿಗೆ ಬರುತ್ತಿರಲಿಲ್ಲ. ಹೀಗಾಗಿ ಆತ ನೇರವಾಗಿ ಪೋಲೀಸ ಠಾಣೆಗೆ ಬಂದು, ಪೋಲೀಸ ಜೀಪಿನಿಂದ ಕೆಳಗಿಳಿದು ತಮ್ಮ ಅಧಿಕಾರಿಯ ಪರಿಚಯ ಸೆಂಟ್ರಿಗೆ ಇರದಿದ್ದರೂ ಆತ ಪೋಲೀಸ್ ಅಧಿಕಾರಿಯೆಂಬುದು ಸುಳ್ಳಲ್ಲವಲ್ಲ. ಭರ್ಜರಿಯಾಗಿ ಸೆಲ್ಯೂಟ್ ನೀಡಿದ. ಇನ್ನೊಬ್ಬ ಪಿ.ಸಿ. ಓಡಿಬಂದು ವಂದಿಸಿದ.

''ಸಾಹೇಬರು ಇದ್ದಾರೆಯೇ ?''

''ಇದ್ದಾರೆ ಸರ್ ಬನ್ನಿ... ನಾನವರಿಗೆ ಸುದ್ದಿ ತಿಳಿಸುತ್ತೇನೆ''

ಅರಿಹಂತ ಗಿಂತ ಮೊದಲೇ ಒಳಗೆ ಧಾವಿಸಿ ಬಂದಿದ್ದ ತನ್ನ ಸಾಹೇಬರಿಗೆ ಸಮಾಚಾರ ತಿಳಿಸಿದ. ಓಡಿಬಂದ ಪಿ.ಸಿ... ಸಬ್ ಇನಸ್ಪೆಕ್ಟರ ಕ್ಯಾಪು ಡ್ರೆಸ್ಸು ಸರಿಪಡಿಸಿಕೊಳ್ಳುತ್ತಾ ಹೊರಗೆ ಬಂದವ ಎದುರೇ ಬರುತ್ತಿರುವ ಅರಿಹಂತನಿಗೆ ಸೆಲ್ಯೂಟನೀಡಿ ವಂದಿಸಿದ.

''ಸರ್ ಸಬ್ ಇನಸ್ಪೆಕ್ಟರ ಸಾವಂತ್''

''ಗುಡ್ ಇವನಿಂಗ ಸಾವಂತ್...ನಾನು ಇನಸ್ಪೆಕ್ಟರ ಅರಿಹಂತ''

''ಓಹ್ ಗಾಡ... ಅರಿಹಂತ ಸಾಹೇಬರು.. ಬನ್ನಿ.. ಬನ್ನಿ ಸಾರ್..''

ಆನಂದ ತಾಳಲಾರದೇ ಹೃದಯ ತುಂಬಿ ಬಂದು ಸಾವಂತ ಸ್ವಾಗತಿಸಿ ಅರಿಹಂತನನ್ನು ಒಳಗೆ ಕರೆದೊಯ್ದು ಸತ್ಕರಿಸಿದ... ನಂತರ ಕೇಳಿದ....

''ಹೇಳಿ ಸರ್... ನನ್ನಿಂದೇನಾಗಬೇಕು ?''

ಸಾವಂತ ನಿಮ್ಮೂರಿನಲ್ಲಿ ಶಿವಾನಂದಪ್ಪ ಮಾಸ್ತರರು ಬಂದಿದ್ದಾರೆ. ಅವರನ್ನು....''

''ಓಹ್... ಮಾಸ್ತರರು.. ಇಂಜನೀಯರ ಸಾಹೇಬರ ಅಳಿಯಂದಿರು..''

''ನಿಮಗವರ ಪರಿಚಯವಿದೆಯೇ ?''

''ಮಾಸ್ತರರ ಪರಿಚಯ ಯಾರಿಗಿಲ್ಲ ಸರ್, ಅವರಂಥವರು ಅಪರೂಪ.. ಬನ್ನಿ ನಾನೇ ಖುದ್ದಾಗಿ ಅವರ ಬಳಿ ಕರೆದೊಯ್ಯುತ್ತೇನೆ''

''ಒಂದು ವಿಷಯ ಸಾವಂತ್..''

''ಹೇಳಿ ಸರ್''

''ನನಗೆ ಒಂದು ಮಹತ್ವದ ಕೇಸ ಬಗ್ಗೆ ವಿಚಾರಿಸಬೇಕಾಗಿದೆ. ಕಾರಣ ಇದು ಎಷ್ಟು ರಹಸ್ಯವಾಗಿರುತ್ತದೋ ಅಷ್ಟು ಒಳ್ಳೆಯದು''

ಪರಿಸ್ಥಿತಿ ಅರ್ಥ ಮಾಡಿಕೊಂಡ ಸಾವಂತ ಪಿ.ಸಿ.ಯನ್ನು ಕರೆದು ಅವನಿಗೆ ಏನೇನೋ ನಿರ್ದೇಶನ ನೀಡಿ ಓಡಿಸಿ ಅರಿಹಂತನೆಡೆ ಹೊರಳಿದ.

''ಸರ್ ಒಂದು ಹತ್ತು ನಿಮಿಷ ಮನೆಯಿಂದ ಬಟ್ಟೆ ಬರುತ್ತವೆ ತೊಟ್ಟುಕೊಂಡು ನಾವು ಅವರ ನೆಂಟರಾಗಿ ಹೋಗೋಣ''

ಅರಿಹಂತ ಅವನ ಜಾಣ್ಮೆಗೆ ತಲೆದೂಗಿ ಮೆಚ್ಚುಗೆ ವ್ಯಕ್ತಪಡಿಸಿದ.

ಅರ್ಧಗಂಟೆ ನಂತರ ಇಬ್ಬರೂ ಪ್ಯಾಂಟು ಬುಶ್‌ಶರ್ಟ ಧರಿಸಿ ಕಾಲುನಡುಗೆಯಲ್ಲೇ ಶಿವಾನಂದಪ್ಪನವರ ಮನೆಕಡೆ ನಡೆದರು.

ತೇಗೂರು ಸಣ್ಣ ಗ್ರಾಮ, ಅವರಿಗೆಲ್ಲಾ ಸಾವಂತನ ಪರಿಚಯವಿತ್ತು ಅರಿಹಂತನ ಬಗ್ಗೆ ತಿಳಿದಿರಲಿಲ್ಲ. ಅದೂ ಅಲ್ಲದೇ ಸದಾಕಾಲ ಪೋಲೀಸ್ ಯಾನಿಫಾರ್ಮ ಮೇಲೆ ಇರುತ್ತಿದ್ದ. ಸಾವಂತನನ್ನು ಗುರುತಿಸಲು ಸ್ವಲ್ಪ ಕಠಿಣವೆನಿಸುತ್ತಿತ್ತು. ಮುಖದ ಪರಿಚಯ ಸಿಕ್ಕರೂ ಯಾರು ? ಎಲ್ಲಿ ಯ ಎಂದು ತಿಳಿಯುವಷ್ಟರಲ್ಲಿ ಅವರನ್ನು ದಾಟಿ ಮುಂದೆ ಹೋಗುತ್ತಿದ್ದ ಸಾವಂತ್.

ಶಿವಾನಂದಪ್ಪ ಮನೆಯಲ್ಲೇ ಇದ್ದರು. ಮೊಮ್ಮಕ್ಕಳ ಜೊತೆ ಆಟವಾಡುತ್ತಿದ್ದರು. ಒಂದು ಮಗು ಹೆಗಲು ಏರಿ ಅವರ ತಲೆಯಲ್ಲಿ ಉಳಿದಿದ್ದ ಮುಷ್ಠಿಗಾತ್ರದ ಕೂದಲು ಕಿತ್ತುತ್ತಿದ್ದರೆ ಇನ್ನೊಂದು ಮಗು ಬೆನ್ನ ಮೇಲೆ ಬಿದ್ದು ಪುಟ್ಟ ಕೈಗಳಿಂದ ಪಟಪಟ ಬಾರಿಸುತ್ತಿತ್ತು. ಮಕ್ಕಳಿಗಿಂತ ಮಕ್ಕಳಾದ ಶಿವಾನಂದಪ್ಪ ಅವರೊಂದಿಗೆ ಕೇಕೆ ಹಾಕುತ್ತ, ಆಟವಾಡುತ್ತಿದ್ದರು.

''ನಮಸ್ಕಾರ ಮಾಸ್ತರಿಗೆ''

ಶಿವಾನಂದಪ್ಪ ಹೊರಳಿದ್ದವರು ಒಂದು ಕ್ಷಣ ಗೊಂದಲದಲ್ಲಿ ಬಿದ್ದವರು ಮರುಕ್ಷಣ ಸಾವಂತನ ಪರಿಚಯ ಸಿಕ್ಕು ''ಓಹೋ..ಸಾವಂತ ಸಾಹೇಬರು.. ಬನ್ನಿ..ಬನ್ನಿ'' ...ಒಳಗಿನ ಕೋಣೆಯತ್ತ ಕೈಮಾಡಿತೋರಿದ ಶಿವಾನಂದಪ್ಪ ಎರಡೂ ಮಕ್ಕಳನ್ನು ತಮ್ಮ ಎರಡು ಬಗಲುಗಳಲ್ಲಿ ಎತ್ತಿ ಹಿಡಿದು ಒಳನಡೆದರು. ಒಂದೇ ನಿಮಿಷದಲ್ಲಿ ಅವರು ಹೊರಬಂದಾಗ ಅವರ ಕಂಕುಳಲ್ಲಿ ಮಕ್ಕಳಿರಲಿಲ್ಲ...

''ಶಿವಾನಂದಪ್ಪನವರೆ.. ನಿಮ್ಮೊಂದಿಗೆ ರಹಸ್ಯವಾಗಿ ಮಾತಾಡಲು ಈ ಸಾಹೇಬರು ಬಂದಿದ್ದಾರೆ''

ಸಾವಂತರ ಮಾತು ಕೇಳಿ ಕುತೂಹಲದಿಂದ ಶಿವಾನಂದಪ್ಪ ಹೊರಳಿದರು ಅರಿಹಂತರ ಕಡೆ.

''ನಮಸ್ಕಾರ ಗುರುಗಳೆ. ನಿಮ್ಮ ಬಗ್ಗೆ ನಾನು ತುಂಬಾ ಕೇಳಿದ್ದೇನೆ. ನಿಮ್ಮ ದರ್ಶನವಾದದ್ದು ಅದೃಷ್ಟ''

''ನೀವು ಯಾರು ಅಂತ ತಿಳೀಯಲಿಲ್ಲ...ಕ್ಷಮಿಸಿ''

''ನಾನು ಅರಿಹಂತ... ಇನಸ್ಪೆಕ್ಟರ ಅರಿಹಂತ.. ಎಂಟು ದಿನಗಳ ಹಿಂದೆ ಬಂಡರಗಟ್ಟಿ ಠಾಣೆಗೆ ವರ್ಗವಾಗಿ ಬಂದಿದ್ದೇವೆ'' ಬಂಡರಗಟ್ಟಿ ಹೆಸರು ಕಿವಿಗೆ ಬೀಳುತ್ತಲೂ ಪ್ರಫುಲ್ಲವದರಾದ ಶಿವಾನಂದಪ್ಪ ಮುಂದಿನ ಕ್ಷಣವೇ ಜರ್ರ ಎಂದು ಇಳಿದರು.. ಮುಖ ಸತ್ವಗಾಯಿತು. ಅವರಲ್ಲಾದ ಈ ವಿಚಿತ್ರ ಬದಲಾವಣೆಯ ಕಾರಣ ಅರಿಹಂತನಿಗೆ ತಿಳಿದಿತ್ತು.

''ಶಿವಾನಂದಪ್ಪನವರೆ ತಾವು ಸತ್ಯ ನುಡಿಯುತ್ತಿರೆಂದೇ ಹುಡುಕಿಕೊಂಡು ಬಂದಿರುವೆ''

''ಇನಸ್ಪೆಕ್ಟರೇ, ನನ್ನ ಜೀವನದುದ್ದಕ್ಕೂ ಉಳಿಸಿಕೊಂಡು ಬಂದ ಆಸ್ತಿ ಎಂದರೆ ಅದೊಂದೇ''

''ಸಂತೋಷ ಗುರುಗಳೆ... ನಾನು ಮಾತು ಆರಂಭಿಸುವ ಮೊದಲು ನಾನು ಬಂದ ವಿಷಯ ಎಷ್ಟು ಗಂಭೀರವಾಗಿದೆ ಎಂಬುದನ್ನು ಸ್ಪಷ್ಟಪಡಿಸಬಯಸುತ್ತೇವೆ''

''ಅಲ್ಲಿಂದ ಇಲ್ಲಿಯವರೆಗೆ ನೀವು ನನ್ನನ್ನು ಹುಡುಕಿಕೊಂಡು ಬಂದಿರುವುದು ಸಾಲದೇ''

''ಸಾಲದು... ಎಳ್ಳಷ್ಟೂ ಸಾಲದು''

ಶಿವಾನಂದಪ್ಪ ಬೆಚ್ಚಿದವರಂತೆ ಕಂಡರು. ಅವರು ಸಾವಂತನೆಡೆ ನೋಡಿದಾಗ ಅವನೂ ಇದರ ಬಗ್ಗೆ ನನಗೇನೂ ತಿಳಿಯದು ಎಂಬಂತೆ ಭುಜ ಹಾರಿಸಿದ.

''ನನಗೂ ಗೊತ್ತಿಲ್ಲ ಶಿವಾನಂದಪ್ಪನೋರೆ''

''ಹೌದು ಗುರುಗಳೇ ಇದು ಇನ್ನೂ ಯಾರಿಗೂ ತಿಳಿದಿಲ್ಲ... ನಿಮ್ಮಕೊಲೆಗಾರನನ್ನೂ ಬಿಟ್ಟರೆ''

''ಏನೆಂದಿರಿ ? ನನ್ನು ಕೊಲೆಗಾರನೇ ?'' ಬೆಚ್ಚಿಬಿದ್ದ ಶಿವಾನಂದಪ್ಪ ಕೇಳಿದರು. ಸಾವಂತ ಸಹ ಅದುರಿದ ಆಶ್ಚರ್ಯದಿಂದ...

''ನಿಜ ಶಿವಾನಂದಪ್ಪನವರೆ... ನಾನು ಇಲ್ಲಿಗೆ ಬರಲು ವಿಲಂಬ ಮಾಡಿದ್ದರೆ ಬಹುಶಃ ನೀವು ನಾಳಿನ ಸೂರ್ಯವನ್ನು ನೋಡುತ್ತಿರಲಿಲ್ಲ....''

''ಯಾರವರು ನನ್ನನ್ನು ಕೊಲೆ ಮಾಡಲು ಬಯಸಿದವರು ? ನಾನೇನು ಅವರಿಗೆ ಅಂಥ ಅನ್ಯಾಯ ಮಾಡಿರುವೆ ಅಂತ ಈ ಕೆಲಸ ಮಾಡಲು ಮುಂದಾಗಿದ್ದಾರೆ ?''

''ದೇವೇಂದ್ರಪ್ಪ ಡಿ.ಎಸ್.ಪಿ. ದೇವೇಂದ್ರಪ್ಪ''

''ಆಂ ? ಏನೆಂದಿರಿ ? ಆಘಾತತಾಳಲಾರದೇ ಸಾವಂತ ಅರಚಿಕೊಂಡ. ಶಿವಾನಂದಪ್ಪ ಸಹ ಆತಂಕಿತರಾದರು. ಪೋಲೀಸ್ ಅಧಿಕಾರಿಯಿಂದ ಕೊಲೆಯತ್ನವೇ ?''

''ಏಕೆ ಸಾವಂತ ? ನೀವು ತುಂಬಾ....''

''ಹೌದು ಸರ್... ನೀವು ಹೇಳಿದ್ದೇ ಅಷ್ಟು ಆಘಾತಕಾರಿಯಾಗಿತ್ತು .. ನಮ್ಮ ಸಾಹೇಬರು ಈರೀತಿ... ಛೀ...ನಂಬಲಿಕ್ಕಾಗದು..''

''ಏನೆಂದಿರಿ ? ...ನಿಮ್ಮ ಸಾಹೇಬರು ? ....

''ಕೇವಲ ನನ್ನ ಸಾಹೇಬರಷ್ಟೇ ಅಲ್ಲ ಸರ್... ನಿಮ್ಮ ಸಾಹೇಬರೂ ಸಹ

''ಅಂದರೆ ಅಂದರೇನು ನಿಮ್ಮ ಮಾತಿನ ಅರ್ಥ ?''

''ತಮಗಿನ್ನೂ ಗೊತ್ತಿಲ್ಲವೆಂದು ಕಾಣುತ್ತಿದೆ ಸರ್. ನಿನ್ನೆ ತಾನೇ ದೇವೇಂದ್ರಪ್ಪ ಸಾಹೇಬರು ನಮ್ಮ ಜಿಲ್ಲೆಯ ಹೆಚ್ಚುವರಿ ಎಸ್.ಪಿ.ಯಾಗಿ ಅಧಿಕಾರ ವಹಿಸಿಕೊಂಡಿದ್ದಾರೆ !''

'ಓಹ್... ನೋ... ಡಿ.ಎಸ್.ಪಿ. ಅಂದ್ಕೊಂಡಿದ್ದೆ'

ಕೈಕೈ ಹಿಸುಕಿಕೊಂಡ ಅರಿಹಂತ.. ವಿಷಯ ಮತ್ತಷ್ಟು ಜಟಿಲವಾಯಿತು.

ಅರಿಹಂತ ಒಮ್ಮೆಲೆ ಸಾವಂತನೆಡೆ ಹೊರಳಿದ.

''ಸಾವಂತ್... ನೀವು ಅಧಿಕಾರಕ್ಕೆ ಬರುವ ಮೊದಲು ಇಲಾಖೆಯ ಗೌಪ್ಯತೆ ಕಾಯುವ ಬಗ್ಗೆ, ನಿಮ್ಮ ಯೂನಿಫಾರ್ಮ ಗೌರವ ಉಳಿಸುವ ಬಗ್ಗೆ ಪ್ರಮಾಣ ಮಾಡಿದ್ದೀರಿ..''

''ಹೌದು ಸರ್... ಏನೀಗ ?''

''ಅದೇ ಪ್ರಮಾಣ ನಿಮಗಿಂದು ನಾನು ನೆನೆಪಿಸುತ್ತೇನೆ. ಈ ವಿಷಯ ಯಾವದೇ ಪ್ರಸಂಗದಲ್ಲೂ ಬೇರೆಯವರ ಕಿವಿಗೆ ಬರಕೂಡದು''

ಮಂದಹಾಸ ಸೂಸಿದ ಸಾವಂತ ಧೃಡಸ್ವರದಲ್ಲಿ ಹೇಳಿದ. ''ಸರ್ ತುಂಬಾ ದಿನಗಳಿಂದ ನೀವು ನನಗೆ ಆದರ್ಶ.. ನನ್ನ ಪ್ರಾಣ ಹೋದರೂ ನಾನು ಈ ರಹಸ್ಯ ಬಾಯಿ ಬಿಡಲಾರೆ...''

ತುಂಬಿ ಬಂದ ಹೃದಯದಿಂದ ಅರಿಹಂತ ಅವನ ಕೈಹಿಡಿದು ಬಲವಾಗಿ ಅದುಮಿದ.

ಮುಂದೆ ಅರ್ಧಗಂಟೆ ನಡೆದ ವಿಷಯವೆಲ್ಲವನ್ನೂ ಅವರಿಬ್ಬರ ಮುಂದೆ ಸರಳವಾಗಿ ವಿವರಿಸಿದ. ಮುಚ್ಚಿದ ಫೈಲಲ್ಲಿರುವ ಅಪಾಯಕಾರಿ ಅಂಶಗಳನ್ನು ಒಂದು ಸಾರಿ ಅವರ ಮುಂದೆ ಇರಿಸಿದ..

ಕೊನೆಗೆ ಆತ ನುಡಿದ.

''ಎಲ್ಲಾ ಸುತ್ತಿ ಬಳಸಿ ದೇವೇಂದ್ರಪ್ಪನವರೇ ನಮಗೆ ಆಪಾದಿತರಾಗಿ ಕಾಣಿಸುತ್ತಿದ್ದಾರೆ. ವಿಷಯ ಹಾಗಿಲ್ಲ. ಅವರ ಹಿಂದೆ ಯಾರೋ ಪ್ರಭಾವೀ ವ್ಯಕ್ತಿಯಿದ್ದಾರೆ. ಅವರು ಹಿಂದಿದ್ದುಕೊಂಡೇ ದೇವೇಂದ್ರಪ್ಪನಿಂದ ಇಂಥ ಕೆಲಸ ಮಾಡಿಸುತ್ತಿದ್ದಾರೆ. ಅವರು ಯಾರು ಎಂದು ಕಂಡುಹಿಡಿದು ಅವರ ಕಪಿಮುಷ್ಠಿಯಲ್ಲಿರುವ ನಮ್ಮ ಇಲಾಖೆಯನ್ನು ಬಿಡಿಸಬೇಕಾಗಿದೆ...''

''ನಿಮ್ಮ ಉದ್ದೇಶ ಅರ್ಥವಾಯಿತು ನನ್ನಿಂದೇನಾಗಬೇಕು ಹೇಳಿ''

''ನಿಮ್ಮ ಊರಲ್ಲಿ ನಡೆದ ಕೋಮುಗಲಭೆ ಹಿನ್ನೆಲೆ... ಅಪರಿಚಿತನ ಕೊಲೆ

ಎಲ್ಲಾ ವಿಷಯ ಏನೂ ಮುಚ್ಚಿಡದೇ ನನ್ನ ಮುಂದೆ ಹೇಳಿ...''

ಒಂದೆರಡು ನಿಮಿಷ ಮೌನವಾಗಿದ್ದ ಶಿವಾನಂದಪ್ಪ ಎಲ್ಲಾ ಒಂದೇ ಸಾರಿ ಅವರ ಮುಂದೆ ವಿವರವಾಗಿ ಇಡುತ್ತ ಹೋದರು... ಎಲ್ಲಾ ಕೇಳಿಯಾದ ಮೇಲೆ ಅರಿಹಂತ ನುಡಿದ.

''ನಿಜವಾಗಿಯೋ ನಿಮ್ಮ ಸಾಧನೆ ಮೆಚ್ಚತಕ್ಕದ್ದು... ನಿಷ್ಠೆ ಶ್ರಮ ವಹಿಸಿ ಶಾಂತಿ ನೆಲೆಸುವಂತೆ ಮಾಡಿರದಿದ್ದರೆ ಹಿಂಸೆ ಭುಗಿಲೆದ್ದು ಊರಿನ ತುಂಬೆಲ್ಲಾ ಹೆಣಗಳ ರಾಶಿಯೇ ಬೀಳುತ್ತಿತ್ತು. ನಿಮ್ಮಿಂದಾಗಿ ಊರು ಬದುಕಿ ಉಳಿಯಿತು. ಶಿವಾನಂದಪ್ಪನವರೇ ಒಂದು ಪ್ರಶ್ನೆಗೆ ಸರಿಯಾಗಿ ಯೋಚಿಸಿ ಉತ್ರ ಕೊಡಿ... ಒಮ್ಮೆಲೆ ಬೇಡ...''

''ಕೇಳಿ. ನಾನು ಪ್ರಯತ್ನಿಸುತ್ತೇನೆ''

ಅಷ್ಟರಲ್ಲಿ ಬಾಗಿಲ ಬಳಿ ಸದ್ದಾಯಿತು. ಬಹುಶಃ ಶಿವಾನಂದಪ್ಪನವರ ಮಗಳಿರಬೇಕು, ಟ್ರೇದಲ್ಲಿ ತಿಂಡಿ ಟೀ ತಂದು ಅವರ ಮುಂದಿರಿಸಿದಳು. ಅವರ ಹಿಂದೆ ಅಳಿಯ ಇಂಜನೀಯರ ಶಿವಾನಂದಪ್ಪ ಅವರಿಬ್ಬರ ಪರಿಚಯಮಾಡಿಕೊಟ್ಟರು. ಅರಿಹಂ ತಟಕ್‌ನೆ ಮಧ್ಯೆ ಬಾಯಿ ಹಾಕಿದ. ಶಿವಾನಂದಪ್ಪ ಎಲ್ಲಿ ಸತ್ಯನುಡಿಯುತ್ತಾರೋ ಎಂದು,

''ನಾನು ಸಾವಂತ ಇಬ್ಬರೂ ಹಳೆಯ ಸ್ನೇಹಿತರು. ಇವರ ಬಳಿ ಬಂದಿದ್ದೆ. ಹಾಗೇ ಶಿವಾನಂದಪ್ಪನವರನ್ನು ಕಂಡರಾಯಿತೆಂದು...ಹಿ..ಹಿ..''

ಕೈಯಿಂದ ಜಾರುತ್ತಿದ್ದ ಪಟದ ದಾರ ಮತ್ತೆ ಕೈಗೆಬಂದಿತ್ತು.

ಎರಡು ನಿಮಿಷ ಕುಳಿತಿದ್ದು ಅವರಿಬ್ಬರೂ ಹೊರ ನಡೆದರು. ತಿಂಡಿ ತಿಂದು ಆಗಿತ್ತು. ಟೀಕುಡಿಯುತ್ತ ಕೇಳಿದ ಅರಿಹಂತ.

'ಬಂಡರಗಟ್ಟಿಯಲ್ಲಿ ನಡೆದ ಗಲಭೆ... ಕೊಲೆ... ಇವೆಲ್ಲಾ ನಿಮಗೆ ಸಹಜ ಅನಿಸುತ್ತವೆಯೇ ? ...ಅಂದರೆ...ಅಂದರೆ... ಆ ಹಿಂಸಾಚಾರ...ಕೊಲೆ...ಎಲ್ಲಾ ನಿಮ್ಮ ಊರಲ್ಲಿ ನಡೆಯುವ ಸಾಧ್ಯತೆ ಇತ್ತೇ ?'

''ಇಲ್ಲಾ ಖಂಡಿತವಾಗಿಯೂ ಇರಲಿಲ್ಲ. ನಮ್ಮ ಜನ ಶಾಂತಿಪ್ರಿಯರು. ದೊಡ್ಡ ಮನಸ್ಸಿನವರು. ನಾನ್ನು ಕೇವಲ ನಮ್ಮ ಊರ ಬಗ್ಗೆ ಹೇಳುತ್ತಿಲ್ಲ. ಗ್ರಾಮಗಳಲ್ಲಿರುವ ಬಹಳ ಜನ ಕೋಮುವಾದಿಗಳಲ್ಲ. ಅವರ ಮುಖದಲ್ಲಿ ಜಾತಿ

ದ್ವೇಷ ಇರುವದಿಲ್ಲ... ಎಲ್ಲರೂ ಹೊಂದಿಕೊಂಡು ಜೀವನ ಪ್ರೀತಿಯಿಂದ ಸಾಗಿಸುತ್ತಾರೆ''

''ನಿಜ...ನಿಮ್ಮ ಊರವರು ಹೀಗೆ ಇದ್ದರೂ...ಆದರೂ ಈ ಹಿಂಸಾಕಾಂಡ...''

''ಅದೇ ನನಗೆ ಅಚ್ಚರಿ ಮೂಡಸಿದೆ... ಇದಕ್ಕೂ ಮೊದಲು ಒಂದು ಹುಡುಗಿಯನ್ನೂ ಕೆಡಿಸಲು ಮುಂದಾದ ಕತೆ ಹಳೆಯದು. ಅದನ್ನೆಲ್ಲ ಜನ ಮರೆತಿದ್ದರು. ಈ ಕಾಂಡ ಒಮ್ಮೆಲೆ ಬುಗಿಲೆದ್ದ ಹಿಂಸಾಕಾಂಡ.''

''ಅಂದರೆ ಇದರಲ್ಲಿ ನಿಮ್ಮ ಊರಿನವರ ಯಾರ ಕೈವಾಡವೂ ಇಲ್ಲ''

''ಇಲ್ಲ.. ಯಾರೋ ಹೊರಗಿನವರದೇ ಈ ಕೆಲಸ''

''ಅವರು ಯಾರಿರಬಹುದು ? ಯೋಚಿಸಿ ಗುರುಗಳೆ... ಹಾಂ... ನಾನೊಂದು ರೀತಿಯಲ್ಲಿ ಇದನ್ನು ಹೇಳುತ್ತೇನೆ... ಕೊಲೆಯಾಗಿ ಬಿದ್ದಿದ್ದ ಅಪರಿಚಿತನೇ ಇದನ್ನೆಲ್ಲ ಏಕೆ ಮಾಡಿರಬಾರದು ?...''

''ಆಂ ಏನೆಂದಿರಿ ?''

''ಹಾಂ ಆ ಅಪರಿಚಿತನೇ ಹಿಂದಿನ ರಾತ್ರಿ ಬಂದು ಎರಡೂ ಪ್ರಾರ್ಥನಾ ಮಂದಿರಗಳಲ್ಲಿ ಸತ್ತ ಪ್ರಾಣಿ ಬಗೆದು ಜನ ರೊಚ್ಚಿಗೆದ್ದು ಬಡಿದಾಡಲು ಪ್ರೇರೇಪಿಸಿದ್ದಾನೆ''

''ನಿಮ್ಮ ಮಾತು ನಿಜವಾಗಬಹುದು. ಆದರೆ ಆತ ಜೀವಂತವಾಗಿದ್ದು ಬಾಯಿ ಬಿಟ್ಟರೆ ಇದರ ಹಿಂದಿರುವವರ ಹೆಸರು ಬಯಲಿಗೆ ಬರುತ್ತದೆ. ಎಂಬ ಭಯ ಅದರ ಜೊತೆಯಲ್ಲಿ ಅವನಿಂದ ಯಾವ ಕೆಲಸ ಮಾಡಿಸಬೇಕಾಗುತ್ತೋ ಅದನ್ನು ಮಾಡಿಸಬೇಕಾಗಿತ್ತು.''

ಅರಿಹಂತನ ವಾದ ಒಪ್ಪಲೇಬೇಕಾಯಿತು.

''ಹೌದು ನಿಮ್ಮ ಮಾತಿನಲ್ಲಿ ಸತ್ಯವಡಗಿದೆ ಎಂದು ಸಂಶಯ.''

''ಕೇಳಿ''

''ಆ ಅಪರಿಚಿತನ ಬೆಳಿಗ್ಗೆ ತನ್ನ ಕೆಲಸ ಮಾಡಿ ಮುಗಿಸಿದ ಮೇಲೆ ಓಡಿ ಹೋಗಲಿಲ್ಲ. ಗಲಾಟೆ ನಡೆಯುವವರೆಗೂ ಅಲ್ಲೇ ಏಕೆ ಇದ್ದ ? ಇದ್ದರೆ ಎಲ್ಲಿದ್ದ ?''

''ತುಂಬಾ ಮಹತ್ವದ ಪ್ರಶ್ನಗಳು ಗುರುಗಳೇ, ಆತನಿಗೆ ಓಡಿ ಹೋಗಲು ಅವಕಾಶ ಸಿಕ್ಕಿರಲಿಕ್ಕಿಲ್ಲ. ಅಷ್ಟರಲ್ಲಿ ಬೆಳಕಾಗಿರಬೇಕು. ಯಾರಾದರೂ ನೋಡಿಯಾರು ಎಂಬ ಭಯವಿದ್ದರೂ ಇರಬಹುದು. ಅಥವಾ ತನ್ನ ಕೆಲಸದ ಪರಿಣಾಮ ಏನಾಗುತ್ತದೆ ಎಂದು ಕಣ್ಣಾರೆ ನೋಡುವಸಲುವಾಗಿಯೇ ಆತ ಉಳಿದುಕೊಂಡಿರಬಹುದು''

''ಒಪ್ಪಿಕೊಳ್ಳೋಣ ಸಾಹೇಬರೆ... ಆತ ಎಲ್ಲಿ ಉಳಿದ ? ಯಾರು ಆಶ್ರಯ ನೀಡಿದರು ?''

ಶಿವಾನಂದಪ್ಪ ಮತ್ತೊಮ್ಮೆ ತಮ್ಮ ಬುದ್ಧಿ ಮತ್ತೆ ಪ್ರದರ್ಶಿಸಿದರು.

''ಎಲ್ಲಿ?....ಎಲ್ಲಿ ?... ಹಾಂ. ಚಂದ್ರಿ.. ಚಂದ್ರಿ ಮನೆಯಲ್ಲಿ ಆತ ಅಡಗಿರಬೇಕು''

''ಚಂದ್ರಿ ಏಕೆ ಅವನಿಗೆ ಆಶ್ರಯನೀಡುತ್ತಾಳೆ ?''

''ಗುರುಗಳೇ ಇಲ್ಲಿಯವರೆಗೂ ನಂಗೆ ದೊರತ ಆಧಾರಗಳ ಮೇಲಿಂದ ಇದರ ಹಿಂದೆ ದೇವೇಂದ್ರಪ್ಪ ಇದ್ದಾರೆ ಎಂಬ ಸಂಶಯ ಬರುತ್ತಿದೆ. ಅದೇ ಎಳೆ ಹಿಡಿದುಕೊಂಡು ಹರಟರೆ... ದೇವೇಂದ್ರಪ್ಪನ ಹೇಳಿಕ ಮೇರೆಗೆ ಚಂದ್ರಿ ಸಹಾಯಮಾಡಿರಬಹುದು.

''ಹಾಂ. ಸಾಧ್ಯವಿದೆ... ದೇವೇಂದ್ರಪ್ಪ ಚಂದ್ರಿಯೊಂದಿಗೆ ಇದ್ದ ಎಂದು ಎಲ್ಲರಿಗೂ ಗೊತ್ತು''

''ಗುರುಗಳೇ ನಿಮಗೆ ಮತ್ತೇನಾದರೂ ಸಂಶಯಗಳಿವೆಯೇ ?''

''ಸಂಶಯವಿಲ್ಲ. ಒಂದು ವಿಷಯದ ಬಗ್ಗೆ ಆಶ್ಚರ್ಯವಂತೂ ಆಯಿತು''

''ಯಾವ ವಿಷಯದ ಬಗ್ಗೆ''

''ಕಾನಸ್ಟೇಬಲ್ ಬಸವಂತನ ವರ್ಗದ ಬಗ್ಗೆ. ಆತ ದೇವೇಂದ್ರಪ್ಪನ ಖಾಸಾ ಮನುಷ್ಯ.''

''ಹೌದಾ ?''

''ಹೌದು ಆಮೇಲೆ ಇನ್ನೂ ಒಂದು ವಿಷಯ''

''ಹೇಳಿ ಬೇಗ ಹೇಳಿ''

"ನಾನು ಶವವನ್ನು ಹತ್ತಿರದಿಂದ ನೋಡಿದ್ದೇನೆ. ಮುಟ್ಟಿ ಸಹ ನೋಡಿದ್ದೇನೆ" ರಾತ್ರಿ "ಕಾಯುತ್ತ ಕುಳಿತಿದ್ದೇನೆ.. ನನಗೆ ಒಂದೇ ಒಂದು ವಿಷಯದ ಬಗ್ಗೆ ಅನುಮಾನ"

"ಯಾವುದು ?"

"ಹೆಣ ಹಿಮದಂತೆ ತಣ್ಣದಾಗಿತ್ತು. ಅದರ ಅಂಗಗಳು ಕೊಂಡಿನಂತಾಗಿದ್ದವು. ಕೋಮು ಗಲಭೆಯಲ್ಲಿಯೇ ಕೊಲೆಯಾಗಿದ್ದರೆ ಈ ರಾತ್ರಿ ಆಗಬಾರದು. ಅದೂ ಅಲ್ಲದೆ ಚೂರಿನೆಟ್ಟ ಜಾಗದಲ್ಲಿ ರಕ್ತ ಆಗಲೇ ಹೆಪ್ಪುಗಟ್ಟಿತ್ತು. ನೆಲದ ಮೇಲೆ ಒಂದು ಹನಿಸಹ ರಕ್ತ ಬಿದ್ದಿರಲಿಲ್ಲ...."

"ಗುಡ್ ಗುಡ್ ಪಾಯಿಂಟ ಗುರುಗಳೇ....ನನಗೆಲ್ಲಾ ಅರ್ಥವಾಯಿತು."

"ಆ ಅಪರಿಚಿತನ ಕೊಲೆ ನಿಮ್ಮ ಊರಿನಲ್ಲಿ ಆಗಿಯೇ ಇಲ್ಲ... ಎಲ್ಲೋ ಆದ ಕೊಲೆಯದು. ಶವವನ್ನು ತಂದು ನಿಮ್ಮ ಊರಲ್ಲಿ ಎಸೆದಿದ್ದಾರೆ. ಆ ಅಪರಿಚಿತನ ಕೊಲೆ ನಿಮ್ಮಲ್ಲಿಯೇ ಆಗಿದೆ. ಎಂದು ನಿರೂಪಿಸಲು ಕೋಮುಗಲಭೆಯನ್ನು ಎಬ್ಬಿಸಿದ್ದಾರೆ. ಅದೊಂದು ತಂತ್ರ ನೆವ ಅಷ್ಟೇ..."

"ಅಬ್ಬಾ ಎಂಥ ಭಯಾನಕ ಪ್ಲಾನು" ಸಾವಂತ ಉದ್ಗರಿಸಿದ.

"ಹೌದು ಸಾವಂತ್. ನಿಮ್ಮ ದೇವೇಂದ್ರಪ್ಪ ಸಾಹೇಬರು ಯಾರನ್ನೋ ಉಳಿಸಲು ಇಷ್ಟೆಲ್ಲಾ ನಾಟಕಮಾಡಿದ್ದಾರೆ. ಈಗ ನಿನ್ನೆದುರು ಒಂದೊಂದಾಗಿ ವಿಷಯ ಸ್ಪಷ್ಟವಾಗಿ ಕಾಣುತ್ತವೆ."

"ಹಾಗಾದರೆ ಪ್ರಾರ್ಥನಾ ಮಂದಿರದಲ್ಲಿ ಸತ್ತ ಪ್ರಾಣಿಗಳು."

"ಬಸವಂತ... ಕಾನಸ್ಟೇಬಲ್ ಬಸವಂತ...."

"ಆಂ ? ಬಸವಂತಪ್ಪನೇ ?"

"ಹೌದು ಆತ ದೇವೇಂದ್ರಪ್ಪನ ಖಾಸಾ ಮನುಷ್ಯ. ಅದರಂತೆ ಚಂದ್ರಿ ಕೂಡ.... ಎಲ್ಲೋ ಒಂದು ಕೊಲೆಯಾಗಿದೆ. ಪ್ರಭಾವಿ ವ್ಯಕ್ತಿಗಳ ಕುತ್ತಿಗೆಗೆ ಬಂದಿದೆ. ಅವರು ದೇವೇಂದ್ರಪ್ಪನವರ ಸಹಾಯ ಕೇಳಿದ್ದಾರೆ. ದೇವೇಂದ್ರಪ್ಪಗೆ ಗೊತ್ತಿದೆ. ಹಿಂದೆ ಬಂಡರಗಟ್ಟಿಯಲ್ಲಿ ಒಂದು ಹುಡುಗಿ ಬಲಾತ್ಕರಿಸಲು ಹೋಗಿ ಆದ ಗಲಾಟೆ ವಿಷಯ. ಅದನ್ನೇ ಬೆಳೆಸಲು ಆತ ಮುಂದಿದ್ದಾನೆ....ಶವವನ್ನು ತಂದು ಚಂದ್ರಿ

ಮನೆಯಲ್ಲಿ ಇಟ್ಟಿದ್ದಾನೆ. ಬಸವಂತಪ್ಪನಿಂದ ಸತ್ತ ಪ್ರಾಣಿ ಎಸೆದು ಹಿಂದು ಮುಸ್ಲಿಮರ ಮಧ್ಯೆ ಗಲಾಟೆ ಆರಂಭವಾಗುವಂತೆ ಮಾಡಿದ್ದಾನೆ. ಅದೇ ಸಂದರ್ಭದಲ್ಲಿ ಮುಚ್ಚಿಟ್ಟ ಅಪರಿಚಿತನ ಶವ ತಂದು ಎಸೆದು ಇಲ್ಲೇ ಕೊಲೆಯಾಗಿದೆ ಎಂದು ಸಿದ್ಧಪಡಿಸಿದ್ದಾನೆ. ಇದರಿಂದಾಗಿ ಆ ಪ್ರಭಾವಿತವ್ಯಕ್ತಿ ಸರಳವಗಾ ಪಾರಾದ.''

''ಅಬ್ಬಾ ಎಷ್ಟು ಭಯಂಕರ ಪ್ಲಾನ್''

''ಒಂದು ದೃಷ್ಟಿಯಿಂದ ದೇವೇಂದ್ರಪ್ಪ ಮಹಾ ಚಾಣಾಕ್ಷ ಮತ್ತೆ ಒಂದು ಪ್ರಶ್ನೆ'' ಅರಿಹಂತ ಗುರುಗಳ ಕಡೆ ನೋಡಿ ಮುಗುಳ್ನಕ್ಕು ಕೇಳಿದ.

''ಕೇಳಿ ಗುರುಗಳೆ ನಿಮ್ಮ ಪ್ರಶ್ನೆಗಳೇ ನನ್ನ ಪರಿಶೋಧನೆಗೆ ಮೆಟ್ಟಲಾಗಿವೆ''

''ಇದರಿಂದ ದೇವೇಂದ್ರಪ್ಪನವರಿಗೆ ಏನು ಲಾಭ ?''

''ಅತ್ಯಂತ ಸರಳ ಪ್ರಶ್ನೆ ಕೈತುಂಬ ಹೇರಳವಾದ ಹಣ. ಪೀಠೋನ್ನತಿ. ಎಲ್ಲಕ್ಕಿಂತ ಹೆಚ್ಚಾಗಿ ಪ್ರಭಾವಿ ವ್ಯಕ್ತಿಯ ರಾಜಾಶ್ರಯ.

''ನಿಜ... ಇದಾದ ಒಂದೆರಡು ತಿಂಗಳಿಗೆ ಅವರಿಗೆ ಪ್ರಮೋಶನ್ ಆಯಿತು. ಸಿಟಿಯಲ್ಲಿ ದೊಡ್ಡ ಬಂಗಲೆ ಖರೀದಿ ಮಾಡಿದರು. ''ಗುರುಗಳ ಬಾಯಿಯಿಂದ ಬಂದ ಮಾತುಕೇಳಿ ಅರಿಹಂತ ಮುಗುಳ್ನಕ್ಕ. ಆತ ಬಂದ ಕೆಲಸ ಸಂಪೂರ್ಣ ಯಶಸ್ವಿಯಾಗಿತ್ತು. ಶಿವಾನಂದಪ್ಪ ಗುರುಗಳ ರಕ್ಷಣೆಭಾರ ಸಾವಂತನಿಗೆ ಒಪ್ಪಿಸಿ ಹೊರಬಂದ. ಗುರುಗಳು ಕಳಿಸಲು ಬಂದರು.''

''ಶಿವಾನಂದಪ್ಪನವರೆ ಬಸವಂತು ಈಗ ಎಲ್ಲಿ ಎಂದು ಗೊತ್ತಿದೆಯೇ ?''

''ಎರಡು ತಿಂಗಳ ಹಿಂದೆ ಸಿಕ್ಕಿದ್ದ.. 'ತೋರಣ'ದಲ್ಲಿರುವುದಾಗಿ ಹೇಳಿದ''

''ಎಲ್ಲಿದೆ ತೋರಣ ?''

''ಇಲ್ಲೇ.... ಪಶ್ಚಿಮಕ್ಕೆ ಆರು ಕಿಲೋಮೀಟರ ದೂರ ಅಷ್ಟೇ....''

''ಸರಿ ನಾನು ಹುಡುಕಿಕೊಂಡು ಹೋಗುತ್ತೇನೆ''

''ಸರ್... ನಾನೂ ಬರಲೇ ?'' - ಸಾವಂತ ಕೇಳಿದ

'ಬೇಡ ಸಾವಂತ್. ನೀವಿಲ್ಲೇ ಇರಿ. ನಿಮ್ಮ ಮೇಲೆ ಹೆಚ್ಚು ಜವಾಬ್ದಾರಿ ಇದೆ'

'ಚಿಂತಿಸಬೇಡಿ ಸರ್.. ಗುರುಗಳ ಕೂದಲು ಕೊಂಕಲೂ ನಾನೂ ಬಿಡುವುದಿಲ್ಲ.'

ಅವನ ಕೈಕುಲುಕಿ ಶಿವಾನಂದಪ್ಪನವರಿಗೆ ನಮಸ್ಕರಿಸಿ ಜೀಪು ಏರಿದ ಅರಿಹಂತ. ಊರಿನಿಂದ ಹೊರಗೆ ಬರುತ್ತಲೇ ಒಂದಿಬ್ಬರನ್ನು ಕೇಳಿ ತೋರಣದತ್ತ ಓಡಿಸತೊಡಗಿದ. ಆರು ಕಿಲೋಮೀಟರ ದೂರ... ಹದಿನೈದು ನಿಮಿಷಗಳಲ್ಲಾತ ತೋರಣದ ಪೋಲೀಸ್ ಠಾಣೆಯೆದುರಿದ್ದ.. ಜೀಪನ್ನು ನೋಡುತ್ತಲೂ ಓಡಿ ಬಂದು ವಂದನೆ ಸಲ್ಲಿಸಿದ ಕಾನಸ್ಟೇಬಲ್‌ನೆ ಕೇಳಿದ

''ಇಲ್ಲಿ ಬಸವಂತು ಅಂದರೆ ಯಾರು ?''

''ನಾನೇ ಸರ್... ಕಾನಸ್ಟೇಬಲ್ ಬಸವಂತು.. ಏಕೆ ಸರ್ ?''

ದೈವ ಒಲಿದಿತ್ತು. ಅವನೇ ಎದುರು ಬಂದಿದ್ದ.. ಆನಂದಿತನಾದ ಅರಿಹಂತ.

''ಬಸವಂತು... ನಾನು ಇನಸ್ಪೆಕ್ಟರ ಅರಿಹಂತ. ಬಂಡರಗಟ್ಟಿಗೆ ಬಂದಿದ್ದೇನೆ''.

''ಬಂಡರಗಟ್ಟಿ...' ಬೆಚ್ಚಿ ಕೇಳಿದ ಬಸವಂತು.

''ಹೌದು... ನಿನ್ನ ಊರು ಬಂಡಗಟ್ಟಿ.'' ಬಸವಂತುವಿನ ಕಣ್ಣಲ್ಲಿ ನೀರು ಕಾಣಿಸಿಕೊಂಡಿತು.

''ಬಸವಂತು ನಿನ್ನ ನೋವು ನನಗೆ ಅರ್ಥವಾಗುತ್ತಿದೆ...ನೀನು ದೇವೇಂದ್ರಪ್ಪನವರಿಗೆ ಎಲ್ಲಾ ಸೇವೆ ನೀಡಿದೆ. ಅವರ ಮೇಲೆ ನಂಬಿಕೆಯಿಟ್ಟಿದ್ದ ಆದರೂ ಅವರು ಆ ರೀತಿ ಮಾಡಬಾರದಿತ್ತು ? ನಿನ್ನನ್ನೂ ವರ್ಗ ಮಾಡಿಸಬಾರದಿತ್ತು. ಬಸವಂತು ನಿನ್ನ ಸೇವೆ.. ನಿನ್ನ ಕರ್ತವ್ಯ ಎಲ್ಲವನ್ನೂ ಅವರು ಮರೆತು ಬಿಟ್ಟರಲ್ಲ. ಅವರ ಎಂಥೆಂಥ ಅಪರಾಧಗಳಿಗೆ ನೀನು ತೆರೆ ಎಳೆದಿದ್ದೆ ಅವರು ಕರೆದಾಗ ಹೋಗಿ ಹೇಳಿದ ಕೆಲಸ ಮಾಡಿ ಬರುತ್ತಿದ್ದೆ. ಅದಕ್ಕಾಗಿ ಅವರು ನಿನಗೆ ನೀಡಿದ ಬಹುಮಾನವಾದರೂ ಎಂತಹುದು ? ನಿನ್ನ ಊರಿನಿಂದ ನಿನ್ನನ್ನು ಓಡಿಸಿದರು.''

ಅರಿಹಂತ ಅವನ ಮನಸ್ಸು ಕಲಕಿದ್ದ. ಮನದಲ್ಲಿ ದೇವೇಂದ್ರಪ್ಪನ ಬಗ್ಗೆ ಅಸಮಾಧಾನದ ಹೊಗೆ ಏಳುವಂತೆ ಮಾಡಿದ್ದ. ಅವನ ಮಾತು ನಿರೀಕ್ಷಿಸಿದ ಪರಿಣಾಮವನ್ನೂ ಬೀರಿದಂತೆ ಕಂಡಿತು. ಬಸವಂತ ದುಃಖ ತಾಳಲಾರದೇ ಅಳುತ್ತಿದ್ದ.

''ನನ್ನಿಂದ ಏನು ಮಾಡಲಿಕ್ಕೆ ಆಗುತ್ತದೆ ರಾವ್ ಸಾಹೇಬ್.. ನಾನವರ ಕೈಗೊಂಬೆಯಾಗಿದ್ದೆ''

''ನೀನೇಕೆ ಅವರ ಕೈಬೊಂಬೆಯಾಗಬೇಕು ?''

''ಅವರ ಹೇಳಿದ ಎಲ್ಲಾ ಕೆಲಸ ಮಾಡುತ್ತಿದ್ದೆ. ಅವರು ದೂರ ಉಳಿಯುತ್ತಿದ್ದರು. ನಾಳೆ ಏನಾದರೂ ಹೆಚ್ಚು ಕಡಿಮೆಯಾಗಿದ್ದರೆ ನಾನು ಸಿಕ್ಕಿ ಹಾಕಿಕೊಳ್ಳುತ್ತಿದ್ದೆ ಹೀಗಾಗಿ ನನಗೂ ಅವರಿಗೂ ಮೇಲಿಂದ ಮೇಲೆ ವಾಗ್ವಾದ ನಡೆಯುತ್ತಿತ್ತು. ಅದರ ಸೇಡು ಅವರು ಚೆನ್ನಾಗಿ ತೀರಿಸಿಕೊಂಡರು. ನನ್ನ ಸರ್ವನಾಶ ಮಾಡಿದರು.

''ಹೌದಾ...? ದೇವೇಂದ್ರಪ್ಪ ಹಾಗೆ ಮಾಡಿದರೆ ?.. ನಂಬಿಗೆಯ ಬಂಟ ನಿನಗೆ ?

''ಹಾಂ. ಹಾಂ. ನನಗೇ ಅವರೆಲ್ಲ ಅಪರಾಧಗಳ ಲೆಕ್ಕ ಇಟ್ಟವನಿಗೆ ನಾನೆಂದೂ ಬಾಯಿಬಿಡದಂತೆ ಮಾಡಿದರು ಒಳ್ಳೆ ನಾಟಕ ಮಾಡಿ..''

''ನಾಟಕ ? ದೇವೇಂದ್ರಪ್ಪನವರು ನಾಟಕ ಮಾಡಿದರೆ ?''

''ಹಾಂ... ಊರಿನಿಂದ ಸಾಮಾನು ತರಬೇಕಾಗಿದೆ. ನಮ್ಮ ಚಿಕ್ಕಪ್ಪನ ಮನೆಯಲ್ಲಿ ಸಾಮಾನುಗಳು ಅಂತ ಹೇಳಿ ಒಂದು ದೊಡ್ಡ ಎರಡು ಸಣ್ಣ ಸಣ್ಣ ಟ್ರಂಕು ಹೊರಸಿ ತಂದರು. ಗುರುತಿನ ಗಾಡಿಯಲ್ಲಿ ನಾನು ತಂದೆ. ಒಂದನ್ನು ಚೆಂದ್ರಿ ಮನೆಯಲ್ಲಿಳಿಸಿದೆ. ಎರಡನ್ನು ಊರ ಹೊರಗಿದ್ದ ಹಾಳು ಮನೆಯ ಬಳಿ..''

''ಹಾಳು ಮನೆಯ ಬಳಿ ? ಅಲ್ಲೇಕೆ ?.''

''ನನಗೂ ಅದು ಅರ್ಥವಾಗಲಿಲ್ಲ ಸರ್. ಆಮೇಲೆ ದಂಗೆ-ಗಲಾಟೆ.. ಎಲ್ಲಾ ಆದ ಮೇಲೆಯೇ ತಿಳಿದಿದ್ದು. ಸಣ್ಣ ಟ್ರಂಕುಗಳಲ್ಲಿ ಸತ್ತ ಪ್ರಾಣಿಗಳಿದ್ದವು. ದೊಡ್ಡ ಟ್ರಂಕಿನಲ್ಲಿ ಕೊಲೆಯಾದ ಎಂದು ಹೇಳುತ್ತಾರಲ್ಲ ಅವನ ಶವವಿತ್ತು...''

''ಅಂ ? ಏನೆಂದೆ ?''

''ನಾನು ಹೇಳ್ತಾ ಇರೋದು ನಿಜ ಸರ್. ಆತ ಮೊದಲೇ ಸತ್ತಿದ್ದ. ಯಾರೋ ಚೂರಿಯಿಂದ ಇರಿದಿದ್ದರು. ಆ ಹೆಣವನ್ನೇ ಟ್ರಂಕಿನಲ್ಲಿ ಹಾಕಿ ಇಟ್ಟಿದ್ದರು. ಇಲ್ಲಿ ಗಲಾಟೆ ನಡೆದಾಗ ಚಂದ್ರಿ.. ದೇವೇಂದ್ರಪ್ಪ ಸೇರಿ ಅದನ್ನು ತಂದು ಹೊರಗಿಟ್ಟರು''

''ಒಂದು ನಿಮಿಷ ಬಸವಂತು.. ಈ ಘಟನೆ ನಡೆದಾಗ ದೇವೇಂದ್ರಪ್ಪನವರು ಊರಲ್ಲಿರಲಿಲ್ಲವಲ್ಲ''

''ಅದೆಲ್ಲಾ ನಾಟಕ ಸರ್. ಅವರು ಚಂದ್ರಿ ಮನೆಯಲ್ಲೇ ಅವಿತಿಟ್ಟುಕೊಂಡಿದ್ದರು. ರಾತ್ರಿ ಅಷ್ಟು ಕೆಲಸ ಮಾಡಿ ಹುಯಿಲೆಬ್ಬಿಸಿದರು. ಮುಸಲ್ಮಾನ ಯುವಕನ ಕೊಲೆಯಾಗಿದೆ ಎಂದು ಸುಳ್ಳು ಸುದ್ದಿ ಹರಡಿದರು''

'ಅಂದರೆ ಆತ ಮುಸಲ್ಮಾನ ಆಗಿರಲಿಲ್ಲವೆ ?'

'ಇಲ್ಲ ಸಾರ್. ಅವನಿಗೆ ನಕಲಿ ಗಡ್ಡ ಮೀಸೆ ಅಂಟಿಸಿ ಮೇಲೆ ಟೋಪಿ ಹಾಕಿದ್ದರು. ಹೆಣ ಎತ್ತಿ ಇಡುವಾಗ ನನ್ನ ಕೈಗೆ ಸಿಕ್ಕ ಗಡ್ಡ ಕಿತ್ತಿ ಬಂದಿತ್ತು. ಸಂಶಯ ಬಂದ ನಾನು ಅವನ ಬಟ್ಟೆ ಸರಿಸಿ ನೋಡಿದೆ. ಸುಂತಿ ಮಾಡಿರಲಿಲ್ಲ. ಅದರ ಮೇಲೆ ಅರ್ಥಮಾಡಿಕೊಂಡೆ. ಆತ ಮುಸಲ್ಮಾನ ಅಲ್ಲ. ಮುಸ್ಲೀಮನಂತೆ ಬಟ್ಟೆ ಹಾಕಿದ್ದರು. ಮುಸಲ್ಮಾನ ಯುವಕನ ಕೊಲೆಯಾಗಿದೆ ಅಂತ ಹಾಹಾಕರಾ ಎಬ್ಬಿಸಿ ತಮ್ಮ ಸ್ವಾರ್ಥಸಾಧಿಸಿಕೊಂಡರು ಸರ್.. ಸಣ್ಣ ಟ್ರಂಕಿನಲ್ಲಿದ್ದ ಸತ್ತ ಪ್ರಾಣಿಗಳನ್ನು ಸ್ವತ ದೇವೇಂದ್ರಪ್ಪನವರೇ ಪ್ರಾರ್ಥನಾ ಮಂದಿರಗಳ ಎದುರು ಎಸೆದಿದ್ದರು. ಇದೆಲ್ಲಾ ನನಗೆ ತಿಳಿಯುತ್ತಲೂ ಈ ಪೆಟ್ಟಿಗೆ ತಂದವ ನಾನೇ ಈ ಎಲ್ಲಾ ಹಲ್ಕಾ ಕೆಲಸ ಮಾಡಿದ್ದೇನೆ ಎಂದು ಸಿದ್ದಪಡಿಸಿ ಲಾಕಪ್‌ಗೆ ಹಾಕುವದಾಗಿ ಹೆದರಿಸಿದರು. ಬೇರೆ ದಾರಿ ಕಾಣದೇ ನಾನು ವರ್ಗ ಮಾಡಿಸಿಕೊಂಡು ಓಡಿ ಬಂದೆ. ನನ್ನ ಊರಿನಿಂದ...''

ಬಸವಂತು ಬಿಕ್ಕಿ ಬಿಕ್ಕಿ ಅಳತೊಡಗಿದಾಗ ಅರಿಹಂತ ಅವನನ್ನು ಸಮಾಧಾನಪಡಿಸಿದ. ''ಬಸವಂತೂ ನಿನಗೆ ಒಂದು ಅವಕಾಶಕೊಡುತ್ತೇನೆ. ನೀನು ನಿನ್ನ ತಪ್ಪು ಸುಧಾರಿಸಿಕೊಂಡು ಮೊದಲಿನಂತೆ ಗೌರವದಿಂದ ಬಾಳಬಹುದು.''

''ಹೇಳಿ ಸರ್. ನನ್ನ ಮನಸ್ಸು ನನ್ನನ್ನು ಪ್ರತಿಕ್ಷಣ ಧಿಃಕರಿಸುತ್ತಿದೆ.''

''ಇದೀಗ ನೀನು ಹೇಳಿದ ಎಲ್ಲಾ ವಿಷಯ ಬರೆದು ಸಹಿ ಮಾಡಿ ನನ್ನ ಕಡೆ ಕೊಡು [illegible] ರಕಾರಿ ಸಾಕ್ಷಿ ಆಗು. ಅಂದರೆ ನಾನೆಲ್ಲ ಸರಿಮಾಡುತ್ತೇನೆ''.

[illegible] ನ್ನ ನೌಕರಿ-ಶಿಕ್ಷೆ-ಜೈಲು''

''ಅದಾವದೂ ಆಗದಂತೆ ಪ್ರಯತ್ನಿಸುತ್ತೇನೆ... ವಚನಕೊಡಲಾರೆ..''

''ಸರಿ ಸರ್.. ತಾವು ಹೇಳಿದಂತೇ ಆಗಲಿ..''

ಒಂದರ್ಧಗಂಟೆಯಲ್ಲಿ ಬಸವಂತು ಎಲ್ಲಾ ಬರೆದು ಸಹಿಮಾಡಿ ಅವನ ಕೈಗಿತ್ತ.

''ಬಸವಂತು.. ನಿನಗೆ ಮತ್ತೆ ಯಾರಾದರೂ ಸಮ್ಮಂಧಿಕರಿದ್ದಾರೆಯೇ.. ದೂರ..ದೂರ''

''ಹಾಂ. ದಿಲ್ಲಿಯಲ್ಲಿದ್ದಾರೆ. ಸರ್. ನಮ್ಮಣ್ಣನ ಅಳಿಯ''

''ಹಾಗಾದರೆ ಒಂದು ಕೆಲಸ ಮಾಡು. ನಾಳೆಯೇ ನೀನು ನಿನ್ನ ಹೆಂಡತಿ ಮಕ್ಕಳ ಜೊತೆ ಅಲ್ಲಿಗೆ ಹೊರಡು. ನಿನ್ನ ಅಲ್ಲಿಯ ವಿಳಾಸ ಕೊಡು. ನಾನು ಪತ್ರ ಬರೆದು ಬಾ ಎಂದು ತಿಳಿಸಿದ ಮೇಲೆಯೇ ಬರಬೇಕು. ಅಲ್ಲಿಯವರೆವಿಗೂ ಇಲ್ಲ''

''ಏಕೆ ಸರ್''

''ಸುಳ್ಳು ಹೇಳಲಾರೆ. ನಿನ್ನ ಜೀವಕ್ಕೆ ಅಪಾಯವಿದೆ. ಯಾವದೇ ಕ್ಷಣ ಏನಾದರೂ ಆಗಬಹುದು. ಅದಕ್ಕೆ....''

ಪರ್ಸಿನಿಂದ ಸಾವಿರ ರೂಪಾಯಿ ತೆಗೆದು ಅವನ ಕೈಗಿತ್ತ.

''ಖರ್ಚಿಗಿರಲಿ. ಬೇಕೆಂದರೆ ಮತ್ತೆ ಕಳಿಸುತ್ತೇನೆ. ನಾಳೆಯೇ ಹೊರಡು. ಅಂದರೆ ನೀನು ಸುರಕ್ಷಿತ... ಇಲ್ಲದಿದ್ದರೆ..''

''ನಂಬಿ ಸರ್... ನಾನು ನಾಳೆಯೇ ಹೊರಡುತ್ತೇನೆ''..

ಬಸವಂತುವಿಗೆ ಮತ್ತೊಮ್ಮೆ ಧೈರ್ಯ ಹೇಳಿ ಅರಿಹಂತ ಜೀಪು ಹೊರಳಿಸಿದ. ಆಗಲೇ ರಾತ್ರಿ ಒಂಭತ್ತು ಸಮೀಪಿಸಿತ್ತು.....ಮನೆ ತಲುಪಿದಾಗ ಹನ್ನೊಂದೂವರೆ. ಲಾವಣ್ಯ ಊಟಮಾಡಿ ಮಲಗಿಸಿದ್ದಳು. ಎದ್ದು ಬಂದು ತೂಕಡಿಸುತ್ತಲೇ ಬಾಗಿಲು ತೆರೆದು ಆತ ಒಳಗೆ ಬರುತ್ತಲೇ ಮತ್ತೆ ಬಾಗಿಲು ಮುಚ್ಚಿ ತೂರಾಡುತ್ತಾ ಅಡುಗೆ ಮನೆ ಕಡೆ ನಡೆದಾಗ ಅವಳನ್ನು ಅನಾಮತ್ತಾಗಿ ಎತ್ತಿಕೊಂಡು ಬೆಡ್‌ರೂಮಿನ ಕಡೆ ಓಡಿದ ಅರಿಹಂತ.

''ಅರೆ..ಅರೆ..ನಿಮ್ಮ ಊಟ ಅರ ಅರಚಿದಳು.''

''ಯಾರಿಗೆ ಬೇಕಾಗಿದೆ ಆ ಊಟ. ನನಗೆ ಬೇಕಾದ ಊಟ ಇಲ್ಲಿದೆ..''

ಹಾಸಿಗೆಯ ಮೇಲೆ ಅವಳನ್ನು ಉರುಳಿಸಿ ಅವಳ ಮೇಲೆಯೇ ತಾನೂ ಉರುಳಿದಾಗ ಲಾವಣ್ಯ ಮೆಲ್ಲನೇ ಚೀರಿಕೊಂಡಳು. ಅವಳ ಕಾಶ್ಮೀರ ಸೇಬುವಿನಂಥ ಗಲ್ಲವನ್ನು ಅರಿಹಂತ ಬೆಣ್ಣೆ ಮುದ್ದೆಯಂತೆ ಕಡಿದಿದ್ದ.

(6)

ಬೆಳಿಗ್ಗೆ ಠಾಣೆಗೆ ಬಂದಾಗ ಅರಿಹಂತ ಸಂತೋಷದಿಂದ ಸಿಳ್ಳು ಹಾಕುತ್ತಿದ್ದ. ಅವನಿಗಿಂತ ಮೊದಲೇ ಬಂದಿದ್ದ ದತ್ತಾತ್ರೇಯ ಸಿವಿಲ್ ಡ್ರೆಸ್ಸಿನಲ್ಲಿದ್ದ ಎದ್ದು ನಿಂತು ವಂದಿಸಿದ. ಒಂದರ್ಧಗಂಟೆ ಕೆಲಸದಲ್ಲಿ ಮಗ್ನನಾಗಿದ್ದ ಅರಿಹಂತ ಮಾತಿಗೆ ಆರಂಭಿಸಿದ.

''ದತ್ತಾತ್ರೇಯ... ದೇವೇಂದ್ರಪ್ಪನವರ ಕೇಸಿನಲ್ಲಿ ನಿಮ್ಮದೇನೂ ತಪ್ಪಿಲ್ಲ ಎಂದು ನನಗೆ ತಿಳಿದು ಬಂದಿದೆ.. ನೀವು ನಿಮ್ಮ ಮೇಲಧಿಕಾರಿಯ ಮಾತು ಪಾಲಿಸಿದ್ದೀರಾ.'' ದತ್ತಾತ್ರೇಯ ಕಣ್ಣೆತ್ತಿ ಅಚ್ಚರಿಯಿಂದ ಅರಿಹಂತನೆಡೆ ನೋಡಿದ.

''ಹೌದು ದತ್ತಾತ್ರೇಯ.. ನಿನ್ನೆಯಿಂದ ನಾನು ಕೇಸಿನ ಬಗ್ಗೆ ಕೂಲಂಕುಷವಾಗಿ ಸ್ಟಡಿ ಮಾಡಿ ಈ ನಿರ್ಧಾರಕ್ಕೆ ಬಂದಿರುವೆ.. ಇದರಲ್ಲಿ ನಿನ್ನದೊಂದು ತಪ್ಪಿದೆ.''

''ಏನು ಸರ್ ?'' ತಗ್ಗಿದ ಧನಿಯಲ್ಲಾತ ಕೇಳಿದ.

''ದೇವೇಂದ್ರಪ್ಪ ನಮ್ಮ ಮೇಲಿನ ಅಧಿಕಾರಿಯಾಗಿರಬಹುದು. ಆದರೆ ನೇರವಾಗಿ ನಿನಗಾಗಲಿ, ಅಥವಾ ನನಗಾಗಲಿ ಸಮ್ಮಂಧಿಸಿದವರಲ್ಲ...ಈಗ ಸಮ್ಮಂಧಿಸಿದ್ದಾರೆ...''

''ಆಗ ? - ಈಗ ? ಅಂದರೇನು ಸರ್ ?''

''ಆಗ ಬೇರೆಡೆ ಅಧಿಕಾರಿಯಾಗಿದ್ದರು. ಮೊನ್ನೆಯಿಂದ ನಮಗವರು ಹೆಚ್ಚುವರಿ ಎಸ್.ಪಿ. ಸಾಹೇಬರು...''

''ಅಂದ ಮೇಲೆ ಅವರ ಆರ್ಡರ ನಾವು ಪಾಲಿಸಬೇಕಾಯಿತು. ಸರ್''

''ಮೇಲಾಧಿಕಾರಿಯಾಗಿ ಹೇಳಿದ ಮಾತು ಪಾಲಿಸುವದು ನಮ್ಮ ಕರ್ತವ್ಯ ದತ್ತಾತ್ರೇಯ... ಅದರೊಂದಿಗೆ ಅವರ ಆರ್ಡರ ಹೇಗಿದೆ ? ಪಾಲಿಸಬೇಕಾದದ್ದೋ.. ಇಲ್ಲವೋ.. ನಮ್ಮ ಅಧಿಕಾರ ಕಕ್ಷೆಯಲ್ಲಿ ಬರುತ್ತಿದೆಯೋ ಇಲ್ಲವೋ ನೋಡಬೇಕಾಗುತ್ತದೆ''.

''ನನಗರ್ಥವಾಗಲಿಲ್ಲ ಸರ್''

''ದೇವೇಂದ್ರಪ್ಪನವರು ನಿನಗೆ ಹೇಳಿದ್ದರು...ಈ ಠಾಣೆಯಲ್ಲಿ ಏನಾದರೂ

ವಿಶೇಷ ನಡೆದರೆ ನನಗೆ ತಿಳಿಸು ಎಂದು ಹೌದೋ ಅಲ್ಲವೋ...''

ಕಣ್ಣರಳಿಸಿದ ದತ್ತಾತ್ರೇಯ ಇದು ಹೇಗೆ ತಿಳಿಯಿತು ಎಂಬಂತೆ.

''ನೀನು ಪಾಲಿಸಿದೆ. ಪಾಲಿಸುವ ಅವಶ್ಯಕತೆಯಿಲ್ಲ. ಅವರು ಬೇರೆಡೆ ಡಿ.ಎಸ್.ಪಿ. ಆಗಿರುವಾಗ ನಮಗವರ ಸಮ್ಮಂಧ ಬರುವದಿಲ್ಲ. ಅವರ ಮಾತು ಪಾಲಿಸಿ ನೀನು ನನಗೆ ದ್ರೋಹ ಮಾಡಿದಂತಾಯಿತು. ನನ್ನ ಪ್ರಾಣಕ್ಕೆ ಅಪಾಯ ತಂದಂತಾಯಿತು. ಮೊನ್ನೆ ನಡೆದ ಹಲ್ಲೆ, ಫಾಯಿಲ್ ಸುಟ್ಟಿದ್ದು, ನಿನ್ನೆ ಶಿವಾನಂದಪ್ಪ ಮಾಸ್ತರರ ಕೊಲೆ ಮಾಡಲು ನಡೆದ ಯತ್ನ ಎಲ್ಲವುಗಳಿಗೂ ನೀನೇ ಯತ್ನವೆ ?''

''ಹಾಂ ನೀನು ನೀನು ಫೋನು ಮಾಡಿ ದೇವೇಂದ್ರಪ್ಪನವರಿಗೆ ಶಿವಾನಂದಪ್ಪನವರ ಬಗ್ಗೆ ಎಲ್ಲಾ ವಿಷಯ ತಿಳಿಸಿದ್ದರ ಪರಿಣಾಮವಿದು..''

''ಸರ್.. ನನ್ನಿಂದ ತಪ್ಪಾಯಿತು. ಕ್ಷಮಿಸಿಬಿಡಿ ಸರ್''

''ಮೊದಲೇ ನೀನು ಒಪ್ಪಿಕೊಂಡಿದ್ದರೆ ಕ್ಷಮಿಸಬಹುದಿತ್ತು... ಈಗ ಶಿವಾನಂದಪ್ಪನವರ...''

''ನಾನು ''ವರ ಕಾಲು ಹಿಡಿದುಕೊಂಡು ಕ್ಷಮೆ ಬೇಡುತ್ತೇನೆ ಸರ್...''

ಅರಿಹಂತ ಯೋಚನಾ ಮಗ್ನನಾದ..ದತ್ತಾತ್ರೇಯ ಅವನತ್ತಲೇ ನೋಡುತ್ತಿದ್ದ.

''ಒಂದು ಕರಾರಿನ ಮೇಲೆ ನಾನು ಒಪ್ಪಿಕೊಳ್ಳಲು ಸಾಧ್ಯ''

''ಹೇಳಿ ಸರ್..ನಾನದರಂತೆ ನಡೆದುಕೊಳ್ಳುತ್ತೇನೆ.''

''ದೇವೇಂದ್ರಪ್ಪನವರಿಗೆ ಸಮ್ಮಂಧಿಸಿದಂತೆ ನಿನಗೆ ಗೊತ್ತಿರುದನ್ನೆಲ್ಲ ಬರೆದುಕೊಡು. ಅದರಲ್ಲಿ ಮೊನ್ನೆ ಈ ಠಾಣೆಯಲ್ಲಿ ಮುಚ್ಚಿದ ಫೈಲುಗಳನ್ನು ಸುಟ್ಟ ವಿಷಯ ಶಿವಾನಂದಪ್ಪನವರ ವಿಷಯ ನೀನು ಫೋನು ಮಾಡಿದ್ದು.. ಚಂದ್ರಿಯ ಮೇಲೆ ಪತ್ತೇದಾರಿಕೆ ನಡೆಸಿದ್ದು ಎಲ್ಲಾ ಬರಿ''

''ಆಂ.. ನಿಮಗೆ ಇದೆಲ್ಲಾ..''

''ಹಾಂ. ಎಲ್ಲಾ ತಿಳಿದಿದೆ.. ಏಕೆಂದರೆ ನಾನು ಸದಾ ಕಣ್ಣು ತೆರೆದುಕೊಂಡು ಜಾಗೃತನಾಗಿರುತ್ತೇನೆ.''

''ಒಪ್ಪಿದೆ ಸರ್. ಆದರೆ ಈಗವರು ನಮ್ಮ... ನಮ್ಮ..''

''ಎಡಿಶನಲ್ ಎಸ್.ಪಿ. ತಾನೇ. ದೇವರಲ್ಲವಲ್ಲ.. ದತ್ತಾತ್ರೇಯ ನನ್ನ ಒಂದೇ ಒಂದು ಮಾತು ನೆನಪಿಡು. ನಮ್ಮ ಕರ್ತವ್ಯದ ದಾರಿಯಲ್ಲಿ ಸಾಕ್ಷಾತ್ ದೇವರು ಅಡ್ಡ ಬಂದರೂ ನಿರ್ದಯೆಯಿಂದ ಅವನನ್ನು ಪಕ್ಕಕ್ಕೆ ಸರಿಸಿ ಮುಂದೆ ಸಾಗಬೇಕು.''

''ಸರ್.ಸರ್.. ನೀವು ನನಗೆ ಸತ್ಯದ ಸಾಕ್ಷಾತ್ಕಾರ ಮಾಡಿದಿರಿ. ನನ್ನ ಕ್ಷಮಿಸಿ. ಕ್ಷಮಿಸಿ'' ದೊಡ್ಡ ಧನಿ ತೆಗೆದು ಅಳುತ್ತ ಅವನ ಕಾಲಿಗೆ ಬಿದ್ದ ದತ್ತಾತ್ರೇಯ...''

ಮುಂದೆಲ್ಲಾ ಅರಿಹಂತ ಹೇಳಿದಂತೆಯೇ ಆಯಿತು. ಅರಿಹಂತನಿಗಾದ **ಸಂತಸ** ಅಷ್ಟಿಷ್ಟಲ್ಲ. ದೇವೇಂದ್ರಪ್ಪ ಕಟ್ಟಿದ್ದ ಒಂದೊಂದೇ ಗೋಡೆ **ಕುಸಿಯತೊಡಗಿದ್ದವು.**

ಮುಂದಿನ ಸರದಿ ಚಂದ್ರಿಯದು. ದತ್ತಾತ್ರೇಯನೊಂದಿಗೆ ದುರ್ವಾಸನಂತೆ ನುಗ್ಗಿದ ಅರಿಹಂತ.

''ಚಂದ್ರಿ ನಿನ್ನನ್ನೂ ಒದ್ದು ಲಾಕಪ್‌ಗೆ ಹಾಕಲು ಬಂದಿರುವೆ'' ಎಂದಾಗ ಆಕೆ ಭಯದಿಂದ ತತ್ತರಿಸಿ ಕಾಲು ಬಿದ್ದು ಎಲ್ಲಾ ಒಪ್ಪಿಕೊಂಡಳು. ಅದರಂತೆ ಲಿಖಿತ ಹೇಳಿಕೆ ನೀಡಿ ಸಹಿ ಸಹ ಮಾಡಿದಳು. ಅವಳ ಹೇಳಿಕೆ ತುಂಬಾ ಮಹತ್ವದ್ದಾಗಿತ್ತು.

ಅಂದು ರಾತ್ರಿ ಒಂದು ಗಂಟೆಗೆ ಬಂದರು ದೇವೇಂದ್ರಪ್ಪ.. ರಾತ್ರಿ ಬರಕೂಡದು ಗೌಡರು ಬರುತ್ತಾರೆ. ಎಂದು ಕಂಡಿಶನ್ ಇದ್ದರೂ ವಿಧಿಯಿಲ್ಲದೆ ಬಂದಿದ್ದರವರು. ಅವರು ಬಂದ ಒಂದು ಗಂಟೆಯ ನಂತರ ಬಸವಂತು ಬಂದ. ಗಾಡಿಯಿಂದ ಒಂದು ದೊಡ್ಡ ಟ್ರಂಕು ಇರಿಸಿ ಹೊರಟು ಹೋದ. ಅದರಲ್ಲೇನಿದೆ ಎಂದು ಚಂದ್ರಿಗೆ ತಿಳಿಯದು, ಒತ್ತಾಯ ಮಾಡಿ ಅದರಲ್ಲೇನಿದೆ ಎಂದು ಕೇಳಿದಾಗ ಹಲ್ಲು ಕಡಿದು ದೇವೇಂದ್ರಪ್ಪ ''ನಿನ್ನ ಮಿಂಡನ ಹೆಣ್ಣು'' ಎಂದು ಕೂಗಿಕೊಂಡಿದ್ದ. ಅವನನ್ನೂ ಎದುರುಹಾಕಿಕೊಳ್ಳಲಾರದೇ ಆಕೆ ತೆಪ್ಪಗಾದಳು.

ಮುಂಜಾನೆ ಗುಸು ಗುಸು ಆರಂಭವಾಗಿ ಮುಂದೆ ಅದು ವಿರಾಟರೂಪ ತಾಳಿ ಎರಡೂ ಕಡೆಯವರು ಯುದ್ಧಕ್ಕೆ ನಿಂತಾಗ ಶಿವಾನಂದಪ್ಪನವರ ಪ್ರವೇಶವಾಯಿತು. ಊರಜನರೆಲ್ಲ ಅಲ್ಲಿ ನೆರೆದಿದ್ದರು. ಅದೇ ಸಮಯದಲ್ಲಿ ದೇವೇಂದ್ರಪ್ಪ ಟ್ರಂಕು ತೆರೆದರು. ಚಂದ್ರಿ ಎದೆಗುಂಡಿಗೆ ಡಬ್ ಎಂದಿತು. ಅದರಲ್ಲಿ ಯುವಕನೊಬ್ಬನ ಶವ ಎದೆಯಲ್ಲಿಯ ಚೂರಿಯನ್ನು ವಸ್ತ್ರದಿಂದ ಹಿಡಿದು ಹಿರಿದ ದೇವೇಂದ್ರಪ್ಪ ಹೊರತೆಗೆದ. ತನ್ನ ಬಳಿಯಿದ್ದ ಬೇರೊಂದು ಚೂರಿ ಗಾಯದಲ್ಲಿ ಸಿಲುಕಿಸಿ ವಸ್ತ್ರದಿಂದ ಅದರ ಹಿಡಿ ಚೆನ್ನಾಗಿ ಒರೆಸಿದ, ಚಂದ್ರಿ ಸಹಾಯದಿಂದ ಹೆಣ ಎತ್ತಿ ತಂದು ಹೊರಗೆ

ಕಟ್ಟಿ ಬಳಿ ತಂದು, ಏನೋ ನೆನಪಾಗಿ ಪ್ಯಾಂಟ ಜೇಬಿನಲ್ಲಿದ್ದ ನಕಲಿ ಗಡ್ಡ-ಮೀಸೆ ಎರಡೂ ತೆಗೆದು ಶವಕ್ಕೆ ಅಂಟಿಸಿದ.. ಮೇಲೆ ಟೋಪಿ ಬೇರೆ ನೆತ್ತಿ ಮೇಲೆ, ಇಷ್ಟು ಮಾಡಿದ ಮೇಲೆ ಆಕೆಗೆ ಬೊಬ್ಬೆ ಹಾಕುವಂತೆ ಹೇಳಿ ಒಳಗೋಡಿ ಬಂದ...ಚಂದ್ರಿ ಆತ ಹೇಳಿದಂತೆ ಮಾಡಿದಳು. ಮುಸ್ಲೀಮ ಯುವಕನ ಕೊಲೆಯಾಗಿದೆ ಎಂಬ ಪುಕಾರ ಎದುರಿಗೆ ಶವ...ಶಾಂತವಾಗತೊಡಗಿದ್ದ ಗಲಾಟೆ ವಿಪರೀತವಾದಾಗ ಮತ್ತೆ ಮಾಸ್ತರರು ಮಧ್ಯೆ ಪ್ರವೇಶಿಸಿ ಶಾಂತಗೊಳಿಸಿದರು.. ಚಂದ್ರಿ ಜೊತೆ ಹೆಣ ಕಾಯ್ದರು...

ಅರಿಹಂತ ಸಂಪೂರ್ಣ ತೃಪ್ತಿಯೊಂದಿಗೆ ಮೇಲೆದ್ದು ಹೇಳಿದ ಚಂದ್ರಿಗೆ

''ಚಂದ್ರಿ ಇದರಿಂದ ನೀನು ಪಾರಾದೆ ಎಂದು ಭಾವಿಸಬೇಡ... ಸರಕಾರಿ ಸಾಕ್ಷಿ ಆದರೆ ಶಿಕ್ಷೆ ಕಡಿಮೆಮಾಡಿಸಲು ಸಾಧ್ಯ ಅಷ್ಟೇ.. ಈ ಊರಿನಿಂದ ಓಡಿ ಹೋಗಲು ಯತ್ನಿಸಬೇಡ. ಹಾಂ. ಜೀವ ಬೇಸರವಾಗಿದ್ದರೆ ಓಡಿಹೋಗಲು ಪ್ರಯತ್ನಿಸು. ತಿಳೀಯಿತೇ ?''

ಖೆಡ್ಡಾ ಪ್ರಸಿದ್ಧವಾಗಿತ್ತು.

ದೇವೇಂದ್ರಪ್ಪನ ಮೇಲೆ ಕೈ ಮಾಡಲು ಎಲ್ಲಾ ಸಿದ್ಧತೆಯಾಗಿದ್ದವು.

ಡಾಕ್ಟರ ರಂಗರಾಜನ್ ಒಬ್ಬರು ಕೈಗೆ ಸಿಕ್ಕರೆ ಕೇಸಿನ ಇತಿಶ್ರೀ ಆದಂತೆಯೇ.

ಮರುದಿನ ಜೀಪು ತೆಗೆದುಕೊಂಡು ಜೊತೆಯಲ್ಲಿ ದತ್ತಾತ್ರೇಯನೊಂದಿಗೆ ಸಿಟಿಕಡೆ ನಡೆದ ಅರಿಹಂತ.. ಡಾಕ್ಟರ ರಂಗರಾಜನ್‌ನ ಚಟ್ಟಕಟ್ಟಲು, ಜೇಬಿನಲ್ಲಿ ಪುಟ್ಟ ಟೇಪ ರಿಕಾರ್ಡರ ಇಟ್ಟುಕೊಳ್ಳಲು ಮರೆಯಲಿಲ್ಲ. ರಂಗರಾಜನ್ ಸುಲಭವಾಗಿ ಬಾಯಿ ಬಿಡಲಾರ.. ಯಾವ ಬೆದರಿಕೆಗೂ ಬಗ್ಗಲಾರ ಎಂದು ಅಂತಿದ್ದ ಇನಸ್ಪೆಕ್ಟರ ಅರಿಹಂತ ಅವನಿಗಾಗಿಯೇ ಒಂದು ಸ್ಪೇಶಲ್ ಬಲೆಹೆಣೆದಿದ್ದ... ಅದಕ್ಕಾಗಿಯೇ ದತ್ತಾತ್ರೇಯನನ್ನು ಕರೆದುಕೊಂಡು ಹೊರಟಿದ್ದು... ಅವನ ಜೊತೆಗೆ ಸವಿಸ್ತಾರವಾಗಿ ಮಾತಾಡಿ ಸಿದ್ಧಮಾಡಿದ್ದ ಸಿಟಿಗೆ ಬರುತ್ತಲೂ ಮೊದಲೊಂದು ಉತ್ತಮವಾದ ಹೋಟೆಲ್ ಪೋರ್ಟಿಕೊದಲ್ಲಿ ಗಾಡಿ ನಿಲ್ಲಿಸಿ, ಕೈಕಾಲು ಮುಖ ತೊಳೆದುಕೊಂಡು ಫ್ರೆಶ್ ಆದರು. ನಂತರ ಇಬ್ಬರೂ... ಟೀ.. ಬೀಡಾ ಮೆಲ್ಲುತ್ತಾ ಹೊರಬಂದಾಗ ಹೊಟೆಲ್ ಆವರಣದಲ್ಲಿದ್ದ ಟೆಲಿಫೋನು ಕಾಣಿಸಿತು. ದತ್ತಾತ್ರೇಯನ ಕಡೆ ರಂಗರಾಜನ್‌ನ ಟೆಲಿಫೋನ ನಂಬರ ನೀಡಿ ಎಲ್ಲಾ ನೆನಪಿದೆ ತಾನೇ ಎಂದು ಕೇಳಿದ. ''ಎಸ್ ಸರ್'' ಎಂದ ನಗುತ್ತ ದತ್ತಾತ್ರೇಯ ''ಸರಿ ಹಾಗಾದರೆ

ಹೋರಡು...ಗುಡ್‌ಲಕ್...ಹಾಂ...ಟೇಪರಿಕಾರ್ಡರ ಜೊತೆಗಿರಲಿ''

ದತ್ತಾತ್ರೇಯ ಟೇಪ ಆನ್ ಮಾಡಿ ನಂಬರ ಜೋಡಿಸಿದ ಒಂದೇ ಬಾರಿ ರಂಗರಾಜನ್ ನಂಬರ ಸಿಕ್ಕಿತು. ಡಾಕ್ಟರ ಲೈನ ಮೇಲಿದ್ದರು.

''ಹಲೋ ಡಾಕ್ಟರ ರಂಗರಾಜನ್''

''ನಮಸ್ಕಾರ ಡಾಕ್ಟರ್ರೇ...ನಾನು ದೇವೇಂದ್ರಪ್ಪ''

''ಯಾವ ದೇವೇಂದ್ರಪ್ಪ ?''

''ಅದೇ ದೇವೇಂದ್ರಪ್ಪ ಡಾಕ್ಟರ್ರೇ...ಬಂಡರಗಟ್ಟಿಯಲ್ಲಿ ಪೋಲೀಸ ಇನಸ್ಪೆಕ್ಟರ ಆಗಿದ್ದಾಗ ನಿಮ್ಮ ಬಳಿ ಒಂದು ಶವ ತಂದಿದ್ದೇನಲ್ಲ...ಮರಣೋತ್ತರ ಪರೀಕ್ಷೆಗೆ...

''ಓಹೋ...ಇನಸ್ಪೆಕ್ಟರ ದೇವೇಂದ್ರಪ್ಪನವರೋ''

''ಹಾಂ ಅದೇ. ಆದರೆ ಈಗ ಇನಸ್ಪೆಕ್ಟರ ಅಲ್ಲ.. ಎಡಿಶನಲ್ ಧ್ವನಿ ಬದಲಾಯಿಸಿ ಚೆನ್ನಾಗಿ ಆ್ಯಕ್ಟ ಮಾಡುತ್ತಿದ್ದ. ಅದೆಲ್ಲಾ ಟೇಪ್ ಆಗತೊಡಗಿತ್ತು.''

''ಕಂಗ್ರಾಜ್ಯುಲೇಶನ್ಸ ದೇವೇಂದ್ರಪ್ಪನವರೆ...ವಿಷಯ ಹೇಳಿ''

''ಅದೇ ಹಳೇ ಕೇಸು...ನಿಮ್ಮ ದಯೆಯಿಂದ ಕೇಸು ಕ್ಲೋಜ್ ಮಾಡಿದ್ದೆ. ಈಗ ಯಾರಿಂದಲೂ ಭಯವಿಲ್ಲ.. ಆ ಕೇಸು ಹಿಂದಿದ್ದವರನ್ನ ಬಂಧಿಸಬೇಕಾಗಿದೆ. ಕಾರಣ ನನಗೆ ಓರಿಜಿನಲ್ ಮೆಡಿಕಲ್ ಸರ್ಟಿಫಿಕೇಟ ಮರಣೋತ್ತರ ಪರೀಕ್ಷೆ ವರದಿ ಬೇಕಾಗಿತ್ತು.''

''ಮತ್ತೆ ಈ ಮೊದಲು ಕೊಟ್ಟಿದ್ದು''

''ಅದು ನಕಲಿ ರಿಪೋರ್ಟ ಅಲ್ಲವೇ, ಹರಿದುಹಾಕಿದೆ. ಈಗ ಅಪರಾಧಿ ಕೈಗೆ ಸಿಕ್ಕಿದ್ದಾನೆ..ಅದಕ್ಕಾಗಿ ನಿಜವಾದ ರಿಪೋರ್ಟ ಬೇಕಾಗಿದೆ. ಚಿಂತೆ ಮಾಡಬೇಡಿ. ನಿಮಗೆ ಡಬಲ್ ಫೀ ಕೊಡುತ್ತೇನೆ..''

''ಪರವಾಗಿಲ್ಲ. ಆಗ ಐದು ಸಾವಿರ ಕೊಟ್ಟಿದ್ದೀನಿ..ಈಗ ?''

''ಹತ್ತು ಸಾವಿರ ತಾನೇ ಓಕೆ...ಅರ್ಧಗಂಟೆಯಲ್ಲಿ ನನ್ನ ಅಸಿಸ್ಟಂಟ ಬರುತ್ತಾರೆ. ಅವರಿಂದ ಹಣ ಪಡೆದುಕೊಂಡು ರಿಪೋರ್ಟ ಕೊಡಿ.''

"ನೀವೇ ಬಂದರೆ ಒಳ್ಳೆಯದಿತ್ತಲ್ಲ."

"ಡಾಕ್ಟರ್ರೇ...ಪೋಜಿಶನ್.. ಈಗ ನಾನು ಇನಸ್ಪೆಕ್ಟರ ಅಲ್ಲ.. ಎಸ್.ಪಿ. ಯಾರಾದ್ರೂ ನೋಡಿದ್ರೆ ಪೊಜಿಶನ್. ಅದಕ್ಕೆ ಹಾಂ...ಪ್ಲೀಜ್.."

"ಸರಿ...ಕಳಿಸಿಕೊಡಿ... ಹಾಂ.. ಹತ್ತು ಸಾವಿರ ರೂಪಾಯಿ ಕಳಿಸಬೇಕು."

"ಸರಿ... ಹಾಂ.. ಅಸಲಿರಿಪೋರ್ಟ ಕೊಡಬೇಕು... ತಿಳಿಯಿತೇ ?"

ಇಬ್ಬರೂ ನಕ್ಕರು... ದತ್ತಾತ್ರೇಯ ರಿಸೀವರ ಕೆಳಗಿರಿಸಿ ಟೇಪ್ ಬಂದು ಮಾಡಿದ. ಅವನ ಹಿಂದೆಯೇ ಇದ್ದ ಅರಿಹಂತ ಅವನ ಬೆನ್ನ ಚಪ್ಪರಿಸಿ ಶಹಬ್ಬಾಶ್ ಎಂದ.

ಒಂದರ್ಧಗಂಟೆ ಅತ್ತ ಇತ್ತ ಸುತ್ತಾಡಿ ರಂಗರಾಜನ್ ಮನೆ ಮುಂದೆ ಗಾಡಿಯಿಂದ ಇಳಿದರು ಇಬ್ಬರು. ದತ್ತಾತ್ರೇಯನ ಕೈಗೆ ನೋಟಿದ್ದ ಪುಟಕೆ ಕೊಟ್ಟು 'ಗುಡ್‌ಲಕ್ ದತ್ತಾತ್ರೇಯ' ಎಂದ ಅರಿಹಂತ...

ಹತ್ತು ಹದಿನೈದು ನಿಮಿಷಗಳಲ್ಲಿ ಹೊರಗೆ ಬಂದ ದತ್ತಾತ್ರೇಯ ಕುಲುಕುಲು ನಗುತ್ತ...ಅವನ ಕೈಯಲ್ಲಿ ಲಕೋಟೆ... ಇನ್ನೊಂದು ಕೈಯಲ್ಲಿ ಟೈಪರಿಕಾರ್ಡರು ಜೀಪಿನಲ್ಲಿ ಕುಳಿತುಕೊಂಡು ವರದಿ ನೋಡಿ ಓದಿದ. ಅರಿಹಂತ. ಅವನ ತರ್ಕ ಸರಿಯಾಗಿಯೇ ಇತ್ತು. ಮರಣ ಸಂಭವಿಸಿ ಐವತ್ತಾರುಗಂಟೆ ಕಳೆದು ಹೋಗಿವೆ. ಚೂರಿ ಇರಿತದಿಂದ ಸಾವು ಸಂಭವಿಸಿದೆ. ಚೂರಿಯ ಮೊನೆ ನೇರವಾಗಿ ಹೃದಯವನ್ನು ಭೇದಿಸಿದ್ದರಿಂದ ಕೂಡಲೇ ಸಾವು ಬಂದಿದೆ ಎಂದವರು ಸ್ಪಷ್ಟವಾಗಿ ಬರೆದಿದ್ದರು...

ಐವತ್ತಾರುಗಂಟೆ ಹಿಂದೆ ಸಾವು ಸಂಭವಿಸಿದೆ. ಇದೊಂದೇ ಮಾತು ಸಾಕಾಯಿತು ಅರಿಹಂತನಿಗೆ.. ಇದರರ್ಥ ಬಂಡರಗಟ್ಟೆಯಲ್ಲಿ ಶವ ಸಿಕ್ಕ ಸಮಯಕ್ಕಿಂತ ಮೊದಲು ಮುವತ್ತಾರು ಗಂಟೆಗೆ ಮೊದಲು ಈ ಸಾವು ಅಥವಾ ಕೊಲೆ ನಡೆದಿದೆ ಎಂದು ಈ ವರದಿ ಸ್ಪಷ್ಟವಾಗಿ ಹೇಳುತ್ತಿತ್ತು."

"ಶಹಬ್ಬಾಶ್ ದತ್ತಾತ್ರೇಯ...ನಮ್ಮ ಇಲಾಖೆಯ ಕೆಟ್ಟ ಹುಳ...ವ್ಯಭಿಚಾರಿ...ಕರ್ತವ್ಯ ಭ್ರಷ್ಟ ದೇವೇಂದ್ರಪ್ಪನ ಚಟ್ಟ ಕಟ್ಟಲು ಎಲ್ಲಾ ಸಿದ್ಧತೆ ಮಾಡಿತಂದಾಯಿತು. ನನಗಿಂದು ತುಂಬಾ ಅಂದರೆ ತುಂಬಾ ಸಂತೋಷವಾಗಿದೆ"

"ನನಗೂ ಸರ್...ಒಂದು ಒಳ್ಳೆ ಕೆಲಸಕ್ಕೆ ಅಷ್ಟು ಪರಿಶ್ರಮ ಪಡಬೇಕು ಎಂದು ಅರ್ಥವಾಗಿದೆ. ಆ ಕೆಲಸ ಸಾಧಿಸಿದಾಗ ಆಗುವ ತೃಪ್ತಿ... ಸಮಾಧಾನದ

ಅನುಭವ ನನಗಾಗಿದೆ.. ನನಗೆ ಈ ಅನುಭೂತಿ ಮಾಡಿಸಿ ತೋರಿಸಿದವರು ನೀವು ಸರ್. ನಿಮಗೆ ನಾನು ಋಣಿ.''

''ಹೊಗಳಿಕೆ ಸಾಕು... ನಡೆಯಿನ್ನು''

ಓಡುತ್ತಿದ್ದ ಜೀಪು ಎರಡು ಮೂರು ನಿಮಿಷಗಳಿಗೆ ಟೆಲಿಫೋನ ಬೂಥ ಒಳ ಬಂದು ನಿಂತಿತು. ಈ ಬಾರಿ ಅರಿಹಂತ ಕೆಳಗಿಳಿದು ಬೂಥನೊಳಗೆ ಬಂದ. ಸಮೀಪದ ಪೋಲೀಸ ಠಾಣೆ ನಂಬರು ಹುಡುಕಿದ.. ನಂಬರ ಜೋಡಿಸಿ ಒಂದೇ ಮಾತು ಹೇಳಿದ ''ಕೂಡಲೇ ಡಾಕ್ಟರ ರಂಗರಾಜನ್ ಮನೆ ಮೇಲೆ ರೇಡಮಾಡಿ... ಕನಿಷ್ಠ ಹತ್ತು ಸಾವಿರ ರೂಪಾಯಿ ನಕಲಿ ನೋಟು ಸಿಗುತ್ತವೆ. ಎಲ್ಲಾ ನೂರರ ನಕಲಿ ನೋಟುಗಳು.'' ರಿಸೀವರ್ ಕೆಳಗಿರಿಸಿ ಬಂದು ಪಕ್ಕಕ್ಕೆ ನಿಂತ. ಹತ್ತು ನಿಮಿಷಗಳು ಕಳೆದಿರಲಿಲ್ಲ, ಸೈರನ್ ಕೂಗುತ್ತ ಬಂದ ಎರಡು ಜೀಪು.. ಒಂದು ಕಾರು ರಂಗರಾಜನ್ ಮನೆ ಕಡೆ ಧಾವಿಸುತ್ತಿರುವುದನ್ನು ಕಂಡು ಆತ ಮುಗುಳ್ನಕ್ಕ.

''ಸರ್..ನೀವೂ ಪ್ರಚಂಡರು ಮಹಾ ಚಾಣಾಕ್ಷರು...''

ದತ್ತಾತ್ರೇಯ ಪ್ರಶಂಸೆಗೆ ಒಂದೇ ಒಂದು ಮುಗುಳ್ನಗೆ ಬೀರಿ ಜೀಪನ್ನೇರಿದ ಅರಿಹಂತ.

(7)

ಎಡಿಶನಲ್ ಎಸ್.ಪಿ. ದೇವೇಂದ್ರಪ್ಪನವರು ಎದುರು ಬಂದು ನಿಂತು ಜೋರುದಾರ ಸೆಲ್ಯೂಟ್ ನೀಡಿದ ಇನಸ್ಪೆಕ್ಟರ ಅರಿಹಂತ...

''ಇನಸ್ಪೆಕ್ಟರ ಅರಿಹಂತ್ ಸರ್...

ಅವನ ವಂದನೆಗೆ ಪ್ರತಿವಂದನೆ ಸಲ್ಲಿಸುವ ಸೌಜನ್ಯವನ್ನು ತೋರಿಸಿದ ದೇವೇಂದ್ರಪ್ಪ

''ಏನು...ಮುಚ್ಚಿದ ಫೈಲ ಓಪನ್ ಮಾಡ್ತೀರಾ... ನಾ ಪರ್ಮಿಶನ್ ಕೊಡೊಲ್ಲ'' ಎಂದರು.

''ಈಗಾಗಲೇ ಪರ್ಮಿಶನ್ ಬಂದಾಗಿದೆ ಸರ್''

''ಅದನ್ನು ರದ್ದುಪಡಿಸಿ ಹೊಸ ಆದೇಶ ಹೊರಡಿಸುತ್ತೇನೆ.''

''ತುಂಬಾ ಲೇಟಾಯ್ತು ಸರ್.. ನಾನಾಗಲೇ ರಿಪೋರ್ಟ ಸಿದ್ಧಪಡಿಸಿ

ಕಮೀಶನರ್ ಸಾಹೇಬರಿಗೆ ಕಳಿಸಿಬಿಟ್ಟಿದ್ದೇನೆ.''

''ಏನಂದೆ ? ರಿಪೋರ್ಟ ಕಮೀಶನರ್ ಅವರಿಗೆ ಕಳಿಸಿದೆಯಾ ?... ನನ್ನ ಒಪ್ಪಿಗೆಯಿಲ್ಲದೇ''

''ತಾವೇ ಆಪಾದಿತರಾಗಿರುವಾಗ ಅದರ ಅವಶ್ಯಕತೆ ಬೀಳಲಾರದು ಸರ್''

''ಏನಂದೆ ?''... ವಿಕಾರಕಂಠದಲ್ಲಿ ಕೂಗಿಕೊಂಡರು ದೇವೇಂದ್ರಪ್ಪ... ಆ ಕೂಗನ್ನು ಕೇಳಿ ಒಳಗೆ ಏನೋ ದುರ್ಘಟನೆ ಜರುಗಿದೆ ಎಂದು ಭಾವಿಸಿ ಸೆಂಟ್ರಿ ಸಹಿತ ಮತ್ತೆ ನಾಲ್ಕಾರು ಜನರು ಓಡಿಬಂದರು. ಒಳಗೆಲ್ಲಾ ಸರಿಯಾಗಿತ್ತು. ಅಂಥ ಘಟನೆ ನಡೆದಿರಲಿಲ್ಲ. ಕೈಸನ್ನೆ ಮಾಡಿ ಅವರನ್ನೆಲ್ಲ ಹಿಂದಕ್ಕೆ ಕಳಿಸಿದರು ದೇವೇಂದ್ರಪ್ಪ.. ಅವರ ಕಡೆ ನೋಡದೇ ಅವರ ಒಪ್ಪಿಗೆ ಸಹ ಕೇಳದೇ ಅರಿಹಂತ ಆಫೀಸಿನ ಬಾಗಿಲು ಭದ್ರಪಡಿಸಿ ಅವರ ಮುಂದೆ ಬಂದು'' ಸರ್.. ನನ್ನ ಬಳಿ ರಿಪೋರ್ಟಿನ ಫೈಲ ಇದೆ. ಎಲ್ಲಾ ಜರಾಕ್ಸ ಕಾಪಿ ಚೆನ್ನಾಗಿ ನೋಡಿ ಅದೂ ಅಲ್ಲದೇ ನನ್ನ ಬಳಿ ಚಂದ್ರಿ ದತ್ತಾತ್ರೇಯ ಡಾಕ್ಟರ ರಂಗರಾಜನ್ ಬಸವಂತು ಮತ್ತು ಶಿವಾನಂದಪ್ಪ ಮಾಸ್ತರರ ಹೇಳಿಕೆಯ ಕ್ಯಾಸೆಟ್ ಇವೆ. ನಾನೊಂದು ಗಂಟೆ ಹೊರಗೆ ಕಾಯುತ್ತಿರುತ್ತೇನೆ. ದಯವಿಟ್ಟು ಓದಿ.. ಆಮೇಲೆ ಏನು ಮಾಡಬೇಕೆಂದು ನನಗೆ ಆದೇಶ ನೀಡಿ. ಹಾಂ... ಸರ್. ಅದಕ್ಕೂ ಮೊದಲು ನಾನು ಎಂಥವ ? ನನ್ನ ಗುಣಧರ್ಮಗಳು ಯಾವವು ? ನಾನೆಂಥ ಆದರ್ಶ ಪಾಲಿಸುತ್ತೇನೆ ಎಂಬುದನ್ನು ಯೋಚಿಸಿ.. ಸರ್''

ಹೊರಳಿ ಬಾಗಿಲಿಗೆ ಬಂದ. ಕೊಂಡಿಸರಿಸಿ ಹೊರಗೆ ಬಂದು ಮತ್ತೆ ಬಾಗಿಲು ಹಚ್ಚಿ ಎಸ್.ಪಿ. ಸಾಹೇಬರ ಆಪ್ತಕಾರ್ಯದರ್ಶಿಗಳ ಬಳಿಬಂದು ಹೇಳಿದ ''ಒಂದು ಗಂಟೆ ಸಾಹೇಬರನ್ನು ಡಿಸ್ಟರ್ಬ ಮಾಡಬಾರದಂತೆ''...

ಒಂದು ಒಂದೂಕಾಲು ಗಂಟೆ ಕಳೆಯುವುದರಲ್ಲಿ ಸಾಕುಬೇಕಾಯಿತು. ಅರಿಹಂತನಿಗೆ ಮೂರುಬಾರಿ ಚಹಕುಡಿದ. ನಾಲ್ಕು ಬಾರಿ ಲ್ಯಾಟ್ರಿನ್‌ಗೆ ಹೋಗಿಬಂದ. ಅಂತೂ ಇಂತೂ ಗಂಟೆ ಕಳೆಯುತ್ತಲೂ ಎಡಿಶನಲ್ ಎಸ್.ಪಿ. ದೇವೇಂದ್ರಪ್ಪನವರ ಬಳಿ ಬಂದ. ಬಾಗಿಲು ದೂಡಿ ಒಳಬಂದು ಮತ್ತೆ ಬಾಗಿಲು ಮುಚ್ಚಿ ಭದ್ರಪಡಿಸಿದ. ಕುರ್ಚಿ ಹಿಂಭಾಗಕ್ಕೆ ತಲೆಯಾನಿಸಿದ್ದ ದೇವೇಂದ್ರಪ್ಪ ತಲೆಯೆತ್ತಿ ಅವನೆಡೆ ನೋಡಿದರು. ಎರಡು ಮೂರು ಹನಿ ಕಣ್ಣೀರು ಉದುರಿದವು ಕೆಳಗಡೆ.

''ಇನಸ್ಪೆಕ್ಟರ....ನನ್ನನ್ನು ಉಳಿಸಲಾಗುವದಿಲ್ಲವೇ ?''

''ದಟ್ ಇಜ್ ನಾಟ್ ಪಾಸಿಬಲ್ ಸರ್''.

''ಏನೋ...ಏನೋ... ಆದರೆ ನಿನಗೆ ಗೊತ್ತು.. ನಿಜವಾದ ಅಪರಾಧಿ ನಾನಲ್ಲ ಅಂತ.''

''ಗೊತ್ತು ಸರ್... ನೀವು ಕೇವಲ ಒಂದು ದಾಳ ಮಾತ್ರ. ನಿಮ್ಮನ್ನು ನಡೆಸುವ ಪ್ರಭಾವಿ ವ್ಯಕ್ತಿಗಳು ಬೇರೆಯೇ ಆಗಿದ್ದಾರೆ... ಅವರು ಮಹಾ ಚಾಣಾಕ್ಷರು... ತಾವು ಹಿಂದಿದ್ದು ನಿಮಗಾಗಿ ನೇಣುಗಂಬ ಸಿದ್ಧಪಡಿಸಿದ್ದಾರೆ''..

''ಓಹ್.. ಈಗ ನಾನೇನು ಮಾಡಲು ?'' ...ಮೇಜಿಗೆ ಗುದ್ದಿದರು ದೇವೇಂದ್ರಪ್ಪ.

''ಅವರ ಆದೇಶ ಪಾಲಿಸಿ ಮಾಡುವಾಗ ತಾವು ಇದರ ಬಗ್ಗೆ ಆಲೋಚಿಸಬೇಕಾಗಿತ್ತು ಸರ್, ರಾಜಕಾರಣಿಗಳು ಅಧಿಕಾರದಲ್ಲಿರುವದು ಕೆಲವೇ ವರ್ಷ ಮಾತ್ರ. ತಾವು ಅಖಂಡ ಮೂವತ್ತು ಮೂವತ್ತೈದು ವರ್ಷ ಅಧಿಕಾರದಲ್ಲಿರುತ್ತೇವೆ. ನಮ್ಮನ್ನು ಕಂಡು ಅವರು ಹೆದರಬೇಕು ಸರ್. ಅವರಿಗಾಗಿ ನಾವು ರೆಡ್ ಕಾರ್ಪೆಟ್ ಹಾಸಬಾರದು... ಅವರ ಕೈಬೊಂಬೆ ಆಗಬಾರದು. ನಮ್ಮ ದೇಶದ ಈ ದುರ್ದೇಶೆಗೆ ಅಂಥ ರಾಜಕಾರಣಿಗಳು.. ನಿಮ್ಮಂಥ ಅಧಿಕಾರಿಗಳೇ ಕಾರಣ ಸರ್..ಅವರಿಂದ ಸಿಗುವ ಹಣ, ಶಹಭಾಶ್‌ಗಿರಿ.. ಹಾಗೂ ಪದೋನ್ನತಿಗೆ ಆಶೆ ಪಟ್ಟು ಈ ನರಕಯಾತನೆ ಅನುಭವಿಸುತ್ತಿದ್ದೇವೆ.

''ನಿಜ, ಅರಿಹಂತ ನಿಜ. ನಿನ್ನ ಮಾತಿನಲ್ಲಿ ಎಳ್ಳಷ್ಟು ಉತ್ಪ್ರೇಕ್ಷೆ ಇಲ್ಲ. ನಾವು..ನಾವು ನಾವಾಗಿಯೇ ಅವರ ಕಾಲಲ್ಲಿಯ ಮೆಟ್ಟಾಗುತ್ತೇವೆ. ಅದರಿಂದ ಮುಂದಾಗುವ ಪರಿಣಾಮದ ಬಗ್ಗೆ ಎಂದೂ ಯೋಚಿಸುವುದಿಲ್ಲ..''

ಅರಿಹಂತ ಉತ್ತರಿಸದೇ ಮೌನವಾಗಿಯೇ ನಿಂತಿದ್ದ.

''ಮುಂದೇನು ವಿಚಾರ ನಿನ್ನದು...''

''ನಥಿಂಗ್‌ಸರ್.. ಕಮೀಶನರವರ ಆದೇಶಕ್ಕಾಗಿ ಕಾಯುತ್ತಿದ್ದೇನೆ.''

''ನನಗಾಗಿ... ನಿನ್ನ ಬಾಸ್‌ಗಾಗಿ ಸಲಹೆ ನೀಡಬಲ್ಲೆಯಾ ?...ಪ್ಲೀಜ್ ?''

''ನೀಡಬಲ್ಲೆ ಸರ್... ಆದರದು ನಿಮಗೆ ಒಪ್ಪಿಗೆಯಾಗದು.''

''ಪರವಾಗಿಲ್ಲ ಹೇಳು''

''ಲಿಖಿತವಾಗಿ ತಿಳಿಸಿ. ಸರಂಡರ ಆಗಿ...ಸಾಧ್ಯವಾದರೆ ಪ್ರಾಸಿಕ್ಯೂಶನ್

ಪರವಾಗಿ ಸಾಕ್ಷಿ ನೀಡಿ. ಅಂದರೆ..ಅಂದರೆ..''

''ಓಕೆ..ಓಕೆ.. ಮಾಯ್ ಬಾಯ್.. ಐ ಅಗ್ರಿ ವಿಥಯು...''

''ಥ್ಯಾಂಕ್ಯೂ... ಥ್ಯಾಂಕ್ಯೂ ವೆರಿಮಚ್ ಸರ್...''

''ಪ್ಲೀಜ್ ಸಿಟ್ ಡೌನ್.. ನಾನು ಎರಡು ನಿಮಿಷಗಳಲ್ಲಿ ಹೇಳಿಕೆ ಕೊಡುತ್ತೇನೆ. ಮೊದಲು ನೀನದನ್ನು ಟೇಪ ಮಾಡಿಕೋ. ಆಮೇಲೆ ನಾನು ಲಿಖಿತ ಹೇಳಿಕೆ. ಇಂದು ರಾತ್ರಿ ಸಿದ್ಧಪಡಿಸುತ್ತೇ.. ಒಪ್ಪಿಗೆಯೆ ?...''

ಅರಿಹಂತ ತುಟಿ ಎರಡೂ ಮಾಡಲಿಲ್ಲ.

ಪುಟ್ಟ ಟೇಪ್ ಆನ್ ಮಾಡಿ ಅವರ ಮುಂದೆ ಸರಿಸಿದ...

(8)

ಸಾರಿಗೆ ಸಚಿವರ ಅಳಿಯನ ಮದುವೆ. ಅಳಿಯ ಅಂದರೆ ಮಗಳ ಗಂಡನಲ್ಲ. ಹೆಂಡತಿಯ ತಮ್ಮ ಸಾರಿಗೆ ಸಚಿವರು ನಗರದ ಶಾಸಕರೂ ಆಗಿದ್ದರು. ಮದುವೆಗೆ ಮುಖ್ಯಮಂತ್ರಿಗಳು ಅನಾರೋಗ್ಯದಿಂದ ಬರಲಿಕ್ಕಾಗದೇ ತಮ್ಮ ಪ್ರತಿನಿಧಿಯಾಗಿ ಅರ್ಥಸಚಿವರನ್ನು ಕಳಿಸಿಕೊಟ್ಟಿದ್ದರು....

ಮದುವೆಗೆ ಸಾವಿರಾರು ಜನರು ಸೇರಿದ್ದರು. ಸಚಿವರ ಸಮ್ಮಂಧಿ ಮದುವೆ ಎಂದರೆ ಕೇಳಬೇಕೇ ? ಅವರ ಸಂಪ್ರದಾಯದಂತೆ ರಾತ್ರಿ ಮದುವೆ. ಇನಸ್ಪೆಕ್ಟರ ದೇವೇಂದ್ರಪ್ಪಗೆ ಮೈತುಂಬ ಕೆಲಸ. ಅದರೊಂದಿಗೆ ಹಿಡಿಸಲಾರದಷ್ಟು ಆನಂದ. ಇಬ್ಬಿಬ್ಬರು ಸಚಿವರ ಮುಂದೆ ಹಾಯ್ದಾಡಿ ಅವರ ದೃಷ್ಟಿ ಸೆಳೆದು. ಅವರ ಸೇವೆ ಮಾಡಿ, ಪ್ರಮೋಶನ್‌ಗಿಟ್ಟಿಸುವ ಹಂಬಲ...ನಿಧಾನವಾಗಿ ಸಮಯ ಸರಿಯತೊಡಗಿತು. ಏಳು ಗಂಟೆ ಸಮೀಪಿಸಿದಂತೆ ಗಲಾಟೆ. ಅಬ್ಬರ ಜನ ಸಾರಿಗೆ ಸಚಿವರ ಪಿ.ಎ. ಓಡುತ್ತ ಬಂದು ಸಾಹೇಬರು ಅರ್ಜಂಟ ಕರಿಯುತ್ತಿದ್ದಾರೆ ಎಂದ. ಸಿಗಬೇಟು ಒಗೆದು ಓಡಿದ ದೇವೇಂದ್ರಪ್ಪ ಅವರ ರಹಸ್ಯಕೋಣೆಗೆ ಅಲ್ಲಿದ್ದವರು ಮೂರೇ ಮೂರು ಜನ. ಸಾರಿಗೆ ಸಚಿವರು, ಅರ್ಥಸಚಿವರು ಮದುವೆಯಾಗಲಿರುವ ವರ...''

ದೇವೇಂದ್ರಪ್ಪ ನಿಮ್ಮಿಂದ ಒಂದು ಉಪಕಾರವಾಗಬೇಕು''

ಅರ್ಥಸಚಿವರಿಂದ ಬರುವ ಮಾತಿಗೆ ದೇವೇಂದ್ವಪ್ಪ ದಿಗ್ಮೂಢನಾದ. ಎಂಥಾ ಪುಣ್ಯ ತನ್ನದು.

''ಹೇಳಿ ಸರ್'' ಎದೆಯುಬ್ಬಿಸಿ ಹೇಳಿದ.

''ನಮ್ಮ ಟ್ರಾನ್ಸಪೋರ್ಟ ಮಿನಿಸ್ಟರ ಅಳಿಯನ ಕೈಯಿಂದ ಇದೀಗ ಒಂದು ಕೊಲೆಯಾಗಿದೆ''

''ಹಾಂ ? ಕೊಲೆಯೇ ?''

''ಹೌದು...ಪಾಪ. ಇನ್ನೊಂದು ಗಂಟೆಗೆ ಮದುವೆ. ಏನೋ ನಡೆದು ಹೋಗಿದೆ. ನೀವೇ ಏನಾದರೂ ಮಾಡಿ ಮುಗಿಸಿಬಿಡಿ...''

''ಯಾ ಅಲ್ಲಾ.. ಏ ಕ್ಯಾ ಹೋಗಯಾ... ಯಾ ಖುದಾ''... ಸಾರಿಗೆ ಸಚಿವರು ಉದ್ಗರಿಸಿದರು. ಅವರ ಕಂಠ ಗದ್ಗದಿತವಾಗಿತ್ತು. ಮದುವೆ ಗಂಡು ಓಡಿ ಬಂದು ದೇವೇಂದ್ರಪ್ಪನವರ ಕಾಲಿಗೆ ಬಿದ್ದು ಹೇಗಾದರೂ ಮಾಡಿ ಕಾಪಾಡಿ. ದುಡ್ಡು ಬೇಕಾದಷ್ಟು ಖರ್ಚಾಗಲಿ ಎಂದ. ಅರ್ಥಸಚಿವರೂ ಒತ್ತಾಯ ಮಾಡಿದರು. ಪ್ರಮೋಶನ್ ಆಮಿಷ ತೋರಿಸಿದರು. ಕೊನೆಗೆ ದೇವೇಂದ್ರಪ್ಪ ಒಪ್ಪಿಕೊಳ್ಳಲೇಬೇಕಾಯಿತು. ಅವರ ಅಳಿಯನನ್ನು ಕರೆದುಕೊಂಡು ನೆಲಮಹಡಿಗೆ ಬಂದ. ಅಲ್ಲೇ ಕೊಲೆ ನಡೆದದ್ದು. ಅದನ್ನ ತೋರಿಸಿ ಹುಡುಗ ಹೊರಟುಹೋದ. ಪಾಪ ! ಮುಂದೆ ಅರ್ಧ ಗಂಟೆಗೆ ಅವನ ಮದುವೆ. ಮದುವೆ ದಿನವೇ ಮಸಣದ ದಾರಿ ತೋರಿಸಿದ್ದ....

ಆಮೇಲೆ ದೇವೇಂದ್ರಪ್ಪಗೆ ತಿಳಿದು ಬಂದಿದ್ದು ಗೋಡೌನಿನಲ್ಲಿ ಕಳ್ಳ ಮಾಲು ಇದೆ. ಮಾದಕ ಪದಾರ್ಥಗಳಿವೆ...ಚಿನ್ನದ ಬಿಸ್ಕೆಟ್ ಇವೆ...ಸಾರಿಗೆ ಸಚಿವರ ಅಳಿಯ ಇವೆಲ್ಲ ನಡೆಸುತ್ತಿದ್ದಾನೆ.. ಕೊಲೆಯಾದ ವ್ಯಕ್ತಿ ಕಡೆ ನೋಡಿದ. ದಾಡಿ... ಮೀಸೆ... ತಲೆ ಮೇಲೆ ಮುಸಲ್ಮಾನರು ಧರಿಸುವ ಟೋಪಿ ಸಂಶಯ ಬಂದು ಗಡ್ಡ ಕಿತ್ತಿದ ಕೈಗೆ ಬಂದಿತು. ಮೀಸೆ ಆತ ಛದ್ಮವೇಷ-ಧರಿಸಬಿಂದದ್ದ. ಜೇಬು ತಡಕಾಡಿದ ಸರ್ವಿಸ್ ರಿವಾಲ್ವರ...ಅವನ ಕೈ ಮೇಲುವಾಗಿ ಕಂಪಿಸಿತು...ಆತನಿಗೆ ರಿವಾಲ್ವರ ಪರಿಚಯ ಚೆನ್ನಾಗಿತ್ತು. ಅದು ಪೋಲಿಸ ಇಲಾಖೆಯ ರಿವಾಲ್ವರ.. ಅಂದರೆ..ಅಂದರೆ..ಈತ ಪೋಲೀಸ ಆಫೀಸರ್..ಜೇಬಿಗೆ ಕೈ ಹಾಕಿ ತಡಕಾಡಿದ ಪರ್ಸು, ವಸ್ತ್ರ ಸಿಗರೇಟ ಪ್ಯಾಕ್, ಚಿಲ್ಲರೆ ಹಣ ಎಲ್ಲಾ ಹೊರಬಂದವು. ಅವುಗಳ ಜೊತೆಗೆ ಅವನ ಐಡೆಂಟಿಕಾರ್ಡ ಸಹ...ಅದರತ್ತ ದೃಷ್ಟಿ ಹರಿಸುತ್ತಲು ದೇವೇಂದ್ರಪ್ಪನ ಕಣ್ಣ ಮುಂದೆ ಕತ್ತಲೆ ಕವಿದಂತಾಯಿತು, ಕೊಲೆಯಾದ ವ್ಯಕ್ತಿಯ ಫೋಟೋ ಅದರ ಕೆಳಗೆ ಶಂಕರ ನವಾತೆ ಸಿ.ಬಿ.ಐ. ಇನಸ್ಪೆಕ್ಟರ ಎಂದಿತ್ತು. ಕೊಲೆಯಾದ ವ್ಯಕ್ತಿ ಶಂಕರ ನವಾತೆ ಕೇಂದ್ರ

ಪೋಲೀಸ ಗುಪ್ತಚಾರ ಪಡೆಯ ಇನಸ್ಪೆಕ್ಟರ...

ಸ್ವಲ್ಪ ಸಮಯ ಏನು ಮಾಡಬೇಕೆಂದು ಕಾಯಿದೇ ಕುಳಿತಿದ್ದು ಧಡಕನೆ ಮೇಲೆದ್ದು ಬಂದ. ಇವನನ್ನು ನೋಡಿ ಇಬ್ಬರೂ ಸಚಿವರು ಓಡಿಬಂದರು ಅವನೆಡೆ.

''ಸರ್ ಆತ ಸಿ.ಬಿ.ಐ. ಆಫೀಸರ್''

''ನಮಗೆ ಗೊತ್ತು''

''ಆಂ ?''

''ಹೌದು.. ಅದೆಲ್ಲಾ ಈಗಬೇಡ ಬೇಗನೇ ಒಂದು ಗತಿಕಾಣಿಸು.''

''ಸರ್, ಇದು ಇದು''

''ಸಾರಿಗೆ ಸಚಿವರು ಒಂದು ಚಿಕ್ಕ ಬ್ರಿಫಕೇಸ್ ಸರಿಸಿ ಹೇಳಿದರು.''

''ಇದರಲ್ಲಿ ಐದು ಲಕ್ಷ ಇದೆ. ಬೇಕೆಂದರೆ ನಾಳೆ ಬನ್ನಿ ಇನ್ನಷ್ಟು ಕೊಡುತ್ತೇವೆ. ನಿಮಗೆ ಕೈ ಮುಗಿಯುತ್ತೇವೆ. ಏನಾದರೂ ಮಾಡಿ.''

''ದೇವೇಂದ್ರಪ್ಪ ಕೆಲವು ದಿನಗಳಿಂದ ನಿಮ್ಮ ಊರಲ್ಲಿ ಕೋಮು ಗಲಭೆ ಆಗುತ್ತವೆ. ಅದರ ಉಪಯೋಗ ತೆಗೆದುಕೊಳ್ಳಿ. ''ಫಿನಿಷ್'' ಈಗ ಹೊರಡಿ.. ಹೂಂ''

ಅರ್ಥ ಸಚಿವರ ಮಾತು ಮೋಡಿ ಮಾಡಿತು. ದೇವೇಂದ್ರಪ್ಪ ಅದರಂತೆಯೇ ಮಾಡಿದ. ಕೈಗಂತೂ ಐದು ಲಕ್ಷ ದೊರೆತಿತ್ತು. ಮರುದಿನ ಮತ್ತೇ ದೊರೆಯುವದಿತ್ತು. ಅದರ ಜೊತೆ ಪ್ರಮೋಶನ್ ಬೇರೆ. ಬಸವಂತನನ್ನು ಕರೆದುಕೊಂಡು ಪ್ಲ್ಯಾನ್ ಸಿದ್ಧಪಡಿಸಿದ. ಮೂರುಟ್ರಂಕ್ ರೆಡಿಮಾಡಿದ. ಒಂದರಲ್ಲಿ ಸಿ.ಬಿ.ಐ. ಶಂಕರನ ಶವ ಹಾಕಿ ಬಂದುಮಾಡಿದ. ಎರಡರಲ್ಲಿ ಬೇರೆ ಬೇರೆ ಪ್ರಾಣಿಗಳ ಸತ್ತ ದೇಹ...

ರಾತ್ರಿ ಒಂದು ಗಂಟೆಗೆ ಚಂದ್ರಿ ಮನೆಗೆ ಬಂದ. ದೇವೇಂದ್ರಪ್ಪ ಹೆದರಿಸಿ.. ಹೆದರಿಸ್ಸಿ ಆಕೆಯ ಬಾಯಿ ಮುಚ್ಚಿಸಿದ. ಮುಂದೆ ಒಂದು ಗಂಟೆಯ ನಂತರ ಬಂದ ಬಸವಂತ ಒಂದು ಟ್ರಂಕ ಅಲ್ಲಿ ಇಳಿಸಿ ಎರಡು ಟ್ರಂಕ ಹಳೇ ಮನೆಯ ಬಳಿ ಇಳಿಸಿ ಹೋದ... ಮೂರು ಗಂಟೆಗೆ ಸರಿಯಾಗಿ ದೇವೇಂದ್ರಪ್ಪ ಆ ಟ್ರಂಕಿನಿಂದ ಸತ್ತ ಪ್ರಾಣಿ ತೆಗೆದು ಎರಡು ಪ್ರಾರ್ಥನಾ ಮಂದಿರಗಳ ಬಳಿ ಎಸೆದು ಚಂದ್ರಿ ಮನೆಗೆ ಬಂದು ಹಾಯಾಗಿ ಮಲಗಿಕೊಂಡ.

ಅವನ ಪ್ಲಾನಿನಂತೆಯೇ ಎಲ್ಲಾ ಆಯಿತು.

ಎರಡು ಕೋಮಿನವರೂ ರೊಚ್ಚಿಗೆದ್ದು ಒಬ್ಬರಮೇಲೆ ಇನ್ನೊಬ್ಬರು ಬಿದ್ದರು. ದಂಗೆ... ಲೂಟಿ ನಡೆಯಿತು, ಶಿವಾನಂದಪ್ಪನವರಿಂದ ಸಮಾಧಾನ ಹೊಂದುತ್ತಿರುವಂತೆಯೇ ದೇವೇಂದ್ರಪ್ಪ ಸಿ.ಬಿ.ಐ. ಆಫೀಸರ ಹೆಣ ತಂದು ಕಟ್ಟೆ ಮೇಲೆ ಇರಿಸಿಟ್ಟು ಚಂದ್ರಿ ಚೀರಿಕೊಂಡಾಗ ಜನ ಸೇರಿದರು. ಮತ್ತೇ ಗಲಾಟೆ.

ಶಿವಾನಂದಪ್ಪ ಸಮಾಧಾನ ಮಾಡಿ ಎಲ್ಲರನ್ನು ಕಳಿಸಿ ತಾವೇ ಹೆಣ ಕಾಯುತ್ತ ಕುಳಿತರು. ಮರುದಿನ ಮಧ್ಯಾಹ್ನ ಬಂದಂತೆ ನಟಿಸಿದ ದೇವೇಂದ್ರಪ್ಪ ಡಾ. ರಂಗರಾಜನ್‌ವರಿಗೆ ಐದು ಸಾವಿರ ಕೊಟ್ಟು ಪೋಸ್ಟ ಮಾರ್ಟಮ್‌ನ ತಪ್ಪು ವರದಿ ತೆಗೆದುಕೊಂಡ. ಬಸವಂತನಿಗೆ ಈ ಎಲ್ಲ ಕಾರ್ಯ ತಿಳಿದಿತ್ತು. ಸತ್ತವನನ್ನು ಸಾಗಿಸುವಾಗ ಗಡ್ಡ ಕಿತ್ತು ಕೈಗೆ ಬಂದಿತ್ತು. ಅವನ ಬಟ್ಟೆ ಸರಿಸಿ ನೋಡಿ ಸತ್ತವ ಮುಸ್ಲೀಮ ಅಲ್ಲ. ಅವನಂತೆ ಇದ್ದವ ಎಂದು ಗೊತ್ತಾಯಿತು. ಇದನ್ನೆಲ್ಲ ಗ್ರಹಿಸಿದ ದೇವೇಂದ್ರಪ್ಪ ಅವನನ್ನು ಬೆದರಿಸಿ ಅಲ್ಲಿಂದ ವರ್ಗ ಮಾಡಿಸಿದ. ''ಚಂದ್ರಿ ಬಾಯಿ ಬಂದು ಮಾಡಿದ''

ಕ್ರಮೇಣ ಕೆಲದಿನ ಬಿಟ್ಟು ಕೇಸು ವಿಚಾರಣೆಗೆs ತೆಗೆದುಕೊಂಡಂತೆ ಮಾಡಿ ಯಾವ ಪ್ರಯೋಜನವಾಗಲಿಲ್ಲ.. ಎಂದು ಶರಾ ಬರೆದು ಫೈಲು ಮುಚ್ಚಿ ಬಿಟ್ಟ.

ಇಬ್ಬರೂ ಸಚಿವರು ಸಚಿವರ ಅಳಿಯ, ಅಂದು ತುಂಬಾ ಹೊಗಳಿ ಸಾಕಷ್ಟು ಹಣ ನೀಡಿದರು. ದೇವೇಂದ್ರಪ್ಪನವರಿಗೆ ಡಿ.ಎಸ್.ಪಿ. ಎಂದು ಬಡತಿ ದೊರೆಯಿತು. ದೇವೇಂದ್ರಪ್ಪ ಖುಶ್..

ಎಷ್ಟೋ ದಿನಗಳ ನಂತರ ದತ್ತಾತ್ರೇಯನಿಂದ ಫೋನು ಬಂದಿತು. ಹೊಸದಾಗಿ ಬಂದ ಇನಸ್ಪೆಕ್ಟರ ಅರಿಹಂತ ಮುಚ್ಚಿದ ಫೈಲ ಓಪನ್ ಮಾಡುತ್ತಿದ್ದಾನೆ ಎಂದು ಅಂದೇ ರಾತ್ರಿ ಬಂದು ಠಾಣೆಗೆ ನುಗ್ಗಿ ಎಲ್ಲಾ ಫೈಲು ತೆಗೆದು ಸುಟ್ಟು ಹಾಕಿ ದೇವೇಂದ್ರಪ್ಪ ತನ್ನ ಊರಿಗೆ ಬಂದ... ಎರಡು ದಿನಗಳ ನಂತರ ಶಿವಾನಂದಪ್ಪ ಮಾಸ್ತರರ ವಿಳಾಸ ಫೋನ ನಂಬರ ತಿಳಿಸಿದ, ದತ್ತಾತ್ರೇಯ ಎಚ್ಚರದಿಂದಿರಲು ಹೇಳಿದ. ಅಂದೇ ಅವರಿಗೆ ಎಸ್.ಪಿ. ಎಂದು ಬಡತಿ ದೊರೆತು ಮರುದಿನ ಜಿಲ್ಲಾ ಕಛೇರಿಗೆ ಹಾಜರಾದರು.

ನಾಲ್ಕು ದಿನಗಳಲ್ಲಿ ಪರಿಶೋಧನೆ ನಡೆಸಿ ಸಾಕ್ಷಿ ಆಧಾರದೊಂದಿಗೆ ಇನಸ್ಪೆಕ್ಟರ ಅರಿಹಂತ ಅವರ ಬಳಿ ಬಂದು ವಿಷಯ ಮುಂದಿಟ್ಟ.. ದೇವೇಂದ್ರಪ್ಪ ಎಲ್ಲಾ

ಒಪ್ಪಿಕೊಂಡು ಸರಂಡರ ಆದರು.

(9)

ದೇವೇಂದ್ರಪ್ಪನವರ ಹೇಳಿಕೆ ಮುಗಿಯಿತು. ಅರಿಹಂತ ಟೇಪ ಬಂದು ಮಾಡಿ ಅವರೆಡೆ ನೋಡಿದ.

''ರಾತ್ರಿ ನಾನು ಲಿಖಿತ ಹೇಳಿಕೆ ಸಿದ್ದಪಡಿಸುತ್ತೇನೆ''

ಅರಿಹಂತ ಉತ್ತರಿಸದೆ ತಲೆಯಾಡಿಸಿದ.

''ಮತ್ತೆ ಮತ್ತೆ ನನ್ನನ್ನೂ ಯಾವಾಗ ಅರೆಸ್ಟ ಮಾಡ್ತೀಯಾ..''

''ನಾನು ಅಂಥ ಅಪರಾಧ ಮಾಡಲಾರೆ ಸರ್''

''ಅಂದರೆ ?''

''ಸರ್-ನೀವು ಏನೇ ಆದರೂ ನನ್ನ ಸೀನಿಯರ್ ಆಫೀಸರ್, ನಿಮ್ಮನ್ನು ಅರೆಸ್ಟ ಮಾಡುವಷ್ಟು ಅಸಭ್ಯನಾನಲ್ಲ. ತಮಗೆ ಸರಂಡರ ಆಗಲು ಕೇಳಿಕೊಳ್ಳುತ್ತೇನೆ''

ದೇವೇಂದ್ರಪ್ಪನವರ ಕಣ್ಣುಗಳಲ್ಲಿ ನೀರಾಡಿದವು. ಅವನ ಕೈ ಭದ್ರವಾಗಿ ಹಿಡಿದು ಅಮುಕಿದರು.

''ಅರಿಹಂತ್... ನಿಜವಾಗಿಯೂ ನೀನು ಮಹಾನ್ ವ್ಯಕ್ತಿ... ಅದ್ಭುತ ವ್ಯಕ್ತಿ''

''ಸರ್ ನನ್ನದೊಂದು ರಿಕ್ವೆಸ್ಟ''

''ಹೇಳು''

''ಒಂದು ಸಾರೆ ನೀವು ರಾಜಧಾನಿಯ ಯಾತ್ರೆ ಮಾಡಿ ಬನ್ನಿ. ನಾನೂ ತಮ್ಮ ಜೊತೆ ಇರುತ್ತೇನೆ. ಇಬ್ಬರೂ ಸಚಿವರನ್ನು... ಸಚಿವರ ಅಳಿಯನನ್ನು ಕಂಡು ಮಾತಾಡಿ''

''ಅದರಿಂದ ಯಾವ ಪ್ರಯೋಜನವೂ ಇಲ್ಲ... ಅವರಾರೂ ಸಹಾಯ ಮಾಡಲಾರರು. ಒಂದು ವೇಳೆ ಅವರು ನನ್ನ ಸಹಾಯಕ್ಕೆ ಬಂದರೆ ಅವರ ಕುರ್ಚಿ ಅಲ್ಲಾಡುತ್ತದೆ. ನನಗೆ ಈಗ ಸತ್ಯದ ದರ್ಶನವಾಗಿದೆ ಇನಸ್ಪೆಕ್ಟರ. ಇದು ನನ್ನ ಸ್ವಯಂಕೃತ ಅಪರಾಧ. ಶಿಕ್ಷೆ ನಾನೇ ಅನುಭವಿಸಬೇಕು. ಅವಾಗಲೇ ಅವರ ಮಾತು ನಿರಾಕರಿಸಿದ್ದರೆ ಚೆನ್ನಾಗಿತ್ತು. ಬಹಳವೆಂದರೆ ನನ್ನ ವರ್ಗವಾಗುತ್ತಿತ್ತು. ಅಥವಾ

ಸಸ್ಪೆಂಡ ಮಾಡುತ್ತಿದ್ದರು. ಇಲಾಖೆಯ ಘನತೆ ಗೌರವವಾದರೂ ಉಳಿಯುತ್ತಿತ್ತು. ಈಗ ನನಗಾರೂ ಸಹಾಯ ಮಾಡಲಾರರು.''

''ನನಗೆ ಗೊತ್ತಿದೆ ಸರ್. ಆದರೂ ಒಂದು ಉದ್ದೇಶಕ್ಕಾಗಿ ನಾನು ತಮಗೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ... ನಿಮಗೂ ಸಹಾಯವಾಗಬಹುದು''

ಶುಷ್ಕವಾಗಿ ನಕ್ಕರು ದೇವೇಂದ್ರಪ್ಪ..

'ಸಧ್ಯ ನಿನ್ನ ಬಿಟ್ಟರೆ ನನಗಾರ ಸಹಾಯವೂ ಬೇಕಾಗಿಲ್ಲ ಅರಿಹಂತ.. ನೀವೇ ನನಗೆ ನಿಜವಾದ ಬಂಧುಗಳು. ಮಿತ್ರರು.. ನಿಮ್ಮ ಮಾತು ಮೀರುವದಿಲ್ಲ.. ನಿಮ್ಮೊಂದಿಗೆ ನಾನು ಒಂದು ಬಾರಿ ರಾಜಧಾನಿಯ ಪ್ರವಾಸ ಮಾಡಿಬರುತ್ತೇನೆ.'

''ಸರ್ ಇಂದೇ ರಾತ್ರಿ ಹೊರಟರೆ ಒಳ್ಳೆಯದು.''

''ಆಗಲಿ''

ಅಂದೇ ರಾತ್ರಿ ಸ್ಪೇಶಲ್ ಕಾರಿನಲ್ಲಿ ಅರಿಹಂತ ಮತ್ತು ದೇವೇಂದ್ರಪ್ಪ ಹೊರಟರು. ರಾಜಧಾನಿಯ ಕಡೆ, ಎಂಟು ಗಂಟೆಯ ಪ್ರಯಾಣದ ಮಧ್ಯೆ ದೇವೇಂದ್ರಪ್ಪ ಮಾತೇ ಆಡಲಿಲ್ಲ. ಅವರ ಮನದಲ್ಲಿ ತುಮುಲ ನಡೆದಿದೆ ಎಂದರಿತಿದ್ದ ಅರಿಹಂತ ತಾನೂ ಅವರನ್ನು ಮಾತಾಡಿಸಲು ಯತ್ನಿಸಲಿಲ್ಲ.. ಪರಿಚಯದ ಹೊಟೆಲೊಂದರಲ್ಲಿ ತಂಗಿ ಮುಂಜಾನೆ ಸರಿಯಾಗಿ ಒಂಭತ್ತು ಗಂಟೆಗೆ ಅರ್ಥಸಚಿವರ ಮನೆಮುಂದೆ ಕಾರು ನಿಲ್ಲಿಸಿದರು. ಅರಿಹಂತ ದೇವೇಂದ್ರಪ್ಪ ಕೆಳಗಿಳಿಯುವ ಮುನ್ನ ಅವರ ಶರ್ಟಿನ ಜೇಬಿನಲ್ಲಿ ಕಪ್ಪು ಬಿರಡೆಯೊಂದನ್ನು ಇರಿಸಿದ. ಅರಿಹಂತ ಅವರೆಡೆ ನೋಡಿದ. ಮೌನವಾಗಿ ಅವರು ಒಳನಡೆದರು. ತನ್ನ ಹತ್ತಿರವಿದ್ದ ಟೇಪ್ ಮತ್ತು ಸ್ಟೀರಿಯೋ ಆನ್ ಮಾಡಿದ ಅರಿಹಂತ. ಒಂದೆರಡು ನಿಮಿಷಗಳ ನಂತರ ಮಾತು ಕೇಳಿಬರಲಾರಂಭಿಸಿದವವು. ಅದರ ಜೊತೆಗೇ ಟೇಪ್ ಸಹ.

''ಓಹ್-ದೇವೇಂದ್ರಪ್ಪ ಯಾವಾಗ ಬಂದಿರಿ ?''

''ಇದೀಗ... ನೀವು ಹೇಗಿದ್ದೀರಿ ಚನ್ನಣ್ಣನವರೆ''

''ಚೆನ್ನಾಗಿದೆನೆ. ಒಳಗೆ ಕುಳಿತಿರಿ. ನಾನು ಸಾಹೇಬರಿಗೆ ತಿಳಿಸುತ್ತೇನೆ.''

ನಾಲ್ಕೈದು ನಿಮಿಷ ಮೌನದ ನಂತರ ಮತ್ತೆ ಸದ್ದು ಚಪ್ಪಲಿಯದು

''ನಮಸ್ಕಾರ ಸಾರ್''

''ಓಹ್ ದೇವೇಂದ್ರಪ್ಪ ಏನು ಸಮಾಚಾರ ?''

''ನಾನು ಹಾಳಾದ ಸಾಹೇಬರೆ-ನಾನು ಆವಾಗಲೇ ಹೇಳಿದೆ ಸಾರಿಗೆ ಸಚಿವರ ಅಳಿಯ ಕೊಲೆ ಮಾಡಿದ ವ್ಯಕ್ತಿ ಸಿ.ಬಿ.ಐ. ಇನಸ್ಪೆಕ್ಟರ ಎಂದು ನೀವು ಕೇಳಲಿಲ್ಲ. ಈಗ ಇನಸ್ಪೆಕ್ಟರ ಅರಿಹಂತ ಫೈಲ್ ರಿಓಪನ್ ಮಾಡಿದ್ದಾನೆ. ರಿಪೋರ್ಟನ್ನ ಕಳಿಸಿದ್ದಾನೆ. ಇಂದೋ ನಾಳೆಯೇ ನನ್ನನ್ನು ಅರೆಸ್ಟ ಮಾಡಬಹುದು.''

''ಡೋಂಟವರಿ.. ನಾನು ಹೋಮ ಮಿನಿಸ್ಟರ ಜೊತೆ ಮಾತಾಡ್ತೀನೆ.. ಅವಶ್ಯ ಬಿದ್ದರೆ ಸಿ.ಎಂ. ಕೂಡ.. ನೀವೇನೂ ಚಿಂತಿಸಬೇಡಿ''

''ನನ್ನ ಕುತ್ತಿಗೆಗೆ ಬಂದಿದೆ ಸರ್. ನಾನು ನಿಮ್ಮ ಮಾತು ಕೇಳಿದ್ದು. ನೀವೆ ನನ್ನನ್ನು ಉಳಿಸಬೇಕು''

''ನಾನು ಆಶ್ವಾಸನೆ ಕೊಡಲಾರೆ ಪ್ರಯತ್ನ ಮಾಡುತ್ತೇನೆ ಅಷ್ಟೇ''

''ಹಾಗೆನ್ನಬೇಡಿ. ನಾನು ನಿಮ್ಮನ್ನೇ ನಂಬಿದ್ದೇನೆ''

''ದೇವೇಂದ್ರಪ್ಪ. ನೀವು ಪುಕ್ಕಟೆ ಈ ಕೆಲಸ ಮಾಡಿಲ್ಲ. ಎಂಟು ಲಕ್ಷ ಪಡೆದಿದ್ದೀರಿ.. ಅಂದ ಮೇಲೆ ಇದು ನಿಮ್ಮ ಜವಾಬ್ದಾರಿ.. ನಾವು ಸಹಾಯ ಮಾಡಲು ಯತ್ನಿಸುತ್ತೇವೆ ಅಷ್ಟೇ... ಇನ್ನೂ ಹೊರಡಿ''

''ಹಾಗೆನ್ನಬೇಡಿ ಸರ್''

''ನೋಡು ಹೂಂ. ಹೊರಡಿ. ಯಾರಾದರೂ ನೋಡಿದರೆ ನನ್ನ ಕುತ್ತಿಗೆಗೆ ಬಂದೀತು'' ಮಂದೆ ಮೌನ...ಟೇಪ್ ಬಂದು ಮಾಡಿದ ಅರಿಹಂತ.

ಸೋತ ಮುಖದೊಂದಿಗೆ ಬಂದು ಕುಳಿತರು ದೇವೇಂದ್ರಪ್ಪ. ಮತ್ತೆ ಕಾರು ಹೊರಟಿತು. ಈ ಬಾರಿ ಸಾರಿಗೆ ಸಚಿವರ ಮನೆಗೆ ಅವರ ಅಳಿಯ ಸಹ ಅಲ್ಲಿಯೇ ಇರುತ್ತಿದ್ದ.

ದೇವೇಂದ್ರಪ್ಪ ಒಬ್ಬರೇ ಒಳಗೆ ಹೋದರು.

ಅರಿಹಂತ ಟೇಪ್ ಚಾಲೂ ಮಾಡಿದ. ತುಸು ಸಮಯದ ನಂತರ ಮಾತು ಕೇಳಲಾರಂಭಿಸಿದವು...

''ಸಾಹೇಬರಿಗೆ ಹೇಳಿ ಎಸ್.ಪಿ. ದೇವೇಂದ್ರಪ್ಪ ಬಂದಿದ್ದಾರೆ ಅಂತ''

''ತಾವು ಬನ್ನಿ ಸರ್..ಒಳಗೆ ಕುಳಿತುಕೊಳ್ಳಿ, ನಾನು ಸಾಹೇಬರಿಗೆ ತಿಳಿಸುತ್ತೇನೆ''

ಒಂದೆರಡು ನಿಮಿಷ ಮೌನ...ಒಂದೇ ಬಾರಿ ಎರಡು ಮೂರ ಜನ ಬಂದಂತೆ''

''ಯಾ ಅಲ್ಲಾ.. ದೇವೇಂದ್ರಪ್ಪ-ನಿಮ್ಮನ್ನು ನೋಡಿ ತುಂಬಾ ಸಂತೋಷವಾಯಿತು.''

''ಸಾಹೇಬರೆ...ನಿಮ್ಮ ಉಪಕಾರ ನಾನು ಎಂದೂ ಮರೆಯಲಾರೆ'' ಯುವಕನ ಕಂಠ

''ಅದೆಲ್ಲಾ ನಿಜ, ನೀವು ಸಿ.ಬಿ.ಐ. ಇನಸ್ಪೆಕ್ಟರ ಶಂಕರನ ಕೊಲೆ ಮಾಡಿದಿರಿ. ಆತ ನಿಮ್ಮ ಕಳ್ಳ ವ್ಯವಹಾರ ಕಂಡು ಹಿಡಿದು ಬೆನ್ನು ಹತ್ತಿ ಬಂದಿದ್ದ. ನೀವು ನಿಮ್ಮ ಮಾಮಾ ಅರ್ಥ ಸಚಿವರು ಹೇಳಿದ್ದನ್ನು ಕೇಳಿ ನಾವೆಲ್ಲಾ ಬಂದೋಬಸ್ತಿ ಮಾಡಿ ಹಣ ಬೇರೆಕಡೆ ಸಾಗಿಸಿ ಕೋಮು ಗಲಭೆಗೆ ಕಳಿಸಿಕೊಟ್ಟೆ''

''ಅದೇ ನಿಮ್ಮ ಬುದ್ಧಿವಂತಿಕೆ ಸರ್... ಎಷ್ಟು ಚೆನ್ನಾಗಿ ಡೀಲ್ ಮಾಡಿದಿರಿ. ಹಾಂ ಈಗೇಕೆ ಬಂದಿರಿ. ಹಣ ಏನಾದರೂ ಬೇಕಾಗಿತ್ತೆ ?''

''ಈಗ ತೆಗೆದುಕೊಂಡದ್ದೇ ಸಾಕಾಗಿದೆ. ಕೇಸ್ ರಿಓಪನ್ ಆಗಿದೆ. ಎಲ್ಲಾ ಗುಟ್ಟು ಬಯಲಾಗಿ ನಾನು ತುರಂಗ ಸೇರಬೇಕಾಗಿದೆ. ನನ್ನನ್ನು ಉಳಿಸಿಕೊಳ್ಳಿ''

''ನಮ್ಮಿಂದೇನು ಮಾಡಲು ಸಾಧ್ಯ ? ಬೇಕೆಂದರೆ ಇನ್ನಷ್ಟು ಹಣ ಕೊಡುವೆವು. ಹಣ ಪಡೆದವರು ನೀವು.. ನೀವೇ ಯೋಚಿಸಿ..''

''ಹಾಗೆನ್ನಬೇಡಿ.. ನಾನು ಸತ್ತೆಹೋಗುತ್ತೇನೆ.. ನನ್ನ ಮಾನ ಮರ್ಯಾದೆ ಎಲ್ಲಾ''

''ಅಯ್ಯೋ ಎಂಥಾ ಮಾತಾಡ್ತೀರಿ ನೀವು. ಅದೆಲ್ಲಾ ಇಂದಿನ ದಿನಗಳಲ್ಲಿ ಮಾಮೂಲಿ. ಒಂದು ದೃಷ್ಟಿಯಿಂದ ಸರ್ಟಿಫಿಕೇಟ್ ನೀವೇನೂ ಹೆದರಬೇಡಿ. ಶಿಕ್ಷೆ ಆದರೂ ಎರಡು ಮೂರು ವರ್ಷ ಆಗುತ್ತದೆ. ಹೊರಗೆ ಬಂದ ಮೇಲೆ ನಮ್ಮ ಪಾರ್ಟಿಯಲ್ಲಿ ಸೀಟು ಕೊಡುತ್ತೇವೆ ಆಮೇಲೆ ನೋಡಿ, ನಾಲ್ಕೈದು ವರ್ಷಗಳಲ್ಲಿ ನೀವೂ ಮಿನಿಸ್ಟರ ಆಗ್ತೀರಿ...''

''ಅದೆಲ್ಲಾ ನನಗೆ ಬೇಕಾಗಿಲ್ಲ. ಏನಾದರೂ ಮಾಡಿ''

''ನಮ್ಮಿಂದೇನೂ ಮಾಡಲೂ ಸಾಧ್ಯವಿಲ್ಲ...ನೀವಿನ್ನು ಹೊರಡಿ''

ಮತ್ತೆ ಮೌನ. ಅರಿಹಂತ ಟೇಪ್ ಬಂದು ಮಾಡಿದ.''

ದೇವೇಂದ್ರಪ್ಪ ಬಂದರು. ಕಾರಿನಲ್ಲಿ ಕುಳಿತರು. ಕಾರು ಹೊರಟಿತು.

ಮರಳಿ ಊರು ಬರುವ ವರೆಗೂ ಮಾತಿಲ್ಲ ಕತೆಯಿಲ್ಲ. ರಾತ್ರಿ ಹತ್ತುಗಂಟೆಗೆ ಮನೆಗೆ ಬಂದು ತಲುಪಿದರು. ತಮ್ಮ ಮನೆ ಮುಂದೆ ಇಳಿಯುತ್ತ ದೇವೇಂದ್ರಪ್ಪ ಹೇಳಿದರು.

''ಅರಿಹಂತ ನಾನವರನ್ನೂ ಬಿಡುವದಿಲ್ಲ.. ಸರಿಯಾದ ಗತಿಕಾಣಿಸುತ್ತೇನೆ''

ದೇವೇಂದ್ರಪ್ಪನವರ ಕಣ್ಣುಗಳು ಪಳಪಳನೆಹೊಳೆದವು ಕಾಡುಬೆಕ್ಕಿನ ಕಣ್ಣುಗಳಂತೆ

''ಏನು ಮಾಡಬೇಕೆಂದಿದ್ದೀರಿ ?''

''ನನ್ನ ಬಳಿ ನಿಜವಾದ ಚೂರಿ ಇದೆ. ಚೂರಿ ಹಿಡಿಯ ಮೇಲೆ ಸಾರಿಗೆ ಸಚಿವರ ಅಳಿಯನ ಕೈ ಬೆರಳು ಗುರುತುಗಳಿವೆ. ಸಿ.ಬಿ.ಐ. ಶಂಕರರ ರಿವಾಲ್ವರ, ಪಾಕೀಟು ಐಡೆಂಟಿ ಕಾರ್ಡ ಎಲ್ಲಾ ಇವೆ. ಅವುಗಳ ಮೇಲೆ ಅರ್ಥಸಚಿವರ, ಸಾರಿಗೆ ಸಚಿವರ, ಅವರ ಅಳಿಯನ ಫೀಂಗರ ಪ್ರಿಂಟ್ಸ ಇವೆ...ಅದೂ ಅಲ್ಲದೆ ಗೋಡೌನಿನ ಎಲ್ಲಾ ಫೋಟೋ ತೆಗೆದಿದ್ದು ಅವೂ ನನ್ನ ಬಳೀ ಇವೆ... ಬನ್ನಿ ಎಲ್ಲಾ ನಿಮಗೇ ಕೊಡುತ್ತೇನೆ. ನನ್ನ ನಾಶಕ್ಕೆ ಮುಂದಾದ ಅವರೆಲ್ಲರ ನಾಶವನ್ನು ನಾನು ಇಂದೇ ಮಾಡುತ್ತೇನೆ''

ಇನಸ್ಪೆಕ್ಟರ ಅರಿಹಂತ ಅವಾಕ್ಕಾದ.

ದೇವೇಂದ್ರಪ್ಪನ ಮುಂದಾಲೋಚನೆ ದೂರದೃಷ್ಟಿ ಕಂಡು ಮೂಕನಾದ.. ಎಂಥಾ ಆಲೋಚನೆ.. ಅವೆಲ್ಲಾ ಕೈಗೆ ಸಿಕ್ಕರೆ ಮೂವರನ್ನೂ ಕೈಗೆ ಕೊಳಗತೊಡಸಿ ರಸ್ತೆಯಲ್ಲಿ ಮೆರವಣಿಗೆ ಮಾಡುತ್ತ ಕರೆತರುತ್ತೇನೆ ಎಂದುಕೊಂಡ ಮನದಲ್ಲಿ...ಅವರನ್ನು ಹಿಂಬಾಲಿಸಿದ...

ದೇವೇಂದ್ರಪ್ಪ ಅಕ್ಷರಶಃ ಸತ್ಯ ನುಡಿದಿದ್ದರು. ಅವರ ಬಳಿ ಸಾಕ್ಷಿ ಆಧಾರ ಫೋಟೋ ಹೇರಳವಾಗಿದ್ದವು. ಅವುಗಳ ಸಹಾಯದಿಂದ ದೇವೇಂದ್ರಪ್ಪ

ಸುಲಭವಾಗಿ ಪಾರಾಗಬಹುದಿತ್ತು.

'ಸರ್...ನನಗೆ ವಿಶ್ವಾಸವಾಗುತ್ತಿದೆ...ನೀವು...ನಾನು...ಮನಸ್ಸು ಮಾಡಿದರೆ ಅವರನ್ನು ಕಂಬಿ ಎಣಿಸುವಂತೆ ಮಾಡಬಹುದು''

''ಉಪಯೋಗವಿಲ್ಲ ಇನಸ್ಪೆಕ್ಟರ.. ಅವರೆಂದೂ ನನ್ನ ಮಾತು ಒಪ್ಪುವುದಿಲ್ಲ''

''ನನ್ನ ಬಳಿ ಪುರಾವೆ ಇವೆ ಸರ್ ಡೋಂಟವರಿ''

ಅರಿಹಂತ ಟೇಪ್ ಆನ್ ಮಾಡಿದ.

ಪ್ರತಿಯೊಂದು ಮಾತು ಸ್ಪಷ್ಟವಾಗಿ ಕೇಳಿಬಂದವು.

ದೇವೇಂದ್ರಪ್ಪನವರ ಕಣ್ಣುಗಳಿಂದ ಆನಂದಭಾಷ್ಪಗಳು ಸುರಿಯತೊಡಗಿದವು.

''ಇನಸ್ಪೆಕ್ಟರ ಅರಿಹಂತ, ನೀವು ಗ್ರೇಟ. ನೇಣುಗಂಬದಿಂದ ನನ್ನನ್ನು ಪಾರು ಮಾಡಿದಿರಿ....ಹೆಸರಿಗೆ ತಕ್ಕಂತೆ ನೀವು ಅರಿಹಂತ. ಶತೃಗಳ ಪಾಲಿಗೆ ಸಾಕ್ಷಾತ್ ಯಮ...''

''ವಂದನೆಗಳು ಸರ್, ನೀವು ಒಪ್ಪಿಗೆ ಕೊಟ್ಟರೆ ನಾನು ಆಪರೇಶನ್ ಆರಂಭಿಸಲೇ !''

ಪ್ರಥಮಬಾರಿಗೆ ಅವರ ಮನದ ಮೇಲೆ ಮಂದಹಾಸ ಮಿನುಗಿತು.

''ಸರ್ ಹೊರಡುವ ಮುನ್ನ ಒಂದು ವಿನಂತಿ''

''ಹೇಳಿ ಇನಸ್ಪೆಕ್ಟರ''

''ತಾವು ರಾತ್ರಿ ಏನಾದರೂ ಹೆಚ್ಚು ಕಡಿಮೆ ಮಾಡಿಕೊಂಡು''

ದೇವೇಂದ್ರಪ್ಪ ಜೋರಾಗಿ ನಕ್ಕು ಹೇಳಿದರು.

''ಡೋಂಟವರಿ ಇನಸ್ಪೆಕ್ಟರ.. ಸಧ್ಯದ ಪರಿಸ್ಥಿತಿಯಲ್ಲಿ ನಾನು ಆತ್ಮಹತ್ಯೆ ಮಾಡಿಕೊಳ್ಳುವ ಮೂರ್ಖತನ ಮಾಡಲಾರೆ.. ಜೀವಂತವಾಗಿದ್ದು ಶಿಕ್ಷೆ ಅನುಭವಿಸುತ್ತೇನೆ. ಜನರ ಮುಂದೆ ನಿಂತು ಜೀವಂತ ಸಾಕ್ಷಿಯುಗುತ್ತೇನೆ. ನನ್ನಂಥ ನೂರಾರು ಅಧಮರಿಗೆ ಎಚ್ಚರಿಕೆಯ ಗಂಟೆಯಾಗುತ್ತೇವೆ''

(10)

ಎರಡು ಮೂರು ದಿನಗಳ ನಂತರ ಇನಸ್ಪೆಕ್ಟರ ಅರಿಹಂತ ಬಾಂಬ ಬ್ಲ್ಯಾಸ್ಟ ಮಾಡಿದ. ಮೊಟ್ಟ ಮೊದಲು ಹೆಚ್ಚುವರಿ ಎಸ್.ಪಿ. ದೇವೇಂದ್ರಪ್ಪ ಬಂದು ಅವನಿಗೆ ಸರಂಡರ ಆದರು. ಅವರ ಹೇಳಿಕೆಯ ಮೇರೆಗೆ ಅರ್ಥಸಚಿವರು, ಸಾರಿಗೆ ಸಚಿವರು, ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೊರಬಂದರು. ಅರಿಹಂತ ಅವರ ಕೈ ಕೋಳಗ ತೊಡಿಸಿದ. ಸಾರಿಗೆ ಸಚಿವರ ಅಳಿಯನೂ ಬಂದಿಯಾದ. ಮೂವರ ಗೂ ಕೋಳಗ ತೊಡಿಸಿ ಸಾರ್ವಜನಿಕ ರಸ್ತೆಯಲ್ಲಿ ನಡೆಸುತ್ತಾ ಠಾಣೆಗೆ ಕರೆ ತಂದ ಅರಿಹಂತ.

ಸಿ.ಬಿ.ಐ. ಆಫೀಸರ ಶಂಕರನ ಮರ್ಡರ ಮಾಡಿ ಅದಕ್ಕೆ ಬೇರೆ ತಿರುವುಕೊಟ್ಟು ಆ ವಿಷಯ ಮುಟ್ಟಿದ್ದಕ್ಕೆ ಅವರೆಲ್ಲರ ಮೇಲೆ ಕೇಸು ದಾಖಲು ಮಾಡಿದ ಅರಿಹಂತ. ದೇವೇಂದ್ರಪ್ಪ.. ಸಾರಿಗೆ ಸಚಿವರು.. ಅರ್ಥಸಚಿವರು.. ಸಾರಿಗೆ ಸಚಿವರ ಅಳಿಯ ಈ ನಾಲ್ವರೂ ಒಂದೇ ಕೋಣೆಯಲ್ಲಿ ಬಂಧಿತರಾದರು.

''ನಾವೂ ನಾಲ್ವರೂ ಕೂಡಿ ಮಾಡಿದ ಅಪರಾಧವಿದು. ಶಿಕ್ಷೆ ಮಾತ್ರ ನನಗೊಬ್ಬನಿಗೇ ಅಂದರೆ ಹೇಗೆ ? ಅದಕ್ಕಾಗಿ ನಿಮ್ಮೆಲ್ಲರನ್ನು ಎಳೆದೆ. ಈಗ ಲೆಕ್ಕಾಚಾರ ಸರಿ ಹೋಯಿತು. ಕೂಡಿ ಶಿಕ್ಷೆ ಅನುಭವಿಸಬಹುದು...''

ಚಂದ್ರಿ, ಬಸವಂತ, ದತ್ತಾತ್ರಯ, ದೇವೇಂದ್ರಪ್ಪ ಪ್ರಾಸಿಕ್ಯೂಶನ್ ಸಾಕ್ಷಿಯಾಗಲು ಒಪ್ಪಿಕೊಂಡರು. ರಂಗರಾಜನ್ ಮಾತ್ರ ಬಂದಿಯಾಗಲಿಲ್ಲ. ಪೋಲೀಸ್ ರೇಡ್ ಮಾಡಿ ಜಾಲಿನೋಟು ಅವನ ಬಳಿ ಸಿಕ್ಕಾಗ ಹೃದಯ ಬಡಿತ ಹೆಚ್ಚು ಕಡಿಮೆಯಾಗಿ ಆಸ್ಪತ್ರೆ ಸೇರಿದವ ನಾಲ್ಕನೇ ದಿವಸ ನರಕದ ದಾರಿ ಹಿಡಿದ....

ಎಲ್ಲರ ನಾಲಿಗೆ ಮೇಲೆ ಇನಸ್ಪೆಕ್ಟರ ಅರಿಹಂತ ನಲಿದಾಡಿದ.

ಅರಿಹಂತ ನಲಿದಾಡಿದ.

ಹೀರೋ ಆಗಿ ಮೆರೆದ.

ಎಸ್.ಪಿ. ಸಾಹೇಬರು ಅವನನ್ನು ಕರೆಸಿ ಅಭಿನಂದನೆ ಸಲ್ಲಿಸಿದರು.

''ನಿನ್ನಿಂದಾಗಿ ನಮ್ಮ ಇಲಾಖೆ ಗೌರವದಿಂದ ತಲೆ ಎತ್ತಿನಿಲ್ಲುವಂತಾಯಿತು.''

''ಏನು ಉಪಯೋಗ ಸಾರ್. ನನ್ನಂಥ ಒಂದಿಬ್ಬರು ಬಲಿಪಶುವಾಗುವದು, ಉಳಿದ ತೊಂಭತ್ತೆಂಟು ಜನ ಅಧಿಕಾರದ ಮದದಲ್ಲಿ ಮೆರೆಯುವರು

ಇಂದ್ರನಗರಿಯ ಸಕಲ ಭೋಗ ಭೋಗಿಸುವದರಲ್ಲಿ ಏನು ಪ್ರಯೋಜನ ಸರ್..."

ನಗ್ನ ಸತ್ಯ ಅವರ ಮುಂದಿಟ್ಟ ಅರಿಹಂತ "ಆದರೂ ನಾವು ನಿರಾಶರಾಗಿಲ್ಲ ಸರ್. ನಮ್ಮ ಕನಸಿನ ನಾಡಿಗೆ ಹೊಸ ಸೂರ್ಯನನ್ನು ತರುವ ಯತ್ನ ಸಾಗಿಸುತ್ತಲೇ ಇರುತ್ತೇವೆ"

"ಗುಡ್. ನಿನ್ನ ವರ್ಗ ಸಿಟಿಗೆ ಮಾಡಿಸಬೇಕೆಂದಿದ್ದೇವೆ."

"ದಯವಿಟ್ಟು ಬೇಡಿ ಸರ್... ನಿಮಗೆ ಕೈ ಮುಗಿಯುತ್ತೇನೆ.

"ಏಕೆ ? ಏನಾಯ್ತು ?" ಗಾಬರಿಯಾಗಿ ಎಸ್.ಪಿ. ಸಾಹೇಬರೆ ಕೇಳಿದರು.

"ಈಗಿನ್ನೂ ಒಂದು ಮುಚ್ಚಿದ ಫೈಲು ರಿಓಪನ್ ಆಗಿದೆ ಸರ್, ಇನ್ನೂ ಇಂಥ ಹತ್ತಾರು ಮುಚ್ಚಿದ ಫೈಲುಗಳಿವೆ. ಅವೆಲ್ಲಾ ರಿಓಪನ್ ಆಗಿ ಒಂದು ನಿರ್ಣಯ ಹೊರಡುವವರೆಗೂ ನನ್ನನ್ನು ಅಲ್ಲೇ ಇಡಿ ಸರ್ ಸಾಕು"

ದಂಗಾಗಿನಿಂತ ಎಸ್.ಪಿ. ಸಾಹೇಬರಿಗೆ ಸೆಲ್ಯೂಟ್ ನೀಡಿ ವಂದಿಸಿದ್ದ ಅರಿಹಂತ ಮನೆಯತ್ತ ಧಾವಿಸಿದ...

ಸ್ಪೇಶಲ್ ಟ್ರೀಟಮೆಂಟ ಕೊಡಲು ಕಾಯ್ದು ನಿಂತಿದ್ದ ಲಾವಣ್ಯಳ ನೆನಪಾಯ್ತು ಅವನಿಗೆ....

ಮರುದಿನ ಪತ್ರಿಕೆಗಳ ತುಂಬೆಲ್ಲ ಇನಸ್ಪೆಕ್ಟರ ಅರಿಹಂತನದೇ ಗುಣಗಾನ. ಅವನ ಧೈರ್ಯ, ಸಾಹಸ ಜಾಣ್ಮೆ ಮುಂತಾದವುಗಳ ಪ್ರಶಂಸೆ. ಮುಚ್ಚಿಹೋದ ಫೈಲ ಹಿಂದಿರುವ ರಹಸ್ಯ ಕೆದಕಿ ತೆಗೆದ ಅವನ ಬುದ್ಧಿಮತ್ತೆಯನ್ನು ಎಲ್ಲರೂ ಮುಕ್ತಕಂಠದಿಂದ ಹೊಗಳುವದರೊಂದಿಗೆ ಇಂಥ ಎಷ್ಟು ಕೇಸುಗಳು ಕ್ಲೋಜ್ ಮಾಡಲ್ಪಟ್ಟು ಫೈಲುಗಳಲ್ಲಿವೆಯೋ.. ಅವನ್ನು ಹೊರತೆಗೆಯುವವರಾರು ? ಎಂಬ ಶಂಕೆ ವ್ಯಕ್ತ ಪಡಿಸಿದ್ದರು. ಹಲವಾರು ಜನರು... ಇದೊಂದು ಕೇಸಿನಿಂದಾಗಿ ಪೋಲೀಸ್ ಇಲಾಖೆಯಲ್ಲಿ ಕೊಳೆಯುತ್ತಿರುವ ಪರಿಶೋಧನೆ ಮಾಡಲಿಕ್ಕಾಗದೇ, 'ಕ್ಲೋಜ್' ಎಂದು ಬರೆದು ಅವುಗಳ ಸಮಾಧಿ ಮಾಡಿದ ಪ್ರಕರಣಗಳಲ್ಲಿ ಪುನರ್ವಿಚಾರಣೆಗೆ ಬರಲಿ ಎಂಬ ಬೇಡಿಕೆ ಸರ್ವತ್ರರಿಂದಲೇ ಬರತೊಡಗಿದವು, ಅವರೆಲ್ಲರ ದೃಷ್ಟಿಯಲ್ಲಿ ಪೋಲೀಸ್ ಇಲಾಖೆ ಸಂಶಯಕ್ಕೊಳಗಾಯಿತು. ಹಿರಿಯ ಅಧಿಕಾರಿಗಳ, ರಾಜಕಾರಣಿಗಳ ಪ್ರಭಾವಿ ವ್ಯಕ್ತಿಗಳಿಂದಾಗಿ ಭ್ರಷ್ಟ ಪೋಲಿಸ ಅಧಿಕಾರಿಗಳು ಮಾಡುತ್ತಿರುವ ಒಂದು ಸರಳ ತಂತ್ರ ಇದು ಎಂದು ಒಂದೆರಡು ಪತ್ರಿಕೆಗಳು ವ್ಯಾಖ್ಯೆ

ಮಾಡಿದ್ದವು.

ಏನೇ ಆಗಲಿ ಅರಿಹಂತನ ಈ ಮುಚ್ಚಿಹೋದ ಫೈಲಿನ ರಹಸ್ಯ ಕತೆ ಅನೇಕ ಹೊಸ ವಿಷಯಗಳಿಗೆ ನಾಂದಿಯಾಯಿತು. ಒಂದು ವಾರ ಕಳೆದಿರಲಿಲ್ಲ.. ಮುಖ್ಯಮಂತ್ರಿಗಳಿಂದ ಅರಿಹಂತನಿಗೆ ಪತ್ನಿ ಸಹಿತ ಭೆಟ್ಟಿಯಾಗುವಂತೆ ಒಂದು ಆಹ್ವಾನ ಬಂದಿತು. ಅಂದು ಅವನಿಗೆ ಪದಕ ನೀಡಿ ಗೌರವಿಸಲಾಗುವದೆಂಬ ಸೂಚನೆ ಬೇರೆ... ಲಾವಣ್ಯ ಪತಿಯ ಹಿರಿಮೆಕಂಡು ಹಿರಿಹಿರಿ ಹಿಗ್ಗಿದಳು

ರಾಜಧಾನಿಯಲ್ಲಿ ನಡೆದ ಅದ್ದೂರಿ ಸಮಾರಂಭದಲ್ಲಿ ಸ್ವತಃ ಮುಖ್ಯಮಂತ್ರಿಗಳೇ ಅರಿಹಂತನನ್ನು ಸನ್ಮಾನಿಸಿದರಲ್ಲದೇ ರಾಜ್ಯದ ಪೋಲೀಸ್ ಠಾಣೆಗಳಲ್ಲಿ ಈ ರೀತಿ ಮುಚ್ಚಿಸಲ್ಪಟ್ಟಿರುವ ಎಲ್ಲಾ ಫೈಲುಗಳ ಮರುಪರಿಶೀಲನೆಗೆ ಒಂದು ಕಮಿಟಿ ನಿಯಮಿಸಿ ಅದರ ಮುಖ್ಯಸ್ಥರನ್ನಾಗಿ ಇನಸ್ಪೆಕ್ಟರ ಅರಿಹಂತನನ್ನೂ ನಿಯುಕ್ತಿ ಮಾಡಿದ ಪ್ರಕಟಣೆ ಸ್ವತಃ ಮುಖ್ಯ ಮಂತ್ರಿಗಳೇ ನೀಡಿದರು.

ಮರುದಿನ ಮುಂಜಾನೆ ಮುಖ್ಯಮಂತ್ರಿಗಳ ಮನೆಯಲ್ಲಿ ಭೋಜನ...ಅರಿಹಂತ ಪತ್ನಿಯೊಂದಿಗೆ ಹೋಗಿದ್ದ... ಮುಖ್ಯ ಮಂತ್ರಿಗಳ ಪತ್ನಿ ಸ್ವಾಗತಿಸಿ ಇಬ್ಬರ ಕೈಗೂ ಮಾಲೆ ಕೊಟ್ಟು ಪರಸ್ಪರ ಹಾಕಲು ತಿಳಿಸಿದರು. ಮೊದಲು ಒಪ್ಪಲಿಲ್ಲ ಅರಿಹಂತ. ಒತ್ತಾಯ ಮಾಡಿದ ಮೇಲೆ ಒಪ್ಪಿ ಮಾಲೆ ಹಾಕಿದ ಚಪ್ಪಾಳೆ ತಟ್ಟಿದರು ಮುಖ್ಯಮಂತ್ರಿಗಳು.

''ಹಾಂ. ಇದಪ್ಪ ಮಾತು,'' ಎಂದಾಗ ಅರಿಹಂತ ಬೆಚ್ಚಿಬಿದ್ದು ಅವರೆಡೆ ನೋಡಿದ. ಅವರು ನಗುತ್ತಿದ್ದರು.

''ಸರ್ ನನಗೆ ಫೋನು ಮಾಡಿ ವಿಷಯ ತಿಳಿಸಿದ ಮೆಸೆಂಜರ ನೀವೇ''

''ಹೌದು-ನಿನಗೆ ಹೇಗೆ ತಿಳಿಯಿತು.''

''ಅದೇ ಸರ್ ನೀವೆಂದ'' 'ಇದಪ್ಪ ಮಾತು' ... ರಹಸ್ಯ ಹೊರಹಾಕಿಸಿತು''

''ಶಹಬ್ಬಾಶ್ ಅರಿಹಂತ... ನಿನ್ನ ಬಗ್ಗೆ ನನಗೆ ಹೆಮ್ಮೆಯಾಗುತ್ತಿದೆ. ನನ್ನ ಸಹೋದ್ಯೋಗಿ ಸಚಿವರ ಬಗ್ಗೆ ಅವರ ಗತಿ ವಿಧಿ ಬಗ್ಗೆ ನನಗೆ ಅನೇಕ ದೂರುಗಳು ಬಂದಿದ್ದವು. ಅದಕ್ಕಾಗಿ ನಾನು ಆ ಉಪಾಯ ಮಾಡಬೇಕಾಯಿತು. ನನ್ನ ತಂತ್ರ ಫಲಿಸಿತು. ನೀನು ಯಶಸ್ವಿಯಾದೆ.. ಮತ್ತೊಮ್ಮೆ ನನ್ನ ಅಭಿನಂದನೆಗಳು''

ಅರಿಹಂತ ವಿನಯದಿಂದ ಅವರಿಗೆ ಕೈಮುಗಿದ...ಅಷ್ಟೇ-


ಮುಗಿಯಿತು.

# ಬಡವನ ಮನೆ ಮಾಣಿಕ್ಯ

-ಸುದರ್ಶನ ದೇಸಾಯಿ

ಬಡ ಕುಟುಂಬದಲ್ಲಿ ಹುಟ್ಟಿದ ಆ ಹೆಣ್ಣು
ಮಹಾ ರೂಪವತಿ.
ಅವಳ ರೂಪ ಒಂದು ಬಗೆಯ ಕಿಚ್ಚು-ಜ್ವಾಲೆ.
ನೋಡುಗರ ಮನದಲ್ಲಿ ಕಿಚ್ಚು ಎಬ್ಬಿಸುವ
ರತಿಯ ರೂಪ ಅವಳದು.
ಎಲ್ಲೆಡೆ ಬಡವನ ಮನೆ ಮಾಣಿಕ್ಯ ಎಂದೇ
ಹೆಸರು.
ಆದರೆ.....
ಬಡವನ ಮನೆ ಮಾಣಿಕ್ಯ ಮನೆ ಬೆಳಗಲಿಲ್ಲ....!
ಮುಂದೆ ನೀವೇ ಓದಿ.

-ಪ್ರಕಾಶಕ



ವಿಷ್ಣು ಪ್ರಕಾಶನ,
೩ನೇ ಕ್ರಾಸ್, ಜಿಂಕ್ ಲೈನ್.
ಭದ್ರಾವತಿ.